ಪ್ರಬುದ್ಧ ಕರ್ಣಾಟಕ

ಸಂಪುಟ ೪೫—ಸಂಚಿಕೆ ೧

೧೭೫

ಶೋಭಕೃತು ಸಂವತ್ಸರ

ಚೈತ್ರ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೬೩

ವಿಷಯ	ಲೇಖಕರು	ಪುಟ

೧. ದಿವಂಗತ ಶ್ರೀ ದೇವುಡು ನರಸಿಂಹಶಾಸ್ತ್ರಿಗಳವರ "ಮಹಾಕ್ಷತ್ರಿಯ" ಎಂಬ ಕೃತಿಗೆ ಸನ್ಮಾನ. ೨. ಸ್ವಾಮಿ ವಿವೇಕಾನಂದ ಸಂಚಿಕೆ.

ಪ್ರಬುದ್ಧ ಕರ್ಣಾಟಕ

ಶೋಭಕೃತು ಸಂವತ್ಸರ ೧೭೫ ಚೈತ್ರ ಸಂಚಿಕೆ

ಕಂದ ಕನ್ನಡನಿವನು ಕೈಬಿಡದಿರಮ್ಮಾ

ಕಂದ ಕನ್ನಡನಿವನು ಕೈಬಿಡದಿರಮ್ಮಾ
ನೊಂದು ಬಂದಿಹನು ಹಾಲೂಡಿ ಪೊರೆಯಮ್ಮಾ!

೧

ಕಂದಗಲ್ಲವೆ ಮೊದಲ ಪಾಳಿ ನಿನ್ನೆದೆಗಮ್ಮಾ?
ಕಂದನಲ್ಲವೆ ನಿನ್ನ ಜೀವಾನಂದವಮ್ಮಾ?
ಕಂದನನೆ ತೊರೆದನ್ಯರಾ ಮಗುಗೆ ಮೋಹ ಮಾಡಿ
ಕಂದನೆಂದರೆ ಕರುಳು ಕಿಲಕಿಲ ನಗದೆ ಹೇಳಮ್ಮಾ?

೨

ಹೆರರ ಮಕ್ಕಳ ಮೀರಿ ನಿನ್ನವನು ಚೆಲುವನಮ್ಮಾ.
ನೀನು ಒಲಿದರೆ ಮುಗಿಲ ಸರಿಸಕೆ ನಿಲುವನಮ್ಮಾ;
ವಿಶ್ವವನೆ ಗೆಲುವನಮ್ಮಾ!
ಲೋಕವನ್ನೊಲಿಸುವನು, ನಿನ್ನನೂ ನಲಿಸುವನು,
ತಾನೊಲಿದು ನಲಿವನಮ್ಮಾ!

೩

ನಿನ್ನ ತೊಡೆಯೇರಿ ಕೊರಳಪ್ಪಿಕೊಳ್ಳುವೆನಮ್ಮಾ :
ನಿನ್ನ ಕಂದನ ಬೇಡಿಕೆಯ ನೀಡಿ ಸಲಹಮ್ಮಾ !
ಮೊದಲೆನ್ನ ಸಿಂಗರಿಸಿ ಕಣ್ದಣಿಯೆ ನೋಡಿ ನಲಿಯಮ್ಮಾ ;
ಮೊದಲು ಮುದ್ದಿಸು ನನ್ನ : ನಾ ನಿನ್ನೊಡಲು ಬಾಳ್ ಉಸಿರಮ್ಮಾ !

—ಕುವೆಂಪು

೩೦–೫–೧೯೩೮

ಶ್ರೀರಾಮಚಂದ್ರನ ದಿವ್ಯದೇಹ ಜನನ

"A soul wishing to enter into a body or form for itself and take part in a divine life upon earth might be assisted to do so or even provided with such a form by this method of direct transmutation without passing through birth by the sex process or undergoing any degredation or any of the heavy limitations in the growth of its mind and material body inevitable to our present way of existence. It might then assume at once the structure and greater powers and functioning of the truly divine material body which must one day emerge in a progressive evolution to a totally transformed existence both of life and form in a divinized earth nature."

—*Sri Aurobindo*

Bulletin of Physical Education, P. 24. (Vol. I, No. 3; August 1949)

ಶ್ರೀರಾಮಚಂದ್ರ ಸಾಕ್ಷಾತ್ ಮಹಾವಿಷ್ಣುವಿನ ಅವತಾರವೇ ಎಂದು ಕೆಲವು ಭಕ್ತರು ದೃಢವಾಗಿ ನಂಬಿದ್ದಾರೆ. ಮತ್ತೆ ಕೆಲವರು, 'ಇಲ್ಲ; ಶ್ರೀರಾಮಚಂದ್ರ ನಮ್ಮ ನಿಮ್ಮಂತೆ ಮಾನವನೇ. ಆದರೆ ಅವನಲ್ಲಿ ಭಗವದಂಶ ವಿಶೇಷವಾಗಿ ವ್ಯಕ್ತವಾಗಿತ್ತು. ಆತನೊಬ್ಬ ಮಹಾವಿಭೂತಿ' ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಅವನು ಅವತಾರಿಯೇ ಆಗಲಿ, ಮಹಾವಿಭೂತಿಯೇ ಆಗಿರಲಿ–ಅಂತೂ ದೇಹ ಧಾರಣೆಮಾಡಿ ಭುವಿಗಿಳಿದು ಬಂದುದನ್ನು ಅವರೂ ಇವರೂ ನಿಸ್ಸಂಶಯವಾಗಿ ಒಪ್ಪಿಕೊಳ್ಳಲೇಬೇಕು. ಅವತಾರಿಯಾದರೂ ದೇಹಧಾರಣೆಮಾಡಿಯೇ ತನ್ನ ಅವತಾರದ ಉದ್ದೇಶವನ್ನು ಈಡೇರಿಸಿಕೊಳ್ಳಬೇಕು. ವಿಭೂತಿಯಂತೂ ದೇಹಧಾರಣೆ ಮಾಡಿಯೇ ತನ್ನ ಸಾಕ್ಷಾತ್ಕಾರವನ್ನು ಸಾಧಿಸಿಕೊಳ್ಳಲೇಬೇಕು. ದೇಹ ಧಾರಣೆ ಯಾರಿಗೂ ತಪ್ಪಿದ್ದಲ್ಲ ಎಂಬುದಂತೂ ಸ್ವತಃಸಿದ್ಧವಾದ ಸತ್ಯ. ಹಾಗಾದರೆ ಶ್ರೀರಾಮಚಂದ್ರ ದೇಹಧಾರಣೆಮಾಡಿದ ಬಗೆ ಯಾವುದು? ಸಾಧಾರಣ ಮಾನವ–ಅವನು ದೊರೆಯೇ ಆಗಿರಲೊಲ್ಲನೇಕೆ–ಕಾಯಗೊಂಡು ಭುವಿಯಲ್ಲಿ ಜನ್ಮತಾಳುವ ರೀತಿಗೂ ಅತಿಮಾನವ ಮಹಾವಿಭೂತಿ, ಕೊನೆಗೆ ಅವತಾರಿ ದೇಹಧಾರಣೆಮಾಡಿಕೊಂಡು ಅವತರಿಸುವುದಕ್ಕೂ ಯಾವ ವ್ಯತ್ಯಾಸವಿದೆ? ಅಂಥ ದಿವ್ಯದೇಹದ ಲಕ್ಷಣಗಳೇನು?

ಶ್ರೀರಾಮಚಂದ್ರನ ಜನನದ ವಿಚಾರದಲ್ಲಿ ವಿಸ್ಮಯಕಾರಕವಾದ ಘಟನೆಗಳು ನಡೆಯುತ್ತವೆ.

† "ಅಯೋಧ್ಯಾ ಪಟ್ಟಣವನ್ನು ಆಳುತ್ತಿದ್ದ ದಶರಥನು ಸಮಸ್ತ ವೇದಗಳನ್ನೂ ಬಲ್ಲವನು. ಸರ್ವಜ್ಞನು. ಬಹಳ ದೂರದೃಷ್ಟಿಯುಳ್ಳವನು. ಮಹಾತೇಜಸ್ವಿಯು. ಪ್ರಜೆಗಳನ್ನು ಬಹಳ ವಿಶ್ವಾಸದಿಂದ ಕಾಪಾಡುತ್ತಿದ್ದನು. ಅನೇಕ ಯಾಗಗಳನ್ನು ಮಾಡಿದವನು. ಧರ್ಮಬುದ್ಧಿಯುಳ್ಳವನು. ಇಂದ್ರಿಯಗಳನ್ನು ನಿಗ್ರಹಿಸಿದವನು. ಈತನು ಕ್ಷತ್ರಿಯ ಧರ್ಮಗಳನ್ನೆಲ್ಲಾ ಚೆನ್ನಾಗಿ ಬಲ್ಲವನಾದುದರಿಂದ, ರಾಜರ್ಷಿಯೆನಿಸಿಕೊಂಡಿದ್ದರೂ, ಮಹರ್ಷಿಗಳಿಗೆ ಸಮಾನನಾಗಿದ್ದನು........ಇಂತಹ ಮಹಿಮೆಯುಳ್ಳವನಾಗಿ, ಸಮಸ್ತ ಧರ್ಮಗಳನ್ನೂ ತಿಳಿದು ರಾಜ್ಯವನ್ನು ನಡೆಸುತ್ತಿದ್ದ ಆ ಮಹಾತ್ಮನಿಗೆ ವಂಶಾಭಿವೃದ್ಧಿಯನ್ನುಂಟುಮಾಡತಕ್ಕ ಸತ್ಪುತ್ರನಿಲ್ಲವೆಂಬ ಚಿಂತೆಯೊಂದು ಮಾತ್ರ ಬಹಳವಾಗಿತ್ತು. ಸಂತಾನಾರ್ಥವಾಗಿ ಅನೇಕ ತಪಸ್ಸುಗಳನ್ನು ಮಾಡಿದರೂ, ಇವನ ಕೋರಿಕೆಯು ಕೈಗೂಡಲಿಲ್ಲ........ಅದಕ್ಕಾಗಿ ಅಶ್ವಮೇಧ ಯಾಗವನ್ನು ಮಾಡಬೇಕೆಂಬ ಬುದ್ಧಿಯು ಆತನಿಗೆ ತಾನಾಗಿಯೇ ಹುಟ್ಟಿತು........ ಅದನ್ನು ಕೇಳಿದ ವಸಿಷ್ಠರೇ ಮೊದಲಾದ ಸಮಸ್ತ ಬ್ರಾಹ್ಮಣರೂ ಬಹಳ ಸಂತೋಷಪಟ್ಟು: "ಎಲೈ ಮಹಾರಾಜನೇ! ಯಜ್ಞಕ್ಕೆ ಬೇಕಾದ ಸಮಸ್ತ ಸಂಭಾರಗಳನ್ನೂ ಸಿದ್ಧಪಡಿಸು!........ನಿನ್ನ ಇಷ್ಟದಂತೆ ಸತ್ಪುತ್ರರನ್ನು ಪಡೆಯುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ." ಎಂದರು. ಬ್ರಾಹ್ಮಣರ ಈ ಮಾತುಗಳನ್ನು ಕೇಳಿ ರಾಜನು ಸಂತೋಷದಿಂದುಬ್ಬಿದವನಾಗಿ, ಮಂತ್ರಿಗಳನ್ನು ಕುರಿತು: "ಎಲೈ ಮಂತ್ರಿಗಳೇ ಗುರುಗಳು ಹೇಳಿದಂತೆ........ಯಜ್ಞಾಶ್ವವು ಕಳುಹಿಸಲ್ಪಡಲಿ! ಸರಯೂ ನದಿಯ ಉತ್ತರದಲ್ಲಿ ಯಜ್ಞಭೂಮಿಯನ್ನು ಮಾಡಿರಿ! ಕಲ್ಪೋಕ್ತವಾದ ಶಾನ್ತಿಕರ್ಮಗಳೆಲ್ಲವೂ ನಡೆಸಲ್ಪಡಲಿ" ಎಂದು ಅಪ್ಪಣೆಮಾಡಿದನು........ದಶರಥನು ಒಳ್ಳೆಯ ಶುಭ ಮುಹೂರ್ತದಲ್ಲಿ ಯಾಗಶಾಲೆಯ ಕಡೆಗೆ ಹೊರಟನು. ವಸಿಷ್ಠನೇ ಮೊದಲಾದ ಬ್ರಾಹ್ಮಣೋತ್ತಮರೂ ಋಷ್ಯಶೃಂಗನನ್ನು ಮುಂದಿಟ್ಟುಕೊಂಡು, ಕಲ್ಪೋಕ್ತವಾದ ಕರ್ಮಗಳನ್ನು ಆರಂಭಿಸಿದರು.

"ಆ ಸಂವತ್ಸರವು ಮುಗಿಯುವಷ್ಟಕ್ಕೆ ಸರಿಯಾಗಿ ಯಜ್ಞಾಶ್ವವು ಹಿಂತಿರುಗಿ ಅಯೋಧ್ಯೆಯನ್ನು ಸೇರಿತು. ಸರಯೂ ನದಿಯ ಉತ್ತರದಲ್ಲಿ ಯಜ್ಞವೂ ಆರಂಭಿಸಲ್ಪಟ್ಟಿತು. . . . . . ಯಾವ ದೋಷಕ್ಕೂ ಅವಕಾಶವಿಲ್ಲದಂತೆ ಎಲ್ಲವೂ ಮಂತ್ರವತ್ತಾಗಿ ನಿರ್ವಿಘ್ನವಾಗಿ ನಡೆದವು. ಆ ಯಜ್ಞ ದಿವಸಗಳಲ್ಲಿ ಹಸಿವು, ಬಾಯಾರಿಕೆ ಮುಂತಾದವುಗಳಿಂದ ಬಳಲುತ್ತಿದ್ದವರೊಬ್ಬರೂ ಇರಲಿಲ್ಲ. ಎಲ್ಲಿ ನೋಡಿದರೂ ಅರವಟಿಗೆಗಳೂ, ಭೋಜನಶಾಲೆಗಳೂ ಕಾಣುತ್ತಿದ್ದುವು. ಭೋಜನದಿಂದ ತೃಪ್ತಿಹೊಂದಿದವರು ಬ್ರಾಹ್ಮಣರು ಮಾತ್ರವೇ ಅಲ್ಲ. ಶೂದ್ರಾದಿಗಳೂ

---

† ಶ್ರೀ ಅಳಸಿಂಗರಾಚಾರ್ಯ ವಿರಚಿತ "ಶ್ರೀ ವಾಲ್ಮೀಕಿ ಮಹರ್ಷಿ ಪ್ರಣೀತ" ಶ್ರೀಮದ್ರಾಮಾಯಣ, ಬಾಲಕಾಂಡ, ೭–೧೪ನೆಯ ಸರ್ಗಗಳಿಂದ ಸಂಗ್ರಹಿಸಿದುದು (೧೯೩೩ನೇ ಮುದ್ರಣ).

ಕೂಡ ತೃಪ್ತಿಹೊಂದಿದರು. ತಾಪಸರು, ಸಂನ್ಯಾಸಿಗಳು, ಹೆಂಗಸರು, ಮಕ್ಕಳು, ಮುದುಕರು, ರೋಗಿಗಳು, ಮುಂತಾದ ಸಮಸ್ತ ಜನರೂ ಭೋಜನದಿಂದ ತೃಪ್ತಿ ಹೊಂದುತ್ತಲೇ ಇದ್ದರು. . . . . . . ರಾಜನು ಯಜ್ಞವನ್ನು ನೋಡುವುದಕ್ಕಾಗಿ ಬಂದಿದ್ದವರಿಗೆ ಕೋಟಿ ಕೋಟಿ ಸಂಖ್ಯೆಯಲ್ಲಿ ಸುವರ್ಣದಾನವನ್ನು ಮಾಡಿದನು. . . . ಹೀಗೆ ಯಥೇಷ್ಟವಾಗಿ ದಕ್ಷಿಣೆಯನ್ನು ಹೊಂದಿದ ಬ್ರಾಹ್ಮಣರೆಲ್ಲರನ್ನೂ ಬಹಳ ಪ್ರೀತಿಯಿಂದ ಆದರಿಸಿ, ಅವರಿಗೆಲ್ಲರಿಗೂ ನಮಸ್ಕಾರಮಾಡಲು . . . ವೇದೋಕ್ತ ವಾದ ಆಶೀರ್ವಾದ ಮಾಡಿದರು. ಆ ಮಹಾ ಯಜ್ಞವು ಮುಗಿದಮೇಲೆ ಋಷ್ಯ ಶೃಂಗನನ್ನು ನೋಡಿ: "ಎಲೈ ವ್ರತನಿಷ್ಠನೇ, ಇನ್ನು ಮೇಲೆ ನನ್ನ ವಂಶಾಭಿವೃದ್ಧಿಗೆ ಕಾರಣವಾದ ಕರ್ಮವನ್ನೂ ನೀನೇ ಮಾಡಿಸಬೇಕಾಗಿರುವುದು'' ಎಂದು ಪ್ರಾರ್ಥಿ ಸಿದನು. ಹಾಗೆಯೇ ಆಗಲೆಂದು ಒಪ್ಪಿಕೊಂಡು: "ಎಲೈ ರಾಜನೆ! ನಿನಗೆ ವಂಶೋದ್ಧಾರಕರಾದ ನಾಲ್ವರು ಕುಮಾರರು ಹುಟ್ಟುವರು. ಸಂದೇಹಪಡಬೇಡ" ಎಂದನು. . . ಸ್ವಲ್ಪ ಹೊತ್ತು ಯೋಚಿಸಿ, ರಾಜನನ್ನು ನೋಡಿ ಋಷ್ಯಶೃಂಗನು: "ನಿನ್ನ ಸಂತಾನಾರ್ಥವಾಗಿ ಪುತ್ರಕಾಮೇಷ್ಟಿ ಎಂಬ ಯಾಗವನ್ನು ಮಾಡಿಸುವೆನು" ಎಂದು ಶಾಸ್ತ್ರೋಕ್ತವಾಗಿ ಆ ಯಜ್ಞವನ್ನು ಆರಂಭಿಸಿ ಮಂತ್ರಪೂರ್ವಕವಾದ ಆಹುತಿಗಳನ್ನು–ಅಗ್ನಿಯಲ್ಲಿ ಬಿಡುತ್ತಿದ್ದನು. ಕೂಡಲೆ ದೇವತೆಗಳು, ಗಂಧರ್ವರು, ಸಿದ್ಧರು, ಮಹರ್ಷಿಗಳು ಮುಂತಾದವರೆಲ್ಲರೂ ತಮ್ಮ-ತಮ್ಮ ಹವಿರ್ಭಾಗಗಳನ್ನು ತೆಗೆದುಕೊಳ್ಳುವುದಕ್ಕಾಗಿ ಬಂದು ಗುಂಪುಗೂಡಿದರು. . . ದೇವತೆಗಳೆಲ್ಲರೂ ಲೋಕ ಕರ್ತನಾದ ಚತುರ್ಮುಖ ಬ್ರಹ್ಮನೊಡನಿದ್ದ ಶ್ರೀಮನ್ನಾರಾಯಣನನ್ನು ನೋಡಿ, "ಎಲೈ ಪೂಜ್ಯನೆ! ನಿನ್ನ ವರಪ್ರಸಾದದ ಬಲದಿಂದ ಮಹಾ ವೀರ್ಯವುಳ್ಳವನಾದ ರಾವಣನೆಂಬ ರಾಕ್ಷಸನು ನಮ್ಮೆಲ್ಲರನ್ನೂ ಬಹಳವಾಗಿ ಬಾಧಿಸುತ್ತಿರುವನು. ಅವನನ್ನು ಅಡಗಿಸುವುದು ನಮ್ಮಿಂದ ಸಾಧ್ಯವಿಲ್ಲ. ಈ ಶತ್ರುವನ್ನು ಸಂಹರಿಸು ವುದಕ್ಕಾಗಿ ನೀನು ಭೂಲೋಕದಲ್ಲಿ ಅವತರಿಸಬೇಕು"ಎಂದರು. ಮಹಾವಿಷ್ಣುವು "ಎಲೈ ದೇವತೆಗಳಿರಾ! ನಿಮಗೆ ಕ್ಷೇಮವುಂಟಾಗುವುದು . . . ಮನುಷ್ಯಲೋಕದಲ್ಲಿ ನಾನು ಹುಟ್ಟಿ . . . ಈ ಭೂಮಿಯನ್ನು ಧರ್ಮದಿಂದ ಪಾಲಿಸುತ್ತಿರುವೆನು" ಎಂದು ವರವನ್ನು ಕೊಟ್ಟು ತನ್ನ ಅಂಶವನ್ನು ನಾಲ್ಕಾಗಿ ವಿಭಾಗಿಸಿಕೊಂಡು ದಶರಥನನ್ನೇ ತನ್ನ ತಂದೆಯನ್ನಾಗಿ ನಿಶ್ಚಯಿಸಿದನು . . . . ಒಡನೆಯೇ ಇತ್ತಲಾಗಿ ಯಾಗಮಾಡು ತ್ತಿರುವ ದಶರಥನ ಯಜ್ಞಕುಂಡದಿಂದ ಎಣೆಯಿಲ್ಲದ ಕಾಂತಿಯುಳ್ಳ ಒಂದು ದೊಡ್ಡ ಪುರುಷಾಕೃತಿಯು ಉದ್ಭವಿಸಿತು . . . . ಅದರ ಕೈಯಲ್ಲಿ ಬೆಳ್ಳಿಯ ಕಟ್ಟುಹಾಕಿದ ಸುವರ್ಣಕಲಶವೊಂದು ದಿವ್ಯಪಾಯಸ ಪೂರ್ಣವಾಗಿ ಶೋಭಿಸುತ್ತಿತ್ತು. ದಶರಥ ನನ್ನು ನೋಡಿ: "ಎಲೆ ರಾಜನೆ! ಈ ಪಾಯಸವು ನಿನಗೆ ದೊರೆತಿರುವುದು. ಇದು ದೇವತೆಗಳ ಕೈಯಿಂದಲೇ ಮಾಡಲ್ಪಟ್ಟಿದು. ಇದು ಸಂತಾನವನ್ನು ಕೊಡುವುದು . . . . ಇದನ್ನು ಸ್ವೀಕರಿಸು. ನಿನ್ನ ಮೂವರು ಪತ್ನಿಯರಿಗೂ ಇದನ್ನು ಹಂಚಿ

ಕೊಟ್ಟು ಭುಜಿಸುವ ಹಾಗೆ ಹೇಳು. ಇದರಿಂದಲೇ ನೀನು ಪುತ್ರರನ್ನು ಪಡೆಯುವೆ" ಎಂದನು. ರಾಜನು ಬಹಳ ಸಂತೋಷಪಟ್ಟು ಆ ಪಾತ್ರೆಯನ್ನು ವಿನಯದಿಂದ ಕೈಗೆ ತೆಗೆದುಕೊಂಡನು. ಆಮೇಲೆ ಆ ತೇಜೋಮಯನಾದ ಭೂತವು ಆ ಅಗ್ನಿಯಲ್ಲೇ ಕಣ್ಮರೆಯಾಯಿತು. . . . ಒಡನೆಯೇ ಆ ದಿವ್ಯಪಾಯಸವನ್ನು ಅಂತಃಪುರಕ್ಕೆ ತೆಗೆದುಕೊಂಡು ಹೋಗಿ, ತನ್ನ ಮೂವರು ಪತ್ನಿಯರಿಗೂ ಬೇರೆ ಬೇರೆಯಾಗಿ ಪಾಯಸವನ್ನು ಹಂಚಿಕೊಟ್ಟಮೇಲೆ, ಸ್ವಲ್ಪ ಕಾಲದೊಳಗಾಗಿಯೇ ಕ್ರಮಕ್ರಮವಾಗಿ ಗರ್ಭವನ್ನು ಧರಿಸಿದರು. . . ಯಜ್ಞವು ನಡೆದು ಒಂದು ವರ್ಷ ಕಾಲವು ಕಳೆಯಿತು. ಹನ್ನೆರಡು ತಿಂಗಳಕೊನೆಗೆ ಸರಿಯಾಗಿ ಚೈತ್ರಮಾಸದ ನವಮೀ ತಿಥಿಯಲ್ಲಿ ಶ್ರೀರಾಮನೆಂಬ ಪುತ್ರನು ಜನಿಸಿದನು. ಕೈಕೇಯಿಯ ಹೊಟ್ಟೆಯಲ್ಲಿ ಭರತನೆಂಬುವನೂ, ಸುಮಿತ್ರೆಯ ಹೊಟ್ಟೆಯಲ್ಲಿ ಲಕ್ಷ್ಮಣ-ಶತ್ರುಘ್ನರೆಂಬುವರೂ ಹುಟ್ಟಿದರು."

ಇದು ವಾಲ್ಮೀಕಿ ರಾಮಾಯಣದಲ್ಲಿ ಮೈವೆತ್ತ ಶ್ರೀರಾಮ ಜನನದ ವೃತ್ತಾಂತ. ಶ್ರೀರಾಮ ಜನನದ ಕಾರಣ ಮತ್ತು ಕ್ರಮ ಅಲ್ಲಿ ಹೀಗೆ ನಿರೂಪಿಸಲ್ಪಟ್ಟಿದೆ.

೨

ಈಗ, ಇದೇ ಪ್ರಸಂಗವು, ಶ್ರೀ ಕುವೆಂಪು ವಿರಚಿತ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ ಹೇಗೆ ಮೈವೆತ್ತಿದೆ ಎಂಬುದನ್ನು ಅವಲೋಕಿಸೋಣ.

"ಸರಯೂ ನದಿಯ ತೀರದಮೇಲೆ ಕೋಸಲ ದೇಶವಿತ್ತು. ದಶರಥನು ಇದಕ್ಕೆ ಚಕ್ರವರ್ತಿಯಾಗಿದ್ದ. ರಾಜರ್ಷಿಯೂ, ದೀರ್ಘದರ್ಶಿಯೂ, ಸಮದರ್ಶಿಯೂ ಆದ ಆ ಚಕ್ರವರ್ತಿ, ಜನರ ಜನ್ಮ ಕುಲ ಧನ ಜಾತಿ ವರ್ಣಗಳ ಭೇದಗಳನ್ನು ಗಣಿಸದೆ, ನೀಚ–ಉಚ್ಚ ಎಂಬ ಭಿನ್ನ ಭಾವವನ್ನು, ಸ್ಪರ್ಧೆ–ವೈರ ಎಂಬ ದ್ವಂದ್ವ ಬುದ್ಧಿಯನ್ನು ತೊಡೆದು ಸರ್ವರನ್ನೂ ಸಮಬುದ್ಧಿಯಿಂದ ದರ್ಪದಿಂದ ತನ್ನ ರಾಜ್ಯವನ್ನು ಪಾಲಿಸುತ್ತಿದ್ದ. ದಶರಥನಿಗೆ ಎಲ್ಲ ಸಂಪತ್ತುಗಳಿದ್ದರೂ, ದೇವಿ ಕೌಸಲ್ಯೆ, ಸಾಧ್ವಿ ಸುಮಿತ್ರೆ, ಚೆಲುವೇ ಮೈವೆತ್ತುದೆನ್ನುವಂತಿದ್ದ ಕೈಕೇಯಿ–ಎಂಬ ಮೂವರು ಹೆಂಡಂದಿರನ್ನು ಮದುವೆಯಾಗಿದ್ದರೂ, ತನ್ನ ವಂಶೋದ್ಧಾರವನ್ನುಂಟುಮಾಡುವಂಥ ಮಕ್ಕಳಿರಲಿಲ್ಲ. ಆಗಲೇ ತಲೆಗೂದಲು ಬೆಳ್ಳಗಾಗುತ್ತಿತ್ತು. ವಯಸ್ಸೂ ಹಿಂದಾಗುತ್ತಿತ್ತು. ಇಂಥ ದೊರೆ, ಒಂದು ದಿನ ತನ್ನ ಅರಮನೆಯ ತೋಟದಲ್ಲಿ ಅಡ್ಡಾಡುತ್ತಿರಲಾಗಿ:

"ಮರಿಯ ತೆರೆವಾಯ್ಗಿಡುತೆ ತನ್ನ ಕೊಕ್ಕಂ, ಕುಟುಕು
ಕೊಡುತಿರ್ದ ತಾಯ್ವಕ್ಕಿಯಂ ಕಂಡು, ಕಣ್ನಟ್ಟು,
ಕಾಲ್ನಟ್ಟು ನಿಂತನು ಮರಂಬಟ್ಟು. ಮಕ್ಕಳಂ
ಪಡೆದ ಪಕ್ಕಿಯ ಸಿರಿತನಂ ಚಕ್ರವರ್ತಿಗೆ ತನ್ನ
ಬಡತನವನಾಡಿ ಮೂದಲಿಸಿತೆನೆ, ಕರುಬಿ ಕುದಿದನ್
ಕೋಸಲೇಶ್ವರನಾ ವಿಹಂಗಮ ಸುಖಕೆ ಕಾತರಿಸಿ." 1

---

1. ಶ್ರೀ ರಾಮಾಯಣ ದರ್ಶನಂ, ಮಹಾಸಂಪುಟಂ ೧, ಅಯೋಧ್ಯಾ ಸಂಪುಟಂ ಪು. ೮, ಸಾ. ೧೯೫–೨೦೦.

ಹೀಗೆ ಮರಿಗೆ ಕುಟುಕು ಕೊಡುತ್ತಿದ್ದ ಹಕ್ಕಿಗಳನ್ನು ಕಂಡ ದೊರೆಯ ಮನದಲ್ಲಿ ಮಕ್ಕಳನ್ನು ಪಡೆಯಬೇಕೆಂಬ ಹೆಬ್ಬಯಕೆಯನ್ನು ಹುಟ್ಟಿಸಿತು. ಊರ್ಧ್ವಲೋಕದ ದೇವಶಕ್ತಿಗಳು ಸಂಚುಹೂಡಿದರೆಂಬಂತೆ ಆ ಮುದಿದೊರೆಯ ಮನದಲ್ಲಿ ಮಕ್ಕಳ ಆಸೆಯಾಗಿ ಅವರ ಇಚ್ಛೆ ಸಂಚರಿಸಿತು. ಉದ್ಯಾನದಿಂದ ನೇರವಾಗಿ ಅರಮನೆಗೆ ಬಂದು ಗುರುಗಳಾದ ವಾಮದೇವ ವಸಿಷ್ಠರನ್ನು, ಮಂತ್ರಿ ಸುಮಂತ್ರರನ್ನು ಕರೆ ಕಳಿಸಿದ. ತನ್ನ ಬಾಳಿನ ಬಯಕೆಯನ್ನು ಹೇಳಿದ: ‘ ನನ್ನೆದೆಯ ಸಿರಿಯ ಹೊನ್ನಿನ ಕಳಸದಲ್ಲಿ ಬಿರುಕು ಬಿದ್ದು ನನ್ನ ಜೀವವೆಂಬ ಅಮೃತ ಸುಮ್ಮನೆ ಸೋರಿಹೋಗುತ್ತಿದೆ. ಬಾಳಿನ ಸೊಡರು ತಾನಾರುವ ಮೊದಲು ಇನ್ನೊಂದು ಬತ್ತಿಯ ಕುಡಿಗೆ ದೀಪಾಂಕುರ ಮಾಡದೆ ಹೋದರೆ ಕತ್ತಲೆಯನ್ನು ಬಿಟ್ಟು ಹೋದಂತೆಯೇ ಸರಿ. ಮಕ್ಕಳನ್ನು ಕಾಣದ ಕಣ್ಣು ಹೃದಯತಾಪದಿಂದ ಸೀದು ಕುರುಡಾಯಿತು. ಮನಸ್ಸೆಂಬ ಮಾವಿನಮರಕ್ಕೆ ನಿರ್ವಿಣ್ಣತೆ ಎಂಬ ಬಂದಳಿಕೆ ಹಿಡಿದಿದೆ. ಚೆಲುವಾದುದು ಯಾವುದೂ ನನಗೆ ರುಚಿಸುತ್ತಿಲ್ಲ. ಮಕ್ಕಳಿಲ್ಲದ ನನ್ನ ಈ ರಾಜ್ಯಸಂಪತ್ತು ಶವದ ಶೃಂಗಾರದಂತೆ ಆಗಿದೆ. ಕುರುಡನು ಕನ್ನಡಿಯನ್ನಿಟ್ಟುಕೊಂಡ ಮಾತ್ರದಿಂದ ಕಣ್ಣು ಕಂಡೀತೆ? ಬಾಳಿಗೆ ಕಣ್ಣಿನಂತಿರುವ ಮಕ್ಕಳನ್ನು ಪಡೆಯುವ ದೇವಮಾರ್ಗವನ್ನು ಹೇಳಿರಿ” ಎಂದು ಬಿನ್ನವಿಸಿಕೊಂಡನು. ಗುರು ವಸಿಷ್ಠರು ದೊರೆಯ ಮೊರೆಯನ್ನು ಕೇಳಿ ಪುತ್ರಕಾಮೇಷ್ಟಿ ವ್ರತವನ್ನು ಆಚರಿಸಿದರೆ ಮಕ್ಕಳಾಗುವವೆಂದು ನಂಬುಗೆಗೊಟ್ಟು ತೆರಳಿದರು. ವಿಚಾರಮತಿಯಾದ ಜಾಬಾಲಿ ಎಂಬ ಋಷಿವರೇಣ್ಯರು ಬಂದು ಹೀಗೆ ಹೇಳಿದ:

“ . . . . ಪೂರ್ವ ಪದ್ಧತಿವಿಡಿದು
ಮಾಳ್ಪ ದಿಗ್ವಿಜಯ ಹಯಮೇಧ ಮೊದಲಾದುವಂ
ತೊರೆದು, ಹಿಂಸಾಕ್ರೌರ್ಯಮಿಲ್ಲದಿಹ ಪ್ರೇಮಕ್ಕೆ
ನೋಂತು, ದೇವರ್ಕಳಂ ಪೂಜಿಸಲ್ ಮೆಚ್ಚುವುದು
ಜಗವನಾಳುವ ಋತಂ. ನೆಲದಲ್ಲಿ, ಬಾನಲ್ಲಿ,

. . . .
ಸರ್ವತ್ರ ತುಂಬಿದಂತರ್ಯಾಮಿ ಚೇತನಂ ತಾಂ
ಪ್ರೇಮಾತ್ಮವಾಗಿರ್ಪುದದರಿಂದೆ ಹಿಂಸೆಯಿಂ
ಪ್ರೇಮಮೂರ್ತಿಗಳಾದ ಸಂತಾನಮುದಿಸದಯ್
. . . .”[2]

ಆದ್ದರಿಂದ ಸಾತ್ವಿಕ ವಿಧಾನದಿಂದ ವಿಶ್ವಶಕ್ತಿಸ್ವರೂಪಿಯಾದ ಅಗ್ನಿಯನ್ನು ಭಜಿಸು. ಪ್ರಜೆಗಳನ್ನೂ ಬಡವರನ್ನೂ ಮನದಣಿಯೆ ಸತ್ಕರಿಸು. ಅವರು ತೃಪ್ತಿಯಿಂದ: “ದೊರೆಗೆ ಒಳ್ಳೆಯದಾಗಲಿ” ಎಂದು ಹರಸಿದರೆ, ಆ ಹರಕೆಯೇ ದೇವರ ಆಶೀರ್ವಾದಕ್ಕೆ

---

೨. ಅದೇ. ಪುಟ ೧೦, ಸಾಲು ೨೪೭ರಿಂದ ೨೫೨.

ಎಣೆಯಾಗಿ, ನಿನಗೆ ಮಕ್ಕಳನ್ನು ಕರುಣಿಸುತ್ತದೆ. ಜನಮನದ ಶಕ್ತಿಯೇ, ಮತ್ತೆ ಅವರ ಅಭೀಪ್ಸೆಯೇ ಮಹಾತ್ಮರನ್ನು ನಮ್ಮ ಭೂಮಿಗೆ ತಪ್ಪದೆ ಎಳೆದು ತರುತ್ತದೆ" ಎಂದು ಅಪ್ಪಣೆಕೊಡಿಸಿದನು.

ಸರಯೂ ನದಿಯ ದಡದಮೇಲೆ ಯಜ್ಞಶಾಲೆ ಏರ್ಪಟ್ಟಿತು. ಆ ಯಜ್ಞಶಾಲೆಗೆ ದೇಶ ದೇಶದ ಜನ, ಮಲೆನಾಡಿನ ಮುಂಗಾರ್ ಮಳೆ ಮೊದಲ ಬಾರಿ ಬಂದಾಗ ಕಟ್ಟೆರುವೆಯ ಸಾಲು ಲಕ್ಷ ಲಕ್ಷ ಸಂಖ್ಯೆಯಲ್ಲಿ ಸಾಲಿಟ್ಟು ಹರಿಯುವಂತೆ ಬಂದು ಸೇರಿದರು. ತೃಪ್ತಿಯೇ ತಣಿದು ತೇಗಿತೆಂಬಂತೆ, ಜನ ಭೋಜನದಿಂದ ದಕ್ಷಿಣೆಯಿಂದ ನಲಿಯಿತು. ದಾರಿದ್ರ್ಯವೇ ಶ್ರೀಮಂತಿಕೆಯಾದಂತೆ, ಬಡತನದ ಬೆನ್ನೇ ಹೊನ್ನಿನ ಭಾರದಿಂದ ಬಾಗಿತು. ಆಗ ಜನರೆಲ್ಲ ಹೃತ್ಪೂರ್ವಕವಾಗಿ ದೊರೆಯ ಇಚ್ಛೆ ನೆರವೇರಲಿ, ಸೊಗವಾಗಲಿ ಎಂದು ಬಾಯ್ತುಂಬ ಹರಸಿದರು. ಅವರ ಆ ಹಾರೈಕೆ, ಹೋಮ ಧೂಮದಂತೆ ವ್ಯೋಮಾಂತರಕ್ಕೆ ಹಬ್ಬಿತು. ಖಡ್ಗಧಾರಾವ್ರತವನ್ನು ಹಿಡಿದು ದಶರಥ ರಾಜನು ಪುತ್ರಕಾಮೇಷ್ಟಿಯನ್ನು ಕೈಕೊಂಡನು. ಹೀಗೆ ಸಂತಾನಕಾಮಿ ದಶರಥ ಚಕ್ರವರ್ತಿಯು ವ್ರತವನ್ನಾಚರಿಸುತ್ತಿರಲು ಒಂದಿರುಳು ಯಜ್ಞಕುಂಡದ ಮಧ್ಯದಲ್ಲಿ:

" ತಾನೊರ್ವನಲ್ಲಿ ಮೈದೋರಿದನು ಝಗಝುಗಿಸಿ,
ಕೆಂಡದುರಿಮೆಯ್ಯ ಮಿಂಚಿನ ದಿವ್ಯ ಕಾಂತಿಯಲಿ.
. . . .
........................ನಕ್ಷತ್ರಮಯ ರಾತ್ರಿಯಂ
ಧರಿಸಿ ಸೂರ್ಯನೆ ಶೋಭಿಪಂತೆ,..................
..............................ಪೊಳೆದುದು ಕಣ್ಗೆ
ಮಂಗಳದಮರ ಮೂರ್ತಿ ಆ ಯಾಜಕರ ಮುಂದೆ.
....
ಮಿಸುಪ ಮಿಸುನಿಯ ಪಾತ್ರೆಯಲಿ ಸುಪಾಯಸರಸಂ
......................................ತೋಳ್ ನೀಡಿ
ಪೇಳ್ದನಾಶೀರ್ವಾದಮಂ,.........................
........" ಸೃಷ್ಟಿಯ ಶಕ್ತಿ ದೂತನೆಂ, ರಾಜೇಂದ್ರ,
ಋತ ಚಿನ್ಮಯೀ ಲೀಲೆಗಾಂ ಕವಿಕ್ರತುಕಣಾ
ಕೊಳ್ಳಿದಂ, ಕಾಮಧೇನುವಿನ ಕೊಡಗೆಚ್ಚಲಂ
ಪಾಲ್ಗರೆದು ಗೆಯ್ದ ಪಾಯಸಮಿದಂ................
................ಪಸುಗೆ ನೀಡಂಶಂಗಳಂ
ಸತಿಯರ್ಗೆ. ಗೆಲ್ವುದಾ ವಿಧಿಲೀಲೆಯುಂ "[೩]

ಎಂದು ಆಶೀರ್ವದಿಸಿದ ದಿವ್ಯಪುರುಷನ ಅಪ್ಪಣೆಯಂತೆ ದಶರಥ ಚಕ್ರವರ್ತಿಯು ಆ ದಿವ್ಯಪಾಯಸದ ಪಾತ್ರೆಯನ್ನು ತೆಗೆದುಕೊಂಡು ಹೋಗಿ ತನ್ನ ಮೂವರು

---

೩. ಅದನ್ನೇ ನೋಡಿ, ಪುಟ ೧೦-೧೪, ಸಾಲುಗಳು, ೩೩೬ರಿಂದ ೩೫೯.

ಹೆಂಡಂದಿರಿಗೂ ಪಾಯಸವನ್ನು ಹಂಚಿಕೊಟ್ಟ. ಆ ಪಾಯಸವನ್ನು ಕುಡಿದ ದಶರಥ ನೃಪನ ಪತ್ನಿಯರು ಗರ್ಭವತಿಯರಾಗಿ ನವಮಾಸತುಂಬಿಬರೆ ಕೌಸಲ್ಯೆ ಶ್ರೀ ರಾಮಚಂದ್ರನನ್ನು "ಕವಿಯ ಮನದಿಂ ಮಹಾಕಾವ್ಯಮುದ್ಭವಿಸುವಂತೆ, ಚೈತ್ರ ನವಮಿಯ ಶುಭಮುಹೂರ್ತದೊಳ್" ಹೆತ್ತಳು !! ಅಂತೆಯೇ ಸುಮಿತ್ರೆ ಕೈಕೇಯಿ ಯರೂ ಲಕ್ಷ್ಮಣ-ಶತ್ರುಘ್ನರನ್ನೂ ಭರತನನ್ನೂ ಹೆತ್ತರು. ಹೀಗೆ ದಶರಥನಿಗೆ ಪುತ್ರ ಸಂತಾನವಾಯಿತು.

೩

ಶ್ರೀಮದ್‌ವಾಲ್ಮೀಕಿ ರಾಮಯಾಣ ಮತ್ತು ಶ್ರೀ ಕುವೆಂಪು ಶ್ರೀರಾಮಾಯಣ ದರ್ಶನಂ ಎರಡೂ ಕಾವ್ಯಗಳಲ್ಲಿ ಬರುವ ಶ್ರೀರಾಮ ಜನನದ ಕಥಾಭಾಗದ ಅವಲೋಕನದಿಂದ ಈ ಕೆಳಗಿನ ಅಂಶಗಳು ಸ್ಫುಟವಾಗಿ ಎದ್ದು ಕಾಣುತ್ತವೆ: ದಶರಥ ಮೂವರು ಹೆಂಡಂದಿರನ್ನು ಮದುವೆಯಾಗಿದ್ದರೂ ಒಬ್ಬರಿಂದಲಾದರೂ ಒಬ್ಬರಾದರೂ ಮಕ್ಕಳಾಗಿರಲಿಲ್ಲ. ಮಕ್ಕಳಾಗುವ ವಯಸ್ಸೂ ಹಿಂದಾಗಿತ್ತು. ದಶರಥನ ತಲೆಗೂದಲು ಆಗಲೇ ನರೆಯುತ್ತಿತ್ತು. ಅಂಥ ಮುಪ್ಪಿನ ಕಾಲದಲ್ಲಿ ದೊರೆಗೆ ಮಕ್ಕಳನ್ನು ಪಡೆಯುವ ಪ್ರಬಲವಾದ ಇಚ್ಛೆಯಾಯಿತು. ತನ್ನ ಮನದ ಅಭಿಲಾಷೆಯನ್ನು ಗುರು ವಶಿಷ್ಠರ ಮುಂದೆ ನಿವೇದಿಸಿಕೊಳ್ಳಲಾಗಿ ಅವರು—ವಾಲ್ಮೀಕಿ ರಾಮಾಯಣದಲ್ಲಿ ಉಕ್ತವಾಗಿರುವಂತೆ—ಅಶ್ವಮೇಧಯಾಗವನ್ನು ಮಾಡಲು ಅಪ್ಪಣೆ ಕೊಡಿಸಿದರು. ಅದು ಮುಗಿದ ಮೇಲೆ ಋಷ್ಯಶೃಂಗ ಮುನಿಗಳ ಅಪ್ಪಣೆಯಂತೆ ಪುತ್ರಕಾಮೇಷ್ಟಿ ವ್ರತವನ್ನು ಆಚರಿಸಿದನು. ಆ ಸಮಯದಲ್ಲಿ ಹವಿಸ್ಸನ್ನು ಅಗ್ನಿಗೆ ಅರ್ಪಿಸಿದಾಗ ಅದನ್ನು ಸ್ವೀಕರಿಸಲೆಂದು ದೇವ, ಗಂಧರ್ವ, ಋಷಿಗಳು ಬಂದು ನೆರೆದರು. ಆಗ ಚತುರ್ಮುಖ ಬ್ರಹ್ಮನೊಡನೆ ಮಹಾವಿಷ್ಣುವೂ ಅಲ್ಲಿಗೆ ಬಂದ. ಆಗ ರಾವಣವಧಾರ್ಥವಾಗಿ ಶ್ರೀಮನ್ನಾರಾಯಣನು ಭೂಲೋಕದಲ್ಲಿ ಅವತರಿಸ ಬೇಕೆಂದು ದೇವತೆಗಳೆಲ್ಲರೂ ಪ್ರಾರ್ಥಿಸಿಕೊಂಡರು. ಅದಕ್ಕೆ ಅನುಮತಿಯಿತ್ತು ಶ್ರೀಮನ್ನಾರಾಯಣನು, ದಶರಥನನ್ನು ತಂದೆಯನ್ನಾಗಿ ಸ್ವೀಕರಿಸಲು ನಿರ್ಧರಿಸಿ, ಪುತ್ರಕಾಮೇಷ್ಟಿ ವ್ರತಧಾರಿಯಾಗಿದ್ದಾಗ, ಅವನು ನಿರ್ಮಿಸಿದ ಯಜ್ಞಕುಂಡದಲ್ಲಿಯೇ ದಿವ್ಯಪಾಯಸವನ್ನು ಹಿಡಿದು ಪ್ರತ್ಯಕ್ಷನಾಗಿ, ದಶರಥನಿಗೆ ಕೊಡುತ್ತಾನೆ. ಅದನ್ನು ತನ್ನ ಹೆಂಡಂದಿರಿಗೆ ಹಂಚಿಕೊಟ್ಟ ಮೇಲೆ ಅವರು ಗರ್ಭಧಾರಣೆ ಮಾಡಿ ಶ್ರೀ ರಾಮಾದಿಗಳ ಜನನವಾಯಿತು. ಶ್ರೀ ಕುವೆಂಪು ರಾಮಾಯಣ ದರ್ಶನದಲ್ಲಿ ಅಶ್ವಮೇಧ ಯಾಗದ ಆಚರಣೆಯನ್ನು ಬಿಟ್ಟು ಉಳಿದ ವಿಚಾರಗಳಲ್ಲಿ ಸ್ಥೂಲವಾಗಿ ವಾಲ್ಮೀಕಿ ರಾಮಾಯಣದ ದಿವ್ಯಪುರುಷನು ಪಾಯಸದ ಪಾತ್ರೆಯನ್ನು ಕೊಟ್ಟು ಆಶೀರ್ವದಿಸುವ ಕಾವ್ಯಭಾಗ ಬಹುಮಟ್ಟಿಗೆ ಹೋಲಿಕೆ ಆಗುತ್ತದೆ.

ಈ ಕಥಾಭಾಗದಿಂದ ಎರಡು ಸಮಸ್ಯೆಗಳು ಉದ್ಭವಿಸುತ್ತವೆ: ಒಂದು:

ತಲೆಗೂದಲು ನರೆತು ಮುದುಕನಾದ ನೃಪತಿಗೆ ಆ ಇಳಿವಯಸ್ಸಿನಲ್ಲಿ ಮಕ್ಕಳಾದುವೆಂಬುದು ಒಪ್ಪುವ ಮಾತೇ? ಎರಡನೆಯದಾಗಿ: ಒಂದು ವೇಳೆ ಮಕ್ಕಳಾದುವೆಂದು ಒಪ್ಪಿಕೊಂಡರೂ, ಪತಿಪತ್ನಿಯರಿಗೆ ದೈಹಿಕ ಸಂಬಂಧವಿಲ್ಲದೆ, ಲೈಂಗಿಕ ಸಂಪರ್ಕವಿಲ್ಲದೆ, ಯಾವುದೋ ಪಾಯಸವನ್ನು ಕುಡಿದದ್ದರಿಂದ ಗರ್ಭವತಿಯರಾಗಿ ಮಕ್ಕಳನ್ನು ಹೆತ್ತರೆಂಬುದು ವಿಜ್ಞಾನಕ್ಕೆ ಸಮ್ಮತವೆ? ಎಂಬ ಸಮಸ್ಯೆ ಎದ್ದುನಿಲ್ಲುತ್ತದೆ.

ಇವುಗಳಲ್ಲಿ ಮೊದಲನೆಯ ಸಮಸ್ಯೆ—ಮುದುಕರಾದವರಿಗೆ, ಮೂವರು ಹೆಂಡಂದಿರನ್ನು ಮದುವೆಯಾದರೂ ಮಕ್ಕಳಾಗದ ಮುದುಕರಿಗೆ, ಮಕ್ಕಳಾಗುವುದು ಸಾಧ್ಯವೇ—ಎಂಬ ಸಮಸ್ಯೆಯನ್ನು ಸುಲಭವಾಗಿ ದಾಟಿ ಹೋಗಬಹುದು. ಈ ನಮ್ಮ ಲೋಕಾನುಭವದಲ್ಲೇ ಎಷ್ಟೋ ಜನ ಮುದುಕರು ಮಕ್ಕಳನ್ನು ಪಡೆದುದನ್ನು ಕಣ್ಣಾರೆ ಕಂಡೂ ಇದ್ದೇವೆ; ಕೇಳಿಯೂ ಇದ್ದೇವೆ. ಭಗವತ್‌ಕೃಪೆಯಾದರೆ ವಯೋಮಿತಿಯನ್ನು ಮೀರಿಯೂ, ಸಾಧಾರಣ ಪ್ರಾಕೃತಿಕ ನೀತಿಯನ್ನು ಮೀರಿಯೂ ಮಕ್ಕಳಾಗಬಹುದು. ಆ ರೀತಿಯಾಗಿ ಆಗಿಯೂ ಇದೆ. ಇಲ್ಲಿಯೂ ದೇವರು ಕಣ್ಣು ತೆರೆದು ನೋಡಬೇಕು. ಒಮ್ಮೆ ಆತನ ಕೃಪಾದೃಷ್ಟಿ ಬಿತ್ತೆಂದರೆ ವಯಸ್ಸು-ಗಿಯಸ್ಸಿನ ಗಣನೆಯಿಲ್ಲದೆ ಮಕ್ಕಳಾಗುವ ಸಾಧ್ಯತೆ ಬಹುಜನರಿಗೆ ಅರಿವಾಗುತ್ತದೆ.

ಆದರೆ, ದೈಹಿಕ ಸಂಪರ್ಕವಿಲ್ಲದೆ, ಪತಿಪತ್ನಿಯರ ಸಮಾಗಮವಿಲ್ಲದೆ ಮಕ್ಕಳಾಗುವುದು ಸಾಧ್ಯವೆ? ಈ ಸಮಸ್ಯೆಯನ್ನು ಸುಲಭವಾಗಿ ಬಿಡಿಸುವುದು ಸಾಧ್ಯವಿಲ್ಲ. ಇದುವರೆಗೆ ವಿಜ್ಞಾನ ಲೋಕಕ್ಕೆ ತಿಳಿದುಬಂದ ಸಂತಾನೋತ್ಪತ್ತಿಯ ಸೂತ್ರದ ಪ್ರಕಾರ, ಹೆಣ್ಣು-ಗಂಡಿನ ಸಮಾಗಮವಿಲ್ಲದೆ ಸಂತಾನೋತ್ಪತ್ತಿ ಸಾಧ್ಯವೇಯಿಲ್ಲ! ಎಂದಮೇಲೆ, ವಾಲ್ಮೀಕಿ ರಾಮಾಯಣದ ಪ್ರಕಾರ ದಿವ್ಯಪಾಯಸವನ್ನು ಭುಜಿಸಿದ್ದರಿಂದ "ಸ್ವಲ್ಪಕಾಲದೊಳಗಾಗಿಯೇ ಕ್ರಮಕ್ರಮವಾಗಿ ಗರ್ಭವನ್ನು ಧರಿಸಿದರು" ಎಂಬುದು ವಿಜ್ಞಾನ ಬುದ್ಧಿಗೆ ಒಪ್ಪಲಾಗದ ಮಾತಾಗಿ ತೋರುತ್ತದೆ. ಯಾವುದೋ 'ಕಾಗಕ್ಕ ಗುಬ್ಬಕ್ಕ'ಗಳ ಅಡುಗೂಳಜ್ಜಿಯ ಕೈ-ಕಾಲುಗಳಿಲ್ಲದ ಕಥೆಗೆ ಒಪ್ಪುವ ಮಾತಾಗಬಹುದಾಗಲಿ, ಶ್ರೀಮದ್ ವಾಲ್ಮೀಕಿಮಹರ್ಷಿ ಪ್ರಣೀತ ಶ್ರೀಮದ್ರಾಮಾಯಣದ ಕಥೆಗೆ ಭೂಷಣವಾಗಿ ತೋರುವುದಿಲ್ಲ ಎಂಬ ಸಂದೇಹಕ್ಕೆ ಎಡೆಕೊಡಬಹುದು! ಒಂದು ವೇಳೆ ವಾಲ್ಮೀಕಿಯುಲಿದ ಕಥೆಯಲ್ಲಿ ಇಂಥ ಅಲೌಕಿಕ ಘಟನೆಗೆ, 'ಅವೈಜ್ಞಾನಿಕ' ಅಂಶಕ್ಕೆ ಹೇಗೋ ಸ್ಥಾನ ದೊರೆತಿರಬಹುದು. ಆಗ—ವಾಲ್ಮೀಕಿಯ ಕಾಲದಲ್ಲಿ—ಜನ ನಂಬಿದ್ದ, ಪ್ರಚಾರದಲ್ಲಿದ್ದ ಕಥೆಗೆ ಅಪರಾಧವೆಸಗಬಾರದೆಂದು, ನಂಬುಗೆಗಳಿಗೆ ಅಪಚಾರಮಾಡಬಾರದೆಂದು, ಸಂಪ್ರದಾಯ ಶರಣನಾಗಿ ವಾಲ್ಮೀಕಿ ತನ್ನ ಕಥೆಯನ್ನು ಹೀಗೆ ನಿರೂಪಿಸುವುದು ಸಹಜವಾಗಿದ್ದಿರಬಹುದು. ಪುರಾಣಕಾವ್ಯಗಳಲ್ಲಿ ವೈಜ್ಞಾನಿಕ ಸತ್ಯಕ್ಕೆ 'ಚ್ಯುತಿ' ಬಂದರೂ, ಆಧ್ಯಾತ್ಮಿಕ ಸತ್ಯ ಪ್ರತಿಪಾದನೆಯ ದೃಷ್ಟಿಯಿಂದ ಕೆಲವು ಮಟ್ಟಿಗೆ ಇಂಥ ಆಭಾಸಗಳನ್ನು ಕಡೆಗಣಿಸಿ ಮುಂದುವರಿಯಬೇಕು—ಎಂದು ಸಮಾಧಾನಪಟ್ಟುಕೊಳ್ಳಬಹುದು.

ಆದರೆ ಈ ಯುಗದ ಮಹಾಕವಿ ಎನಿಸಿಕೊಂಡ ಶ್ರೀ ಕುವೆಂಪು ಅವರ ಕೃತಿಯಲ್ಲೂ ಈ 'ಕುರುಡು' ನಂಬುಗೆಗೆ ಇಂಬುಗೊಟ್ಟುದು ಯೋಗ್ಯವೇ? ಉಚಿತವೆ? ಬುದ್ಧಿ ಸಮರ್ಪಕವೇ? ಎಂದು ಕೇಳುವ ವಿಚಾರಮತಿಗಳಿಗೆ ಸಮಾಧಾನ ಹೇಳುವುದು ಕಷ್ಟದ ಕೆಲಸವೇ ಸರಿ.

ಈ ಸಮಸ್ಯೆಗೆ ಎರಡು ಮೂರು ರೀತಿಯಿಂದ ಸಮಾಧಾನವನ್ನು ಹೇಳಬಹುದು. ಈ ಕಥಾಭಾಗದಲ್ಲಿ ಬರುವ 'ವಿಚಿತ್ರ' ಪ್ರಸಂಗಕ್ಕೆ ಹೀಗೆ ಸಮಾಧಾನವನ್ನು ಕೊಡಬಹುದು. ಒಂದು: ಮಹಾಪುರುಷರ ಅವತರಣವಾದಾಗಲೆಲ್ಲ ಇಂಥ ಅಲೌಕಿಕ ಕಾರಣ ಮತ್ತು ಕ್ರಮವನ್ನೇ ನಾವು ಕಾಣುತ್ತೇವೆ. ಏಸುಕ್ರಿಸ್ತ, ಭಗವಾನ್ ಬುದ್ಧ, ಬಸವಣ್ಣ, ಶ್ರೀರಾಮಕೃಷ್ಣ ಮುಂತಾದ ಮಹಾಪುರುಷರೆಲ್ಲರ ಅವತರಣ ಸಮಯದಲ್ಲೂ ಅವರ ತಂದೆತಾಯಿಗಳಿಗೆ ಅಪೂರ್ವ ಅನುಭವವಾಗುವುದನ್ನು ಸರ್ವದೇಶದ ಸರ್ವಕಾಲದ ಸರ್ವಕವಿಗಳೂ, ದಾರ್ಶನಿಕರೂ ನಿರೂಪಿಸಿದ್ದಾರೆ. ಅದರಂತೆಯೇ, ಆದ್ದರಿಂದಲೇ ಶ್ರೀರಾಮಚಂದ್ರನ ಜನನದ ವಿಚಾರದಲ್ಲೂ ಅಲೌಕಿಕ ಘಟನೆಗಳು ಏಕೆ ನಡೆದಿರಬಾರದು?—ಎಂದು ಹಿಂದೆ ಆಗಿಹೋಧ ಘಟನೆಗಳ ಆಸರವನ್ನು ಅವಲಂಬಿಸಿ, ಇದನ್ನೂ ನಾವು ಸಮರ್ಥಿಸಿಕೊಳ್ಳಬಹುದು. ಏಸುಕ್ರಿಸ್ತ, ಭಗವಾನ್ ಬುದ್ಧ, ಬಸವಣ್ಣ ಮುಂತಾದವರು ಉದಿಸಿದ್ದು ಆಗಲೇ ಬಹು ಹಳೆಯ ಪುರಾಣದ ಮಾತಾಗಿ ಹೋಗಿದೆ. ಅದರಲ್ಲಿ ಸತ್ಯಾಂಶವೆಷ್ಟೋ ಏನೋ? ಆದರೆ ಅಷ್ಟೇನೂ ಹಳೆಯದಲ್ಲದ, ಕೇವಲ ಇತ್ತೀಚೆಯ ಇತಿಹಾಸ ಸತ್ಯವೆಂದು ಒಪ್ಪುವ ಶ್ರೀರಾಮಕೃಷ್ಣರ ಜನನದ ಸಂದರ್ಭದಲ್ಲೂ ಇಂತಹ ಅಲೌಕಿಕ ಘಟನೆಗಳು ನಡೆದುವೆಂದು ದಾಖಲೆಯೇ ಉಳಿದಿದೆ! ಆಗಲೂ ನಂಬುಗೆಯಾಗುವುದಿಲ್ಲವೆ?--ಎಂದು ಸಮಾಧಾನ ಹೇಳಬಹುದು.

ಆದರೆ, ಇದು ಸಮರ್ಪಕವಾದ ಸಮಾಧಾನವಾಗಲಾರದು. ಹಿಂದೆ ಆ ರೀತಿ ಆಗಿತ್ತು. ಆದ್ದರಿಂದ ಅದನ್ನು ಒಪ್ಪಬೇಕು ಎಂಬುದು ಅಷ್ಟೇನೂ ತರ್ಕಬದ್ಧವಾದ ಮಾತಲ್ಲ. ಹಿಂದೆ ಆಗಿತ್ತೋ ಆಗಿರಲಿಲ್ಲವೋ ಎಂಬುದೇ ಸಂದೇಹಾಸ್ಪದವಾಗಿರುವಾಗ, ಅದನ್ನು ಆಧಾರವಾಗಿ ನಂಬಿ ಒಂದು ವಿಚಾರವನ್ನು ಒಪ್ಪುವುದು, ಅಥವಾ ಒಪ್ಪದಿರುವುದು ವಿಚಾರವಂತರಿಗೆ ಮೆಚ್ಚಿಕೆಯಾಗುವುದಿಲ್ಲ.

ಹಾಗಾದರೆ ಇನ್ನೊಂದು ಸಮಾಧಾನವನ್ನು ಕೊಡಬಹುದು: "ಮಹಾಪುರುಷರ ಅವತರಣ ಸಮಯದಲ್ಲಿ ಅವರ ತಂದೆತಾಯಿಗಳಿಗೆ ಅಪೂರ್ವ ಅನುಭವಗಳಾಗುವುದು ಆಶ್ಚರ್ಯಕರವಾದರೂ, ಅಸಂಭವವಾದುದಲ್ಲ. ಮಹಾಕಾರ್ಯಕ್ಕೆ ಕಾರಣಗಳಿರಬೇಕು. ಮಹಾಪುರುಷರು ಸೃಷ್ಟಿಶಕ್ತಿಯ ಮಹಾಕಾರ್ಯಗಳು. ಅವರ ಜೀವನದಲ್ಲಿ ಜನಸಾಮಾನ್ಯರಿಗೆ ಅಸಾಧ್ಯವೆಂದು ತೋರುವ ಎಷ್ಟೋ ಘಟನೆಗಳೊದಗುವುವು. ಹೀಗಿರಲು ಅವರ ಜನನದಲ್ಲೂ ಅಂತಹ ಅನನ್ಯ ಸಾಧಾರಣ ಘಟನೆಗಳಾಗುವುದು ಅಷ್ಟೇನೂ ಅಸಂಭವವಾದುದಲ್ಲ . . . ಅಂತಹ ವಿಷಯಗಳಲ್ಲಿ

ಸಂದೇಹವು ನಿರ್ಣಯಕ್ಕಿಂತ ಹೆಚ್ಚು ಶ್ರೇಯಸ್ಕರವಾದುದು. ಎಲ್ಲ ಸೃಷ್ಟಿ ನಿಯಮಗಳೂ ನಮಗಿನ್ನೂ ವೇದ್ಯವಾಗಿಲ್ಲ. ತಿಳಿದ ಕೆಲವು ನಿಯಮಗಳಿಗೆ ವಿರೋಧ ವೆಂದು ತೋರಿಬರುವ ಘಟನೆಗಳು ಬಹುಶಃ ಮುಂದೆ ತಿಳಿಯಬರುವ ನಿಯಮಗಳಿಂದ ವಿಶದವಾಗಬಹುದು."[4]

ಈ ಸಮಾಧಾನದಿಂದ ಕೆಲವು ಮಟ್ಟಿಗೆ ತೃಪ್ತಿಯಾಗಬಹುದು. ದುಡುಕಿ ಯಾವುದನ್ನೂ ಅಲ್ಲಗಳೆಯುವುದು ಅಷ್ಟೇನೂ ಸಾಧುಪ್ರವೃತ್ತಿಯಲ್ಲ—ಎಂದಿಷ್ಟೇ ಆಯಿತು. ಅಷ್ಟರಮಟ್ಟಿಗೆ ಒಪ್ಪತಕ್ಕ ಮಾತೇ. ಹೇಗೆ ಕವಿಕೃತಿಯಲ್ಲಿ ಅನನ್ಯ ಪರತಂತ್ರತೆ[5] ಇರುತ್ತದೆಯೋ ಹಾಗೆಯೇ ಕವಿಗಳ ಕವಿಯಾದ ಭಗವಂತನ ಸೃಷ್ಟಿ ಯಲ್ಲೂ ಮಹಾಪುರುಷರ ಜನನದಲ್ಲಿ ಅನನ್ಯ ಸಾಧಾರಣ ಘಟನೆಗಳಾಗಬಹುದು. ಆದರೂ ಪತಿಪತ್ನಿಯರ ಸಮಾಗಮವಿಲ್ಲದೆಯೆ—ಗಂಡು–ಹೆಣ್ಣಿನ ಸಂಪರ್ಕವಿಲ್ಲದೆ ಸಂತಾನೋತ್ಪತ್ತಿಯಾಯಿತೆಂಬ "ವಿಕಲ್ಪನೆಗೆ" ಎಡೆ ಕೊಡಬಹುದೇ? ಕವಿ ತನ್ನ ಕೃತಿ ರಚನೆಯಲ್ಲಿ ಸರ್ವತಂತ್ರ ಸ್ವತಂತ್ರನಿದ್ದಾನೆಂಬುದೇನೋ ನಿಜ. ಆದರೆ ಗಂಗಾ ನದಿ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಹುಟ್ಟಿತು ಎಂದು ಕವಿ ಕಲ್ಪಿಸಿ ಬರೆದರೆ ಅದು ಭೌಗೋಲಿಕ ಸತ್ಯಕ್ಕೆ ದೂರವಾಗಿ 'ವಿಕಲ್ಪನೆ'ಯಾಗುತ್ತದೆ. ಹಾಗೆಯೇ ಭಗವಂತನೂ ತನ್ನ ಸೃಷ್ಟಿಕಾರ್ಯವನ್ನು ಈಡೇರಿಸುವಾಗ ನಮ್ಮ ನಿಮ್ಮ ಯಾರ ಸಲಹೆಯನ್ನು ಕೇಳಿ ಅದರಂತೆ ಮಾಡಬೇಕಾಗಿಲ್ಲವೆಂಬುದೇನೋ ನಿಜ. ಆದರೆ ಕವಿಸೃಷ್ಟಿಯೂ ಕೂಡ ವೈಜ್ಞಾನಿಕ ಸತ್ಯಕ್ಕೆ ದೂರವಾಗಿ ವಿಕಲ್ಪನೆಗೆ ಎಡೆ ಕೊಟ್ಟರ ಬಾರದಷ್ಟೇ? ಆದಕಾರಣ, ಶ್ರೀರಾಮಚಂದ್ರ ದಶರಥ-ಕೌಸಲ್ಯೆಯರ ದೈಹಿಕ ಸಂಪರ್ಕವಿಲ್ಲದೆ ಇಳಿವಯಸ್ಸಿನಲ್ಲಿ, ಯಾವುದೋ ಅಮೃತಪಾಯಸ ಪಾನದಿಂದ ಗರ್ಭಧಾರಣಮಾಡಿದನೆಂಬುದು ನಮಗೆ ಗೊತ್ತಿರುವ ವಿಜ್ಞಾನ ಸತ್ಯಕ್ಕೆ ದೂರವಾಗಿ ವಿಕಲ್ಪನೆಯಾಗಬಹುದು. ಆದಕಾರಣ ಸಮರ್ಪಕವಾದ ಸಮಾಧಾನದ ಅನ್ವೇಷಣೆ ಗಾಗಿ ಸಂಶೋಧನೆಯನ್ನು ಮುಂದುವರಿಸಬೇಕಾಗುತ್ತದೆ.

೪

ಗಂಡು–ಹೆಣ್ಣಿನ ದೈಹಿಕ ಲೈಂಗಿಕ ಸಂಪರ್ಕವಿಲ್ಲದೆಯೇ ಸಂತಾನೋತ್ಪತ್ತಿ ಸಾಧ್ಯ ಎಂದು ಶ್ರೀ ಅರವಿಂದಮಹರ್ಷಿಗಳು 'ವೈಜ್ಞಾನಿಕ'ವಾಗಿ ವಿವರಿಸಿ ಹೇಳಿದ್ದಾರೆ.

'ದೇಹಧಾರಿಯಾಗಲಿಚ್ಛಿಸುವ ಅಥವಾ ತಾನೇ ಒಂದು ದೇಹವನ್ನು ರಚಿಸಿ ಕೊಂಡು ಬುವಿಯಮೇಲೆ ದಿವ್ಯಜೀವನದಲ್ಲಿ ಭಾಗವಹಿಸಲಿರುವ ಆತ್ಮಕ್ಕೆ, ಲೈಂಗಿಕ

---

[4] ಶ್ರೀರಾಮಕೃಷ್ಣ ಪರಮಹಂಸ–ಶ್ರೀ ಕುವೆಂಪು, ಪುಟ, ೧೫–೧೬ (೧೯೩೪ರ ಮುದ್ರಣ).

[5] 'ಅನನ್ಯ ಪರತಂತ್ರತೆ' ಎಂದರೇನೆಂಬುದನ್ನು ತಿಳಿಯಲು ಆಸಕ್ತಿಯುಳ್ಳವರು 'ದ್ರೌಪದಿಯ ಶ್ರೀಮುಡಿ' ಎಂಬ ಗ್ರಂಥದ ೬೧ನೇ ಪುಟವನ್ನು ನೋಡಬಹುದು.

ಸಂಪರ್ಕವಿಲ್ಲದೆಯೇ ಜನಿಸುವ ಅಥವಾ ಇಂದಿನ ಬುವಿಯ ಬಾಳಿಗೆ ಅನಿವಾರ್ಯವಾದ ಈಗಿರುವ ಮನಸ್ಸು ಮತ್ತು ಭೌತಿಕ ದೇಹದ ಪರಿಮಿತಿ ಮತ್ತು ಅಧೋಗತಿಗಳಿಗೆ ಒಳಗಾಗದೆ ನೇರವಾದ ಅವತರಣಿಕೆ ಈ ಪದ್ಧತಿಯಿಂದ ಸಾಧ್ಯವಾಗಬಹುದು."[6] ಆ ಪದ್ಧತಿ ಯಾವುದೆಂಬುದನ್ನು ಅದೇ ಲೇಖನದಲ್ಲಿ ಶ್ರೀ ಅರವಿಂದಮಹರ್ಷಿಗಳು ಅತ್ಯಂತ ಕೂಲಂಕಷವಾಗಿ ಚರ್ಚಿಸುತ್ತಾರೆ. ನೂತನ ಅತೀಂದ್ರಿಯ ಪದ್ಧತಿ ಯೊಂದನ್ನು ಕಂಡುಕೊಂಡಿದ್ದೇ ಅದರೆ, ದೈಹಿಕ ಸಂಪರ್ಕವಿಲ್ಲದೆ ಸಂತಾನೋತ್ಪತ್ತಿ ಯನ್ನುಂಟುಮಾಡುವುದು ಸಾಧ್ಯವಾಗಬಹುದು. ಈ ಬಗೆಯ ಪ್ರಗತಿ, ಸಾಮಾನ್ಯ ವಾಗಿ ಈಗ ಅತೀಂದ್ರಿಯ ಕ್ಷೇತ್ರಕ್ಕೆ ಸೇರಿದುದು ಎಂದು ಪರಿಗಣಿಸಲ್ಪಡುವ ಮತ್ತು ಸಾಮಾನ್ಯಮಾನವನ ಮನಸ್ಸಿಗೆ ಗೊತ್ತಿಲ್ಲದ ಗುಪ್ತಸೃಷ್ಟಿಶಕ್ತಿಗೆ ಸೇರಿದೆ. ಅತೀಂದ್ರಿಯತೆ (Occultism) ಎಂದರೆ, ನಮ್ಮ ಪ್ರಕೃತಿ, ಆತ್ಮ, ಮನಸ್ಸು, ಜೀವ ಮತ್ತು ಸೂಕ್ಷ್ಮ ಭೌತಿಕ ಪ್ರಜ್ಞೆಯ ಉನ್ನತ ಶಕ್ತಿಯನ್ನು, ಅವುಗಳ ಒಂದು ವಿಧ ವಾದ ಗುಪ್ತ ನಿಯತಿಯ, ಮತ್ತು ನಿಗೂಢಶಕ್ತಿಯ ಕಾರ್ಯಾಚರಣೆಯಿಂದ, ಭೌತಿಕ ಪ್ರಪಂಚದ ಘಟನೆಯಲ್ಲೂ, ಈ ಪಾರ್ಥಿವ ಮನಸ್ಸು, ಜೀವ ಮತ್ತು ದೇಹದಲ್ಲೂ ಮೈದೋರಬಹುದು........ಭಾರತದಲ್ಲಿ ಅತಿ ಪ್ರಾಚೀನ ಕಾಲದಿಂದಲೂ, ಈ ಗುಪ್ತ ಶಕ್ತಿಯ ಜ್ಞಾನವಿದ್ದವರು, ಮುಂದುವರಿದ ಆಧ್ಯಾತ್ಮಿಕ ಜ್ಞಾನವನ್ನು ಪಡೆದವರು ಮೇಲೆ ಹೇಳಿದ ಆ ಗುಪ್ತಶಕ್ತಿ ಮತ್ತು ನಿಯತಿಗಳನ್ನು ಉಪಯೋಗಿಸಿಕೊಂಡು, ದೈಹಿಕಸಂಪರ್ಕವಿಲ್ಲದೆಯೇ ಸಂತಾನೋತ್ಪತ್ತಿ ಸಾಧ್ಯವಾಗಬಹುದು ಎಂಬ ನಂಬಿಕೆ ವಿಶೇಷವಾಗಿ ಪ್ರಚಾರದಲ್ಲಿತ್ತು........ಅತೀಂದ್ರಿಯ ಶಕ್ತಿಯಲ್ಲಿ ನಂಬಿಕೆಯಿದ್ದವರ ತಾತ್ತ್ವಿಕ ವಿವೇಚನೆಯಲ್ಲೂ, ಯೋಗ-ಜ್ಞಾನವು ವಿವರಿಸುವ ನಮ್ಮ ಭೌತಿಕ ಜೀವನದ ವಿವಿಧ ಹಂತಗಳಲ್ಲೂ ಜೀವ ಮತ್ತು ಕೇವಲ ಜಡದ ಮಧ್ಯಂತರದಲ್ಲಿ ಸೂಕ್ಷ್ಮ ಭೌತಿಕ ಶಕ್ತಿಯೊಂದೇ (Subtle physical force) ಅಲ್ಲದೆ ಸೂಕ್ಷ್ಮ ಭೌತಿಕ ಜಡಪದಾರ್ಥ(Subtle physical matter)ವೂ ಇದೆ ಎಂದೂ, ಈ ಸೂಕ್ಷ್ಮ ಭೌತಿಕ ವಸ್ತುವು, ಜಡತರವಾದ ಭೌತಿಕ ಕ್ಷೇತ್ರದಲ್ಲಿ 'ರೂಪ'ಗಳನ್ನು (Forms) ಸೃಷ್ಟಿಸುವುದು ಸಾಧ್ಯವಾಗುತ್ತದೆ. ಈ ರೀತಿಯಾಗಿ ಉಂಟಾದ ಸೂಕ್ಷ್ಮ ಭೌತಿಕ ವಸ್ತುವು, ಕೇವಲ ಜಡಪದಾರ್ಥಗಳಿಗೆ ನೇರವಾಗಿ ಸಹಾಯ ಸಂಕ್ರಮಣ ರೀತಿ ಯಿಂದ (Transit) ಅತೀಂದ್ರಿಯ ಶಕ್ತಿಯು ಇಳಿದು ಬರುವುದು ಸಾಧ್ಯವಿದೆ ಎಂದು ನಂಬಲಾಗಿದೆ."[7]

ಎಂದಮೇಲೆ ಸಂತಾನೋತ್ಪತ್ತಿಗೆ ದೈಹಿಕ ಲೈಂಗಿಕ ಸಂಯೋಗ ಸಂಪರ್ಕವು ಎಲ್ಲ ಕಾಲದಲ್ಲೂ ಅನಿವಾರ್ಯವೆಂದು ನಂಬಬೇಕಾಗಿಲ್ಲ. ಇತ್ತೀಚೆಗೆ ಭೌತವಿಜ್ಞಾನ

---

6. ಈ ಲೇಖನದ ಪ್ರಾರಂಭದಲ್ಲಿ ಕೊಟ್ಟಿರುವ ಶ್ರೀ ಅರವಿಂದರ ಲೇಖನದ ಉದ್ಧರಣೆ ಯನ್ನು ನೋಡಿ.

7. ಅದೇ ಲೇಖನ ನೋಡಿ.

ಜಡಕ್ಕೂ, ಮನಸ್ಸಿಗೂ ಮಧ್ಯಂತರದ ಒಂದು ಸೂಕ್ಷ್ಮ ಭೌತಿಕವಸ್ತು (Subtle Physical Substance) ಎಂಬುದೇ ಪಾಯಸ ರೂಪದಿಂದ ದಶರಥನಿಗೆ ಆ ದಿವ್ಯ ಮೂರ್ತಿಯು ಕೊಟ್ಟದ್ದು. ಅದನ್ನು ದಶರಥನ ಹೆಂಡಂದಿರು ಸೇವಿಸಿದಾಗ, ಭೌತರೂಪ ತಳೆದ ಸೂಕ್ಷ್ಮವಸ್ತುವನ್ನೇ ಅವರು ಸೇವಿಸಿದರು. ಯಾವ ಕ್ರಿಯೆ ಜನನೇಂದ್ರಿಯದಿಂದ ನೆರವೇರಬೇಕಾಗಿತ್ತೋ ಅದು ಈ ರೀತಿಯಾಗಿ ಅತೀಂದ್ರಿಯ ರೀತಿಯಿಂದ ನೆರವೇರಿತು! ಅದರಿಂದ ಅತಿಮಾನವಶಕ್ತಿಯೊಂದು ಪಾಯಸದ ರೂಪ ದಿಂದ ವ್ಯಕ್ತವಾಗಿ ಕೌಸಲ್ಯೆ, ಸುಮಿತ್ರೆ ಮತ್ತು ಕೈಕೆಯರ ಗರ್ಭದಲ್ಲಿಳಿದು ರಾಮ, ಲಕ್ಷ್ಮಣ, ಭರತ, ಶತ್ರುಘ್ನರೆಂಬ ಮಾನವ ಶರೀರಧಾರಣೆಮಾಡಿ ಭುವಿಗಿಳಿದು ಬಂದರು! ಇದೇ ಶ್ರೀರಾಮಾವತಾರದ ಕ್ರಮ. ವೈಷ್ಣವರು ನಂಬುವ 'ಚಿನ್ಮಯ ದೇಹ' 'ಜ್ಯೋತಿರ್ಮಯ ದೇಹ'—ಎಂಬುದೂ ಇದೆ.[8] ಆದ್ದರಿಂದಲೇ ರಾಮ ಲಕ್ಷ್ಮಣ ಭರತ ಶತ್ರುಘ್ನರು ವಿಷ್ಣುವಿನ ಚತುರಾಯುಧಗಳ ಅಂಶ ಎಂದು ವೈಷ್ಣವ ಪುರಾಣಗಳಲ್ಲಿ ಹೇಳಲಾಗಿದೆ! ಶ್ರೀ ಅರವಿಂದ ಮಹರ್ಷಿಗಳು ವಿವರಿಸಿದ ಅತೀಂದ್ರಿಯ ಸಂತಾನೋತ್ಪತ್ತಿ ಕ್ರಮವನ್ನೂ, ಶ್ರೀರಾಮಾಯಣದಲ್ಲಿ ಹೇಳಲಾದ ಶ್ರೀರಾಮ ಚಂದ್ರನ ಅವತರಣಿಕೆಯನ್ನೂ ವೈಷ್ಣವ ಪುರಾಣಗಳಲ್ಲಿ ಬರುವ ನಂಬುಗೆಯನ್ನೂ– ಒಂದರ ಪಕ್ಕದಲ್ಲೊಂದು ಇಟ್ಟು ನೋಡಿದರೆ ಗಣಿತಸತ್ಯದಂತೆ–೨×೨=೪ ಎಂಬಂತೆ ಕೇವಲ ಸ್ಪಷ್ಟವಾಗುತ್ತದೆ!

ಶ್ರೀರಾಮಚಂದ್ರನ ಅವತರಣಿಕೆ ಹೀಗಲ್ಲದೆ ಮತ್ತೆ ಇನ್ನಾವ ರೀತಿಯಿಂದ ಲಾದರೂ ಆಗಲಾರದಾಗಿತ್ತೆ? ಎಲ್ಲರ ಜನನವೂ ಆಗುವಂತೆ ಶ್ರೀರಾಮನ ಜನನವೂ ಆಗಿದ್ದರೆ ಅವನ ಮಹತ್ತಿಗೆ ಏನು ಕುಂದು ಬರುತ್ತಿತ್ತು? ಈ ವಿಶೇಷ ರೀತಿ ಜನಿಸಿದ ಕಾಯಕ್ಕೂ, ಸಾಮಾನ್ಯ ರೀತಿಯಿಂದ ಜನಿಸಿದ ಕಾಯಕ್ಕೂ ಏನು ವ್ಯತ್ಯಾಸ?.. ಇತ್ಯಾದಿ ಸಮಸ್ಯೆಗಳನ್ನು ಸ್ಥೂಲವಾಗಿ ವಿವೇಚಿಸೋಣ.

ಯಾವುದೇ ಘಟನೆಯಾದರೂ, ಕೆಲಸವಾದರೂ ನೆರವೇರಬೇಕಾದರೆ, ಆಯಾ ಉದ್ದೇಶಗಳಿಗೆ ಅನುಗುಣವಾಗಿಯೇ ನೆರವೇರಬೇಕು. ಗುರಿಗೆ ತಕ್ಕ ಸಾಧನಗಳು ಅಗತ್ಯ. ಶ್ರೀರಾಮಚಂದ್ರನ ಅವತಾರದ ಉದ್ದೇಶವೇನು? ಅವನು ನೆರವೇರಿಸಬೇಕಾಗಿದ್ದ ಉದ್ದೇಶಕ್ಕೆ ಅವನ ದೇಹ ಹೇಗೆ ನೆರವಾಗ ಬೇಕಾಗಿತ್ತು? ರಾವಣವಧಾರ್ಥವಾಗಿ ತನುವನ್ನು ಆಶ್ರಯಿಸಿ ಶ್ರೀರಾಮಚಂದ್ರ ಬಂದ–ಎಂಬುದು ಅಲ್ಪ ಸತ್ಯ; ಅರೆ ಸತ್ಯ. ಆದರೆ "ಸೃಷ್ಟಿಯ ಸಮಷ್ಟಿಪ್ರಜ್ಞೆಯ ಸಾಮೂಹಿಕ ವಿಕಾಸಕ್ಕಾಗಿ" ಶ್ರೀರಾಮಚಂದ್ರ ಅವತರಿಸಿದ ಎಂಬುದು ಸತ್ಯಸ್ಯ ಸತ್ಯ; ಪೂರ್ಣ ಸತ್ಯ. ಇಂಥ ಅಗಾಧವಾದ ಉದ್ದೇಶಸಾಧನೆಗೆ ಶ್ರೀ

---

[8] 'ಜೋತಿಶ್ಶರೀರನಂ ಕಂಡೆನೀ ಶಿಶು ರೂಪನಂ' ಶ್ರೀ ರಾ. ದ., ಕವಿತ್ರತುದರ್ಶನಂ ಸಾ. ೪೭೮. '... ಶ್ರೀಮದ್ ದಿವ್ಯ ದೇಹದಿಂ' ಶ್ರೀ ರಾ. ದ., ರಯಾಗೆ ಕರೆದೊಯ್ ಓ ಅಗ್ನಿ' ಸಾ. ೫೭೫.

ರಾಮಚಂದ್ರನ ದೇಹ ಎಲ್ಲ ಮಾನವರಂಥ ದೇಹದಿಂದ ಸಾಧ್ಯವಾಗುತ್ತಿರಲಿಲ್ಲ! ಹಸಿವು, ತೃಷೆ, ನಿದ್ರೆ, ಮೈಥುನ ಇತ್ಯಾದಿ ದೈಹಿಕಸಹಜವಾದ ಪ್ರಕೃತಿಬದ್ಧವಾದ ದೇಹದಿಂದ, ಶ್ರೀರಾಮಚಂದ್ರನಂಥ ಪರಿಪೂರ್ಣ ಆತ್ಮ ತನ್ನ ಉದ್ದೇಶವನ್ನು ಸಾಧಿಸಿಕೊಳ್ಳುತ್ತಿರಲಿಲ್ಲ. ಆತ್ಮ ಗಗನಗಾಮಿಯಾಗಲು ಬಯಸಿದರೆ ದೇಹ ತನ್ನ ಅಸಾಮರ್ಥ್ಯದಿಂದ, ಪರಿಮಿತತೆಯಿಂದ, ದೌರ್ಬಲ್ಯದಿಂದ ಕೆಳಗೆ ಜಗ್ಗಿ ಭೂಮಿಯತ್ತ ಜಗ್ಗುತ್ತಿತ್ತು !! ಎತ್ತು ಏರಿಗೆ ಎಳೆದರೆ ಎಮ್ಮೆ ಕೆರೆಗೆ ಎಳೆಯುತ್ತದೆ—ಎಂಬಂತಾಗುತ್ತಿತ್ತು. ಹೇಗೆ, ದೃಢವಾದ ದೇಹದಲ್ಲಿ ದೃಢವಾದ ಮನಸ್ಸು (sound mind in a sound body) ಇರಲು ಸಾಧ್ಯವೋ, ಹಾಗೆಯೇ ಮಹಾ ಆತ್ಮವು, ಮಹಾ ದೇಹದಲ್ಲಿಯೇ ಅವತರಿಸಬಲ್ಲದು. ಅಕ್ಕಮಹಾದೇವಿಯಂಥ ಮಹಾ ವೈರಾಗ್ಯ ನಿಧಿಯ ಭೂಮಾತ್ಮ, ನಮ್ಮ ನಿಮ್ಮ ದುರ್ಬಲ, ಪರಿಮಿತ ಶಕ್ತಿಯ, ಅಲ್ಪ ದೇಹದಲ್ಲಿ ಅವತರಿಸಲು ಸಾಧ್ಯವಾಗುತ್ತಿತ್ತೇ? ಆತ್ಮದ ಪ್ರಬಲ ಊರ್ಧ್ವಮುಖ ಹಾರೈಕೆಯನ್ನು ದುರ್ಬಲದೇಹದ ಅಧೋಮುಖ ಸೆಳೆತ ನಿಶ್ಚಯವಾಗಿ ಭಂಗಿಸುತ್ತಿತ್ತು, ಬಂಧಿಸುತ್ತಿತ್ತು. ಆದ್ದರಿಂದಲೇ ಕಾಯದ ಹಂಗಿಗೆ ಬಳಗಾಗದ ನಿಃಕಾಯವನ್ನೇ ಆಕೆ ಹೊದ್ದುಬಂದಳು. ಇಲ್ಲಿಯಾದರೂ ಆದದ್ದು ಹಾಗೆಯೇ. ಎಲ್ಲ ಕಾಯದಂತೆ ಈ ಕಾಯವೂ ಹಸಿವು, ತೃಷೆ, ನಿದ್ರೆ, ಮೈಥುನದ ಹಂಗಿಗೆ ಒಳಗಾಗಿದ್ದರೆ ಶ್ರೀ ರಾಮಚಂದ್ರನ ಅವತಾರದ ಉದ್ದೇಶ ಈಡೇರುತ್ತಿರಲಿಲ್ಲ.

ಶ್ರೀರಾಮಚಂದ್ರ ಹೀಗಲ್ಲದೆ ಮತ್ತಾವ ಕ್ರಮದಿಂದಲೂ ಅವತರಿಸಲು ಸಾಧ್ಯವಿರಲಿಲ್ಲವೆ? ಅದರಿಂದ ಆಗುತ್ತಿದ್ದ ಹಾನಿಯಾದರೂ ಏನು? ವಿಭೂತಿಯ ಅವತರಣಿಕೆ ಯಾವ ರೀತಿಯಿಂದಲಾದರೂ ಆಗಬಹುದು. ಆದರೆ, ಯಾವ ದೈಹಿಕ ದೌರ್ಬಲ್ಯಗಳು—ಹಸಿವೆ ತೃಷೆ ನಿದ್ರೆ ಮೈಥುನ ಇತ್ಯಾದಿ ದೌರ್ಬಲ್ಯಗಳು—ಆತ್ಮದ ಪ್ರಗತಿಗೆ, ಊರ್ಧ್ವಮುಖ ಹಾರೈಕೆಗಳಿಗೆ ಆತಂಕವೆಂದು ಆಧ್ಯಾತ್ಮದ ಸಾಧಕರು ಭಾವಿಸಿದ್ದಾರೋ, ಅದೇ ದೌರ್ಬಲ್ಯದ ಸಾಧನದಿಂದಲೇ ಆಧ್ಯಾತ್ಮ ಲೋಕದ ಉತ್ತುಂಗ ಶಿಖರವನೇರಿನಿಂತ ಮಹಾತ್ಮರು ಅವತರಿಸಿ ಬರುವುದು ಅಸಂಭವವೂ, ವಿಸಂಗತವೂ ಆಗಿ ತೋರುತ್ತದೆ. ಆಧ್ಯಾತ್ಮಲೋಕದಲ್ಲಿ ಮುಂದಡಿ ಇಡಲು ಬಯಸುವ ಯಾವ ಸಾಧಕನಾದರೂ ಬ್ರಹ್ಮಚರ್ಯಪಾಲನೆ ಮಾಡಲೇ ಬೇಕು. ಯಾವನ ಕಾಮಪ್ರವೃತ್ತಿ ತೃಪ್ತಿಗೊಂಡಿಲ್ಲವೋ, ಯಾರು ಕಾಮನನ್ನು ಗೆದ್ದಿಲ್ಲವೋ, ಯಾರು ಇಂದ್ರಿಯಗಳ ವಿಷಯವಾಸನೆಯ ದಾಸರೋ ಅವರು ಆಧ್ಯಾತ್ಮಲೋಕದ ಹೊರವಲಯಕ್ಕೂ ಕಾಲಿಡಲು ಅರ್ಹರಾಗಲಾರರು. ಎಂದ ಮೇಲೆ, ಆಧ್ಯಾತ್ಮಲೋಕದ ಅಧಿಪತಿಯಾದ ಮಹಾವಿಭೂತಿ, ಮಹಾತ್ಮ ಅದರಲ್ಲೂ ಶ್ರೀರಾಮಚಂದ್ರನಂಥ ಅವತಾರಿಯ ಅವತರಣಿಕೆ, ಜನನ-ಅದೇ ಮೈಥುನಕ್ರಿಯೆಯಿಂದಲೇ ಆಗಬೇಕೆಂಬುದು ವಿಪರ್ಯಾಸವಾಗಿ ಕಂಡುಬರುತ್ತದೆ. ಇಲ್ಲದಿದ್ದರೆ ಸುರಾಪಾನವನ್ನು ಪ್ರತಿಬಂಧಿಸಲೆಂದೇ ಆಜ್ಞಪ್ತನಾಗಿ ಬಂದವನು, ಸುರಾಪಾನ

ಲೋಲನಾಗಿ ವರ್ತಿಸಿದಂತಾಗುತ್ತದೆ. ಆದ್ದರಿಂದಲೇ ಆದರ್ಶಪುತ್ರ, ಆದರ್ಶ ಪತಿ, ಆದರ್ಶ ಸೋದರ, ಆದರ್ಶ ಯೋಧ, ಆದರ್ಶ ಸ್ನೇಹಿತ, ಆದರ್ಶ ಪ್ರಭು, ಆದರ್ಶ ಸ್ವಾಮಿ ಎಂಬಿತ್ಯಾದಿ ಖ್ಯಾತಿವೆತ್ತ ಶ್ರೀರಾಮಚಂದ್ರ ಆದರ್ಶ ರೀತಿಯಲ್ಲೇ ಅವತರಿಸಬೇಕಾದದ್ದು ನ್ಯಾಯವಾಗಿದೆ. ಹಾಗೆ ಅವತರಿಸಿದ್ದರಿಂದಲೇ ಅದು ಜ್ಯೋತಿಶ್ಶರೀರವಾಯಿತು; ದಿವ್ಯದೇಹವಾಯಿತು.

ಹೀಗೆ ವಿಶೇಷ ರೀತಿಯಿಂದ ಜನಿಸಿದ ಕಾಯಕ್ಕೆ, ಸಾಮಾನ್ಯದೇಹದ ಉಪಾಧಿಗಳಿರುವುದಿಲ್ಲ. ಹಸಿವೆ ತೃಷೆ ನಿದ್ರೆ ಮೈಥುನ ಜರಾ ಮೃತ್ಯು . . . ಗಳೆಂಬ ಬಂಧನಗಳೂ ಪರಿಮಿತಿಯೂ ಇರುವುದಿಲ್ಲ. ಹೇಗೆ ಮನಸ್ಸು ಉದಿಸಿದ ಮಾನವನಿಗೆ ತಕ್ಕ ದೇಹವನ್ನು ಮಾನವ ಹೊಂದಿದನೋ ಹಾಗೆಯೇ ಶ್ರೀರಾಮನಂಥ ಅತಿ ಮಾನವ–ಅತಿಮನಸ್ಸುಳ್ಳ ಮಹಾವಿಭೂತಿಯ ದಿವ್ಯಮನಸ್ಸಿನ ಆಲಯವಾಗಲು ಯೋಗ್ಯವಾಗುವಂಥ ದೇಹ ಚಿನ್ಮಯದೇಹವೇ ಆಗಿರಬೇಕು. ಇಲ್ಲದಿದ್ದರೆ ಮುರುಕು ಗುಡಿಸಲಿನಲ್ಲಿ ಮಹಾ ಪ್ರಕಾಶಮಾನವಾದ, ಸ್ವಯಂಪ್ರಭೆಯ ಅನರ್ಘ್ಯ ರತ್ನವನ್ನೋ, ವಿದ್ಯುದ್ದೀಪವನ್ನೋ ಇರಿಸಿದಂತಾಗುತ್ತದೆ. ಅದರಿಂದ ಆ ರತ್ನದ ರಕ್ಷಣೆಯೂ ಕಷ್ಟತರ; ಆ ಗುಡಿಸಲಿನ ಕ್ಷೇಮಕ್ಕೂ ಅಪಾಯ! ಹಾಗೂ ತಾನು ಇಹಲೋಕಯಾತ್ರೆಯಲ್ಲಿ ವಹಿಸಬೇಕಾದ, ನೆರವೇರಿಸಬೇಕಾದ ಪಾತ್ರವನ್ನೂ, ಜವಾಬ್ದಾರಿಯನ್ನೂ ನೆರವೇರಿಸಲಾಗುತ್ತಿರಲಿಲ್ಲ. ತಾಟಕಾ ಸಂಹಾರದಿಂದ ಹಿಡಿದು ರಾವಣನ ವಧೆಯವರೆಗೆ ಎಂಥ ಮಹಾ ದುಶ್ಶಕ್ತಿಗಳನ್ನು ಎದುರಿಸಿ ಘನ ಘೋರ ಸಂಗ್ರಾಮಗಳಲ್ಲಿ ಆ ದೇಹ ದುಡಿಯಬೇಕಾಯಿತು? ಹದಿಮೂರು ವರ್ಷಗಳ ಆ ವನವಾಸದ ಅಗ್ನಿಪರೀಕ್ಷೆಯಲ್ಲಿ ಪಾರಾಗಿಬರಬೇಕಾಯಿತು? ಇದೆಲ್ಲವೂ ಮಹತ್ಸಾಧನೆ ತೃಣದೇಹದಿಂದ ಆಗುತ್ತಿರಲಿಲ್ಲ. ವಜ್ರಶರೀರದಿಂದಲೇ ಸಾಧ್ಯ. ಆ ಗುರಿಯ ಸಿದ್ಧಿ ಇಂಥ ಜನನದಿಂದಲೇ ಸಾಧ್ಯ.

—ಕೋ. ಚನ್ನಬಸಪ್ಪ

ಅಷ್ಟಗ್ರಹಕೂಟದ ಇರುಳು

ಇರುಳೆಲ್ಲವೂ ಭಜನೆ,
ಎಂಟು ಗ್ರಹ ಒಟ್ಟಿಗೇ ಸೇರಿರುವಾಗ
ಏನೋ ಎಂತೋ ಎಂದು
ಇರುಳೆಲ್ಲವೂ ಭಜನೆ!

ಇದ್ದಕಿದ್ದಂತೆ ನೆಲಗುಡುಗಿ ಮನೆಮಠವೆಲ್ಲ
ಪುಡಿಯಾಗಿ ಹೋಗುವುದೆಂದು.
ಮೇಲಿನಾಕಾಶವೇ ರಪ್ಪನೆ ಬಿದ್ದು ರಂಪವಾಗುವುದೆಂದು,
ಬಿರುಗಾಳಿ ಭೋರ್ಗರೆದು ಎಲ್ಲರೂ ತರಗೆಲೆಯಂತೆ
ತೂರಿ ಹೋಗುವರೆಂದು,
ಮೋಡದ ದಂಡು ಸಿಡಿಲು–ಮಿಂಚನು ಕರೆದು
ಸುಟ್ಟುಹಾಕುವುದೆಂದು,
ನಾಳೆಯ ಬೆಳಗು ಹೊತ್ತು ಹುಟ್ಟದೆಯೆ ಬರಿಯ
ಕತ್ತಲೇ ಕವಿಯುವುದೆಂದು,
ಏನೇನೋ ಬಹುರೂಪಗಳ ಭೀತಿಯನುಂಡು
ಈಗ ಭಜನೆಮಾಡುತಿದ್ದಾರೆ ಈ ಸಾತ್ವಿಕರು!
ದಿನವೂ ನಾವು ಕಂಡಂತೆ ಇವರೆಲ್ಲ
ಪ್ರಥಮ ವರ್ಗಕ್ಕೆ ಸೇರಿರುವ ಠಕ್ಕರು!
ಜೀವಗಳ್ಳರ ಜಪಕ್ಕೆ ಜಗ್ಗುವನೆ ದೇವರು?

ಈ ಒಂದು ದಿನ ಕಳೆದು ಬೆಳಗಾದಾಗ,
ಇವರ ಭಕ್ತಿಯ ರೀತಿ,
ದಬ್ಬೆ ಬಿಚ್ಚಿದ ಬಾಲ!
ನಾಳೆಯ ದಿವಸ ಕಾಲಡಿಯ ನೆಲ ಭದ್ರವೆಂದರಿತಾಗ,
ಇನ್ನೊಂದು ಸಲ ಅಷ್ಟಗ್ರಹಕೂಟವಾಗುವ ತನಕ
ಇವರನ್ನು ಹಿಡಿಯುವರು ಯಾರು?

—ಜಿ. ಎಸ್. ಶಿವರುದ್ರಪ್ಪ

ಗಜೇಶ ಮಸಣಯ್ಯನ ವಚನಗಳು

ಇಂದುವಿನಲ್ಲುದಯವಾದ ಕಲ್ಲಿನಂತೆ ಮುನಿಸ ಮಱದಿರ್ದಳವ್ವೆ. ಅವನ ಸುಖದಲ್ಲಿ ಸುಖಿಯಾದಳು, ಅಗಲಿದೊಡೆ ಕಱಗೊಂಡಳು, ಮಹಾಲಿಂಗ ಗಜೇಶ್ವರ ದೇವರಲ್ಲಿ ಮನಸೋಂಕಿ ಮನಲೀಯ್ಯವಾದಳವ್ವೆ ||೧||

ಅಗಲಿದ ನಲ್ಲನ ಕನಸಿನಲ್ಲಪ್ಪಿ ಸುಖಿಯಾದರವ್ವಾ. ಕಂಡ ಕನಸು ದಿಟವಾದೊಡೆ ಅವ ನಮ್ಮ ನಲ್ಲ. ಮನಸುಳ್ಳವರು ನೀವು ಪು[1]ಣ್ಯಂ[1]ಗೆಯ್ದಿರವ್ವಾ. ಮಹಾಲಿಂಗ ಗಜೇಶ್ವರನಗಲಿದೊಡೆ ನಿದ್ರೆ ಎಮಗಿಲ್ಲ, ಕನಸೆಲ್ಲಿಂದ ಬಹುದವ್ವಾ ||೨||

ಹಗಲು ಮನಸಿಂಗಂಜಿ, ಇರುಳು ಕನಸಿಂಗಂಜಿ ಧ್ಯಾನಮೌನಿಯಾಗಿರ್ದಳವ್ವೆ. ಸಖಿ ಬಂದು ಬೆಸಗೊಂಡಡೇನೆಂದು ಹೇಳುವಳವ್ವೆ (?) ಏನೆಂದು ನುಡಿವಳವ್ವೆ (?) ಸಾಕ್ಷಾರದಲ್ಲಿ ಸವೆದು, ನಿರಾಕಾರದಲ್ಲರ್ಪಿಸಿದೊಡೆ ಮಹಾಲಿಂಗ ಗಜೇಶ್ವರ ದೇವನುಮೇಶ್ವರನಾದನವ್ವಾ ||೩||

ಅಗಲದ ನಲ್ಲನನಗಲಿ ನೆರೆದೆನೆಂಬ ಕಾಮಿನಿಯರ ಭಂಗವ ನೋಡಾ. ಆ ನಮ್ಮ ನಲ್ಲನ ಅನುವಿನಲ್ಲಿದ್ದು ನೆರೆದೆನೆಂಬ ಭರವೆನ[2]ಗೇಕೆ[2] (?) ಮಹಾಲಿಂಗ ಗಜೇಶ್ವರದೇವರನಗಲುವರೆ ನಾನೇನು ಕಲುಮನದವಳೆ ಅವ್ವಾ ||೪||

ಮುನಿಸ ಮುನಿದಡೆ ಶ್ರೀಗಂಧದ ಮುರುಡಿನ ಹಾಂಗಿರಬೇಕವ್ವಾ. ತೆಗೆದಪ್ಪಿದಡೆ ಚಂದನದ ಸೀತಳದ [3]ಹಾಂಗಾಗಬೇಕವ್ವಾ[3]. ಹೆಣಗುವಲ್ಲಿ ಮೈಯೆಲ್ಲಾ ಕೈಯಾಗಿ ಹೆಣಗಬೇಕವ್ವಾ. ಮಹಾಲಿಂಗ ಗಜೇಶ್ವರನ ನೆರೆವ ಭರದಿಂದ ನೊಂದ ಅಂಕ ಮೇಲೆ ಬಿದ್ದ ಹಾಂಗಿರಬೇಕವ್ವಾ ||೫||

ಕಾಮಂಗಂಜಿ ಚಂದ್ರನ ಮಱೆಹೊಗಲು ರಾಹುಗೊಂಡಂತಾದಳವ್ವೆ. ಹಾವೆಂದಱಯದೆ, ಲೇವಳವೆಂದಱಯದೆ ಕ್ಷಣ ನಾಗಭೂಷಣೆಯಾದಳವ್ವೆ. ಮಹಾಲಿಂಗ ಗಜೇಶ್ವರನ ನೆರೆವ ಭರದಿಂದ ಕಳಕೆ ಬಂದ ಮೃಗದಂತಿರ್ದಳವ್ವೆ ||೬||

ಉದರವ ತಾಗಿದ ಮಾತು ಅಧರದಲ್ಲಿ ಬೀಸರವೋದುದೆಂದು ಅಧರವ ಮುಚ್ಚಿಕೊಂಡಿರ್ದಳವ್ವೆ. ಕಂಗಳ ಕೊನೆ ಬೀಸರವೋದುದೆಂದು ಕಂಗಳ ಮುಚ್ಚಿಕೊಂಡಿರ್ದಳವ್ವೆ. ಪರಿಮಳ ಬೀಸರವೋದುದೆಂದು ಅಳಿಗೆ ಬುದ್ಧಿಯ ಹೇಳಿದಳವ್ವೆ. ಮನ ಬೀಸರವೋದುದೆಂದು ದಿನಕರನ ಕಾವಲ ಕೊಟ್ಟಳವ್ವೆ. [4]ಇಂ[4]ದು ನಮ್ಮ ಮಹಾಲಿಂಗ ಗಜೇಶ್ವರನ ನೆರೆವ ಭರದಿಂದಾ ||೭||

---

[1] ಣ್ಯ (ಗ) [2] ಗೆ (ಕ) [3] ಹಾಗಾಗಬೇಕು (ಕ) [4] ಇ (ಕ)

ಕಂಗಳ ಬಲದಲ್ಲಿ ಮುನಿದೆಹೆನೆಂಬೆನೆ ಕಂಗಳು ತನ್ನ ನಲ್ಲದೆ ನೋಡವು. ಮನದ ಬಲದಲ್ಲಿ ಮುನಿದೆಹೆನೆಂದಡೆ ಮನದೊಡೆಯನು ತಾನು. ತನುವಿನ ಬಲದಲ್ಲಿ ಮುನಿದೆಹೆನೆಂದಡೆ ತನು ತಾಳಲಾರದು. ಇಂಥಾ ಮನಃಪ್ರೇರಕ ಮನ ಚೋರಕನೆ [1]ತನ್ನಾ[1]ಧೀನವಾಗಿ ಸಾಧನವಪ್ಪಡೆ ಮನದವಳ ಮೆಚ್ಚನವ್ವಾ. ಮನದಲ್ಲಿ ಬೆರಸುವೆ, ಭಾವದಲ್ಲಿ ಬೆರಸುವೆ. ಮೇಲೆ ಪ್ರಾಣನಾಥನಾಗಿ ಮಹಾಲಿಂಗ ಗಜೇಶ್ವರದೇವ ಮುನಿಸಿಂಗೆ ಮನಸ ತರಲೀಸನವ್ವಾ ||೮||

ಚಕೋರನಂತೆ ದಿನವನೆಣಿಸುತ್ತಿರ್ದಳವ್ವೆ. ದರುವಕ್ಕಿ? ಕಂಡ ಕನಸಿನಂತಿರ್ದ್ದಳವ್ವೆ. ನೋಡಂಬೊಕ್ಕ ಚಂದ್ರಮನಂತಿರ್ದಳವ್ವೆ. ಎಂಟನೆಯ ಅವಸ್ಥೆಯವಳು ಆಚೆಯ ತಡಿಯಲ್ಲಿರ್ದವನ ಈಚೆಯ ತಡಿಗೆ ಕರೆದುಕೊಂಬಂತೆ, ಇಂದು ನಮ್ಮ ಮಹಾಲಿಂಗ ಗಜೇಶ್ವರ[2]ನು[2] ಕಂಗಳ ಕಾಮುಕಂಗಾಹಿ ಕಂಡವ್ವಾ ||೯||

ಋತುಕಾಲ ತಪ್ಪಿದ ಕೋಗಿಲೆಯಂತೆ ನುಡಿಯದಂತಿರ್ದಳಲ್ಲಾ. ಪರಿಮಳ ತಪ್ಪಿದ ಭ್ರಮರನಂತೆ ಸುಳಿಸುಳಿಗೊಳುತಿರ್ದಳಲ್ಲಾ. ಫಲವು ತಪ್ಪಿದ ಬಂಜೆ ಬನದೊಳಗಣ ಅರಗಿಳಿಯಂತಿರ್ದಳಲ್ಲಾ. ಘು[3]ರು[3]ಭರದ ಜವ್ವನದಲ್ಲಿ ತೋರಣ [4]ದೆ[4]ಲೆಯಂತೆ ಮಹಾಲಿಂಗ ಗಜೇಶ್ವರನ ನೆರೆವ ಭರದಿಂದ ಅ[5]ಳಿಕ[5] ವೃದ್ಧಿಯಾಗಿರ್ದಳಲ್ಲಾ ||೧೦||

ತಮ್ಮ ತಮ್ಮ ಗಂಡರ ಚೆಲುವರೆಂದು ಕೊಂಡಾಡುವ ಹೆಣ್ಣುಗಳು ಪುಣ್ಯಜೀವಿಗಳವ್ವಾ. ನಾ ನಮ್ಮ ನಲ್ಲನೆಂಥಾವನೆಂದಱಿಯನವ್ವಾ. ಮಹಾಲಿಂಗ ಗಜೇಶ್ವರದೇವ ನಿಱಿಯು ಸೆಱಗ ಸಡಿಲಿಸಲೊಡನೆ ನಾನೇನೆಂದಱಿಯೆನವ್ವಾ ||೧೧||

ಆತನ ನೋಡಿದಡೆ [6]ಎಂಟು[6] ದೆಸೆಗಳ ಮಱದೆನಿನ್ನೆಂತವ್ವಾ? [7]ಅವ್ವಾ ಅವ್ವಾ ಆ[7]ತನ ನುಡಿಸಿದಡೆ [8]ಮೈಯೆಲ್ಲಾ[8] ಬೆಮರ್ದುವಿನ್ನೆಂತವ್ವಾ? ಅವ್ವಾ ಕೈಯ ಹಿಡಿದಡೆ ಎನ್ನ ನಿಱಿಗಳು ಸಡಿಲಿದವಿನ್ನೆಂತವ್ವಾ? [9]ಇಂದೆ[9]ಮ್ಮ ಮಹಾಲಿಂಗ ಗಜೇಶ್ವರನಪ್ಪಿದನೆಂದಡೆ ನಾನಪ್ಪ ಮಱದೆನಿನ್ನೆಂತವ್ವಾ? ||೧೨||

ಆತನ ಬೆರಸಿದ ಕೂಟವನೇನೆಂದು ಹೇಳುವೆನವ್ವಾ. ಕೇಳಲೂಬಾರದು, ಹೇಳಲೂಬಾರದು, ಏ[10]ನ[10] ಹೇಳುವೆನವ್ವಾ. ಶಿಖಿ ಕರ್ಪುರವ ಬೆರಸಿದಂತೆ ಮಹಾಲಿಂಗ ಗಜೇಶ್ವರನ ಕೂಡಿದ ಕೂಟವ ಹೇಳಲು ಬಾರ[11]ದವ್ವಾ[11] ||೧೩||

ಪದುಮ ಪ[12]ಂಜು[12]ಳ ವರ್ಣ[13]ನೆ[13] ದಲೆಯಾಗಿರ್ದಳವ್ವೆ. ತುಂಬಿ ಮುತ್ತನುಗುಳದಂತೆ ಕಂಗಳು ಕಂಕಣವಾಗಿ, ಚಂದ್ರಬಿಂಬ[14]ದ[14]ಗ್ರದಂತೆ, ಅವಘಟಿಸಿ

---

1 ತಾನಾ (ಗ) 2 ನ (ಗ) 3 ರ (ಕ) 4 ದ (ಕ) 5 ಳಕಾ (ಗ) 6 ಇಂತು (ಚ) 7 ಆ (ಚ) 8 ಮೈ (ಚ) 9 ಅವ್ವಾನ (ಚ) 10 ನೆಂದು (ಚ) 11 ದು (ಚ) 12 ಜ (ಕ) 13 ನ್ಯಾಯ (ಗ) 14 ದಾ (ಕ)

ಕೊಂಡಿರ್ದ ಭಂಗಾರಕ್ಕೆಱಗಿದ ರತ್ನದಂತೆ ಆನೊಂದೆಗ್ರಾಹಿಯಾಗಿರ್ದೆನವ್ವಾ. ಅಖಂಡಿತನಾಗಿ ಮಹಾಲಿಂಗ ಗಜೇಶ್ವರನ ಅನುಭಾವಕ್ಕೆ ಸುಖಿಯಾಗಿ ||೧೪||

ಅಪ್ಪಿನ ಸೋಂಕಿನ ಸುಖವನಗಲುವ ಮನಕಿಂದ ಬಂಜೆಯಾಗಿಪ್ಪುದು ಕರ ಲೇಸು ನೋಡವ್ವಾ. ಕಂಗಳ ನೋಟ ಮನಕ್ಕೆ ಸ್ವೈರಿಸ[1]ದೆ[1]ಣೆಗೊಂಡು ಬಡವಾದ ಪರಿಯ ನೋಡವ್ವಾ. ತುಪ್ಪಳನಿ[2]ಕ್ಕ[2]ದ ಹಂಸೆಯಂತಾದೆನವ್ವಾ ಮಹಾಲಿಂಗ ಗಜೇಶ್ವರನುಳಿದಡೆ ||೧೫||

ಹಲವು ಕಾಲದಗಲಿಕೆ ತಾರ್ಕಣೆಗಂಡಂತವ್ವಾ. ಮುನಿಸು ನಾ[3]ಚಿಕೆ[3] ಹೋಗಿ ಕಂಗಳ ಕೊನೆಯಲ್ಲಿ ಸಿಲುಕಿದೆನವ್ವಾ. ತನು ಜಜ್ಝರಿತವೋಗಿ ಕಂಗಳ ಕೊನೆಯಲ್ಲಿ ಸಿಲುಕಿ[4]ದೆ[4]. ಮಹಾಲಿಂಗ ಗಜೇಶ್ವರನುಳಿದನೆಂದೊಡೆ ಆರಿಕಲ್ಲ ನುಂಗಿದ ಚಕೋರನಂತಾದೆನವ್ವಾ ||೧೬||

ಕಂಗಳ ಕಾಳಗ, ನೋಟದ ಮಸಕ, ಮಿಂಚಿನ ಗೊಂಚಲು ತಾಗಿದಂತಾದೆನವ್ವಾ. ತಾರಕಿ ತಾರಕಿ ಸೂಸಿದಂತೆ, ಅರಗಿನ ಬಳ್ಳಿ ಹಬ್ಬಿದಂತವ್ವಾ. ಓರೆ ಕೋರೆ ಕೆಂಪಾದನವ್ವಾ. ಆಳುಗಳಿನ್ನಾರೊ? ಐದು ರೂಹನೊಂದು ಮಾಡಿ, ಕಾದಿ ಗೆದ್ದು ಸೋತು ಹೊಱವಂಟು ಹೋದನವ್ವಾ, ಮಹಾಲಿಂಗ ಗಜೇಶ್ವರ ಕಂಗಳ ಮಾಸಾಳು ||೧೭||

ನಲ್ಲನುಳಿದಾನೆಂದೊಂದು ಮಾತನಟ್ಟಿದಡೆ ಕರಸ್ಥಲದಲ್ಲಿ ನೈದಿಲು ಮೂಡಿತ್ತ ಕಂಡೆನವ್ವಾ. ಉದಕದೊಳಗೆ ತಾವರೆ ಬಾಡಿತ್ತ ಕಂಡೆನವ್ವಾ. ಎಮ್ಮ ಮಹಾಲಿಂಗ ಗಜೇಶ್ವರನುಳಿದನೆಂದಡೆ ಒಂದೆಲೆಯಲ್ಲಿ ಹೂ ಮೂಡಿತ್ತ ಕಂಡೆನವ್ವಾ ||೧೮||

ಚಂದ್ರಮನ ಕಂಡು ಮಂಡೆಯ ಬಿಟ್ಟು ಏಳು ಬಂಧವ ತೋಱಿ ಬೆದಱಿಸಿದನವ್ವಾ. ಮಗಳ ಕುಂಕುಮದ ತಿಲಕವ ಕಂಡು ನಿನ್ನ ನೊಸಲಲ್ಲಿ ಎಸೆಯ ಬಂದ ಕಾಮ ಕೈ ಮಱದನವ್ವಾ. ಷಟ್ಪದಿಯ ಸಂ[5]ಗ[5] ಮಹಾಲಿಂಗ ಗಜೇಶ್ವರನ ಸಂಪಗೆ ವನಕೆ ಬಂದು ಶರಣೆ[6]ನ್ನು[6] ಮಗಳೆ ||೧೯||

ಹೊನ್ನ ಕೊಡನ ಹೊಮ್ಮಿನ ಹಮ್ಮಿನ ಕಳೆಯ ಪುಳಕದಲ್ಲಿ ತಾ[7]ರಕಿ[7] ತಾರಕಿ ತಳಿ[8]ದಂ[8]ತೆ ಅಂಗಸಂಗದಲ್ಲಿರ್ದಳವ್ವೆ. ಅಡವಿಯಲಾದ ಮರದಡಿಯಲ್ಲಿರ್ದು ಬಿಸಿಲ ಬಯಸಿದಳವ್ವೆ. ಇಂದು ಮಹಾಲಿಂಗ ಗಜೇಶ್ವರನ ನೆರೆವ ಭರದಲ್ಲಿ ತಳಕೆ ಬಂದ ಮೃಗದಂತೆ ತನ್ನ ತಾ ಮಱದಳವ್ವೆ ||೨೦||

---

1 ಡುಎ (ಕ) 2 ಕ್ಕಿ (ಕ) 3 ಚಿ (ಗ) 4 ದವನ ಎ (ಕ) 5 ಗವ (ಕ) 6 ಮ್ಮ (ಕ) 7 ರ (ಕ) 8 ತಂ (ಗ)

ನೇಹದ ಸನ್ನೆಯ ಮನವಱಿಯಲೊಡನೆ ನೋಡಲಮ್ಮೆನವ್ವಾ. ಕಂಗಳು ಹಿಸುಣನ ಹೇಳಿಹವೆಂದು ನೋಡಲಮ್ಮೆನವ್ವಾ. ಕಜ್ಜಳ ಕಲಕಿದೊಡೆ ಕುಱುಹಳಿದು ತಿಂದು ನೋಡಲಮ್ಮೆನವ್ವಾ. ಕಂಗಳು ಮಹಾಲಿಂಗ ಗಜೇಶ್ವರನೊಲವು ಎನಗೆ ಸುಖದ ಮೊದಲು ನೋಡವ್ವಾ ॥೨೧॥

ಮಾಗಿಯ ಹುಲ್ಲಿನ ಸೋಂಕಿನಂತೆ ತನು ಪುಳಕಿತವಾದಳವ್ವೆ. ನುಡಿತೊದಳು. ಅವನ ಒಲವೆ ಆಧಾರವಾಗಿರ್ದಳವ್ವೆ. ಬಿಳಿಯ ತುಂಬಿ ಕುಂಕುಮದ ರಜದಲ್ಲಿ ಬಂಡುಂಡಂತೆ ಮಹಾಲಿಂಗ ಗಜೇಶ್ವರನಲ್ಲಿ ತನ್ನಲ್ಲಿ ತಾನೆ ರತಿಯಾಗಿರ್ದಳವ್ವೆ ॥೨೨॥

ಎವೆ ಎವೆ ಹಳಚದೆ ಮೊಲೆಯ ಮೇಲಣ[1]ಘಾ[1]ಯ, ಬಿಳಿಯ ರಕ್ತದ ಧಾರೆ ಸುರಿದಲ್ಲಿ, ಸಸಿ ಒಸರೆ ಬಸಂತವೆಸದವವ್ವಾ. ಅಪ್ಪಿನ ಸೋಂಕಿನ [2]ಆಬೇ[2]ಗ ವಳಿದುಳಿದಡೆ ಮಹಾಲಿಂಗ ಗಜೇಶ್ವರದೇವ ನೀರಸವಾಗಿರ್ದನವ್ವಾ ॥೨೩॥

ಬಿಟ್ಟ ತಲೆಯ, ಬಿಡುಮುಡಿಯ, ಬಱುಮಯ್ಯ, ಕಿವಿಯ ಬಿಚ್ಚೋಲೆಯ ಉಟ್ಟಸೀರೆಯ ಸಡಿಲಿಸಿದ ಕಳೆಯ ಘಳಿಲನೆ ನಡೆತಂದಳು. ನಚ್ಚಿ ಮಚ್ಚಿ. ಮನ ಸಂಧಾನವನು, ಬಂದಪ್ಪಿನ ಸೋಂಕಿನ ಸುಖವನು ಮಹಾಲಿಂಗ ಗಜೇಶ್ವರ ತಾನೆ ಬಲ್ಲಾ ॥೨೪॥

ದೇವರ ನೆನೆದು ಮುಕ್ತರಾದೆವೆಂಬ ಯುಕ್ತಿಶೂನ್ಯರ ಮಾತ ಕೇಳಲಾಗದು. ಅದೇನು ಕಾರಣವೆಂದೊಡೆ ದೇವರ ನೆನೆವವರಿಗೆ ದೇವರುಂಟೆ(?)ದೂ[3]ರ[3]ದಲ್ಲಿರ್ದವರ ನೆನೆವರಲ್ಲದೆ ಸಮಿಪದಲ್ಲಿರ್ದವರನಾರೂ ನೆನೆದವರಿಲ್ಲ. ಇದನಱಿದು ನಿನ್ನೊಳಗಡಗಿ ನಾ ನಿನ್ನ ನೆನೆಯಲಿಲ್ಲ, ನನ್ನೊಳಗಡಗ ನೀನೆನಗೆ ಮುಕ್ತಿಯನೀಯಲಿಲ್ಲ. ಇದು ಕಾರಣ ನಾನೀನೆನಲಿಲ್ಲ ಮಹಾಲಿಂಗ ಗಜೇಶ್ವರಾ ॥೨೫॥

ರಿಪುಗಳ ಕಾಳಗ, ಕೊಳುಗುಳದನು[4]ಭ[4]ವ, ಅತಿಶಯದ ಬಾಣ ತಾ[5]ಗಿ, ಉ[5]ದಕ ಹೋಗಿ ನಿಂದ ಮುಮ್ಮುರಿಯಂತೆ ಜಗಕೆಲ್ಲಾ ಕನ್ನಡ ನೋಡಾ, ಮಹಾಲಿಂಗ ಗಜೇಶ್ವರನು ಅಱಿಯನೆ ಬಲ್ಲ ಕನ್ನಡಿಗೆ ಮರದೊಡಕು (?) ॥೨೬॥

ನೇಹ[6]ವೆಗ್ಗ[6]ಳವಾಯಿತ್ತಾಗಿ ನೋಟ ವಿಪುಳವಾಯಿತ್ತ ಕಂಡೆ. ಅಂಗದ ಕಳೆ, ಕಂಗಳ ನೋಟ, ಎವೆಗೆವೆ ಸ್ಥೈರಿಸದು. ಬೆಳುಹಿನ ಮೇಲೆ ಕೆಂಪಡರಿತ್ತು. ಉದಕ ಪಲ್ಲಟ ಮತ್ಸ್ಯ ಬೆನ್ನು ಬಸುಱ ತೋಱಿ[7]ತ್ತು[7]. ಮಾಗಿಯ ಕೋಗಿಲೆಯಂತೆ ಮೂಗನಾಗಿ[8]ರ್ದೆ[8]ನವ್ವಾ. ಮಹಾಲಿಂಗ ಗಜೇಶ್ವರನೊಲವಿಂದೆನಗೆ ರಣದ[9]ಣಕ[9]ವೆಯವ್ವಾ ॥೨೭॥

---

[1] ಗಾ (ಗ) [2] ವೇ (ಗ) [3] ರದೂರ (ಕ) [4] ಭಾ (ಗ) [5] ಗೆದು (ಕ) [6] ವೆ (ಗ) [7] ತ್ತು ಬೆಳುಹಿನ ಮೇಲೆ ಕೆಂಪಡರಿತ್ತು (ಕ) [8] ರ್ದೆನೆಯ (ಕ) [9] ಕಣ (ಗ)

ಮೂಗಿನ ತುಂಬಿಗೆ ಪರಿಮಳ ಒತ್ತಿಹವೆಂದು ಅಂಗಸಂಗದಲ್ಲಿಕ್ಕಿ ಮುಚ್ಚುವೆನವ್ವಾ. ಮನವ ಮಱದ ಮದಾಳಿಯ ನೇಹದಂತಾದೆನವ್ವಾ, ಮಹಾಲಿಂಗ ಗಜೇಶ್ವರನನು[1]ಭಾ[1]ವಕ್ಕೆ ಸುಖಿಯಾಗಿ ||೨೮||

ಇರುಳಿನ ಜಕ್ಕವಕ್ಕಿಯಂತೆ ಅಗಲಿ ಹಲುಬುತಿರೆ, ಇರುಳಿನ ತಾವರೆಯಂತೆ ಮುಖಬಾಡಿ, [2]ಇರುಳಿ[2]ನ ನೈದಿಲೆಯಂತೆ ಕಣ್ಣ ಮುಚ್ಚದೆ, ಇರುಳಿನ ಸಮುದ್ರದಂತೆ ಘನವಾಗಿ ಸಲೆ ಉಮ್ಮಳಿಸಿ ಸಂಜೆವರಿದು ಮಹಾಲಿಂಗ ಗಜೇಶ್ವ[3]ರನ[3] ಬರವಿಂಗೆ ಬೆಳಗಾಯಿತ್ತು ||೨೯||

ಕೋಗಿಲೆಗಳು ಹಳುವಟ್ಟು [4]ಹೋದ[4] ಬನದಂತಾದೆ ನೋಡವ್ವಾ. ರಾಮ ರಾಡಿದ ಹೊಳಲಿನಂತಾದೆ ನೋಡವ್ವಾ. ಜವ್ವನಗಳು ಬಳಲ್ದ ಸ್ತ್ರೀ[5]ಯ[5] ಮುಖ ಶಾಂತಿಯಂತಾದೆ ನೋಡವ್ವಾ. ಪರಿಮಳವಿಲ್ಲದ ಪುಷ್ಪದಂತಾದೆ ನೋಡವ್ವಾ. ಚಂದ್ರಮನಿಲ್ಲದ ನಕ್ಷತ್ರಂಗಳಂತಾದೆ ನೋಡವ್ವಾ. ಮಹಾಲಿಂಗ ಗಜೇಶ್ವರನ ನಗಲುವದಱಿಂದ ಸಾವುದು ಸುಖ ನೋಡವ್ವಾ ||೩೦||

ಒ[6]ಲಿ[6]ವರ ಕೊಲುವರೆ ಮಸದ ಕೂರಲಗೇಕವ್ವಾ, ಅವರನೊಲ್ಲೆನೆಂದರೆ ಸಾಲದೆ ? ಆರಿಕಲ್ಲು ಕರಗಿದಂತೆ ಅವರ ನೋಡ ನೋಡ ಕರಗಿದಡೆ ಸಾಲದೆ ? ಮಳಲ ಪ್ರತಿ[7]ಮೆ[7]ಗಡಿಗೆ ಗುಡಿಸಿದಂತೆ (?) ಅವರೊಡನೊಡನೆ ಕರಗಿದಡೆ ಸಾಲದೆಯವ್ವಾ. ಮಹಾಲಿಂಗ ಗಜೇಶ್ವರನನಗಲಿದಡೆ ತುಪ್ಪದಲ್ಲಿ ಕಿಚ್ಚ ನಂದಿಸಿದಂತಾದೆ ನೋಡವ್ವಾ ||೩೧||

ಮೂಗಿನ ಕಪ್ಪು, ಪ್ರಣಿತೆಯ ಕತ್ತಲೆ ಜ್ಯೋತಿಯೆಂಬರು, ವಿವರಣೆ ಹೋಗದ ದೆಂತೊ (?) ರಸದ ದ್ರಾಕ್ಷಿ ಸ್ಫಟಿಕದ ದಾರಂ ಭೋ, ಮಾಣಿಕ್ಯ ಸ್ವಯಂಜ್ಯೋತಿ, ಜ್ಞಾನದ ಪ್ರಭೆ, ಮಹಾಲಿಂಗ ಗಜೇಶ್ವರನ ನೆನವ ಮನವು ಕಮಳತಳವೆಳಕು ಭೋ(?) ||೩೨||

ಅಂಗಸಂಗದಲ್ಲಿದ್ದು, ಬಂದುದನೆ ಕಂಡು ಹಾವು ಹಸು ಮಗುವಿನಂತಾದೆ(?) ನೋಡವ್ವಾ. ಕಂಗಳ ನೋಟ ಸುಖಕ್ಕೆ ಮನವನೊಪ್ಪಿಸುವೆ. ಪತಂಗದ ಬೆಸನಿಯಂತಾದೆ ನೋಡವ್ವಾ. ಮದಾಳಿಯ ನಾಸಿಕದಂತೆ ಸುಳಿದು ಸುಖಬಡುವೆ, ಮಹಾಲಿಂಗ ಗಜೇಶ್ವರ ನಿನ್ನ ವಿನಯ ನೋ[8]ಡ[8]ವ್ವಾ ||೩೩||

ಆಲಿಕಲ್ಲ ಮರದಡಿಯಲಿಹ ಮಗಮಗಿಸುವ ಗಿಳಿವಿಂಡು, ಉರವಣಿಸುವ ಪಕ್ಷಿಗಳು, ಸರಗೆಯ್ವ ಕೋಗಿಲೆ, ಗಗನದ ಚಂದ್ರಮ ನೀನಗಲೆ ಸಾರು, ಅಗಲ

---

[1] ಭ (ಗ) [2] ಹಗಲಿ (ಕ) [3] ರ (ಗ) [4] ಹೊಸ (ಗ) [5] ಯರ (ಗ) [6] ಲಿದ (ಕ) [7] ಮೆಗೆ (ಗ) [8] ಡಗ (ಗ)

ಲಾರೆನು ಸಖಿ[1]ಯೆ[1]. ಬೆಳುದಿಂಗಳು ಬಿಸಿಲಾದವೆ ? [2]ಸ[2]ರಥನ ಬೀಡಿನಲಿ ಕಾಮಿನಿಗೆ ಕಯ್ಯೋ[3]ದ[3]ಳೆ ? ದಶಾವಸ್ಥೆಗೊಂಡೆನು ಮಹಾಲಿಂಗ ಗಜೇಶ್ವರನುಳಿದಡೆ ||೩೪||

ಮಾತಂಗಿಯ ಹೊಳೆಯಲ್ಲಿ ಉತ್ತಮನ ನೆಳಲು ಸುಳಿದೊಡೆ ರೂಹು ಹೊಲೆಯನಾಗಬಲ್ಲುದೆ ಅಯ್ಯಾ ? ಮರ್ತ್ಯಲೋಕದ ಮಾನವರೊಳಗೆ ಶರಣ ಸುಳಿದೊಡೆ ಶರಣ ಸೂತಕಿಯಾಗಬಲ್ಲನೆ ಅಯ್ಯಾ ? ಮರ್ತ್ಯರ ಭವಿಯ ಭಕ್ತ ವರ್ತಮಾನವೆಂಬ ಜೀವಿಗಳ ಅಗದೊಗೆಯದೆ ಮಾಬನೆ ಮಹಾಲಿಂಗ ಗಜೇಶ್ವರಯ್ಯಾ ||೩೫||

ಸರ್ವಜನ ಸನುಮತವೆಂಬ ಮಾತು ಸಾಮಾನ್ಯವೆ ಅವ್ವಾ. ತಾ ಮೆಚ್ಚ, ಕಲಿಯಾಗಿಪ್ಪವರ ಕೆಲಮೆಚ್ಚ, ಸುಖಿಯಾಗಿಪ್ಪವರನೊಬ್ಬರನಾರುವ ಕಾಣೆನವ್ವಾ. ತಾ ಸತ್ತು ಹೆಱಱ ಕೊಂದವಸ್ಥೆಯ ಚಂದವ ಚಂದ್ರಮು[4]ತಿ[4]ಯಲಿ ಕಂಡೆನು. ಇಂದು ಕಂಡೆನು ಮಹಾಲಿಂಗ ಮಸಣಯ್ಯಗಳಲ್ಲಿ ಮಹಾಲಿಂಗ ಗಜೇಶ್ವರ ದೇವರು ಮಾಡಿತ್ತಾ ||೩೬||

ದೃಷ್ಟಿಯ ಕಲ್ಲುತಾಗಿದಂತೆ ಮುನಿಸ ಮಱದೆ ನೋಡವ್ವಾ. ಸೋಂಕಿದಡೆ ಸುಖಿಯಾದೆ, ಉಳಿದಡೆ ಕಱಗೊಂಡೆ. ಪಾಷಾಣದೊಸರಿನಂತಾದೆ ನೋಡವ್ವಾ. ಸೋಂಕಿದಡೆ ಮಹಾಲಿಂಗ ಗಜೇಶ್ವರನೊಲವು ಎನಗೆ ಕಲುದೇಹ, ಎನಗೆ ಸುಖದ [5]ಮೋದ[5] ನೋಡವ್ವಾ ||೩೭||

ನೇಹದ ಮುತ್ತು ಅಧರ[6]ವ ತುಂ[6]ಬಿತ್ತು. ಅದು ರಸ ವಿಸರಕ್ಕೆ ಘಟ್ಟಿಯಾಯಿತ್ತವ್ವಾ. ಅವ್ವಾ ತನುತನು ವಿಕಚಿತ[7]ವಪ್ಪ[7] ಕಳಸ, ನಾಗೇಂದ್ರನ ಸೂತ್ರದ ದೃಷ್ಟದಂತೆ ಅವ್ವಾ. ನೇ[8]ಮ[8]ದ ಮುಗದೆ ವಿಕಳೆಯಾಗಿ ಮಹಾಲಿಂಗ ಗಜೇಶ್ವರನಲ್ಲಿ ಏಕಾಹಾರಗೊಂಡು ಇದ್ದಳವ್ವೆ ||೩೮||

ಬೇಱೆ ಗತಿ ಮತಿ ಚೈತನ್ಯವಿಲ್ಲದವಳು ತೊತ್ತಿನ ಮುನಿಸು ಸಲುವುದೆ ? ಅವಳು ಮುನಿದೊಡೆ ಆಗಳೆ ಕೆಡುವ. ಅರಸು ಮುನಿದೊಡೆ ಆಗಳೆ ಕೆಡುವ. ತೊತ್ತಿನ ರಾಜರಕ್ಷತೆ ಧರ್ಮ ಮಹಾಲಿಂಗ ಗಜೇಶ್ವರಯ್ಯಾ ||೩೯||

ಅವ್ವಾ ನಾನು ಸೀರೆಯನುಡಲಮ್ಮೆನು. ಅಲ್ಲಿ ಗಂಡೆಣೆಯಿದ್ದುದೆಂದೆಲೆ ಅವ್ವಾ. ಅವ್ವಾ ಬೇಟದ ರತಿಯಲ್ಲಿ ಹುಟ್ಟಿ ಬೆಳದುದಯವಾದಳು. ಅವ್ವಾ ಇಂದೆನ್ನ ಮಹಾಲಿಂಗ ಗಜೇಶ್ವರನುಳಿದನೆಂದಟ್ಟಿದಡೆ, ಅವ್ವಾ ನಾನು ಮುತ್ತ ಕಟ್ಟಲಮ್ಮೆನಲ್ಲಿ ಪ್ರತಿಬಿಂಬವಿದ್ದಿತೆಂದೂ ||೪೦||

---

[1] ಯ (ಗ) [2] ಶ (ಗ) [3] ದಾ (ಗ) [4] ಲೆ (ಕ) [5] ಮೊದಲ (ಗ) [6] ದ (ಗ) [7] ಅಪ್ಪ (ಕ) [8] ಹ (ಗ)

ನೋಟಕ್ಕೆ[1]ಯು ಕೂಟಕ್ಕೆಯು[1] ಮನವೆ ರಣವವ್ವಾ. ಅವ್ವಾ ಕಂಗಳು ತಪ್ಪಿ ನೋಡಲಮ್ಮೆ ಅಮ್ಮೆ ಕೇಳಿಲಿಯವ್ವಾ. ಅವ್ವಾ ಕಿವಿಗಳು ತಪ್ಪಿ ಕೇಳಲ[2]ಮ್ಮೆ ಅಮ್ಮೆ[2] ಕೇಳಿಲೆ ಅವ್ವಾ. ಅವ್ವಾ ಕಲಿ ಕಾಳಗದಲ್ಲಿ ಸೋತಂತೆ, ತನು ಮನ ಧನದ ಭಂಗ ವಳಿ[3]ಯದೆ ನೆರೆ[3]ಯನವ್ವಾ, ಮಹಾಲಿಂಗ ಗಜೇಶ್ವರದೇವನವ್ವಾ ||೪೧||

ಭಕ್ತಿ ಸಮೇಳ, ಎತ್ತಿದ ಹಳವಿಗೆ, ಸುತ್ತಲು ಬೇವಿನ ದಂಡೆ, ರಣರಂಗ ಹಾಸಿನ ಮೇಲೆ. ಸಮಕಳೆ, ಸಮರತಿ. ನೆರವ ಭರದಲ್ಲಿ ಮೇಲೆ ಬಿದ್ದ ಮಸಿಯ ನಱಿಯದಿದ್ದಳು. ರಣರಂಗ ಸಂಯೋಗ ವಿಯೋಗ ಬ್ರಹ್ಮ ಸಮಾಧಿ ಮಹಾಲಿಂಗ ಗಜೇಶ್ವರನೇಕೋಭಾವ ||೪೨||

ದೇಶಾಖಿಯಲ್ಲದ ರಾಗ, ಉಪ್ಪಿಲ್ಲದ ಊಟ ಸಪ್ಪೆ ಕಾಣಿರೊ ಅಯ್ಯಾ. ಮಿಕ್ಕಿನ ರಾಗ ಶಿವನಲ್ಲದ ದೈವ ಫಲವಿಲ್ಲ ಕಾಣಿರೊ ಅಯ್ಯಾ. ಮಿಕ್ಕಿನ ತುಂಬುರ ನಾರದರು ಶಿವನ ಕೇಳಿಸುವ ರಾಗ ಮಹಾಲಿಂಗ ಗಜೇಶ್ವರನ ನಚ್ಚಿನ ರಾಗ ||೪೩||

ಗಾಂಧಾರಿ ಬಾಂಧಾರಿಯೆಂಬ ಹೊತ್ತಿನಣ [4]ತಿ[4]ರಟ್ಟೆಯರೆಂಬರಿರವು (?) ಮಲಹಣ ಮಲಹಣಾ, ನಿಮಗೆಂತು ಬಲ್ಲೆ, ಎಮಗೆಂತು ಅಱಿಯೆ ಮಲಹಣಾ. ಮನೆಯವರು ಬರಲೀಯರು. ಅನ್ನವನು ಬಿಡಲಾರೆ. ದೇವರಲ್ಲಿಗೆ ಹೋಗಿ ಬೇಡಿ ಕೊಳ್ಳೊ ಮಲಹಣಾ. ಅಬುಜಮುಖಲಂಪಟ ಮಹಾಲಿಂಗ ಗಜೇಶ್ವರ ನಿಮಗೆಂತು ಬಲ್ಲೆ ಎಮಗೆಂತಱಿ[5]ಯೆಯೊ[5] ||೪೪||

ಅನಂತ ಅನಂತಗಾಲ ನಿತ್ಯವೆಂಬಿರಿ. ಸಂಸಾರ ಸಂಸಾರವಿದು ಹುಸಿಯಿದು ಹುಸಿ ನೋಡೆಲವೊ. ಇಂದಿನಿಂದಿನ ಸುಖನಿಂದಿಗೆ ಪರಿಣಾಮ. ದಿನ ದಿನ ಸುಖವು ಹುಸಿ ಕಂಡಾ. ಎಲವೋ ಎಂ[6]ಬ ರೂಪಿಗೆರಡಿಲ್ಲಯ್ಯಾ, ಮಹಾಲಿಂಗ ಗಜೇಶ್ವರನಲ್ಲಿ ತಿಳಿದು ನೋಡೆಲವೊ ||೪೫||

ಹೆಱಿಗೆ ಕೂರ್ತವಳ ತೆಗೆದಪ್ಪಿಕೊಂಡಡೆ ಅರ್ಥಗೆ[7]ಡು[7]ಹುದಲ್ಲದೆ ಮನವು ಬೇಱೆ. ತಾನಿಪ್ಪಳಿಲ್ಲಿಯೆ ಮನವಿಪ್ಪುದಲ್ಲಿಯೆ. ಇದ್ದಿಲ [8]ಹಿಂ[8]ಡಿದಡೆ ರಸವುಂಟೆ? ಸಾಧಕ ಸಾಧಿಸಿದ ನಿಧಾನವನೊಯಿದ ಕುಳಿಯಂತೆ ಅದಱ ವಿಧಿ ಎನಗಾಯಿತ್ತು ಮಹಾಲಿಂಗ ಗಜೇಶ್ವರಾ ||೪೬||

ಆವುಗೆಯ ಕಿಚ್ಚಿನಂತೆ, ದಾವ ಧೂಮವಾದಂತೆ ಆವ ನಾಡ ಸುಟ್ಟನೆಂದ ಱಿಯೆನವ್ವಾ. ಬೊಬ್ಬೆಯಕೊಂಡು ಹೋದವನೆಲ್ಲಿ ಉಳಿದನೆಂದಱಿಯೆನವ್ವಾ. ನಿರಾಳ ನಿರಾಳದಲ್ಲಿ ಮಹಾಲಿಂಗ ಗಜೇಶ್ವರದೇವನುಳಿದನೆಂದು ಹೇಳಿದಡೆ ಕಂಗಳ ನೀರಲ್ಲಿ ನಿಂದೆನವ್ವಾ ||೪೭||

---

[1] ಯು (ಕ) [2] ಮ್ಮೆ (ಕ) [3] ದು ಕೆಳೆ (ಕ) [4] ತೆ (ಗ) [5] ಯವೊ (ಕ) [6] ಘನಘನವೆಂ (ಕ) [7] ಡ (ಗ) [8] ಹಿ (ಗ)

[1]ಬೆ[1]ೞಱು ಮನವಾದೊತ್ತೆಂದು ಬೇಱುವೋದಳು ನೋಡವ್ವೆ. ಕವ್ಮ[2]ರಿವ[2]ಱು ವಳು ನೋಡವ್ವೆ. ಸಮುಧಾತುವಿಲ್ಲ ನೋಡೆಮಗೆ. ಮದ್ದು ಕುತ್ತದೊಳಗಾದಂತೆ ಮಹಾಲಿಂಗ ಗಜೇಶ್ವರ ದೇವ[3]ರೊ[3]ಲವು ನೋಡವ್ವಾ ||೪೮||

ಎನ್ನ ಕಡೆಗಣ್ಣು ಕೆಂಪಾಯಿತ್ತವ್ವಾ. ಎನ್ನ ನಳಿನ ತೋೞು ಉಡುಗಿದವವ್ವಾ. ಇಕ್ಕಿದ ಹವಳದ ಸರ ಬೆಳು[4]ಹಾದವ[4]ವ್ವಾ. ಮು[5]ಕ್ತ[5] ಫಳಹಾರದಿಂದ ಆನು ಬೆಂದೆನವ್ವಾ. ಇಂದೆನ್ನ ಮಹಾಲಿಂಗ ಗಜೇಶ್ವರನು ಬಹಿರಂಗವನೊಲ್ಲದೆ ಅಂತ ರಂಗದಲ್ಲಿ ನೆರೆದ ಕಾಣೆ ಅವ್ವಾ ||೪೯||

ನೀನೊಲಿದು ಕೂರ್ತವರು, ನಿಮಗೊಲಿದು ಕೂರ್ತವರು, ನಿಮ್ಮಪರಿಯೆ ಅವರು, ನಿಮ್ಮ ರೂಪೆ ಅವರು. ಆಳಾರು ಅರಸಾರು ಎಂದಱಿಯಬಾರದು. ನಿಮ್ಮ ರೂಹೆ ಮಹಾಲಿಂಗ ಗಜೇಶ್ವರನನೊಲಿದು ಪೂಜಿಸಿದವರು ಸಾಲೋಕ್ಯ ಸಾಮೀಪ್ಯ ಪದವಿಗಳ ಪಡೆದವರು ||೫೦||

ಪರಮಪದವ ನಿಮ್ಮ ಕೊರಳಲ್ಲಿ ಕಟ್ಟಿಕೊಳ್ಳಿ. ಪರಮಪದವ ನಿಮ್ಮ ತಲೆಯಲ್ಲಿ ಹೊತ್ತುಕೊಳ್ಳಿ. ಮಹಾಲಿಂಗ ಗಜೇಶ್ವರ ದೇವನ ಪರಮಪದವ ನಿಮ್ಮ ತಲೆಯಲ್ಲಿ ಇರಿಸಿಕೊಳ್ಳಿ ||೫೧||

ಸಮರಸದೊಳಗಣ ಸ್ನೇಹ ಮತ್ಸ್ಯ ಕೂರ್ಮ ವಿಹಂಗನಂತೆ ಸ್ನೇಹದ ನೋಟದಲ್ಲಿಯೆ ತೃಪ್ತಿ, ಸ್ನೇಹದ ನೆನಹಿನಲ್ಲಿಯೆ ತೃಪ್ತಿ, ಸ್ನೇಹದ ಸ್ಪರುಶನದಲ್ಲಿಯೆ ತೃಪ್ತಿ. ಈ ಪರಿಯಲ್ಲಿ ಎಮ್ಮ ಮಹಾಲಿಂಗ ಗಜೇಶ್ವರನಲ್ಲಿ ಲಿಂಗೈಕ್ಯವು ಆರಿಕಲ್ಲ ಪುತ್ಥಳಿಯು ಅಪ್ಪುವನೊಡಗೂಡಿದಂತಾಯಿತ್ತು ||೫೨||

ಬಾಲಕಿ ಹಾಲ ಸವಿದಂತೆ, ಮರುಳಿನ ಮನದ ನೆನಹಿನಂತೆ, ಮೂಗ ಕಂಡ ಕನಸಿನಂತೆ, ಮೈಯಱಿಯದ ನೆಳಲಿನಂತೆ, ಬಂಜೆಯ ಮನದ ಸ್ನೇಹದಂತೆ ಮಹಾಲಿಂಗ ಗಜೇಶ್ವರನಲ್ಲಿ ಲಿಂಗೈಕ್ಯವು ||೫೩||

ಮಾಘಮಾಸದ ನವಿಲಿನಂತೆ ಆದೆ ನೋಡವ್ವಾ. ಇರುಳು ತೊಳಲುವ ಜಕ್ಕವಕ್ಕಿಯಂತೆ ಹಲುಬುತ್ತಿರ್ದೆ ನೋಡವ್ವಾ. ಮಾಗಿಯ ಕೋಗಿಲಂತೆ ಮಾಗಿ ಯಾಗಿರ್ದೆ ನೋಡವ್ವಾ. ಮಹಾಲಿಂಗ ಗಜೇಶ್ವರನ ಅನುಭಾವ ಸಂಬಂಧಿಗಳ ಬರವು ಎನ್ನ ಪ್ರಾಣದ ಬರವು ನೋಡವ್ವಾ ||೫೪||

ಭಕ್ತನ ಮಠಕ್ಕೆ ಜಂಗಮ ಬಂದು, ಆ ಭಕ್ತ ಮಾಡಿದಂತೆ ಭಕ್ತಿಯ ಮಾಡಿಸಿ ಕೊಂಡು ಕ್ಷಮಿಸಬಲ್ಲಡೆ ಜಂಗಮ. ಆ ಕ್ಷಮೆಯೊಳಗೆ ಮಗ್ನನಾಗಬಲ್ಲಡೆ ಭಕ್ತಿ.

---

[1] ಬ(ಗ) [2] ದ(ಗ) [3] ಗೊ(ಕ) [4] ಕುಹಾದವೆ ಅ(ಕ) [5] ಕ್ತಿ(ಕ)

ಹೀಗಲ್ಲದೆ ಉಪಾಧಿಯಿಂದ ಹೇಳಿ ಮಾಡಿಸಿಕೊಂಬನ್ನಬರ ಭೂತಪ್ರಾಣಿ. ಬಂದ ಪರಿಯಲ್ಲಿ ಪರಿಣಮಿಸಬಲ್ಲಡೆ ಲಿಂಗಪ್ರಾಣಿ. ಬೇಡಿದಲ್ಲದೆ ಮಾಡೆನೆಂಬನ್ನಕ್ಕರ ಫಲದಾಯಕ. ಬಂಡ ಜಂಗಮದಿಂಗಿತಾಕಾರವನಱಿದು ಬೇಡದ ಮುನ್ನವೆ ಮಾಡಬಲ್ಲಡೆ ಭಕ್ತನೆಂಬೆನು. ಬೇಡದ ಮುನ್ನವೆ ಮಾಡುವ ಭಕ್ತನೂ, ಬೇಡದೆ ಮಾಡಿಸಿಕೊಂಬ ಜಂಗಮವೂ, ಇಂತೀ ಎರಡಱ ಸಮ್ಮೇಳ ಸನ್ನಿಧಿಯಲ್ಲಿರ್ದು ನಾನು ಸುಖಿಯಾದೆನು ಕಾಣಾ ಮಹಾಲಿಂಗ ಗಜೇಶ್ವರಾ ||೫೫||

ಹೊಸ ಮದುವೆ ಹಸೆಯುಡುಗದ ಮುನ್ನ, ಹೂಸಿದರಿಸಿನ ಬಿಸಿಲಿಗೆ ಹರೆಯದ ಮುನ್ನ, ತನು ಸಂಚಲವಾಗದೆ, ಮನ ಗುರುಕಾರುಣ್ಯವ ಹಡದು ಹುಸಿಯಿಲ್ಲದಿರ್ದೊಡೆ ಭಕ್ತನೆಂಬೆ. ಹಿಡಿ ಹಿಡಿಂಗಿಲ್ಲದಿರ್ದೊಡೆ ಮಾಹೇಶ್ವರನೆಂಬೆ. ತನುವಿಲ್ಲದಿರ್ದೊಡೆ ಪ್ರಸಾದಿಯೆಂಬೆ. ಜೀವವಿಲ್ಲದಿರ್ದೊಡೆ ಪ್ರಾಣಲಿಂಗಿಯೆಂಬೆ. ಆಸೆಯಿಲ್ಲದಿರ್ದೊಡೆ ಶರಣನೆಂಬೆ. ಈ ಅಯಿದಱ ಸಂಪರ್ಕ ನಿರ್ಭೋಗವಾದೊಡೆ ಐಕ್ಯನೆಂಬೆ. ಐಕ್ಯದ ಸಂತೋಷ ಹಿಂಗಿದೊಡೆ ಜ್ಯೋತಿರ್ಮಯನೆಂಬೆ. ಈ ಹಿಂಗಾದ ದೇಹ ಇಱಿದಡಱಿಯದು, ತಱಿದಡಱಿಯದು, ಬಯಿದಡಱಿಯದು, ಹೊಯಿದಡಱಿಯದು, ನಿಂದಿಸಿದಡಱಿಯದು, ಸ್ತುತಿಸಿದಡಱಿಯದು; ಸುಖವನಱಿಯದು, ದುಃಖವನಱಿಯದು. ಇಂತಿವಱ ತಾಗ ನಿರೋಧವನಱಿಯದಿರ್ದೊಡೆ ಅವರ ಮಹಾಲಿಂಗ ಗಜೇಶ್ವರನೆಂಬೆ ||೫೬||

ಸಂ.—ಬಿ.ಎಸ್. ಸಣ್ಣಯ್ಯ

(ಈ ವಚನಗಳನ್ನು ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿರುವ ಸದ್ಧರ್ಮದೀಪಿಕೆ ಸಂಪಾದಕರಾದ ಶ್ರೀ ಚನ್ನಮಲ್ಲಿಕಾರ್ಜುನಪ್ಪ ಅವರಿಂದ ಬಂದ ಪುರಾತನರ ವಚನಗಳ ಕಟ್ಟಿನಿಂದ ಸಂಗ್ರಹಿಸಿದೆ. ಇದರಲ್ಲಿ ೫೧ ವಚನಗಳಿವೆ. ಇದೇ 'ಕ' ಪ್ರತಿ. ಇದು ಓಲೆ ಪ್ರತಿ.

ಕೆ. ೪೯೯ ಎಂಬ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿರುವ ಓಲೆ ಕಟ್ಟಿನ. ವಚನ ಸಂಗ್ರಹದಿಂದ ಪಾಠಾಂತರಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ಇದು 'ಗ' ಪ್ರತಿ. ಇದರಲ್ಲಿ ೫೦ ವಚನಗಳಿವೆ.

ಕೆ. ೬೫ ಎಂಬ ವಚನಗ್ರಂಥದ ಪ್ರಾ. ವಿ. ಸಂ. ದಲ್ಲಿರುವ ತಾಳೆಯೋಲೆಯ ಕಟ್ಟಿನಲ್ಲಿ ಮಿಶ್ರಸ್ತೋತ್ರದ ವಚನಗಳಲ್ಲಿ ಬರುವ ವಚನಗಳನ್ನು ಇಲ್ಲಿ ಆರಿಸಿಕೊಳ್ಳಲಾಗಿದೆ ಮತ್ತು ಪಾಠಾಂತರಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ಇದೇ 'ಚ' ಪ್ರತಿ. ೫೨—೫೬ ವಚನಗಳು ಈ ಪ್ರತಿಯಲ್ಲಿ ಹೆಚ್ಚಾಗಿ ಸಿಕ್ಕಿದವು.)

*ಹಾಡು

ಇಂದಿಲ್ಲದಿರೆ ನಾಳೆ ನಾ ಸತ್ತೆ ಸಾಯುವೆನು?
ನನ್ನ ಹೆಸರಿನ ಮೇಲೆ
ಕಂಬನಿಯು ಸರದಲ್ಲಿ ಸರ ಬೆರೆಸಬೇಡ!
ನನ್ನ ತಲೆಭಾಗದೆಡೆ
ಚೆಂಗುಲಾಬಿಯು ಗಿಡವ ಹಚ್ಚಬೇಡ!
ನೆರಳಿಗೊಂದಿರಲೆಂದು
ಅಗಲ ಆಲದ ಕೊಂಬೆ ಚುಚ್ಚಬೇಡ!
ನಾನು ಮಣ್ಣಿನೊಳಿರಲು
ಹುಲ್ಲಾಗಬಹುದೆನ್ನ ಮೇಲೆ, ಚನ್ನೆ!
ಮಂಜುಮಣಿಗಳ ಸಾಲು
ನಿನ್ನ ತಬ್ಬುತಲಿರಲು
ನೆನಪಾದರೊಮ್ಮೆ ನೆನೆ; ಇಲ್ಲದಿರಲೇಕೆನ್ನೆ!
....
ಇರುಳು-ನೆರಳಿನ ಹಂಗು ಹರಿದ ಮೇಲೆ
ಕಾಣಲಾರೆನು ನಾನು ಮೇಘಮಾಲೆ;
ಕೇಳಲಾರೆನು ಒಡಲ ತಾಪವನೆ ತಾರವಿಸಿ
ಕುಕಿಲುವಾ ಕೋಗಿಲೆಯ ರಾಗಲೀಲೆ!
ಮೂಡು-ಮುಳುಗುಗಳಿರದ ಮಂದ ಬೆಳಕಿನ ಸೀಮೆ
ಸ್ವಪ್ನದಲಿ ಸುತ್ತುವೊಲು, ನಾ ದಾಟುತಿರಲು
ನೆನೆದರೂ ನೆನೆದೇನು, ಒಂದು ಸಾರೆ!
ನೆನೆಯದಿರಲೂ ಬಹುದು—ಹೇಳಲಾರೆ!

—ಬಿ. ಎ. ಸನದಿ

(*ಪ್ರೇರಣೆ: Christina Rossetti ಅವರ 'Song')

"ಅಮ್ಮ"; "ಅಬ್ಬೆ"; "ಅಲ್ಲಮ"; "ಬಾದುಬ್ಬೆ"

೧

೧) ಪಂಪಭಾರತದ (ಸು. ೯೪೫) ಅತ್ಯಂತ ಭಾವಾವಿಷ್ಟಪ್ರಸಂಗಗಳಲ್ಲೊಂದು ಕೃಷ್ಣನು ಕರ್ಣನಿಗೆ ಅವನ ಜನ್ಮವೃತ್ತಾಂತವನ್ನು ತಿಳಿಸುವ ಸನ್ನಿವೇಶ. ಆ ಸಮಯದಲ್ಲಿ ಕೃಷ್ಣನು ಕರ್ಣನನ್ನು ಕುರಿತು ಆಡುವ ಮಾತುಗಳಿವು—

> ಭೇದಿಸಲೆಂದೆ ದಲ್ ನುಡಿದರೆನ್ನದಿರೊಯ್ಯನೆ ಕೇಳ ಕರ್ಣ ನಿ
> ನ್ನಾದಿಯೊಳಬ್ಬೆ ಕೊಂತಿ ನಿನಗಮ್ಮನಹರ್ಪತಿ ಪಾಂಡು ನಂದನರ್
> ಸೋದರರೆಯ್ದೆ ಮುಯ್ದುನನೆನಾಂ ಪೆಱತೇಂ ಪಡೆಮಾತೊ ನಿನ್ನದೀ
> ಮೇದಿನಿ ಪಟ್ಟಮುಂ ನಿನತೆ ನೀನಿರೆ ಮತ್ತೆ ಪೆಱರ್ ನರೇಂದ್ರರೇ ‖ [1]

ಇಲ್ಲಿ ಅಮ್ಮ ಎಂದರೆ ತಂದೆ ಎಂದೂ ಅಬ್ಬೆ ಎಂದರೆ ತಾಯಿ ಎಂದೂ ಅರ್ಥ ಸ್ಪಷ್ಟವಾಗಿದೆ.

೨) ವಡ್ಡಾರಾಧನೆಯಲ್ಲೂ (ಸು. ೯೨೦) ಈ ಪದಗಳ ಪ್ರಯೋಗಗಳನ್ನು ಕಾಣಬಹುದು. ಸುಮತಿ ಎಂಬಾಕೆ ತನ್ನ ತಂದೆಗೆ ಹೇಳುವ ಮಾತು—"ಇಂತೇಕೆ ಖಿನ್ನನಾಗಿ ಚಿಂತಿಸುತಿರ್ದೆಯಮ್ಮಾ".[2] ತಳಾರನು ಸುದಾಮೆ ಎಂಬುವವಳಿಗೆ ಹೇಳುವ ಮಾತು— "ನುಡಿಯ ನನ್ನಿಯಂ ತಪ್ಪದೆ ಬಂದೆ ಸತ್ಯವಾದಿಯಯ್ ಪೋಗಬ್ಬಾ".[3] ಇಲ್ಲಿ ಅಮ್ಮ ಎಂದರೆ ತಂದೆ ; ಅಬ್ಬಾ ಎಂಬುದು ಹೊಸಗನ್ನಡದ ಅಮ್ಮಕ್ಕೆ ಸಮಾನ.

೩) ಒಂದು ಶಾಸನದಲ್ಲಿ ಈ ಉಕ್ತಿಯಿದೆ— "ಶೌರ್ಯದೊಳ್ ಮಿಗಿಲ್ ಅಮ್ಮಮ್ಮ ಇವನ್ ಅಮ್ಮನಿಂದಂ".[4] (=ಅಮ್ಮಮ್ಮ! ಈತ ಶೌರ್ಯದಲ್ಲಿ ತಂದೆಗಿಂತಲೂ ಮಿಗಿಲು.)

೪) ಮತ್ತೊಂದು ಶಾಸನದಲ್ಲಿ ಈ ರೀತಿ ಇದೆ—"ತಮ್ಮ ಅಬ್ಬೆ ರನ್ನಿಕಬ್ಬೆಗೆ"[5] (ಅಬ್ಬೆ =ತಾಯಿ).

ಹಳಗನ್ನಡದಲ್ಲಿ ತಂದೆ, ತಾಯಿ ಎಂಬರ್ಥಗಳಲ್ಲಿ ಅಮ್ಮ, ಅಬ್ಬೆ ಎಂಬ ಪದಗಳಲ್ಲದೆ ತಂದೆ, ತಾಯ್ ಎಂಬ ಪದಗಳೂ ಉಂಟು. ಅಯ್ಯ ಎಂಬ ಪದ

---

[1] ಪಂಪಭಾರತ, ೯. ೬೪.

[2] ವಡ್ಡಾರಾಧನೆ (ಸಂ: ಡಿ. ಎಲ್. ನರಸಿಂಹಾಚಾರ್, ೧೯೪೯), ಪು. ೧೫.

[3] ಅದೇ, ಪು. ೧೬.

[4] SII, IX. i. 163, 1093 A. D.

[5] BKI, I. ii. 196, 1121 A. D.

ತಂದೆ ಎಂಬ ಅರ್ಥದಲ್ಲೂ ಬರುತ್ತದೆ—"ತಮ್ಮಯ್ಯಂ ತೀಕಿಮಯ್ಯ ನಾಯಕರ್ಗೆ".[6] ಇದು ಬಹುಶಃ ಸಂಸ್ಕೃತದ ಆರ್ಯದ ತದ್ಭವ[7]. ಈ ಅಯ್ಯ ಎಂಬುದು ಹೆಸರುಗಳ ಅಂತ್ಯದಲ್ಲಿ ಪುಲ್ಲಿಂಗ ಸೂಚಕವಾಗಿ ಬರುವುದೇ ಹೆಚ್ಚು. ಈಗಲೂ ಕೆಲವೆಡೆ ತಂದೆಯನ್ನು ಅಯ್ಯ ಎಂದು ಸಂಬೋಧಿಸುವುದುಂಟು. ನಮ್ಮ ಗಮನವನ್ನು ವಿಶೇಷವಾಗಿ ಸೆಳೆಯುವ ಪದಗಳೆಂದರೆ 'ಅಮ್ಮ' (=ತಂದೆ) ಮತ್ತು 'ಅಬ್ಬೆ' (=ತಾಯಿ). ಇವುಗಳಲ್ಲಿ ಹೊಸಗನ್ನಡದಲ್ಲಿ ಅಮ್ಮ ಎಂಬುದು ತಾಯಿ ಎಂಬ ಅರ್ಥದಲ್ಲಿ ಹೆಚ್ಚು ಕಡಿಮೆ ಕನ್ನಡನಾಡಿನ ಎಲ್ಲೆಡೆಗಳಲ್ಲಿಯೂ[8] ಅಬ್ಬೆ ಎಂಬುದು ತಾಯಿ ಎಂಬ ಅರ್ಥದಲ್ಲಿ ಕನ್ನಡದ ಕೆಲವು ಉಪಭಾಷೆಗಳಲ್ಲಿಯೂ ಬಳಕೆಯಲ್ಲಿದೆ.

ಹಳಗನ್ನಡದಲ್ಲಿ ನಾವು ಕಾಣುವ ರೂಪ ಅಮ್ಮ ಅಲ್ಲ, ಅಮ್ಮನ್. (ಸಂಬೋಧನೆಯಲ್ಲಿ ಇದು 'ಅಮ್ಮಾ' ಎಂದಾಗುತ್ತದೆ). ಈ ಪದಕ್ಕೆ ತಂದೆ ಎಂಬ ಅರ್ಥ ಬಂದಿರಲು ಕಾರಣವು ಕುತೂಹಲಜನಕವಾಗಿರುವಂತೆಯೇ ಸಹಜವೂ, ಸರಳವೂ ಆಗಿದೆ. ಇಲ್ಲಿ ನಮಗೆ ತಮಿಳಿನಿಂದ ಸಹಾಯ ಒದಗುತ್ತದೆ. ತಮಿಳಿನಲ್ಲಿ ಅಮ್ಮಾನ್ (ಅಮ್ಮಾ, ಅಮ್ಮಾಳ್ = ತಾಯಿ) ಎಂಬ ಪದಕ್ಕೆ ತಾಯಿಯ ಸೋದರ, ಹೆಂಡತಿಯ ತಂದೆ, ತಂದೆಯ ತಂಗಿಯ ಗಂಡ ಇತ್ಯಾದಿ ಅರ್ಥಗಳಿವೆ; ತಂದೆಯೆಂಬ ಅರ್ಥವೂ ಉಂಟು, ಕೊನೆಗೆ ತಂದೆಯಂತಿರುವ ಭಗವಂತ ಎಂಬ ಅರ್ಥವೂ ಉಂಟು.[9] ಎಂದರೆ ಅಮ್ಮಾ ಅಥವಾ ತಾಯಿಗೆ ಸಂಬಂಧಿಸಿದ ವ್ಯಕ್ತಿ ಅಮ್ಮಾನ್ ಅಥವಾ ಅಮ್ಮನ್. ಇದರಿಂದ ಅರ್ಥ ಮುಂದುವರಿದು, ಅಮ್ಮಾ ಎಂಬುದು ಕೇವಲ ಸ್ತ್ರೀ ವಾಚಕವಾಗಿ, ಅಮ್ಮಾನ್ ಎಂಬ ಪದಕ್ಕೆ ಸ್ತ್ರೀ ಬಂಧುಗಳಿಗೆ ಸಂಬಂಧಿಸಿದ ಪುರುಷ ಎಂಬ ಅರ್ಥ ಬಂದಿರುವುದು ಅತ್ಯಂತ ಸಹಜ. ಹಳಗನ್ನಡವು ಈ ಹಲವು ಅರ್ಥಗಳಲ್ಲಿ ತಂದೆ ಎಂಬ ಅರ್ಥವನ್ನು ಮಾತ್ರ ಉಳಿಸಿಕೊಂಡಿದೆ. ಮಲೆಯಾಳದಲ್ಲಿಯೂ ಅಮ್ಮೋನ್ ಎಂಬುದಕ್ಕೆ ತಾಯಿಯ ಸೋದರ ಎಂಬ ಅರ್ಥವುಂಟು. ಆಂಧ್ರದಲ್ಲಿ ಆಳುತ್ತಿದ್ದ ಪೂರ್ವ ಚಾಳುಕ್ಯ ರಾಜರಲ್ಲೊಬ್ಬನಾದ ಅಮ್ಮ ಎಂಬ ಹೆಸರಿನ ದೊರೆಯೊಬ್ಬನು (೧೦ನೆಯ ಶತಮಾನ) ಇದ್ದಂತೆ ಇತಿಹಾಸವು ಹೇಳುತ್ತದೆ.[10] ತೆಲುಗಿನಲ್ಲಿಯೂ ಅಮ್ಮ (ನ್) ಎಂಬುದು ಪುರುಷವಾಚಿಯಾಗಿದ್ದಿತು. ಇಲ್ಲಿ

---

[6] ಅದೇ.

[7] 'ಆರ್ಯ' ಎಂಬುದೇ 'ಅಯ್ಯ'ದ ಸಂಸ್ಕೃತೀಕರಣರೂಪ (Sanskritised form) ವಾಗಿರಬಹುದೇ ಎಂದು ಡಾ. ಬರೊ ಮತ್ತು ಡಾ. ಎಮೆನೊ ಅವರು ಸಂದೇಹಿಸುವಂತೆ ಕಾಣುತ್ತದೆ (A Dravidian Etymological Dictionary, P. 157).

[8] ಧಾರವಾಡದ ಉಪಭಾಷೆಯಲ್ಲಿ ಅಮ್ಮ ಪದವು ಕೆಲವು ಸಾರಿ ವಿಧವೆ ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.

[9] Tamil Lexicon, I, P. 99.

[10] K. A. Nilakantha Shastry: A History of South India, P. 169.

ಈಗಲೂ ಅಮ್ಮ (ನ್) ಎಂಬ ಪದಕ್ಕೆ ತಂದೆ ಎಂಬ ಅರ್ಥವನ್ನು ಉಳಿಸಿಕೊಂಡಿರುವ ತುಳುಭಾಷೆಯ ರೂಪಗಳನ್ನು ನೆನೆಯಬಹುದು.[11] ತುಳುವಿನಲ್ಲಿ ಸ್ಥೂಲವಾಗಿ ಮೂರು ರೀತಿಯ ಸಾಮಾಜಿಕ ಉಪಭಾಷೆಗಳನ್ನು (Social dialects) ಗುರುತಿಸಬಹುದು ಎನ್ನುತ್ತಾರೆ—ಹರಿಜನರ ತುಳು, ಬ್ರಾಹ್ಮಣರ ತುಳು ಮತ್ತು ವಿದ್ಯಾವಂತ ಬ್ರಾಹ್ಮಣರ ತುಳು. ಹರಿಜನರ ತುಳುವಿನಲ್ಲಿ ಮತ್ತು ಬ್ರಾಹ್ಮಣರ ತುಳುವಿನಲ್ಲಿ ಅಮ್ಮೆ ಎಂದರೆ ತಂದೆ ಎಂಬ ಅರ್ಥವಿದೆ. ವಿದ್ಯಾವಂತ ಬ್ರಾಹ್ಮಣರ ತುಳುವಿನಲ್ಲಿ ಅಪ್ಪಯೆ ಎಂದರೆ ತಂದೆ.[12] ಇದು ಬಹುಶಃ ಕನ್ನಡದ ಅಪ್ಪಯ್ಯದ ಸ್ವೀಕರಣ (Borrowing)ವಿರಬೇಕು. (ಕೊಡಗಿನಲ್ಲಿ ವ್ಯಕ್ತಿಗಳಿಗೆ ಅಪ್ಪಯ್ಯ ಎಂಬ ಹೆಸರನ್ನು ಇಡುವುದು ಗಮನಾರ್ಹ.) ತುಳುವಿನಿಂದ ಕೆಲವು ನಿದರ್ಶನಗಳನ್ನು ಕೆಳಗೆ ಕೊಡಲಾಗಿದೆ.

ಕನ್ನಡ: ಅಮ್ಮನಿಗೆ ಅಪ್ಪ ಹೊಡೆದರೆ ಅಪ್ಪನಿಗೆ ದೈವ ಹೊಡೆಯುತ್ತದೆ.
ಹರಿಜನರ ತುಳು: ಅಪ್ಪೆಗು ಅಮ್ಮೆ ಕುಟ್ಟುಂಡ ಅಮ್ಮೆಗು ದೈವ ಕುಟ್ಟುಂಡ.
ಬ್ರಾಹ್ಮಣರ ತುಳು: ಅಪ್ಪಗು ಅಮ್ಮೆ ಕುಟ್ಟುಂಡ ಅಮ್ಮೆಗು ದೇವರೆ ಕುಟ್ಟೆರು.
ವಿದ್ಯಾವಂತರ ತುಳು: ಅಪ್ಪೆಗು ಅಪ್ಪಯೆ ಕುಟ್ಟುಂಡ ಅಪ್ಪಯೆಗು ದೇವರೆ ಕುಟ್ಟೆರು

ಕನ್ನಡ: ದುಡ್ಡಿದ್ದವನೆ ದೊಡ್ಡಪ್ಪ
ಹರಿಜನರ ತುಳು: ದುಡ್ಡಿತ್ತನಯೆ ದೊಡ್ಡಮ್ಮೆ
ಬ್ರಾಹ್ಮಣರ ತುಳು: ದುಡ್ಡಿತ್ತನಯೆ ದೊಡ್ಡಮ್ಮೆ
ವಿದ್ಯಾವಂತರ ತುಳು: ದುಡ್ಡಿತ್ತನಯೆ ದೊಡ್ಡಪ್ಪಯೆ.

ಹೀಗೆ ತುಳು ಈಗಲೂ ಅಮ್ಮೆ (=ಅಮ್ಮನ್) ಶಬ್ದಕ್ಕೆ ತಂದೆ ಎಂಬ ಅರ್ಥವನ್ನು ಉಳಿಸಿಕೊಂಡಿದೆ.

ಇನ್ನು ಕನ್ನಡದ ಅಬ್ಬೆಯ ವಿಚಾರ. ಹಳಗನ್ನಡದಲ್ಲಿ ಇದಕ್ಕೆ ತಾಯಿ ಎಂದರ್ಥ. ಈಗ ನಮಗೆ ತಿಳಿದಮಟ್ಟಿಗೆ ದಕ್ಷಿಣ ಕರ್ಣಾಟಕದಲ್ಲಿ ಈ ಪದ ಇಲ್ಲ. ಮಧ್ಯ ಕರ್ಣಾಟಕದಲ್ಲಿ, ಎಂದರೆ ದಾವಣಗೆರೆಯ ಸುತ್ತಮುತ್ತ ಇದು ಅಬೆ ಅಥವಾ ಬೇ ಆಗಿ ಸ್ವಲ್ಪ ಹೀನಾರ್ಥವನ್ನು ಪಡೆದುಕೊಂಡಿದೆ. ('ಏನಬೇ'–ಇದು ಲಂಬಾಣಿ

---

11 ತುಳು ಭಾಷೆಯ ಹಲವು ಪ್ರಯೋಗಗಳನ್ನು ತಮ್ಮ ಸ್ನೇಹಿತರಿಂದ ಒದಗಿಸಿಕೊಟ್ಟವರು ವಿದ್ಯಾರ್ಥಿಮಿತ್ರ ಶ್ರೀ ಕೆ. ಶಿವರಾಮ ಐತಾಳ, ಬಿ.ಎ. (ಆನರ್ಸ್) ಅವರು.

12 ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಹೆಸರುಗಳ ಕೊನೆಯಲ್ಲಿ ಬರುವ 'ಪೈ' ಎಂಬುದು ಕೆಲವರು ಭಾವಿಸುವಂತೆ ಅಪ್ಪಯ್ಯದ ರೂಪಾಂತರವಲ್ಲ, ಅದು ಪತಿ ಎಂಬುದರಿಂದ ಬಂದಿದೆಯೆಂದು ಶ್ರೀ ಗೋವಿಂದ ಪೈ ಅವರು ಅಭಿಪ್ರಾಯಪಡುವರೆಂದು ಪ್ರೊ॥ ತೀ. ನಂ. ಶ್ರೀಕಂಠಯ್ಯನವರು ತಿಳಿಸುತ್ತಾರೆ. 'ಪತಿ'ಯ ಪ್ರಾಕೃತರೂಪ 'ಪಇ' (ಪಾಇಅ ಸದ್ದ ಮಹಣ್ಣವೊ, ಪು. ೬೦೭). ಪತಿ > ಪಇ > ಪೈ.

ಸ್ತ್ರೀಯರನ್ನು ಸಂಬೋಧಿಸುವ ವಿಧಾನ). ಉತ್ತರ ಕರ್ಣಾಟಕದ ಬಿಜಾಪುರದ ಉಪಭಾಷೆಯಲ್ಲಿ ಅಬ್ಬೆ ಎಂದರೆ ತಾಯಿ ಎಂಬ ಮೂಲಾರ್ಥ ಈಗಲೂ ಉಳಿದು ಕೊಂಡಿದೆ. ಕೊಲಾಮಿ ಭಾಷೆಯಲ್ಲಿ ಬೇ ಎಂದರೆ ತಾಯಿ; ಇದು ಗೊಂಡಿಭಾಷೆ ಯಲ್ಲಿ (ಇವೆರಡೂ ದ್ರಾವಿಡ ಭಾಷೆಗಳೇ) ಹೆಂಡತಿಯ ತಮ್ಮನನ್ನು ಕರೆಯುವ ವಿಧಾನವನ್ನು ಸೂಚಿಸುತ್ತದೆ.[13] ತುಳುವಿನಲ್ಲಿ ಮಾತ್ರ ತಾಯಿ ಎಂಬ ಅರ್ಥದಲ್ಲಿ ಅಪ್ಪೆ ಅಥವಾ ಅಪ್ಪ ಎಂಬ ರೂಪಗಳಿವೆ. (ಹಿಂದೆ ಕೊಟ್ಟ ನಿದರ್ಶನಗಳನ್ನು ನೋಡಿ.) ಈ ಅಪ್ಪೆಗೂ ಅಬ್ಬೆಗೂ ಇರುವ ರೂಪ ಸಾದೃಶ್ಯ ಎದ್ದು ಕಾಣುವಂತಹುದೆ. ದಕ್ಷಿಣ ಕನ್ನಡಜಿಲ್ಲೆಯ ಕೋಟ ಕನ್ನಡದಲ್ಲಿ ತಾಯಿಯನ್ನು 'ಅಬಾ' ಎಂದು ಸಂಬೋಧಿಸುತ್ತಾರೆ. 'ಅಬ್ಬಿ' ಎಂಬ ರೂಪವೂ ಉಂಟು.

ಈ ಎಲ್ಲ ಅಂಶಗಳನ್ನು ನೆನಪಿನಲ್ಲಿಟ್ಟುಕೊಂಡು ವಿಚಾರಮಾಡಿದರೆ ಅಮ್ಮ(ನ್) ಮತ್ತು ಅಬ್ಬೆ ಎಂಬ ರೂಪಗಳಿಗೆಲ್ಲ ಒಂದೇ ಮೂಲವಿರುವಂತಿದೆ. ಆ ಮೂಲ ಯಾವುದಿರಬಹುದು? ದ್ರಾವಿಡಭಾಷೆಗಳ ಅಮ್ಮ ಎಂಬುದು ಸಂಸ್ಕೃತದ 'ಅಂಬಾ'ದ ತದ್ಭವವೆಂದು ಹಲವರ ತಿಳಿವಳಿಕೆ. ಈ ಅಂಬಾ ಎಂಬುದು ಯಾವ ಭಾಷೆಯ ಪದ? ಸರ್ ಮೋನಿಯರ್ ವಿಲಿಯಮ್ಸ್ ಅವರು ಇದು ಇಂಡೊ-ಯುರೊಪಿಯನ್ ಪದ ವೆಂದು ಭಾವಿಸುತ್ತಾರೆ. ಅವರು ತಮ್ಮ ಕೋಶದಲ್ಲಿ ಅಂಬಾ ಎಂಬ ರೂಪ ಋಗ್ವೇದ ದಲ್ಲಿದೆ ಎಂದು ಹೇಳಿ, ಅದಕ್ಕೆ ಸಮಾನವೆಂದು ಅಮ್ಮೆ, ಅಮ್ಮ (=nurse) ಎಂಬ ರೂಪಗಳನ್ನು ಹಳೆಯ ಜರ್ಮನ್ ಮತ್ತು ಜರ್ಮನ್ ಭಾಷೆಗಳಿಂದ ಉದ್ಧರಿಸಿ, ಸಿಲೋನಿನ ಅಂಬಾ ಗಂಗಾ ಎಂಬ ನದಿಯ ಹೆಸರನ್ನು ಹೇಳಿ, ಈ ಅಂಬಾ ಎಂಬುದೇ ದಕ್ಷಿಣ ಭಾರತದ ಎಂದರೆ ದ್ರಾವಿಡ ಭಾಷೆಗಳಲ್ಲಿ ಅಮ್ಮ ಆಗುತ್ತದೆ ಎಂದು ಹೇಳು ತ್ತಾರೆ.[14] ಆದರೆ ಡಾ|| ಬರೊ ಅವರು ಅಮ್ಮ ಎಂಬುದು ಅಚ್ಚದ್ರಾವಿಡ ಪದವೆಂದೂ, ಇದೇ ಸಂಸ್ಕೃತದಲ್ಲಿ ಅಂಬಾ ಎಂದಾಗುತ್ತದೆ ಎಂದೂ ಅಭಿಪ್ರಾಯಪಡುತ್ತಾರೆ.[14a] ಅಮ್ಮ ಎಂಬ ಪದ ದ್ರಾವಿಡವರ್ಗದ ಎಲ್ಲ ಭಾಷೆಗಳಲ್ಲಿಯೂ ಕಂಡುಬರುವುದು ಇದು ಮೂಲತಃ ದ್ರಾವಿಡ ಪದವಿರಬಹುದು ಎಂಬ ಸಂದೇಹವನ್ನು ದೃಢಪಡಿಸುತ್ತದೆ. ಸಂಸ್ಕೃತದ ಅಂಬಾದ ಮೂಲ ಯಾವುದೇ ಇರಲಿ, ಅದಕ್ಕೂ ಅಮ್ಮಾಕ್ಕೂ ಸಂಬಂಧ ಯಾವುದೇ ಇರಲಿ, ಕನ್ನಡದ ಅಬ್ಬೆ, ಅವ್ವೆ, ಅವ್ವಗಳಂತೂ ಸಂಸ್ಕೃತದ ಅಂಬಾದಿಂದ ಬಂದಿರುವುದರ ಸಾಧ್ಯತೆ ಬಹುವಾಗಿ ಇದೆ. ಇದನ್ನು ಹೀಗೆ ನಿರ್ದೇಶಿಸಬಹುದು.

---

13. T. Burrow and M.B. Emeneau: A Dravidian Etymological Dictionary, P. 293.

14. A Sanskrit-English Dictionary, P. 83.

14*a*. T. Burrow: Dravidian Studies, VII (Bulletin of the School of Oriental and African Studies, XII, Part 2, P. 366).

ದ್ರಾವಿಡ. ಅಮ್ಮಾ (=ತಾಯಿ)
- → ಸಂಸ್ಕೃತ. ಅಂಬಾ
- → ಹಳಗನ್ನಡ. ಅಮ್ಮನ್ (=ತಂದೆ)
- → ನಡುಗನ್ನಡ, ಹೊಸಗನ್ನಡ, ಅಮ್ಮ(=ತಾಯಿ)

ಸಂಸ್ಕೃತ. ಅಂಬಾ
- → ಕನ್ನಡ. ಅಬ್ಬಾ (ನೋಡಿ, ವಡ್ಡಾರಾಧನೆ, ' ಪೋಗಬ್ಬಾ')
- → ಕನ್ನಡ. ಅಂಬೆ—ಅಬ್ಬೆ—ಅಪ್ಪೆ—ಅವ್ವ
  - ತುಳು. ಅಪ್ಪೆ, ಅಪ್ಪ

ಸಂಸ್ಕೃತದ ಅಂಬಾ ಎಂಬುದು ಅಬ್ಬಾ, ಅಬ್ಬೆ ಆಗಿ, ಅಪ್ಪೆ ಅಥವಾ ಅಪ್ಪ ಆಗಿ (ತುಳುವಿನ ರೂಪಗಳನ್ನು ನೋಡಿ), ಅದೇ ಅಪ್ಪನ್ (= ತಾಯಿಗೆ ಸಂಬಂಧಿಸಿದವನು, ತಂದೆ) ಎಂದಾಗಿರುವಂತೆ ಕಾಣುತ್ತದೆ. ತಮಿಳು ಮಲಯಾಳಗಳಲ್ಲಿ ಅಪ್ಪನ್ ಎಂಬ ರೂಪವಿದೆ. ಇದೇ ಕನ್ನಡದಲ್ಲಿ ಅಪ್ಪ (= ತಂದೆ) ಎಂದಾಗುತ್ತದೆ. ತೆಲುಗಿನಲ್ಲಿ ಅಪ್ಪ ಎಂಬುದಕ್ಕೆ ತಂದೆ, ತಾಯಿ, ಅಕ್ಕ ಎಂಬ ಅರ್ಥಗಳಿರುವುದು ಮೇಲಿನ ನಮ್ಮ ಊಹೆಯನ್ನು ದೃಢಪಡಿಸುತ್ತದೆ. ತೆಲುಗಿನಲ್ಲಿ ಅಬ್ಬ ಎಂದರೆ ತಂದೆ ಎಂದರ್ಥ. ಇದನ್ನು ಅಬ್ಬೆ ಅಥವಾ ತಾಯಿಗೆ ಸಂಬಂಧಿಸಿದವನು ಎಂದು ವಿವರಿಸಲು ಸಾಧ್ಯವೇ ಎಂಬುದು ವಿಚಾರಣೀಯವಾದ ಸಂಗತಿ.

೨

ಹಳಗನ್ನಡದ ಅಮ್ಮನ್ ಎಂಬ ಪದ ಒಂದು ಕಾಲಕ್ಕೆ ತಂದೆ ಎಂಬ ಅರ್ಥವನ್ನು ಕಳೆದುಕೊಂಡು ಅಮ್ಮ ಎಂದಾಗಿ ತಾಯಿ ಎಂಬ ಅರ್ಥವನ್ನು ಪಡೆಯಿತು.[15] ಈ ಶಬ್ದಾರ್ಥ ವ್ಯತ್ಯಾಸವು (Semantic Change)[16] ಯಾವಾಗ ನಡೆಯಿತು ? ಇದನ್ನು ಸ್ಥೂಲವಾಗಿ ನಿರ್ಧರಿಸಲು ಶಾಸನಗಳಲ್ಲಿ ಕಂಡುಬರುವ

---

[15] ಹಳಗನ್ನಡದ ಅಮ್ಮ (ನ್) ಮತ್ತು ನಡುಗನ್ನಡ ಹೊಸಗನ್ನಡಗಳ ಅಮ್ಮ ಇವೆರಡೂ ಬೇರೆ ಬೇರೆ ಪದಗಳಾಗಿರಬಹುದೆಂದು ಪ್ರೊ॥ ಬಿ. ಎಂ. ಶ್ರೀಕಂಠಯ್ಯನವರು ಸಂದೇಹಿಸಿದ್ದರೆಂದು ಪ್ರೊ॥ ತೀ. ನಂ. ಶ್ರೀಕಂಠಯ್ಯನವರು ತಿಳಿಸಿದ್ದಾರೆ.

[16] "Innovations which change the lexical meaning rather than the Grammatical function of a form, are classed as *change of meaning* or *Semantic Change*" (Bloomfield : Language, P.425)

ಪುರುಷರ ಹೆಸರುಗಳ ಕೊನೆಯಲ್ಲಿ ಬರುವ ಪ್ರತ್ಯಯಗಳು (Endings of the Personal Names) ಸಹಾಯ ಮಾಡುತ್ತವೆ. ಹತ್ತನೇ ಶತಮಾನದಲ್ಲಿ ಅಮ್ಮನ್ ಮತ್ತು ಅಬ್ಬೆ ಎಂಬ ಪದಗಳು ಪ್ರಚಾರದಲ್ಲಿದ್ದುವು ಎಂಬುದನ್ನು ಹಿಂದೆಯೇ ನೋಡಿದ್ದೇವೆ. ಹನ್ನೆರಡನೇ ಶತಮಾನದ ವಚನಕಾರರಲ್ಲಿ (ಸು. ೧೧೬೦) ಯಾವ ಪುರುಷನ ಹೆಸರೂ ಅಮ್ಮನ್ ಎಂದು ಕೊನೆಯಾಗುವುದಿಲ್ಲ. ಆದ್ದರಿಂದ ಮೇಲೆ ನಾವು ಹೇಳಿದ ಶಬ್ದಾರ್ಥ ವ್ಯತ್ಯಾಸವು ಹತ್ತನೇ ಶತಮಾನದಿಂದ ಈಚೆಗೆ ಹನ್ನೆರಡನೇ ಶತಮಾನದಿಂದ ಆಚೆಗೆ ನಡೆದಿರಬೇಕು. ಇದನ್ನು ನಿರ್ಧರಿಸುವ ಮೊದಲು ಪ್ರಾಚೀನ ಶಾಸನಗಳಲ್ಲಿ ಕಂಡುಬರುವ ಕೆಲವು ಪುರುಷರ ಮತ್ತು ಸ್ತ್ರೀಯರ ಹೆಸರುಗಳನ್ನು ಗಮನಿಸಬಹುದು. 'ಶ್ರೀದಾಸಿ ಅಮ್ಮನ್'[17], 'ದಾಸಮ್ಮನ್'[18], 'ಗಣರಮ್ಮನ್'[19] 'ಕೋಟಿಯಮ್ಮ(ನ್)'[20], ಇವು ಕೆಲವು ಪುರುಷರ ಹೆಸರುಗಳು. 'ಪೊನ್ನಬ್ಬೆ'[21], 'ಅಕ್ಕಣಬ್ಬೆ'[22], ಇವು ಕೆಲವು ಸ್ತ್ರೀಯರ ಹೆಸರುಗಳು. ಹತ್ತನೇ ಶತಕಕ್ಕಿಂತ ಹಿಂದಿನ ಹೆಸರುಗಳಲ್ಲಿ ಯಾವ ಸ್ತ್ರೀಯ ಹೆಸರೂ 'ಅಮ್ಮ' ಎಂದು ಕೊನೆಯಾಗುವುದಿಲ್ಲ. ಆ ಕಾಲದ ಪುರುಷರ ಹೆಸರುಗಳು ಬಹುಪಾಲು ಅಮ್ಮನ್ ಎಂದು ಕೊನೆಯಾಗುತ್ತವೆ. ಈ ಅಮ್ಮನ್ ಎನ್ನುವುದು 'ಮ' ಎಂಬ ಸವೆದ ರೂಪದಲ್ಲಿಯೂ ಕಾಣಿಸಿಕೊಳ್ಳುತ್ತದೆ. ಉದಾಹರಣೆಗೆ 'ಶ್ರೀ ಬಸಮಯ್ಯನ್'[23] (=ಶ್ರೀ ಬಸವ+ಅಮ್ಮ+ಅಯ್ಯನ್—ಬರಿಯ ಅಯ್ಯ ಎಂದು ಕೊನೆಯಾಗುವ ನೂರಾರು ಹೆಸರುಗಳೂ ನಮಗೆ ದೊರೆಯುತ್ತವೆ. ಉದಾಹರಣೆಗೆ 'ದೇವರ ದಾಸಯ್ಯ'[24]). ಈ 'ಮ' (<ಅಮ್ಮನ್) ಎಂಬ ಸಂಕ್ಷಿಪ್ತರೂಪವು ಹನ್ನೊಂದನೆಯ ಶತಮಾನದಲ್ಲಿ ಹೆಚ್ಚು ಹೆಚ್ಚಾಗಿ ಕಾಣಿಸಿಕೊಳ್ಳಲಾರಂಭಿಸುತ್ತದೆ. ಉದಾಹರಣೆಗೆ 'ಚಾವುಂಡಮಯ್ಯ',[25] 'ಕಾಳಿಮಯ್ಯ'[26] (ಆದರೂ ಈ ಶತಮಾನದಲ್ಲಿಯೇ 'ಅಮ್ಮ(ನ್)' ಎಂದು ಕೊನೆಗೊಳ್ಳುವ ಹೆಸರುಗಳೂ ಇಲ್ಲದಿಲ್ಲ. ಉದಾಹರಣೆಗೆ

---

17 MAR (1939), P. 121, C. 740 A. D.

18 EI, VI, P. 161, 765 A. D.

19 EI, XIII, P. 189, 888 A. D.

20 MAR (1929), P. 153, C. 964 A. D.

21 ಅದೇ.

22 ಅದೇ.

23 IA, VIII, P. 286, C. 800 A. D.

24 EC, XV. Hn. 67, C. 950 A. D. ಈ ದೇವರದಾಸಯ್ಯ ಜೈನಧರ್ಮದ ಅನುಯಾಯಿ. ಸು. ೧೧೫೦ ರಲ್ಲಿದ್ದ ದೇವರ ದಾಸಿಮಯ್ಯ (=ದಾಸಿ+ಅಮ್ಮ+ಅಯ್ಯ) ಶಿವಭಕ್ತ ಮತ್ತು ವಚನಕಾರ.

25 SII, IX, i. 165, 1094 A. D.

26 BKI, I, ii. 153, 1087 A. D.

‘ಅರಸಮ್ಮನ್’,[27] ‘ಸಿರಿಯಮ್ಮ ಸೆಟ್ಟಿ’[28]). ಹನ್ನೊಂದನೆಯ ಶತಮಾನದ ಕೊನೆಯಲ್ಲಿ, ಹನ್ನೆರಡನೆಯ ಶತಮಾನದ ಆರಂಭದಲ್ಲಿ ‘ಅಮ್ಮ’ ಪದದ ಪ್ರಯೋಗದ ವಿಷಯದಲ್ಲಿ ಜನರಲ್ಲಿ ಕ್ಲೇಶಗಳು ತಲೆದೋರಲಾರಂಭವಾದಂತೆ ಕಾಣುತ್ತದೆ. ಹನ್ನೆರಡನೆಯ ಶತಮಾನದಲ್ಲೂ ಅಮ್ಮನ್ ಎಂದು ಕೊನೆಗೊಳ್ಳುವ ಹೆಸರುಗಳು ಇಲ್ಲದಿಲ್ಲ. ನೋಡಿ—‘ಮಾಣಿಯಮ್ಮನ್’.[29] ಆದರೆ ಅಮ್ಮನ್ ಎಂಬುದು ಪುರುಷರ ಹೆಸರಿನ ಕೊನೆಯಲ್ಲಿ ಕಾಣಿಸಿಕೊಳ್ಳುವುದು ಬಹುಮಟ್ಟಿಗೆ ನಿಂತುಹೋಗಿತ್ತಲ್ಲದೆ ಅದರ ಸವೆದ ರೂಪವಾದ ‘ಮ’ ಎಂಬುದೂ ಕೂಡ ವಿರಳವಾಗುತ್ತ ಬಂದಿದ್ದಿತು. ತಾಯಿ ಎಂಬ ಅರ್ಥದಲ್ಲಿ ಅಬ್ಬೆ ಎಂಬ ಮಾತು ಇದ್ದರೂ, ತಂದೆ ಎಂಬ ಅರ್ಥದಲ್ಲಿ ಅಯ್ಯ ಎಂಬ ಮಾತು ಹೆಚ್ಚು ಹೆಚ್ಚಾಗಿ ಬೆಳಕಿಗೆ ಬಂದಂತೆ ತೋರುತ್ತದೆ. ನೋಡಿ—“ತಮ್ಮಯ್ಯಂ ತೀಕಿಮಯ್ಯ ನಾಯಕರ್ಗೆ; ತಮ್ಮ ಅಬ್ಬೆ ರನ್ನಿಕವ್ವೆಗೆ”[30] ಕ್ರಿ. ಶ. ೧೧೧೨ರಲ್ಲಿ ಧರ್ಮಾಮೃತವನ್ನು ರಚಿಸಿದ ನಯಸೇನನೂ ಇದೇ ಮಾತುಗಳನ್ನು ಬಳಸುತ್ತಾನೆ—“ಎಂದು ಪೆರ್ಚಿ ತಮ್ಮಯ್ಯಂಗತಿ ಭಕ್ತನಪ್ಪುದಱಿಂದಿದನೇಱಿಸಿರಲಾಗದೆಂದು ತಮ್ಮಬ್ಬೆಯಪ್ಪ ವಿಶಾಖೆಗಱಿಪಿ”[31] ಹನ್ನೆರಡನೇ ಶತಮಾನದ ಆರಂಭದ ಶಾಸನವೊಂದರಲ್ಲಿ ಪುರುಷ ಮತ್ತು ಸ್ತ್ರೀಯರ ಹೆಸರುಗಳೆರಡೂ ಅಮ್ಮ ಎಂದೇ ಕೊನೆಯಾಗುತ್ತವೆ. ನೋಡಿ—ಹೋರಾಡಿದ ವೀರನ ಹೆಸರು ಎಱೆಯಮ್ಮ, ಅವನಿಗೆ ಕಲ್ಲನ್ನು ನಿಲ್ಲಿಸಿದವಳು ಬೀಯಮ್ಮ.[32] ಹಿಂದೆ ಪುರುಷ ವಾಚಿಯಾಗಿದ್ದ ಅಮ್ಮ(ನ್) ಎಂಬುದು ಹೇಗೋ ಉಳಿದುಕೊಂಡು ಬಂದಿತ್ತು. ಅದರ ಜೊತೆಗೆ ಅದರ ರೂಪಾಂತರವಾದ ಅಮ್ಮ ಎಂಬುದಾಗಲೇ ಸ್ತ್ರೀವಾಚಿಯಾಗಿಯೂ ಬಳಕೆಗೆ ಬರುತ್ತಿದ್ದಿತು. ಕೆಲವು ಕಾಲ ಅಮ್ಮ ಎಂಬ ಶಬ್ದವು ಪುರುಷವಾಚಿ ಮತ್ತು ಸ್ತ್ರೀ ವಾಚಿಯಾಗಿದ್ದು, ಜನರಿಗೆ ಕ್ಲೇಶವನ್ನು ತಂದೊಡ್ಡಿದುದರಿಂದ ಜನರು ಆ ಶಬ್ದಕ್ಕಿದ್ದ ಪುಲ್ಲಿಂಗಾರ್ಥವನ್ನು ಬಿಟ್ಟು ಸ್ತ್ರೀಲಿಂಗಾರ್ಥವನ್ನುಳಿಸಿಕೊಂಡರು.[33]

---

[27] BKI, I, ii. 121, 1071 A. D.

[28] BKI, I, ii. 148, 1099 A. D.

[29] EC, VII, SK. 266, 1139 A. D.

[30] BKI, I, ii. 196, 1121 A. D.

[31] ಧರ್ಮಾಮೃತ, 10. 147, ವ.

[32]. EC, IV. Ng. II, c. 1115 A.D. ಈ ಶಾಸನದ ಆಂಗ್ಲ ಪಾಠ ಮತ್ತು ಕನ್ನಡ ಪಾಠಗಳಲ್ಲಿ ವ್ಯತ್ಯಾಸವಿದೆ. ನಾವು ಕನ್ನಡ ಪಾಠವನ್ನು ಅಂಗೀಕರಿಸಿದ್ದೇವೆ.

[33]. ಶಬ್ದಾರ್ಥವ್ಯತ್ಯಾಸವು ನಡೆಯುವುದು ಹೀಗೆಯೇ. ಇಂಗ್ಲಿಷಿನಲ್ಲಿ ಒಮ್ಮೆ ಆಹಾರ ಎಂಬ ಅರ್ಥವಿದ್ದ ‘Meat’ ಎಂಬ ಮಾತಿಗೆ ಸ್ವಲ್ಪಕಾಲ ಆಹಾರ ಮತ್ತು ತಿನ್ನಲು ಯೋಗ್ಯವಾದ ಮಾಂಸ ಎಂಬ ಎರಡೂ ಅರ್ಥಗಳಿದ್ದು, ಕ್ರಮೇಣ ತಿನ್ನಲು ಯೋಗ್ಯವಾದ ಮಾಂಸ ಎಂಬ ಅರ್ಥವು ಉಳಿದುಕೊಂಡಿತು. ಎಂದರೆ ಒಂದು ಪದವನ್ನು A ಎಂಬ ಸನ್ನಿವೇಶದಲ್ಲಿ

ಇದು ಸು. ೧೧೧೦–೨೦ ರಲ್ಲಿ ನಡೆದಿರಬೇಕು. ಮುಂದೆ ಅಮ್ಮ ಎಂಬುದು ಸ್ತ್ರೀ ವಾಚಿಯಾಗಿ ಬಳಕೆಯಾಗಲು ಆರಂಭವಾಯಿತು.[34] ಉದಾಹರಣೆಗೆ ನಾಯಕ ಗೌಡನೆಂಬುವವನ ಸೋದರಿಯರಾದ ಮೈಲಮ ಮತ್ತು ಹಾಲಮರ[35] ಹೆಸರುಗಳನ್ನು ನೋಡಬಹುದು.

ಆದರೂ ಹನ್ನೆರಡನೆಯ ಶತಮಾನದಿಂದೀಚೆಗೆ 'ಮ' (<ಅಮ್ಮನ್) ಎಂಬುದು ಪುರುಷರ ಹೆಸರುಗಳ ಮಧ್ಯೆ ಮತ್ತು ಕೊನೆಯಲ್ಲಿ ಉಳಿದುಕೊಂಡಿತು. ಸು. ೧೧೫೦ ರಲ್ಲಿದ್ದ ಕರ್ಣಪಾರ್ಯನಿಗೆ ಕಣ್ಣಮ, ಕನ್ನಮಯ್ಯ ಎಂಬ ಹೆಸರುಗಳೂ ಇದ್ದವು. 35(a) ಕಣ್ಣಮ, ಕನ್ನಮಯ್ಯ ಎಂಬುವೇ ನಿಜವಾದ ಹೆಸರುಗಳು. ಕೃಷ್ಣ> ಕಣ್ಣ>ಕಣ್ಣಮ್ಮನ್> ಕಣ್ಣಮ. ಕಣ್ಣ ಎಂಬುದು 'ಕರ್ಣ' ದಿಂದ ಬಂದಿದೆಯೆಂದು ಭಾವಿಸಿ ಅದನ್ನು ಕರ್ಣಪಾರ್ಯ ಎಂದು ಸಂಸ್ಕೃತೀಕರಿಸಿರುವಂತೆ ಕಾಣುತ್ತದೆ (ಇದನ್ನು ಭಾಷಾವಿಜ್ಞಾನದಲ್ಲಿ 'back formation' ಎಂದು ಕರೆಯುತ್ತಾರೆ). ಕ್ರಿ.ಶ. ೧೨೦೯ ರಲ್ಲಿದ್ದ ಜನ್ನನಿಗೆ ಜನ್ನಮರಸ ಎಂಬ ಹೆಸರೂ ಉಂಟು.[36] ಆಧುನಿಕ ಕಾಲದಲ್ಲಿ ಕೃಷ್ಣಮಾಚಾರ್ಯ, ಕೃಷ್ಣಮನಾಯಿಡು ಮೊಂತಾದ ಕಡೆಗಳಲ್ಲಿಯೂ ಅದೇ 'ಮ' ಇದೆ. ಶ್ರೀ ಶಿವರಾಮ ಕಾರಂತರ ಮರಳಿ ಮಣ್ಣಿಗೆಯ ನಾರಾಯಣಮಯ್ಯ[37] ಎಂಬುದು ನಾರಾಯಣ+ಅಮ್ಮ+ಅಯ್ಯ ಎಂಬುದೇ ಆಗಿದೆ. ಮಯ್ಯ, ಮಯ್ಯರು ಎಂಬುದೇ ಪ್ರತ್ಯೇಕವಾಗಿ ಸಿಡಿದು ನಿಂತು ವ್ಯಕ್ತಿ ಸೂಚಕವಾಗಬಲ್ಲುದು. ಅಳೀಮಯ್ಯ (=ಅಳಿಯ) ಎಂಬ ಮಾತು ದಾವಣಗೆರೆಯ ಉಪಭಾಷೆಯಲ್ಲಿ ಸ್ವಲ್ಪ

ಬಳಸುತ್ತಿದ್ದು, ಕ್ರಮೇಣ ಅದನ್ನು A ಮತ್ತು B ಎಂಬ ಎರಡು ಸನ್ನಿವೇಶಗಳಲ್ಲೂ ಬಳಸಲಾರಂಭವಾಗಿ, ಬಳಿಕ B ಎಂಬ ಸನ್ನಿವೇಶದಲ್ಲಿ ಮಾತ್ರ ಬಳಸಲಾರಂಭಿಸುತ್ತಾರೆ. ಶಬ್ದಾರ್ಥವ್ಯತ್ಯಾಸವೆಂದರೆ ಇದೇ.

34. ಇಲ್ಲಿ ಏಳುವ ಸಮಸ್ಯೆಗಳು ಹಲವು. 'ಅಮ್ಮನ್' ಎಂಬುದು 'ಅಮ್ಮ' (= ತಾಯಿ) ದಿಂದ ಬಂದಿತೆಂದು ಭಾವಿಸಿದರೆ, ಹಳಗನ್ನಡದಲ್ಲಿ ತಾಯಿ ಎಂಬ ಅರ್ಥದಲ್ಲಿ ಅಮ್ಮ ಎಂಬ ಪದವು ಇರದಿರಲು ಕಾರಣವೇನು ? ಹನ್ನೆರಡನೆಯ ಶತಮಾನದಿಂದ ಈಚೆಗೆ ಬಳಕೆಗೆ ಬಂದ ಅಮ್ಮ ಎಂಬ ಪದವು 'ಅಮ್ಮನ್' ಪದದ ಸವೆದ ರೂಪವೇ? ಹಳಗನ್ನಡದಲ್ಲಿ ನಕಾರಾಂತವಾಗಿದ್ದ ಹಲವು ಪದಗಳು ನಡುಗನ್ನಡದಲ್ಲಿ ನಕಾರವನ್ನು ಕಳೆದುಕೊಂಡವು. ಅಮ್ಮನ್ > ಅಮ್ಮ ಆದಾಗ, ಅಮ್ಮ ಪದಕ್ಕೆ ತಾಯಿ ಎಂಬ ಅರ್ಥವು ಹೇಗೆ ಬಂದಿತು ? ಆದರೂ ಇಷ್ಟು ಮಾತ್ರ ಖಚಿತ–'ಅಮ್ಮನ್' ಎಂಬ ಪದ ತಂದೆ ಎಂಬ ಅರ್ಥದಲ್ಲಿ ಮರೆಯಾದದ್ದು, ಅಮ್ಮ ಎಂಬ ಪದ ತಾಯಿ ಎಂಬ ಅರ್ಥದಲ್ಲಿ ಕಾಣಿಸಿಕೊಂಡದ್ದು ೧೧೨೦ ರ ಸರಿ ಸುಮಾರಿನಲ್ಲಿ.

35. SII, ix. i. 249, 1147 A.D.

35(a). ಕರ್ಣಾಟಕ ಕವಿಚರಿತೆ, I (೧೯೬೧), ಪು. ೧೫೦.

36. ಅದೇ, ಪು. ೩೭೭.

37. ಮರಳಿ ಮಣ್ಣಿಗೆ, ಪು. ೧.

ವ್ಯಂಗ್ಯಾರ್ಥದೊಡನೆ ಸಿಗುತ್ತದೆ. ಇದು ಅಳಿಯ+ಅಮ್ಮ+ಅಯ್ಯ ಎಂಬುದು ಸ್ಪಷ್ಟ.

ಬ್ರಹ್ಮಶಿವನ ಸಮಯ ಪರೀಕ್ಷೆಯಲ್ಲಿ ಅಯ್ಯ ಎಂಬುದೂ ಅಮ್ಮನ್ ಎಂಬುದೂ ತಂದೆ ಎಂಬ ಅರ್ಥದಲ್ಲಿ ಬಳಕೆಯಾಗಿವೆ.[38] ಈ ಗ್ರಂಥದ ಕಾಲವು ಅನಿಶ್ಚಿತ. ಇದರ ಕಾಲ ಹನ್ನೆರಡನೆಯ ಶತಮಾನದ ಉತ್ತರಾರ್ಧವೆಂದು ಶ್ರೀ ಎಚ್. ದೇವೀರಪ್ಪ ನವರು ಪ್ರತಿಪಾದಿಸಿದ್ದಾರೆ.[39] ಅವನ ಗ್ರಂಥದಲ್ಲಿ ಅನೇಕ ಶೈವ ಶಾಖೆಗಳ ಕಟು ವಿಡಂಬನೆಯಿದ್ದರೂ ಸು. ೧೧೬೦ ರಲ್ಲಿ ತಲೆಯೆತ್ತಿದ್ದ ವೀರಶೈವಧರ್ಮದ ಸ್ಪಷ್ಟ ಉಲ್ಲೇಖವಾಗಲಿ ವಿಡಂಬನೆಯಾಗಲಿ ಕಾಣದಿರುವುದರಿಂದ ಮತ್ತು ತಂದೆ ಎಂಬ ಅರ್ಥದ 'ಅಮ್ಮನ್' ಪದ ಪ್ರಯೋಗದಿಂದ ಅವನು ಹನ್ನೆರಡನೆಯ ಶತಮಾನದ ಪೂರ್ವಾರ್ಧದವನೇ ?–ಎಂಬುದು ಒಂದು ಊಹೆ. ಆದರೆ ಅವನು ಆ ಪದವನ್ನು ತನಗಿಂತ ಹಿಂದಿನ ಕಾವ್ಯಗಳಿಂದ ಆರಿಸಿಕೊಂಡಿರಲೂ ಸಾಧ್ಯ. ಶ್ರೀ ಎಚ್. ದೇವೀರಪ್ಪನವರ ನಿರ್ಣಯವು ಹಲವು ಭದ್ರ ಆಧಾರಗಳ ಮೇಲೆ ನಿಂತಿರುವುದರಿಂದ ಅವರು ಕೊಟ್ಟ ಕಾಲವನ್ನು ಶಂಕಿಸುವುದು ಕಷ್ಟವೇ.

೩

ಅಲ್ಲಮ : ಇಲ್ಲಿಯವರೆಗೆ ನಡೆದ ಚರ್ಚೆಯಿಂದ ಈ ಹೆಸರಿನ ಕೊನೆಯ 'ಮ' ಎಂಬುದು 'ಅಮ್ಮ'ದ ಸವೆದ ರೂಪ ಎಂಬುದು ತಕ್ಷಣವೇ ಹೊಳೆಯುತ್ತದೆ. ಶ್ರೀ ಬ್ರೌನ್ ಅವರು ತಮ್ಮ ತೆಲುಗು–ಇಂಗ್ಲಿಷ್ ಕೋಶದಲ್ಲಿ ಅಲ್ಲಮ ಎಂಬುದು ಕನ್ನಡ ಪದವಲ್ಲ, ಅದು ಕೊರಾನಿನ ಅಲಮ್ (ಅಲ್ಲ) ಆಗಿರಬೇಕು, ಅದು ಕನ್ನಡ ಪದವಾದರೆ ಕೊನೆಯ ಅಕ್ಷರ 'ಮ'ಕ್ಕೆ ವಿವರಣೆಕೊಡುವುದು ಕಷ್ಟ ಎಂದಿದ್ದಾರೆ. ಆದರೆ ಅದು ಕಷ್ಟವೇನೂ ಅಲ್ಲ ಎಂಬುದು ನಮ್ಮ ಹಿಂದಿನ ವಿವರಣೆಗಳಿಂದ ಸ್ಪಷ್ಟ.

ಸುಮಾರು ಹನ್ನೆರಡು ವರ್ಷಗಳ ಹಿಂದೆ ಅಲ್ಲಮ ಪ್ರಭುದೇವರ (ಸು. ೧೧೬೦) ನಿಜವಾದ ಹೆಸರು ಅಲ್ಲಮನೊ ಅಲ್ಲಯ್ಯನೊ ಎಂಬ ವಿಷಯದಲ್ಲಿ ಸ್ವಲ್ಪ ಚರ್ಚೆ ನಡೆಯಿತು. ಅಲ್ಲಯ್ಯ ಎಂಬುದೇ ನಿಜವಾದ ಹೆಸರು ಎಂಬ ತೀರ್ಮಾನಕ್ಕೆ ಶ್ರೀ ನಿಡುಮಾಮಿಡಿ ಜಗದ್ಗುರುಗಳು ಬಂದರು.[40] ಈ ಅಭಿಪ್ರಾಯವನ್ನೊಪ್ಪದ ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಯವರು ಅಲ್ಲಮ ಎಂಬ ಪ್ರಸಿದ್ಧರೂಪವೇ ಪ್ರಾಚೀನವಾದುದು ಎಂದು ವಚನಗಳ ಮತ್ತು ಕಾವ್ಯಗಳ ಸಹಾಯದಿಂದ ಸಾಧಾರ ವಾಗಿ ಪ್ರತಿಪಾದಿಸಿದರು.[41] ಆದರೆ ಇದೇ ವಿದ್ವಾಂಸರು ಮತ್ತೊಂದೆಡೆ ಅಲ್ಲಮನ

38. ಸಮಯ ಪರೀಕ್ಷೆ (ಸಂ: ಬಿ.ಎಸ್. ಕುಲಕರ್ಣಿ), ೫. ೫೨.
39. ಬ್ರಹ್ಮಶಿವನ ಕಾಲವಿಚಾರ (ಪ್ರಬುದ್ಧ ಕರ್ಣಾಟಕ, xxiv. ೪).
40. ಶರಣಸಾಹಿತ್ಯ (ಡಿಸೆಂಬರ್, ೧೯೫೧).
41. ಅದೇ (ಜನವರಿ, ೧೯೫೨).

ತಾಯ್ತಂದೆಗಳಿಗೆ ಸುಜ್ಞಾನಿ ಮತ್ತು ನಿರಹಂಕಾರ ಎಂಬ ಸಾಂಕೇತಿಕ ಹೆಸರುಗಳಿರುವುದರಿಂದಲೂ, ಅಲ್ಲಮನಿಗೆ ನಿರ್ಮಾಯನೆಂಬ ಮತ್ತೊಂದು ಹೆಸರಿರುವಂತೆ ಕಾವ್ಯಗಳಿಂದ ತಿಳಿದುಬರುವುದರಿಂದಲೂ (" ನಾಮಕರಣಂ ಜಗಕ್ಕೆಲ್ಲಯ್ಯನೆಂದಾಗೆ। ಭೂಮಿಯೊಳು ನಿರ್ಮಾಯನೆಂಬ ಪೆಸರಂತಾಗೆ "–ಹರಿಹರ), ಅಲ್ಲಮ ಎಂಬುದು ನಿರ್ಮಾಯನೆಂಬುದರ ಕನ್ನಡವೆಂದು ಇಟ್ಟುಕೊಳ್ಳಬಹುದೆಂದು ಸೂಚಿಸುತ್ತಾರೆ.[42] ಅಲ್ಲಮ ಎಂಬುದೇ ಪ್ರಾಚೀನ ಎಂಬ ಅವರ ಅಭಿಪ್ರಾಯವನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಅದು ನಿರ್ಮಾಯನೆಂಬುದರ ಕನ್ನಡ ರೂಪವೆಂಬುದನ್ನು ಮಾತ್ರ ಒಪ್ಪುವುದಿಲ್ಲ. ಏಕೆಂದರೆ ಅಲ್ಲಮನಿಗಿಂತಲೂ ಅವನ ಹೆಸರು ಪ್ರಾಚೀನವಾದುದು ಎಂಬುದನ್ನು ಮುಂದೆ ತೋರಿಸುತ್ತೇವೆ.

ಅಲ್ಲಮ ಎಂಬ ಹೆಸರಿನ ಹಲವು ವ್ಯಕ್ತಿಗಳು ಶಾಸನಗಳಲ್ಲಿಯೂ ಇತರೆಡೆಗಳಲ್ಲಿಯೂ ಉಕ್ತರಾಗಿದ್ದಾರೆ.

೧. ಕ್ರಿ.ಶ. ೯೬೪ರ ಶಾಸನದಲ್ಲಿ ಅಲ್ಲಮನ್ ಎಂಬ ಪುರುಷನ ಹೆಸರಿದೆ.[43] (ಅಲ್ಲ+ಅಮ್ಮನ್)

೨. ಕ್ರಿ.ಶ. ೧೦೯೧ರ ಶಾಸನದಲ್ಲಿ 'ಅಲ್ಲಮೇಶ್ವರ ದೇವ'ರ ಹೆಸರಿದೆ.[44] ಬಹುಶಃ ಇದು ಅಲ್ಲಮ ಎಂಬ ಯಾವನೋ ವ್ಯಕ್ತಿ ಸ್ಥಾಪಿಸಿದ ಈಶ್ವರ ಲಿಂಗವೆಂಬುದು ಸ್ಪಷ್ಟ.

೩. ಸು. ೧೧೪೯ರ ಶಾಸನದಲ್ಲಿ 'ಅಲ್ಲಮರಸನ್' ಎಂಬ ವ್ಯಕ್ತಿಯ ಹೆಸರಿದೆ.[45] ಇಲ್ಲೆಲ್ಲಾ ಅಲ್ಲಮ್ಮನ್ ಎಂಬುದು ಅಲ್ಲಮ ಆಗಿರುವುದು ಸ್ಪಷ್ಟ.

ಅಲ್ಲಮ ಎಂಬ ಹೆಸರಿನ ಮೊದಲ ಭಾಗವಾದ ಅಲ್ಲ ಎಂಬುದು ಇನ್ನೂ ಕೆಲವು ಹೆಸರುಗಳಲ್ಲಿ ಕಾಣಿಸಿಕೊಳ್ಳುತ್ತದೆ.

೪. ಕ್ರಿ.ಶ. ೯೫೮ರ ಶಾಸನದಲ್ಲಿ 'ಅಲ್ಲಗುಂಡನ್' ಎಂಬ ವ್ಯಕ್ತಿಯ ಹೆಸರಿದೆ.[46]

೫. ಕ್ರಿ.ಶ. ೧೧೦೬ರ ಶಾಸನದಲ್ಲಿ 'ಅಲ್ಲಾಲೇಶ್ವರ' ಎಂಬ ದೇವರ ಹೆಸರಿದೆ.[47] ಬಹುಶಃ ಅಲ್ಲಾಲ ಎಂಬಾತ ಸ್ಥಾಪಿಸಿದ ಈಶ್ವರಲಿಂಗವಿರಬೇಕು ಇದು.

---

42. ಪ್ರಭುಲಿಂಗಲೀಲೆಯ ಸಂಗ್ರಹ (೧೯೩೪), ಪೀಠಿಕೆ, ಪು. ೫೯.
ಇದೇ ರೀತಿಯ ವಿವರಣೆಯನ್ನು ಹಿಂದೆ ಕೆಲವರು ಸೂಚಿಸಿರುವುದುಂಟು. ಉದಾಹರಣೆಗೆ ಹಲಗೆಯದೇವರ ಶೂನ್ಯಸಂಪಾದನೆಯಲ್ಲಿ (ಮೈಸೂರು ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನ ಹಸ್ತಪ್ರತಿ) ಹೀಗೆ ಹೇಳಿದೆ–" ಸಕಲ ಪುಣ್ಯ ಪಾಪಂಗಳಿಗೆ ವೊಳಗಲ್ಲವೆಂಬುದಂ ಜಗಕ್ಕೆ ತೋರ್ಪಂತೆ ಅಲ್ಲಮನೆಂಬ ನಾಮಂ ತಳೆದು."

43. EC, XI, HK. 30

44. BKI, I, ii, 136.

45. SII, IX, i. 251.

46. EI, XI, P. 6.

47. MAR (1939), p. 88.

ಈ ಹೆಸರಿನ ಒಬ್ಬ ವಿದ್ವಾಂಸ–ಚೇರೆಯ ಅಲ್ಲಾಳಬುಧ ಎಂಬಾತ-ಚಿಕ್ಕಮಗಳೂರಿನ ೨೦ನೇ ಶಾಸನವನ್ನು ಬರೆದಿದ್ದಾನೆ.[48] ಆಂಧ್ರದ ರಾಜಮಹೇಂದ್ರಿಯನ್ನು ಹದಿನೈದನೇ ಶತಮಾನದ ಆದಿಯಲ್ಲಿ ಅಲ್ಲಾಡರೆಡ್ಡಿ ಎಂಬಾತ ಆಳುತ್ತಿದ್ದಂತೆ ತಿಳಿದು ಬಂದಿದೆ. ಅಲ್ಲಸಾನಿಪೆದ್ದನ ಎಂಬಾತ ತೆಲುಗಿನ ಪ್ರಸಿದ್ಧ ಕವಿಗಳಲ್ಲೊಬ್ಬ.

೬. ಕ್ರಿ.ಶ. ೧೧೧೨ರ ಶಾಸನದಲ್ಲಿ ‘ ಅಲ್ಲಹುಲಿಧ್ಧೇವನ್ ’ ಎಂಬುವವನ[49] ಹೆಸರಿದೆ.

೭. ಅಲ್ಲಮನ ಕಾಲದಲ್ಲೇ ಇದ್ದಿರಬಹುದಾದ ಅಲ್ಲಾಳಿಯಕ್ಕ ಎಂಬ ಹೆಸರಿನ ಶಿವಶರಣೆಯ ಹೆಸರನ್ನು ಆದಯ್ಯ ತನ್ನ ವಚನಗಳಲ್ಲಿ ಹೆಸರಿಸಿದ್ದಾನೆ.[50]

೮. ಅಲ್ಲಯ ಎಂಬ ಹೆಸರಿನ ವಿಖ್ಯಾತ ಜೈನಮುನಿ ಮತ್ತು ಗ್ರಂಥಕರ್ತೃ ಹಿಂದೆ ಇದ್ದಂತೆ ಪ್ರಾಕೃತಶಬ್ದ ಮಹಾರ್ಣವವು ಸೂಚಿಸುತ್ತದೆ.[51] ಇಲ್ಲಿಯ ‘ ಅಲ್ಲ ’ದ ಸಮಾಚಾರ ಹೇಗೊ !

‘ ಅಲ್ಲ ’ ಪದದ ನಿಷ್ಪತ್ತಿ ಇಂದಿಗೂ ದೊಡ್ಡ ಸಮಸ್ಯೆ. ಈ ಪದಕ್ಕೂ ಮಹಮ್ಮದೀಯರ ದೇವರಿಗೂ ಸಂಬಂಧ ಕಲ್ಪಿಸುವುದು ಕಷ್ಟ. ಅಲ್ಲಾ ಅಥವಾ ಅಲ್ಲಾಹ್ ಎಂಬುದು ಅಲ್–ಇಲಾಹ್ (= the God) ಎಂಬುದರ ಸಂಕ್ಷಿಪ್ತರೂಪವಾಗಿದ್ದು ಇಸ್ಲಾಂ ಧರ್ಮಸ್ಥಾಪಕನಾದ ಮಹಮ್ಮದನಿಗಿಂತ (ಕ್ರಿ.ಶ. ೭ನೇ ಶತಮಾನ) ಪ್ರಾಚೀನವಾದುದು.[52] ಭಾರತಕ್ಕೆ ಇಸ್ಲಾಂ ಧರ್ಮದ ಪ್ರವೇಶ ಎಂಟನೇ ಶತಮಾನದಲ್ಲಾದರೂ ಅದರ ಪ್ರಭಾವವು ಭಾರತದಲ್ಲಿ ಹರಡಿದ್ದು ಮೂರು ಶತಮಾನಗಳ ಬಳಿಕ; ದಕ್ಷಿಣ ಭಾರತದಲ್ಲಂತೂ ಇನ್ನೂ ಈಚೆಗೆ. ಅಲ್ಲಮ್ಮನ್ ಎಂಬ ಪದವೂ ಅಲ್ಲ–ಎಂಬ ಪದವೂ ಇದಕ್ಕಿಂತ ಬಹು ಹಿಂದೆಯೇ ನಮಗೆ ದೊರಕುವುದರಿಂದ ಅಲ್ಲ-ಕ್ಕೂ ಇಸ್ಲಾಮಿನ ‘ ಅಲ್ಲಾ ’ಕ್ಕೂ ಏನೇನೂ ಸಂಬಂಧವಿಲ್ಲವೆಂದು ಕಾಣುತ್ತದೆ. ಆಪ್ಟೆಯವರ ಸಂಸ್ಕೃತ-ಇಂಗ್ಲಿಷ್ ಕೋಶದಲ್ಲಿ ‘ ಅಲ್ಲಾ ’ ಪದವನ್ನು ಕೊಟ್ಟು ಅದರ

---

48. ಕರ್ಣಾಟಕ ಕವಿಚರಿತೆ, I (1961), ಪು. 431.

49. SII, IX, i. 187.

50. ಆದಯ್ಯನ ವಚನಗಳು (ಸಂ. ಉತ್ತಂಗಿ ಚನ್ನಪ್ಪ), ವಚನ. 287–8.

51. ಪಾಇಅ ಸದ್ದ ಮಹಣ್ಣವೊ, ಪು. 93.

ಅಲ್ಲ–ಎಂಬ ಹೆಸರಿನ ಇನ್ನೂ ಹಲವು ವ್ಯಕ್ತಿಗಳ ಉಲ್ಲೇಖವಿರುವ ಶಾಸನಗಳು ಇವು, ಅಲ್ಲಗ (EC, XII, pg. 12): ಅಲ್ಲಗೌಡ (EC, IX, Kn. 97) ; ಅಲ್ಲಾಳಭಟ್ಟ(EC, V. Hn. 133) ; ಅಲ್ಲಯ್ಯ (EC, VII. SK. 24.); ಅಲ್ಲಪ್ಪ (EC, IV, Ch. 99) ; ಅಲ್ಲಯ್ಯ (EC, IX, Bn. 24) ; ಅಲ್ಲಿಗನ್ (EC, XI, Dg. 119). ಕ್ರಿ.ಶ. ೧೦೧೦ರ ಒಂದು ಶಾಸನಧಲ್ಲಿ ‘ಅಲ್ಲೇಶ್ವರ’ ಎಂಬ ದೇವರ ಹೆಸರಿದೆ—ಶಾಸನ ಸಾಹಿತ್ಯ ಸಂಚಯ [ಸಂ. ಎ. ಎಮ್. ಅಣ್ಣೀಗೇರಿ ಮತ್ತು ಮೇವುಂಡಿ ಮಲ್ಲಾರಿ], ಪು. ೩೦.

52. Encyclopaedia of Religion and Ethics, I, p. 326.

ನಿಷ್ಪತ್ತಿಯ ವಿಷಯದಲ್ಲಿ ಸಂದೇಹವನ್ನು ವ್ಯಕ್ತಪಡಿಸಿ ತಾಯಿ, ದೇವತೆ ಎಂಬ ಅರ್ಥಗಳನ್ನು ಕೊಟ್ಟಿದೆ. ಅಥರ್ವಣವೇದದಲ್ಲಿ ಈ ಪದವು ಉಂಟು ಎಂದು ಶಬ್ದ ಕಲ್ಪದ್ರುಮ ಮತ್ತು ವಾಚಸ್ಪತ್ಯಗಳಲ್ಲಿ ಹೇಳಿದೆ. ಈ ಪದಕ್ಕೆ ಅಮ್ಮನ್ ಎಂಬ ಉತ್ತರ ಪದವು ಸೇರಿ ಅಲ್ಲಾಮ್ಮನ್ (ಅಲ್ಲಮ್ಮನ್, ಅಲ್ಲಮ) ಎಂದು ಆಯಿತೋ ಏನೋ! ಇದು ಕೇವಲ ಊಹೆ. ಅಂತೂ ಅಲ್ಲಮ ಪದದ ಪೂರ್ವಾರ್ಧದ ಮೂಲ ಇನ್ನೂ ಅಜ್ಞಾತವಾಗಿಯೇ ಉಳಿದಿದೆ.[53]

೪

ಬಾದುಬ್ಬೆ : ಪ್ರಾಚೀನ ಕರ್ಣಾಟಕದ ಈ ಸ್ತ್ರೀದೇವತೆಯ ವಿಚಾರವಾಗಿ ಸ್ವಲ್ಪ ಚರ್ಚೆ ನಡೆದಿದೆ.[54] ಆ ಚರ್ಚೆಯಲ್ಲಿ ಭಾಗವಹಿಸಿದ ವಿದ್ವಾಂಸರು ತಮ್ಮ ಲೇಖನಗಳಲ್ಲಿ ಗಮನಿಸಿರದ ಮತ್ತು ಈ ದೇವತೆಯ ಹೆಸರಿರುವ ಇನ್ನೂ ಕೆಲವು ಆಕರಗಳನ್ನು ನಿರ್ದೇಶಿಸಬಹುದು.

೧. ಪ್ರೊ॥ ಡಿ. ಎಲ್. ನರಸಿಂಹಾಚಾರ್ ಅವರ ಪ್ರಕಾರ ಹತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ರಚಿತವಾಗಿರಬಹುದಾದ ವಡ್ಡಾರಾಧನೆಯಲ್ಲಿ 'ಬಾದುಬ್ಬೆಯ ಪರ್ವ'ದ (ಪಾಠಾಂತರ. ಬಾದುಂಬೆ) ಹೆಸರಿದೆ.[55] ತನ್ನ ಅಣ್ಣನನ್ನು ಕಳೆದುಕೊಂಡ ವೀರಶ್ರೀ ಎಂಬ ರಾಣಿ ಅತಿಯಾಗಿ ಪ್ರಲಾಪಿಸುತ್ತಿರಲು ಅವಳ ಅಳುವನ್ನು ನಿಲ್ಲಿಸುವವನಿಗೆ ಐಶ್ವರ್ಯವನ್ನು ಕೊಡುವುದಾಗಿ ಅವಳ ಗಂಡ ಸಾರಿಸುತ್ತಾನೆ. ಯಾರಿಂದಲೂ ಸಾಧ್ಯವಾಗಲಿಲ್ಲ. ಕೊನೆಗೆ ಒಬ್ಬನು ಕರಿಯ ಕಚ್ಚೆ ಹಾಕಿ, ಮೈಗೆ ಮಸಿ ಬಳಿದುಕೊಂಡು ಬೋಳನಾಗಿ ಬಾಯಲ್ಲಿ ಕವಡೆಗಳನ್ನು ಹಲ್ಲಿನಂತೆ ಕಟ್ಟಿಕೊಂಡು, ಕುಂಚಕಮಂಡಲುಗಳನ್ನು ಹಿಡಿದು ಬರಲು, ನಿನ್ನ ಅಣ್ಣ ಭಟ್ಟಾರರು ಬಂದರು ಎಂದು ರಾಜ ಪರಿಹಾಸಮಾಡಿದಾಗ, ಎಲ್ಲಿ ಎಂದು ನೋಡಲು ಆ ವೇಷದವನು ('ಪಗರಣಿಗ') ಕಾಣಿಸಿಕೊಳ್ಳುತ್ತಾನೆ. ಅವಳಿಗೆ

---

53. ಅಥರ್ವಣವೇದದಲ್ಲಿ 'ಅರ್ಯಮಾ' ಎಂಬ ಸೃಷ್ಟಿದೇವತೆಯ ಹೆಸರಿದೆ. ಪಾಣಿನಿ 'ಅರ್ಯಮಾ' ಎಂಬ ಯಕ್ಷನ ಹೆಸರನ್ನು ಹೇಳುತ್ತಾನೆ. ಅರ್ಯಮದತ್ತ ಎಂಬುದು ಅರ್ಯಮ ದೇವತೆಯ ವರದಿಂದ ಹುಟ್ಟಿದ ವ್ಯಕ್ತಿಯ ಹೆಸರು [V. S. Agarwala: India as known to Pāṇini, P. 188, 358, 364]. ಈ ದೇವತೆಗೂ ಅಲ್ಲಮ ಎಂಬ ಹೆಸರಿಗೂ ಪ್ರಾಯಶಃ ಯಾವ ಸಂಬಂಧವೂ ಇಲ್ಲ.

54. ಪಿ. ಬಿ. ದೇಸಾಯಿ : ದವನದ ಹುಣ್ಣಿಮೆ (ಪ್ರಬುದ್ಧ ಕರ್ಣಾಟಕ, 32.4)
ಪಿ. ಬಿ. ದೇಸಾಯಿ : ಭಾಷಾವಿಹಾರ (ಕನ್ನಡನುಡಿ, ಮಾರ್ಚ್–ಏಪ್ರಿಲ್, 1952)
ಬೆಟಗೇರಿ ಕೃಷ್ಣಶರ್ಮ : ಬಾದುಮೆ (ಅದೇ)
ಡಿ. ಎಲ್. ನರಸಿಂಹಾಚಾರ್ : ಶಬ್ದವಿಹಾರ, ಪು. 48–53.

55. ವಡ್ಡಾರಾಧನೆ (ಸಂ. ಡಿ.ಎಲ್. ನರಸಿಂಹಾಚಾರ್, 1949), ಪು. 113.

ನಗು ಬರುತ್ತದೆ. ರಾಜನಿಗೆ ಸಂತೋಷವಾಗಿ ಆ ಹಗರಣಿಗನಿಗೆ ಬೇಕಾದಷ್ಟು ಐಶ್ವರ್ಯ ಕೊಡುತ್ತಾನೆ. ಅಂದಿನಿಂದ ಬಾದುಬ್ಬೆಯ ಹಬ್ಬವೂ ವೇಷ ಕಟ್ಟುವ ವಿನೋದಗಳೂ ಆರಂಭವಾದುವು. (" ಬಾದುಬ್ಬೆಯ ಪರ್ವಮುಂ ಪಗರಣದಾಟ ಪಾಟಮುಮಾದುವು"). ಹಲವು ಜೈನೇತರ ದೇವತೆಗಳೂ ಹಬ್ಬಗಳೂ ಮೂಲತಃ ಜೈನಧರ್ಮಕ್ಕೆ ಸಂಬಂಧಪಟ್ಟುವು ಎಂದು ಸಾಧಿಸುವ ಒಂದು ಪ್ರವೃತ್ತಿ ಹಿಂದೆ ಇದ್ದಿತು. ಇದಕ್ಕೆ ಬ್ರಹ್ಮಶಿವನ ಸಮಯ ಪರೀಕ್ಷೆಯಲ್ಲಿ ಬೇಕಾದಷ್ಟು ನಿದರ್ಶನ ಗಳಿವೆ. ಮೇಲಿ ಬಾದುಬ್ಬೆಯ ಹಬ್ಬವು ಮೂಲತಃ ಜೈನರ ಹಬ್ಬ ಎಂದು ಸಾಧಿಸುವ ಪ್ರಯತ್ನವಿದೆ. ಆದರೆ ನಮಗೆ ಮುಖ್ಯವಾದದ್ದು ಈಗಿನ ರಂಜಾನ್ ಹಬ್ಬದಲ್ಲಿನಂತೆ ಬಾದುಬ್ಬೆಯ ಹಬ್ಬದಲ್ಲಿಯೂ ವೇಷಗಳನ್ನು ಕಟ್ಟುತ್ತಿದ್ದರು ಎಂಬುದು.

೨. ಸಾಗರ ತಾಲ್ಲೂಕಿನ ಶಾಸನವೊಂದರಲ್ಲಿ[56] ' ಬಾಳುಬೆಯೇರಿ 'ಎಂದಿದೆ. ಈ ' ಬಾಳುಬೆ ' ಎಂಬುದು ಬಹುಶಃ ' ಬಾದುಬೆ ' ಎಂದಿರಬೇಕು.

೩. ಹನ್ನೆರಡನೆಯ ಶತಮಾನದ ಬ್ರಹ್ಮಶಿವನ ' ತ್ರೈಲೋಕ್ಯ ಚೂಡಾಮಣಿ ಸ್ತೋತ್ರ'ದಲ್ಲಿ ಜನರು ಪೂಜಿಸುತ್ತಿದ್ದ ದೇವತೆಗಳ ಸಾಲಲ್ಲಿ ' ಬಾದುಂಬೆ'ಯ ಹೆಸರೂ ಇದೆ.[57]

> ಕೆಱೆಯಂ ಸಂಜೆಯನಿಂದ್ರನಂ ಗಣಪನಂ ಗೌರೀಶನಂ ಭಾನುವಂ
> ಪೆಱೆಯಂ ಗೋಕುಳಮಂ ಗಿರಿಪ್ರಕರಮಂ ಬಾದುಂಬೆಯಂ ಕಾಂತಿಯಂ
> ತೊಱೆಯಂ ವಾರ್ಧಿಯನಯ್ದು ಪಾಲುಮರನಂ ದೈವಂಗಳೆಂದಿಂತು ಕೊ
> ರ್ತಱಿಗುತ್ತಿರ್ಪವರೆಂತು ಮುಕ್ತಿವಡೆವರ್ ತ್ರೈಲೋಕ್ಯ ಚೂಡಾಮಣಿ ॥

೪. ರಾಘವಾಂಕನ (ಸು. ೧೨೩೦) ಸಿದ್ಧರಾಮಚಾರಿತ್ರದಲ್ಲಿ ಬಾದುಮೆಯ ಹೆಸರಿದೆ.[58]

> ಪರಿವಿಡಿಯ ಕೇಳಿ ಪ್ರಸಾದವಸುಗೆಯನಿತ್ತು
> ಹರಮಲ್ಲಿಕಾರ್ಜುನಂಗಷ್ಟಪೂಜೆಯ ಕೊಟ್ಟು
> ಪರಿಸೂತ್ರದೊಳಗಿದ್ದ *ಬಾದುಮೆ*ಯ ಕಟ್ಟ ತನಗೊಡವರ್ಪ ಗುಡ್ಡರುಗಳ |
> ಇರಹೇಳ್ದು ಮಧ್ಯರಾತ್ರಿಯೊಳು ಕ್ಷೇತ್ರವನು ಬಲ
> ವರುತ ಕೈಲಾಸಕ್ಕೆ ಹೋಗಿ ಶಿವಗೆಱಗಿ ಶ್ರೀ
> ಗುರು ನಾಳೆ ವೈಶಾಖ ಪೌರ್ಣಮಿಯ ಪೂಜೆಗೆಂದಿರದೆ ಬಹ ಸಮಯದೊಳಗೆ ॥
> (** ಪಾಠಾಂತರಗಳು. ಬಾದುವೆ, ಬಾಧುಮೆ, ಬಾದುಮಿ)

ಸೊನ್ನಲಿಗೆಯ ಮಲ್ಲಿಕಾರ್ಜುನ ದೇವಸ್ಥಾನದ ಒಳವಲಯದಲ್ಲಿ (" ಪರಿ

---

56 EC, VIII, Sa. 109, 1042 A. D.

57 ಕರ್ಣಾಟಕ ಕವಿಚರಿತೆ, I (1961), ಪು. 134

58 ಸಿದ್ಧರಾಮಚಾರಿತ್ರ (ಸಂ. ಟಿ. ಎಸ್. ವೆಂಕಣ್ಣಯ್ಯ ಮತ್ತು ಡಿ. ಎಲ್. ನರಸಿಂಹಾಚಾರ್), 8. 61.

ಸೂತ್ರ ") ಬಾದುಮೆ ದೇವತೆ ಇದ್ದಳೆಂಬುದು ಇದರಿಂದ ತಿಳಿದುಬರುತ್ತದೆ. ಅದನ್ನು ಸಿದ್ಧರಾಮನು 'ಕಟ್ಟಿ'ದ ವಿಷಯವನ್ನು ವಿವರಿಸುವುದು ಕಷ್ಟವೇ.

೫. ಹರಿಹರನ (ಸು. ೧೨೩೦) ಶಂಕರದಾಸಿಮಯ್ಯನ ರಗಳೆಯಲ್ಲಿ[59] ಈ ಮಾತುಗಳು ಬರುತ್ತವೆ—" ಬಾದುಮಯ್ಯನಂ ಬಱಸಿಡಿಲ್ ಪೊಡೆದಂತಾಗಿ ನೃಸಿಂಹ ಪ್ರತಿಮೆ ಧರೆಯಮೇಲುದಿರೆ". ಬಾದುಮೆ ದೇವತೆಯ ಹೆಸರಿಟ್ಟುಕೊಂಡಿರುವ ಒಬ್ಬ ಪುರುಷನನ್ನು (ಅಥವಾ ಪುರುಷದೇವತೆಯನ್ನು ?) ಸೂಚಿಸುತ್ತದೆಯೇ ? ಅಂತೂ 'ಬಾದುಮಯ್ಯ' ಎಂಬುದೊಂದು ಸದ್ಯಕ್ಕೆ ಸಮಸ್ಯೆಯಾಗಿ ಉಳಿಯುತ್ತದೆ.

೬. ಕ್ರಿ. ಶ. ೧೨೦೩ರ ಶಾಸನದಲ್ಲಿ[60] 'ಬಾದುವೆಯ ನಾಯಕ' ಎಂಬ ವ್ಯಕ್ತಿಯ ಹೆಸರಿದೆ. ಇದು 'ಬಾದುವಯ್ಯ ನಾಯಕ' ಎಂಬುದರ ರೂಪಾಂತರ. ಇಲ್ಲಿ ಬಾದುವೆ ದೇವತೆಯ ಹೆಸರನ್ನು ಕಾಣಬಹುದು.

ಪ್ರಾಚೀನ ಕರ್ಣಾಟಕದ ಬಹು ಪ್ರಸಿದ್ಧ ದೇವತೆಯಾಗಿದ್ದ ಬಾದುಬ್ಬೆಯ ವಿಷಯವು ನಮ್ಮ ವಿದ್ವಾಂಸರ ಗಮನವನ್ನು ಸೆಳೆದಿರುವುದು ಸಹಜವೇ. ಈ ದೇವತೆ ವಸಂತಾಂಬೆ ಇರಬಹುದೇ ಎಂದು ಡಾ. ಪಿ. ಬಿ. ದೇಸಾಯಿಯವರು ಶಂಕಿಸಿದರೆ,[61] ಅವಳು ದುರ್ಗಿಯ ನಾಮಾಂತರಗಳಲ್ಲೊಂದಾದ ಭದ್ರಾಂಬಾ ಇರಬಹುದು ಎಂದು ಪ್ರೊ|| ಡಿ. ಎಲ್. ನರಸಿಂಹಾಚಾರ್ಯರು ಊಹಿಸುತ್ತಾರೆ.[62] ಈ ಇಬ್ಬರು ಹಿರಿಯ ವಿದ್ವಾಂಸರ ಊಹೆಗಳಿಗೆ ನಮ್ಮದೊಂದು ಸಣ್ಣ ಊಹೆಯನ್ನು ಸೇರಿಸುತ್ತೇವೆ. ಆ ದೇವತೆ ಯಾರಿರಬಹುದು ಎಂಬ ವಿವರಣೆಗೆ ಹೆಚ್ಚುದೂರ ಹೋಗಬೇಕಾಗಿಲ್ಲವೆಂದು ನಮಗನ್ನಿಸುತ್ತದೆ. ಬಾದಾಮಿಯ ಬಳಿ ಈಗಲೂ ಪ್ರಸಿದ್ಧವಾಗಿರುವ ಬನಶಂಕರಿಗೆ ಬನದಬ್ಬೆ ಎಂಬುದು ಮತ್ತೊಂದು ಹೆಸರು. ಶಾಸನಗಳಲ್ಲಿ 'ಬನದದೇವಿ' ಎಂದು ಕರೆದಿದೆ. ಬಾದಾಮಿ ಅಮಾವಾಸ್ಯೆಯಲ್ಲಿ ಅಲ್ಲಿ ವಿಶೇಷಪೂಜೆ ಉಂಟು. ಆಕೆ ಒಂದು ರೀತಿಯಲ್ಲಿ ಬಾದಾಮಿಯ ಅಧಿದೇವತೆ. ತಮ್ಮ ಹೊಲಗಳು ಹೆಚ್ಚು ಬೆಳೆಯಲಿ ಎಂದು ರೈತರು 'ಬಾಡುಬ್ಬೆ'ಗೆ (ಇದರ ಸರಿಯಾದ ಪಾಠ 'ಬಾದುಬ್ಬೆ' ಇರಬೇಕು) ಹರಸಿಕೊಳ್ಳುತ್ತಿದ್ದ ಸಂಪ್ರದಾಯವೊಂದನ್ನು ಹನ್ನೆರಡನೇ ಶತಮಾನದ ಬ್ರಹ್ಮಶಿವನು ಹೆಸರಿಸುತ್ತಾನೆ.[63] ಈ ಸಸ್ಯಾಧಿದೇವತೆಯಾದ ಬಾದುಬ್ಬೆಯೂ ವನ

---

[59] ಹರಿಹರನ ಮೂರು ರಗಳೆಗಳು (ಸಂ. ಎಸ್. ಎಸ್. ಮಾಳವಾಡ)

[60] EC, VI, Kd. 36.
ಅಂಗ್ಲ ಪಾಠದಲ್ಲಿ 'ಬಾದುವೆಯ ನಾಯಕ' ಎಂದಿದೆ. ಕನ್ನಡ ಪಾಠದಲ್ಲಿ 'ಒಂದು ವೆಯ ನಾಯಕ' ಎಂದಿದೆ. 'ಬಾದುವೆಯ' ಎಂಬಲ್ಲಿನ 'ಯ' ಎಂಬುದು 'ಅಯ್ಯ' ಎಂಬುದರ ಸವೆದ ರೂಪವೆಂಬುದು ಅಲ್ಲಿ ಬರುವ ಉಳಿದ ಹೆಸರುಗಳನ್ನು ನೋಡಿದರೆ ಸ್ಪಷ್ಟವಾಗುತ್ತದೆ.

[61] ಪ್ರಬುದ್ಧ ಕರ್ಣಾಟಕ, 32. 4, ಪು. 81–2.

[62] ಶಬ್ದ ವಿಹಾರ, ಪು. 48–53.

[63] ಸಮಯಪರೀಕ್ಷೆ (ಸಂ. ಬಿ. ಎಸ್. ಕುಲಕರ್ಣಿ), 9. 42.

ದೇವತೆ ಬನದಬ್ಬೆಯೂ (=ಬನಶಂಕರಿ) ಒಂದೇ ಆಗಿರುವಂತೆ ಕಾಣುತ್ತದೆ. ಈಗಲೂ ಬನದಮ್ಮ (ಬಂದಮ್ಮ), ಬಂದಜ್ಜಿ ಎಂಬ ಹೆಸರನ್ನು ಸ್ತ್ರೀಯರು ಇಟ್ಟುಕೊಳ್ಳುವುದು ಬನದ ಪೂಜೆ ಕರ್ಣಾಟಕದಲ್ಲಿ ಬಹುವಾಗಿ ಪ್ರಚಲಿತವಾಗಿದ್ದಿತೆಂಬುದಕ್ಕೆ ಸಾಕ್ಷಿಯಾಗಿದೆ. ಬಹುಶಃ ಬಾದಾಮಿ ಸಮೀಪದ ಬನಶಂಕರಿ ಅಥವಾ ಬನದಬ್ಬೆಯಿಂದಲೇ ಆ ಊರಿಗೆ ಆ ಹೆಸರು ಬಂದಿರಲು ಸಾಧ್ಯ[64]. ವಾತಾಪಿ ಎಂಬ ಹೆಸರೇನೋ ಕ್ರಿ. ಶ. ೬೧೦ರ ಶಾಸನದಲ್ಲಿ ಕಾಣಬರುತ್ತದೆ[65]. ಅದೇ ಶತಮಾನದ ಶಾಸನವೊಂದರ ಹಾಳಾಗಿರುವ ಕೊನೆಯ ಐದು ಸಾಲುಗಳಲ್ಲಿ[66] (ಈ ಭಾಗ ' ಪ್ರಾಕೃತ ' ಎಂದರೆ ಕನ್ನಡದಲ್ಲಿದೆ) ' ಬಾದಾವಿ ' ಎಂಬ ರೂಪವು ಸಿಗುವುದರಿಂದ ' ಬಾದಾವಿ ' ಎಂಬ ರೂಪವು ' ವಾತಾಪಿ 'ಯಷ್ಟೇ ಪ್ರಾಚೀನವಾದುದು. ವಾತಾಪಿ ಎಂಬುದು ಬಾದಾವಿಯ ಸಂಸ್ಕೃತೀಕರಣವಾಗಿದ್ದು, ವಾತಾಪಿ ಇಲ್ವಲರ ಕಥೆಯನ್ನು ' ವಾತಾಪಿ ' ಎಂಬ ರೂಪದ ವಿವರಣೆಗೆ ಅನ್ವಯಿಸಿಕೊಂಡಿರಬಹುದು.

ಬನದಬ್ಬೆಯೇ ಬಾದುಬ್ಬೆ ಆಗಿರಬಹುದು ಎಂಬುದಕ್ಕೆ ಒಂದು ಪ್ರಬಲವಾದ ಆಧಾರವನ್ನು ಕೊಡಬಹುದು. ಬಾದುಬ್ಬೆಯನ್ನು ಹೆಸರಿಸುವ ಬಸವಣ್ಣನವರ ವಚನ ಈ ರೀತಿ ಇದೆ : [67]

> " ಗೀಜಗನ ಗೂಡು, ಕೋಡಗದಣಲ ಸಂಚ,
> ಬಾದುಮೆಯ ಮದುವೆ, ಬಾವುಲ ಬಿದ್ದಿನಂತೆ,
> ಜೂಜುಗಾರನ ಮಾತು, ಬೀದಿಯ ಗುಂಡನ ಸೊಬಗು,
> ಓಡಿನೊಳಗಗೆಯ ಹೊಯ್ದಂತೆ ಕಾಣಿರೋ !
> ಶಿವನಾದಿಯಂತವನಱಿಯದವನ ಭಕ್ತಿ
> ಸುಖಶೋಧನೆಗೆ ಮದ್ದಕೊಂಡಂತೆ
> ಕೂಡಲಸಂಗಮದೇವಾ ! "

ಇಲ್ಲಿ ಅನೇಕ ವ್ಯರ್ಥವಸ್ತುಗಳನ್ನು ತಿಳಿಸಿ ಅವೆಲ್ಲವೂ ಮಡಕೆಯ ಚೂರಿನ ಮೇಲೆ ಹುಟ್ಟುಹಾಕಿದ ಸಸಿಯಂತೆ ನಿಷ್ಫಲವೆಂದೂ, ಶಿವನ ಆದಿ ಮತ್ತು ಅಂತ್ಯಗಳನ್ನು ಅರಿಯದವನ ಭಕ್ತಿಯೂ ವ್ಯರ್ಥ ಮತ್ತು ನಿಷ್ಫಲವೆಂದೂ ಬಸವಣ್ಣನವರ ಅಭಿಪ್ರಾಯ. ಇಲ್ಲಿಯ ' ಬಾದುಮೆಯ ಮದುವೆ ' ಎಂದರೇನು ? ಶಿವಮೊಗ್ಗ ಜಿಲ್ಲೆಯ ಉತ್ತರದ ಶಿಕಾರಿಪುರದ ತಾಲ್ಲೂಕಿನಲ್ಲಿ ಬನಶಂಕರಿಯ ಆರಾಧಕರು ಬಹುಮಂದಿ ಇದ್ದಾರೆ. ಅಲ್ಲಿ ಬನಶಂಕರಿಗೆ ಮೀಸಲಾದ ಹಲವು ದೇವಸ್ಥಾನಗಳಿವೆ. ಅಂತಹ ದೇವಸ್ಥಾನ

---

64 ಇದೇ ಊಹೆಯನ್ನು ಡಾ. ಪಿ. ಬಿ. ದೇಸಾಯಿಯವರು ಪ್ರಬುದ್ಧ ಕರ್ಣಾಟಕದ ತಮ್ಮ ಲೇಖನದಲ್ಲಿ ಮಾಡಿದ್ದಾರೆ (ಪು. 82).

65 KI, I No. 1, 610 A. D.

66 IA, X, P. 60.

67 ಬಸವಣ್ಣನವರ ಷಟ್ಸ್ಥಳದ ವಚನಗಳು(ಸಂ: ಶಿ. ಶಿ. ಬಸವನಾಳ, 1954), ಪು. 166.

ವೊಂದರಲ್ಲಿ ಬನಶಂಕರಿಯ ಸುಂದರ ವಿಗ್ರಹವೊಂದು ಇದ್ದಿತೆಂದೂ, ಅದರ ಹೆಗಲ ಮೇಲೆ ಚಾಟಿಯಿದ್ದು, ಆ ದೇವತೆಯು ಕಾಡಿನಲ್ಲಿ ಮೇಯುವ ಹಸುಗಳ ಅಧಿದೇವತೆ ಯೆಂದು ಜನರು ನಂಬಿದ್ದರೆಂದೂ, ಆ ವಿಗ್ರಹ ಒಡೆದು ಹೋಗಿ ಅದರ ಸ್ಥಾನದಲ್ಲಿ ಬೇರೊಂದು ಮೂರ್ತಿಯನ್ನು ನಿಲ್ಲಿಸಿರುವುದಾಗಿಯೂ ತಿಳಿದುಬಂದಿದೆ. ಬನ ಶಂಕರಿಯು ಹರಿಹರ ಬ್ರಹ್ಮಾದಿಗಳಿಗೂ ಮೂಲಳಾದ ಆದಿಶಕ್ತಿಯೆಂದು ಅವಳ ಭಕ್ತರು ಈಗಲೂ ಭಕ್ತಿಯಿಂದ ಅವಳ ಮಾಹಾತ್ಮೆ ಇರುವ ದೇವೀಮಾಹಾತ್ಮೆ ಯನ್ನು ಓದುತ್ತಾರೆ, ಓದಿಸಿ ಕೇಳುತ್ತಾರೆ. ಅವರ ಪ್ರಕಾರ ಆದಿಶಕ್ತಿಯು ಹೆಸರಲ್ಲಿ ಸ್ತ್ರೀಯಾದರೂ ಅವಳು ಗಂಡಸೂ ಅಲ್ಲ, ಹೆಂಗಸೂ ಅಲ್ಲ, ನಪುಂಸಕವೂ ಅಲ್ಲ. ಎಲ್ಲಕ್ಕೂ ಮೂಲಳಾದ ಅವಳಿಗೆ ಮದುವೆಯಾಗುವ ಸಾಧ್ಯತೆ ಹೇಗೆ? ಆದ್ದರಿಂದ ಅವಳಿಗೆ ಮದುವೆ ಇಲ್ಲ.[68] 'ಬಾದುಮೆಯ ಮದುವೆ' ಎಂಬುದು 'ಗಣಪತಿಯ ಮದುವೆ' ಎಂಬ ಉಕ್ತಿಗೆ ಸಮಾನವಾದುದು. ಹನ್ನೆರಡನೇ ಶತಮಾನದ ಜನರ ದೇವತಾರಾಧನೆ, ನಂಬಿಕೆಗಳನ್ನು ಆ ವಚನದಲ್ಲಿ ಬಸವಣ್ಣನವರು ಹಾಸ್ಯಮಾಡು ತ್ತಿರುವಂತೆ ಕಾಣುತ್ತದೆ. ಬನದಬ್ಬೆ (=ಬನಶಂಕರಿ) ಎಂಬುದೇ ಬಾದುಮೆ(ಬ್ಬೆ) ಎಂಬ ನಮ್ಮ ಊಹೆಯನ್ನು ಮೇಲಿನ ವಿವರಣೆ ಸಮರ್ಥಿಸುತ್ತದೆ.

ಈ ದೇವತೆಯ ಹೆಸರಲ್ಲಿ ಒಂದು ಹಬ್ಬವೇ ನಡೆಯುತ್ತಿದ್ದಿತು. ವಡ್ಡಾರಾಧ ನೆಯು ಇದನ್ನು ಸೂಚಿಸಿ ಆ ಸಮಯದಲ್ಲಿ ವೇಷವಿನೋದಗಳು ನಡೆಯುತ್ತಿದ್ದುದನ್ನು ನಿರೂಪಿಸುತ್ತದೆ ಎಂಬ ಅಂಶವು ಹಿಂದೆಯೇ ಬಂದಿದೆ. ಈ ಹಬ್ಬವು ಮೇ ತಿಂಗಳಿನಲ್ಲಿ ನಡೆಯುತ್ತಿದ್ದಿತು ಎಂಬುದಕ್ಕೆ ಒಂದು ಶಾಸನಾಧಾರವಿದೆ. ಬಾದುಬ್ಬೆಯಮಾ ವಾಸ್ಯೆಯ ದಿನವೆಂದು ಹೇಳಿ ಅದು ಕೊಡುವ ತಾರೀಕು ಕ್ರಿ. ಶ. ೧೦೫೪ ರ ಮೇ ಹತ್ತಕ್ಕೆ ಸರಿಹೋಗುತ್ತದೆ.[69] ಈಗಲೂ ವೈಶಾಖದ ಅಮಾವಾಸ್ಯೆಯಂದು ಒಂದು ಹಬ್ಬದ ಆಚರಣೆ ಇದೆ. ಅದರ ವಿವರಗಳು ಈ ರೀತಿ ಇವೆ—"ದೇವರ ಮನೆಯಲ್ಲಿ ಅಥವಾ ಅನುಕೂಲ ಸ್ಥಳದಲ್ಲಿ ಗೋಡೆಗೆ ಚಿಕ್ಕದಾದ ಒಂದು ಹಂದರ (ಮಂಟಪ) ವನ್ನು ಕಟ್ಟುವರು. ಅದನ್ನು ಬೇವಿನ ಸೊಪ್ಪಿನಿಂದ ಹೊಚ್ಚಿ ಅಲಂಕರಿಸುವರು. ನದಿಯಿಂದಲಾಗಲಿ ಹೊಲದಿಂದಲಾಗಲಿ ಐದು ಚಿಕ್ಕ ಕಲ್ಲುಗಳನ್ನು ಆಯ್ದು ತಂದು, ಅವುಗಳನ್ನು ತೊಳೆದು ಒರಸಿ, ಅವುಗಳಿಗೆ ಸುತ್ತಲೂ ಸುಣ್ಣದ ಪಟ್ಟೆಯನ್ನು ಹಚ್ಚಿ, ಹಂದರದೊಳಕ್ಕೆ ಇರಿಸಿದ ಪೀಠದ ಮೇಲೆ ಸಾಲಾಗಿ ಇಡುವರು. ಯಥಾಕ್ರಮ ಮನೆಯ ಯಜಮಾನ ಅವುಗಳನ್ನು ಪೂಜಿಸಿ ಹೂರಣದ ಹೋಳಿಗೆಯ ನೈವೇದ್ಯ ಮಾಡುವನು. ನೈವೇದ್ಯ ಮಾಡಿದ ಹೋಳಿಗೆಯನ್ನು ಆ ಬೇವಿನ ಹಂದರದ ಮೇಲೆ ಅಗಲವಾಗಿ ಬಿಚ್ಚಿ ಹೊದಿಸುವನು. ಪ್ರತ್ಯೇಕವಾದ ಎಡೆಯಲ್ಲಿ ಬಡಿಸುವ

---

[68] ಈ ಪ್ಯಾರಾದ ಅನೇಕ ವಿಷಯಗಳನ್ನು ವಿದ್ಯಾರ್ಥಿಮಿತ್ರ ಶ್ರೀ ಸಿ. ಓಂಕಾರಪ್ಪ, ಎಂ.ಎ. ಅವರು ಒದಗಿಸಿಕೊಟ್ಟರು.

[69] BKI, I, i. 92, 1054 A.D.

ಈ ನೈವೇದ್ಯವನ್ನು 'ಬಾದಮೀ ನೈವೇದ್ಯ' ಎಂದು ಹೇಳುವರು. ಪೂಜೆಯಾದ ಮೇಲೆ ಎಲ್ಲರಿಗೂ ಹಬ್ಬದ ಊಟವಾಗುವುದು. ಇದಿಷ್ಟೇ ಹಬ್ಬದ ಆಚರಣೆ. ಮತ್ತಾವ ವ್ರತವಿಲ್ಲ; ಕತೆಯಿಲ್ಲ"[70].

ವೈಶಾಖದ ಅಮಾವಾಸ್ಯೆಯ ದಿನ ಬಾದಾಮಿಯ ಬನಶಂಕರಿಗೆ ವಿಶೇಷ ಪೂಜೋತ್ಸವ ನಡೆಯುವುದರ ಮೂಲಕ ಈ ಅಮಾವಾಸ್ಯೆಗೆ 'ಬಾದಮಿ ಅಮಾವಾಸ್ಯೆ' ಎಂಬ ಹೆಸರು ಬಂದಿದೆಯೆಂಬ ಸಾಮಾನ್ಯ ಜನರ ನಂಬಿಕೆಯನ್ನು ಡಾ|| ಪಿ. ಬಿ. ದೇಸಾಯಿಯವರು ಒಪ್ಪಿಕೊಳ್ಳುವುದಿಲ್ಲ. ಆದರೆ ಆ ಜನರ ವಿವರಣೆಯಲ್ಲಿ ಸತ್ಯವಿರುವಂತಿದೆ. ವೈಶಾಖ ಅಮಾವಾಸ್ಯೆಯ ದಿನ ಬಾದುಬ್ಬೆಯ ಪೂಜೆ ಹಿಂದೆ ನಡೆಯುತ್ತಿದ್ದುದು, ಈಗಲೂ ಆ ಅಮಾವಾಸ್ಯೆಯನ್ನು 'ಬಾದಮಿ ಅಮಾವಾಸ್ಯೆ' ಎಂದು ಕರೆಯುತ್ತಿರುವುದು, ಆ ದಿನ ಬನಶಂಕರಿಗೆ ವಿಶೇಷ ಪೂಜೆ ನಡೆಯುವುದು—ಇವೆಲ್ಲಾ ಬನಶಂಕರಿ(=ಬನದಬ್ಬೆ) ಮತ್ತು ಬಾದುಬ್ಬೆ ಒಂದೇ ಎಂಬುದನ್ನು ಸೂಚಿಸುವುದಿಲ್ಲವೇ? ಆದರೆ ಬನದಬ್ಬೆ ಮತ್ತು ಬಾದುಬ್ಬೆಯರು ಒಂದೇ ಎಂದು ಹೇಳಲು ಇರುವ ಎರಡು ತೊಂದರೆಗಳನ್ನು ಇಲ್ಲಿ ಸೂಚಿಸಬಹುದು. ಒಂದು–ಹದಿಮೂರನೇ ಶತಮಾನದ ಕನ್ನಡ ಟೀಕೆಯೊಂದರಲ್ಲಿ ಬನದಬ್ಬೆ ಮತ್ತು ಬಾದುಬ್ಬೆಯರ ಹೆಸರುಗಳು ಪ್ರತ್ಯೇಕವಾಗಿ ಬಂದಿವೆ. ಮತ್ತೊಂದು–ಭಾಷಾಶಾಸ್ತ್ರೀಯವಾಗಿ ಬನದಬ್ಬೆ>ಬಾದುಬ್ಬೆ ಎಂಬುದನ್ನು ಸಮರ್ಪಕವಾಗಿ ತೋರಿಸುವುದು ಅಸಾಧ್ಯವಲ್ಲವಾದರೂ ಕಷ್ಟ.

ಹಳಗನ್ನಡದಲ್ಲಿ ಬನದಬ್ಬೆ ಸ್ತ್ರೀವಾಚಕವಾದರೆ 'ಬನದಮ್ಮನ್' ಪುರುಷ ವಾಚಕವಾಗಬೇಕು. 'ಬಾದಮ್ಮನ್' ಎಂಬ ಒಂದು ಹೆಸರು ಶಾಸನದಲ್ಲಿ ಸಿಕ್ಕುತ್ತದೆ.[71] ಬಹುಶಃ ಇದು ಬನದಮ್ಮನ್ ಎಂಬುದರ ರೂಪಾಂತರವಿರಬೇಕೆಂದು ಊಹಿಸಬಹುದು.

ಭಾರತದಲ್ಲಿ ಅತ್ಯಂತ ಪ್ರಾಚೀನಕಾಲದಿಂದಲೂ ಕಾಡು ಅಥವಾ ತೋಪು ಅತ್ಯಂತ ಪವಿತ್ರವಾದ ಸ್ಥಳವೆಂದೂ, ದೈವದ ನಿವಾಸಸ್ಥಾನವೆಂದೂ ಪರಿಗಣಿತವಾಗಿದೆ. ವನ, ನದಿ, ಶೈಲ, ನಿರ್ಝರಗಳ ಸಮೀಪದಲ್ಲಿ, ಉದ್ಯಾನಗಳಿರುವ ಪಟ್ಟಣಗಳಲ್ಲಿ ದೇವತೆಗಳು ನಿತ್ಯವೂ ರಮಿಸುವರು ಎಂದು ಬೃಹತ್ಸಂಹಿತೆ ಮತ್ತು ಭವಿಷ್ಯ ಪುರಾಣಗಳಲ್ಲಿ ಹೇಳಿದೆ. ದ್ರಾವಿಡ ದೇಶದಲ್ಲಂತೂ ವೃಕ್ಷಪೂಜೆಯೇ ಅತ್ಯಂತ ಪ್ರಾಚೀನವಾದುದು ಎಂದು ಡಾ|| ವೆಂಕಟರಮಣಯ್ಯನವರ ಅಭಿಪ್ರಾಯ.[72]

---

70 ಬೆಟಗೇರಿ ಕೃಷ್ಣಶರ್ಮ: ಬಾದುಮೆ (ಕನ್ನಡ ನುಡಿ, ಮಾರ್ಚಿ–ಏಪ್ರಿಲ್, 1952), ಪು. ೯೪–೫.

71. SII, IX, I, 59, c. 925 A. D.

72. N. Venkataramanayya: An Essay on the Origin of the South Indian Temple, P. 76.

ಬನದೇವಿಯ ಉಪಾಸನೆ (cult) ಉತ್ತರ ಕರ್ಣಾಟಕದಲ್ಲಿ ಹಿಂದೆ ಪ್ರಬಲವಾಗಿದ್ದು ಈಗಲೂ ತಕ್ಕಮಟ್ಟಿಗೆ ಉಳಿದುಕೊಂಡು ಬಂದಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಬೇಡಿತಿ (<ಬೇಡ) ಎಂಬುವವಳು ಕಾಡಿನ ದೇವತೆ. ಅವಳಿಗಾಗಿ ನಡೆಯುವ ಬೇಡಿತಿ ಹಬ್ಬದಲ್ಲಿ ಪ್ರಾಣಿಗಳನ್ನು ಬಲಿಯಾಗಿ ಕೊಡುವ ಸಂಪ್ರದಾಯವಿದೆ. ಮಧ್ಯ ಕರ್ಣಾಟಕದಲ್ಲಿ, ಎಂದರೆ ದಾವಣಗೆರೆಯ ಸುತ್ತಮುತ್ತ ಈ ಆರಾಧನೆ ಇಲ್ಲದಿದ್ದರೂ ಅದು ಒಮ್ಮೆ ಇದ್ದಿತು ಎಂಬುದಕ್ಕೆ ಈಗಿನ ಬನದಮ್ಮ (ಬಂದಮ್ಮ), ಅಡವೆಪ್ಪ, ಕಾಡಪ್ಪ ಮುಂತಾದ ಹೆಸರುಗಳು ಸಾಕ್ಷಿಯಾಗಿ ನಿಂತಿವೆ. ದಕ್ಷಿಣ ಕರ್ಣಾಟಕದಲ್ಲಿ ಈ ಉಪಾಸನೆ ಈಗಲೂ ಜೀವಂತವಾಗಿದೆ. ಅರಕಲಗೂಡು ತಾಲ್ಲೂಕಿನಲ್ಲಿ ಊರ ಹೊರಗಿನ ತೋಪಿನಲ್ಲಿ ಒಂದು ಮರದ ಕೆಳಗೆ ಕಲ್ಲನ್ನಿಟ್ಟು ಅದನ್ನು ಬನದಮ್ಮ ಎಂಬ ಹೆಸರಿನಲ್ಲಿ ಪೂಜಿಸುವ ಸಂಪ್ರದಾಯವಿದೆ. ವರ್ಷಕ್ಕೊಮ್ಮೆ ಆ ದೇವಿಗೆ ಪೂಜೆ ಬಲಿಗಳು ನಡೆಯುತ್ತವೆ. ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಬನದವ್ವ (ಬಂದಮ್ಮ) ಅಥವಾ ತೋಟದಮ್ಮನ ಪೂಜೆ ಪ್ರಚಲಿತವಾಗಿದೆಯೆಂದು ತಿಳಿದುಬಂದಿದೆ. ಕೋಲಾರದ ಕಡೆ ಊರ ಹೊರಗೆ ಕಾಡಿನಲ್ಲಿ ಕಾಟಪ್ಪರಾಯ (<ಕಾಡು) ಎಂಬ ಪುರುಷದೇವತೆಯ ಆರಾಧನೆ ಇದೆಯೆಂಬುದಾಗಿ ತಿಳಿದು ಬರುತ್ತದೆ. ಇದಕ್ಕೆ ಬ್ಯಾಟಿರಾಯಸ್ವಾಮಿ ಎಂಬ ಹೆಸರೂ ಉಂಟು. (ಹೋಲಿಸಿ–ಮೇಲಿನ 'ಬೇಡಿತಿ'). ಹೀಗೆ ಕರ್ಣಾಟಕದಲ್ಲಿ ಬಹು ಪ್ರಾಚೀನ ಕಾಲದಿಂದಲೂ ಉಳಿದುಕೊಂಡು ಬಂದಿರುವ ಬನದ ಆರಾಧನೆ ಈಗಲೂ ಪ್ರಚಲಿತವಾಗಿರುವ ಜೀವಂತ ಸಂಪ್ರದಾಯವಾಗಿದೆ.

—ಎಂ. ಚಿದಾನಂದ ಮೂರ್ತಿ

ಸಂಕೇತಗಳು

1. SII = South Indian Inscriptions.
2. BKI = Bombay Karnatak Inscriptions.
3. MAR = Mysore Archaeological Report.
4. EI = Epigraphia Indica.
5. IA = Indian Antiquary.
6. EC = Epigraphia Carnatica.
7. KI = Karnatak Inscriptions.

ತಿರುಗಿ ಹೊಡೆದಿತ್ತು ಬರಸಿಡಿಲು

ತೌಳವ ಸಾಮ್ರಾಜ್ಯದ ಭೀಮಪುರುಷ ಶ್ರೀ ಶ್ರೀ ನಂದೂರಾಯನು ಓಲಗ ಶಾಲೆಯಲ್ಲಿ ಕುಳಿತಿದ್ದನು. ಅವನ ಕಟ್ಟುಮಸ್ತಾದ ದೇಹಕ್ಕೆ ಮತ್ತಷ್ಟು ಭೀಕರತೆಯನ್ನು ಹೆಚ್ಚಿಸುವಂತಿದ್ದ ಆ ಹುರಿಮಿಾಸೆಯನ್ನೆ ಗಳಿಗೆ–ಗಳಿಗೆಗೂ ತೀಡಿಕೊಳ್ಳುತ್ತಾ ಆ ರೌದ್ರಮುಖದಲ್ಲಿ ಬೆಂಕಿ ಕಾರುವಂತಿದ್ದ ಕಿಡಿಗಣ್ಣುಗಳಿಂದ ಓಲಗವನ್ನೊಮ್ಮೆ ದಿಟ್ಟಿಸಿದ.

ಖುದ್ದಾಗಿ ಕರೆಸಿದ ನಾಡಿನ ನಾಲ್ಕನೆಯ ಸುಬೇದಾರರು, ಪಟ್ಟಣ ಶೆಟ್ಟಿಗಳು, ಕೊತ್ವಾಲರು ಇವರ ಸಮ್ಮುಖದಲ್ಲಿ ರಾಯನು ತನ್ನ ಕೋಪೋದ್ರಿಕ್ತ ಮುಖಮುದ್ರೆಯಿಂದ ಒಮ್ಮೆ ರಾಜಸಭೆಯನ್ನು ದಿಟ್ಟಿಸಿದ.

ಇಡೀ ಸಭೆಗೆ ರಾಜನ ಈ ಮಹಾರೌದ್ರದ ಅರ್ಥವಾಗಲಿಲ್ಲ. ರಾಜನು ನಿರಂಕುಶಮತಿಯೂ, ಮಹಾಛಲವಾದಿಯೂ, ಸಿಡುಕಿನ ಜ್ವಾಲಾಮುಖಿಯೂ ಆಗಿದ್ದನು. ಕಾರಣವಿರಲಿ, ಇಲ್ಲದಿರಲಿ ನಂದೂರಾಯನು ಸಿಡಿದೆದ್ದರೆ ಅದು ಭೀಕರ ಅಂತ್ಯದಲ್ಲೇ ಪರ್ಯಾವಸಾನಗೊಳ್ಳುವುದೆಂದು ಎಲ್ಲರೂ ಬಲ್ಲರು.

ಪ್ರತಿ ಬಾರಿಯೂ ಅವನ ಸಿಟ್ಟಿನ ಶಮನಾಂತ್ಯದಲ್ಲಿ ರಕ್ತದ ಓಕುಳಿ ಹರಿಯದೆ ಇದ್ದುದಿಲ್ಲ. ಅಂತಹ ಮಹಾ ಕ್ರೂರಿಯಾದ ನಂದೂರಾಯನು ಮಹಾ ಬಲಿಷ್ಠನಾಗಿ ಎಲ್ಲ ಅಧಿಕಾರವನ್ನೂ ಏಕೈಕಸೂತ್ರದಿಂದ ನಿರ್ವಹಿಸುತ್ತಿದ್ದುದರಿಂದ ಹಿತಶತ್ರುಗಳ ಯಾವ ಕಾಯಕವೂ ಅವನ ರಾಜ್ಯದಲ್ಲಿ ನಡೆಯುತ್ತಿದ್ದಿಲ್ಲ.

ನಂದೂರಾಯನು ಸ್ತ್ರೀದ್ವೇಷಿಯಾಗಿದ್ದನು. ಹೆಂಗಸರೆಂದರೆ ಉರಿದು ಬೀಳುತ್ತಿದ್ದನು. ಅವನ ರಾಜ್ಯದಲ್ಲಿ ಹೆಂಗಸಿಗೆ ಸಿಗುತ್ತಿದ್ದಷ್ಟು ಕಠಿಣ ಶಿಕ್ಷೆ, ಅಪಮಾನ ಅನಂತರದ ಯಾವ ಇತಿಹಾಸದಲ್ಲೂ ನಾವು ಕಾಣಲಾರೆವು. ಅವನ ಬಗ್ಗೆ "ನಾರಿಯರ ಮಾರಿ" ಎಂಬ ಅಡ್ಡ ಬಿರುದನ್ನು ಇತಿಹಾಸಕಾರರು ಕೊಟ್ಟಿದ್ದಾರೆ.

ತುಳುನಾಡಿನ ಸೆರಗಿನಲ್ಲಿ ಪ್ರಕೃತಿರಮ್ಯಪ್ರದೇಶವಾದ ಕೇರಳದ ಬಡಗು ತಡಿಯ ಅದೊಂದು ಸುಂದರ ತಾಣದಲ್ಲಿ ನಂದೂರಾಯ ತನ್ನ ರಾಜಧಾನಿಯನ್ನು ಅದಾಗಲೇ ನಿರ್ಮಿಸಿದ್ದನು. ಕದಂಬಿನ ಪೌರುವಾಯಿಲ ಎಂಬ ಹೆಸರಿನಿಂದ ಸುಶೋಭಿತವಾದ ಅವನ ರಾಜಧಾನಿಯ ವೈಭವವು ಬಹು ಪ್ರಸಿದ್ಧವಾಗಿದ್ದಿತು. ಸ್ತ್ರೀ ಮಲೆಯಾಳದಲ್ಲೇ ಅವನು ತನ್ನ ರಾಜಧಾನಿಯನ್ನು ಸೃಜಿಸಿದ್ದರೂ, ಅವನ ನಾರೀ ದ್ವೇಷದ ರಾಜನೀತಿಯಿಂದ ಹೆಂಗಳೆಯರು ನಡುಗಿಹೋಗಿದ್ದರು. ಸ್ತ್ರೀ ಪರವಾದ ಯಾವುದೇ ವಾದವನ್ನು ಅವನು ಸಹಿಸುತ್ತಿರಲಿಲ್ಲ. ಅವನ ರಾಣಿವಾಸದಲ್ಲಿ ಸ್ತ್ರೀಯರಿದ್ದರೂ, ಅವರನ್ನು ಕೇವಲ ಕಾಮಭೋಗದ ವಸ್ತುವಾಗಿ ಉಪಯೋಗಿಸುತ್ತಿದ್ದನು. ದಯೆ, ದಾಕ್ಷಿಣ್ಯ, ಪ್ರೀತಿ ಯಾವುದೂ ಅವನ ಹೃದಯದಲ್ಲಿರಲಿಲ್ಲ.

ಹಾಗೆಂದು ನಂದೂರಾಯನು ಸ್ತ್ರೀವಿಷಯ ಹೊರತುಪಡಿಸಿದರೆ ಅವನ

ರಾಜನೀತಿಕುಶಲತೆ ನಿಜಕ್ಕೂ ಮುಕ್ತಕಂಠದಿಂದ ಪ್ರಶಂಸಿಸಲ್ಪಡುತ್ತಿತ್ತು. ನೆರೆ ಹೊರೆಯ ರಾಜರ ವಿಚಾರದಲ್ಲಿ ಅವನ ಸ್ನೇಹಸಂಧಾನ, ಸಾಮಂತರ ಬಗ್ಗೆ ತೋರುತ್ತಿದ್ದ ಪ್ರೀತಿ, ಅಧಿಕಾರಿ ವರ್ಗವನ್ನು ಕುರಿತ ಅವನ ಉದಾರತೆ—ಎಲ್ಲರನ್ನೂ ತೃಪ್ತಿಗೊಳಿಸುತ್ತಿತ್ತು.

ಈ ಸ್ತ್ರೀದ್ವೇಷದ ಬಗ್ಗೆ ಯಾರಿಗೂ ಸರಿಯಾದ ಕಾರಣ ತಿಳಿಯದಾದರೂ, ವೃದ್ಧಮಂತ್ರಿಯಾದ ಸೋಮಯ್ಯಗೌಡನು ಒಂದು ಕಥೆ ಹೇಳುತ್ತಿದ್ದನು.

* * * *

ನಂದೂರಾಯನು ಪ್ರಾರಂಭದಲ್ಲಿ ಮಹಾ ಸುಗುಣಿಯಾಗಿದ್ದನು. ಅವನ ಚಿಕ್ಕ ತಂದೆಯ ಲಾಲನೆ—ಪಾಲನೆಯಲ್ಲಿ ಬೆಳೆದಿದ್ದನು. ತಂದೆಯು ಚಿಕ್ಕಂದಿನಲ್ಲೇ ತೀರಿಕೊಂಡುದರಿಂದ ಚಿಕ್ಕತಂದೆ ವಿಜಯನಂದರಾಯನು ನಂದೂರಾಯನ ಸಾಮಂತ ರಾಜ್ಯದ ಉತ್ತರಾಧಿಕಾರಿಯಾಗಿ ಅವನು ಪ್ರಾಯಪ್ರಬುದ್ಧನಾಗುವತನಕ ರಾಜ್ಯಾಡಳಿತ ನೋಡುತ್ತಿದ್ದನು. ಆಗ ಇವನ ಸಾಮಂತ ರಾಜ್ಯವು ಸಿಸಿಲೆಯ ಘಾಟಿಯ ಸೆರಗಿನಲ್ಲಿತ್ತು. ಕೆಲವು ಹಳ್ಳಿಗಳ ದಟ್ಟಡವಿಗಳ ಸೀಮಿತ ಪ್ರದೇಶವನ್ನೊಳಗೊಂಡ ಈ ರಾಜ್ಯ ಆ ಕಾಲದಲ್ಲಿ ಕಗ್ಗಾಡ ಕೊಂಪೆಯಾಗಿತ್ತು. ಆದರೂ ನಂದೂರಾಯನ ವಂಶಜರು ಈ ಹಾಳು ಕೊಂಪೆಯನ್ನೇ ಸಾಕಷ್ಟು ಸುಧಾರಿಸಿ, ಒಂದು ಆಕರ್ಷಕ ತಾಣವಾಗಿಟ್ಟುಕೊಂಡಿದ್ದರು.

ನಂದೂರಾಯನು ಎರಡು ವರ್ಷದ ಬಾಲಕನಿರುವಾಗ ತಂದೆ ಅಕಸ್ಮಾತ್ ತೀರಿಕೊಂಡರು. ತನ್ನ ಬೀಡಿನ ಹೊರವಲಯದಲ್ಲಿದ್ದ ಒಂದು ಅಬ್ಧಿಗೆ ವಿಹಾರಾರ್ಥವಾಗಿ ಸಂಸಾರಸಹಿತ ಸ್ನಾನಕ್ಕೆ ಹೋದವರು ಮರಳಿ ಬರುವಾಗ ಹೊಟ್ಟೆ ನೋಯುತ್ತಿದೆ ಎಂದು ಕುಳಿತ ಪಲ್ಲಕ್ಕಿಯಲ್ಲೇ ಅಡ್ಡಬಿದ್ದರಂತೆ. ಹಿಂದೆ ಮೇಣೆಯಲ್ಲಿ ಬರುತ್ತಿದ್ದ ಅವರ ಅರಸಿ ತವಕದಿಂದ ಓಡಿ ಬರುವಾಗಲೇ ಗತಪ್ರಾಣರಾಗಿದ್ದರಂತೆ. ಅವರ ಸಾವಿನ ಬಗ್ಗೆ ಏನೆಲ್ಲ ಕಥೆ ಹೆಣೆದುಕೊಂಡಿದೆ! ಉದ್ದೇಶಪೂರ್ವಕ ಅರಸಿಯೇ ವಿಷಪ್ರಾಶನಮಾಡಿಸಿದುದು, ರಾಜರು ಹೊಟ್ಟೆ ಹಿಸುಕುತ್ತಾ ಸಾಯುವ ಕಾಲದಲ್ಲಿ ಹೊರಳಾಡಿದುದು, ಮುಖ ನೀಲವರ್ಣದಲ್ಲಿದ್ದುದು—ಇವೆಲ್ಲವನ್ನೂ ಅವರೊಂದಿಗಿದ್ದವರು ಹೇಳುತ್ತಾರೆ. ಅರಸು ಸತ್ತ ಹನ್ನೆರಡು ದಿನಗಳೊಳಗೆ ಆಗಿನ್ನೂ ಎರಡು ವರ್ಷದ ಮಗುವಾಗಿದ್ದ ನಂದೂರಾಯನನ್ನು ಕರೆದುಕೊಂಡು ಆಕೆ ತಾಯಿಯ ಮನೆಗೆ ಓಡಿದಾಗ ಅವಳೊಂದಿಗೆ ಆ ಊರ ಕೊತ್ವಾಲನೂ ಕಾಣೆಯಾದುದನ್ನು ಜನರು ಕಂಡುಕೊಂಡರು. ಆದರೆ ಮಹಾ ಧರ್ಮಿಷ್ಠನೂ, ಪರಾಕ್ರಮಿಯೂ ಆದ ವಿಜಯಾನಂದನು ತನ್ನ ಅಣ್ಣನ ಸಾವಿನಿಂದಾಗಿ ಸಾಮಂತ ಬೀಡು ಹಾಳಾಗಬಾರದೆಂದು ನಂದೂರಾಯನನ್ನು ಕರೆತಂದು ಅವನ ಹೆಸರಲ್ಲೇ ರಾಜ್ಯಭಾರಮಾಡಿದನು. ನಂದೂರಾಯನನ್ನು ಮಾತ್ರ ವಿಜಯಾನಂದನ ಬಲವಂತಕ್ಕೆ ಕಳುಹಿಸಿಕೊಟ್ಟಳಲ್ಲದೆ ಆಕೆ ಬಾರದೆ ಕುಳಿತುದು ಊರಲ್ಲಿ ಹುಟ್ಟಿದ ಕಥೆಗೆ ಮತ್ತಷ್ಟು ಪುಷ್ಟಿ ಕೊಟ್ಟಿತು.

ವಿಜಯಾನಂದನು ಆಗಲೇ ತ್ರಿಸಂಧ್ಯಾ ಪ್ರಾಯದಲ್ಲಿದ್ದನು. ಅವನ ಮಹಾ ಯೋಗ್ಯತೆ ತಿಳಿದವರು ಅವನ ಆರೈಕೆಯಲ್ಲಿ ನಂದೂರಾಯನು ಖಂಡಿತ ಸಾಮ್ರಾಜ್ಯ ಕಟ್ಟಬಹುದೆಂದು ಕನಸು ಕಂಡರು. ರಾಯನ ಜಾತಕ ತೋರಿಸಿದಾಗಲೂ ಮಹಾ ಪಂಡಿತರು ಈ ಊಹೆಗೆ ಪೋಷಕವಾಗಿಯೇ ಮಾತನಾಡಿದರು. ವಿಜಯಾನಂದನು ಬೆಳೆಯುತ್ತಿರುವ ಈ ಬಾಲಕನ ಶೌರ್ಯ, ಸಾಹಸದ ವ್ಯಕ್ತಿತ್ವ ಬಹು ಸ್ಫುಟವಾಗಿ ರೂಪುಗೊಳ್ಳುತ್ತಿರುವುದನ್ನು ಕಂಡು ಮಹಾ ತೃಪ್ತಿಯಲ್ಲಿದ್ದನು. ಚಿಕ್ಕಂದಿನಿಂದಲೂ ಮಹಾ ಛಲವಾದಿಯಾಗಿದ್ದರೂ ನಂದೂರಾಯನಿಗೆ ರಾಜ್ಯದ ಬಗ್ಗೆ, ಶೌರ್ಯ ಸಾಹಸದ ಬಗ್ಗೆ ಮಹಾ ಆಸಕ್ತಿ ಇತ್ತು.

ನಂದೂರಾಯನ ಬಗ್ಗೆ ವಿಜಯಾನಂದ ಇಷ್ಟು ಗಾಢ ಪ್ರೀತಿ ತೋರಿಸುವುದು ಅವನ ಅರಸಿಗೆ ಸರಿಬೀಳಲಿಲ್ಲ. ಹದಿನಾರು ವರ್ಷದ ನಂದೂರಾಯನು ಒಂದು ದಿನ ಬೇಟೆಗೆಂದು ಹೋದವನು ಮರಳಿ ಬಂದಾಗ ಅವನಿಗೆ ಆಘಾತವಾದ ಸುದ್ದಿಯೊಂದು ಕಾದು ಕುಳಿತಿತ್ತು. ವಿಜಯಾನಂದನು ಪಾರ್ಶ್ವವಾಯು ರೋಗದಲ್ಲಿ ಆಕಸ್ಮಿಕವಾಗಿ ಸಿಲುಕಿದ್ದಾನೆಂದು ತಿಳಿದಾಗ ಒಮ್ಮೆ ರಾಯನು ತತ್ತರಿಸಿಹೋದನು. ಈತನಕ ರಾಜ್ಯದ ಯಾವುದೇ ಹೊರೆಯಿಲ್ಲದೆ ಗಾಳಿಗೆ ಕಿವಿ ನಿಗುರಿಸಿ ನಿಂತ ಕರುವಿನಂತೆ ಸಿಕ್ಕ ಹಾಗೆ ಓಡಾಡುತ್ತಿದ್ದವನು ಈಗ ಆಧಾರ ತಪ್ಪಿದ ಲತೆಯಂತಾದನು. ವಿಜಯಾನಂದನ ನಾಲಿಗೆ ಬಿದ್ದುಹೋಗಿತ್ತು. ಎದ್ದು ಕುಳಿತುಕೊಳ್ಳಲು ಸಾಧ್ಯವಿಲ್ಲದೆ ಮಲಗಿದ್ದಲ್ಲೇ ಬಿದ್ದುಕೊಂಡಿದ್ದನು. ನಂದೂರಾಯನು ತನ್ನ ಶಿಕಾರಿ ವೇಷವನ್ನು ಕಳಚಿ ಚಿಕ್ಕಪ್ಪನ ಬಳಿಗೆ ಬಂದಾಗ ನಂದೂರಾಯನ ಹೃದಯ ಹಿಂಡಿ ಹಿಪ್ಪೆಯಾಗಿ ಹೋಗಿತ್ತು. ಬಾಗಿದ ತಲೆಯನ್ನು ಚಿಕ್ಕಪ್ಪನ ಚರಣಪದದಲ್ಲಿಟ್ಟು ಗೊಳೋ ಎಂದು ಅತ್ತನು. ತಲೆದಿಸೆಯಲ್ಲಿದ್ದ ಚಿಕ್ಕಮ್ಮ ಆ ಸಂಕಟ ಕಾಲದಲ್ಲೂ ನಂದೂರಾಯನ ಬಗೆಗಿದ್ದ ತನ್ನ ವಿಷವನ್ನು ಹೊರಕಾರಿಯೇ ಬಿಟ್ಟಳು. "ಹೌದು, ಸ್ವಂತ ಮಕ್ಕಳ ಹಿತ ಲೆಕ್ಕಿಸದೆ ರಾತ್ರಿ-ಹಗಲು ಯಾರಿಗಾದರೂ ರಾಜ್ಯ-ರಾಜ್ಯವೆಂದು ಒದ್ದಾಡಿದರೆ ಈ ಬರಡು ಜೀವ ಎಷ್ಟು ದಿನ ತಾಳಿಕೊಂಡೀತು. ಕೋಣನ ಹಾಗೆ ಬೆಳೆದರೂ ಹುಡುಗನಿಗೆ ಚಿಕ್ಕಪ್ಪ ಸಾಯುವತನಕ ದುಡಿಯಲಿ ಎಂದೇ ಆಸೆ. ಯಾರು ಸವೆದರೆ ಯಾರಿಗೇನು ನಷ್ಟ ? ನನ್ನ ಮಗ ಇನ್ನು ಭಿಕಾರಿಯಾದರೆ ಸರಿ !"

ಈ ಮಹಾ ದುರ್ದೈವ ಕಾಲದಲ್ಲೂ ಚಿಕ್ಕಮ್ಮನ ಈ ಮಾತುಗಳು ಕೂರಸಿಯಂತೆ ಅವನ ಹೃದಯವನ್ನ ನೆಟ್ಟುವು. ಈ ಮಾತುಗಳನ್ನು ವಿಜಯಾನಂದನಿಗೂ ಸಹಿಸಲಾಗಲಿಲ್ಲ. ಆದರೆ ತನ್ನ ಅವಯವಗಳೆನ್ನೇ ಇನ್ನೊಬ್ಬರು ಚಲಿಸಬೇಕಾಗಿ ಬಂದಿರುವಾಗ ಆತನೇನು ಮಾಡಿಯಾನು ? ಆ ತೇಜಸ್ವಿ ಕಣ್ಣು ತುಂಬಿ ಹರಿಯಿತು. ಅಷ್ಟೇ ಅವನ ನಿರಾಕರಣೆಯ ಪ್ರತಿಭಟನೆಯಾಯಿತು.

ಚಿಕ್ಕಮ್ಮ ಅಂದಿನಿಂದ ಸಂಪೂರ್ಣ ಬದಲಾಯಿಸಿದಳು. ಇನ್ನು ತನ್ನ ಕಾಲ ಈ ರಾಜ್ಯದೊಂದಿಗೆ ಮುಗಿಯಿತೆಂದು ಭಾವಿಸಿ ಆದಷ್ಟು ಗಂಟು ಕಟ್ಟಲು ಮೊದಲಿಸಿದಳು.

ಭಂಡಾರವನ್ನು ಬರಿದುಮಾಡಿದಳು. ಸಾಧ್ಯವಾದಷ್ಟು ಪ್ರಜೆಗಳನ್ನು ಸುಲಿಸಿದಳು. ತನ್ನ ರಾಜ್ಯದ ಪ್ರಜೆಗಳ ಬವಣೆ, ಆ ಬಗ್ಗೆ ಚಿಕ್ಕಮ್ಮನ ಕಾರಸ್ಥಾನ ನಂದೂರಾಯನ ಕಿವಿಯತನಕ ಬರಲು ತಡವಾಗಲಿಲ್ಲ. ಆಗ ನಂದೂರಾಯನು ಎಚ್ಚತ್ತನು. ಆ ಎಚ್ಚತ್ತ ಕಣ್ಣುಗಳನ್ನು ಉಜ್ಜಿಕೊಳ್ಳುತ್ತಿದ್ದಾಗಲೇ ಒಂದು ಘಟನೆಯಿಂದ ನಂದೂರಾಯನ ಸುಪ್ತಮನಸ್ಸು ಸಂಪೂರ್ಣ ಕೆರಳಿಗೂಂಡಿತು.

ಒಂದು ರಾತ್ರಿ ಎಂದಿನಂತೆ ತನ್ನ ಶಯನಾಗಾರ ಸೇರುವಾಗ ಅಪ್ಸರೆಗೆ ಸಮಾನಳಾದ ರೂಪಸಿಯೊಬ್ಬಳು ವೈಯ್ಯಾರದಿಂದ ನಿಂತಿರುವುದನ್ನು ಕಂಡನು. ಬಹುಶಃ ಹೊಸ ಸಜ್ಜೆಯ ದಾಸಿ ಇರಬಹುದೆಂದು ಊಹಿಸಿದನು. ಆಗಲೇ ಚಿಗುರೊಡೆದ ಮಿಸೆಯ ಈ ತರುಣ ಬ್ರಹ್ಮಚರ್ಯದ ಹಂಬಲದಲ್ಲಿದ್ದ ಕಾಲವದು. ತಾನು ಕೋಣೆ ಪ್ರವೇಶಿಸಿದ ಮೇಲಾದರೂ ಆಕೆ ಹೊರಗೆ ಹೊರಡಬಹುದೆಂದು ಊಹಿಸಿದರೆ ಅದು ಸುಳ್ಳಾಯಿತು. ಆಕೆ ಮತ್ತಷ್ಟು ಒಯ್ಯಾರ ಪ್ರದರ್ಶಿಸಿ ಅಲ್ಲೇ ನಿಂತಳು. ನಂದೂರಾಯನಿಗೆ ಸ್ವಲ್ಪ—ಸ್ವಲ್ಪ ಊಹೆಯಾಯಿತು. ಸಿಡುಕಿನ ದನಿಯಲ್ಲಿ ' ಹೊರಗೆ ಹೊರಡು ' ಎಂದು ಗರ್ಜಿಸಿದ. ಇಂತಹ ಗರ್ಜನೆಗಳನ್ನೆಷ್ಟೋ ತನ್ನ ಕುಡಿನೋಟದಲ್ಲಿ ತಣ್ಣಗಿರಿಸಿ ವಶೀಕರಿಸಿದ ಮಹಾ ವೈಯ್ಯಾರಿಯೊಬ್ಬಳನ್ನೇ ನಂದೂರಾಯನಿಗಾಗಿ ಕೇರಳದ ತೆಂಕು ತುದಿಯಿಂದ ತರಿಸಲಾಗಿದೆ ಎಂದು ನಂದೂರಾಯನಿಗೆ ಮೊದಲು ತಿಳಿಯಲಿಲ್ಲ. ನಂದೂರಾಯನ ತಾರುಣ್ಯ ಸಹಜ ಚಪಲವನ್ನು ಕೆರಳಿಸಿ, ತನ್ನ ಕೆಲಸ ಸಾಧಿಸಲು ಬಂದ ಈ ಅಪ್ಸರೆಗೆ ಮಾತ್ರ ರಾಯ ಈಡಾಗಲಿಲ್ಲ. ರಾಯನಿಗೆ ಈ ವೈಯ್ಯಾರಿ ಇಷ್ಟು ಧೈರ್ಯವಾಗಿ ತನ್ನ ಸಜ್ಜೆಮನೆ ಪ್ರವೇಶಿಸಬೇಕಾದರೆ ಇದರ ಹಿಂದೆ ಬಹು ಆಳವಾದ ಗೂಢಚರ್ಯೆ ನಡೆಯುತ್ತಿರ್ಬ ಬೇಕೆನಿಸಿತು. ಅದನ್ನು ಪತ್ತೆಮಾಡುವ ನಿರ್ಧಾರದಿಂದ ಆ ವೈಯ್ಯಾರಿಯ ರಟೆ ಹಿಡಿದು ಕೆನ್ನೆಗೆರಡು ಏರಿಸಿಯೇ ಬಿಟ್ಟನು ! ಸುಕೋಮಲ ಬಳ್ಳಿಯಂತೆ ಬಳುಕುವ ದೇಹದ ಈ ಸುಂದರಿ ಈ ವಜ್ರಾಘಾತದಿಂದ ತತ್ತರಿಸಿ ಹೋದಳು. ಅವಳು ಇಂತಹ ಪೆಟ್ಟಿನ ರುಚಿ ಆತನಕ ಕಂಡವಳೇ ಅಲ್ಲ. ರಾಯನ ಕೆಂಗಣ್ಣು ಕಂಡು ನಡುಗಿ ಹೋದಳು. ರಾಯನು ಅಷ್ಟಕ್ಕೇ ಸುಮ್ಮನಾಗದೆ " ಹೇಳು, ಈ ಸಜ್ಜೆಯ ಕೋಣೆಗೆ ಹೇಗೆ ಬಂದೆ ? ಯಾರು ನಿನ್ನನ್ನು ಕಳುಹಿಸಿಧವರು ? ಸತ್ಯ ಹೇಳಲು ತಪ್ಪಿದರೆ ನಿನ್ನ ನಾಲಿಗೆ ಈಗಲೇ ಸಿಗಿದು ಬಿಡುತ್ತೇನೆ " ಎಂದು ಗದರಿಸಿದಾಗ ಆಕೆ ಬಾಯಿಬಿಟ್ಟಳು. ತಾನು ಕೇರಳದ ಕೊನೆಯ ಮೂಲೆಯವಳೆಂದೂ, ರಾಯನನ್ನು ಒಲಿಸಿ, ವಶೀಕರಣ ಮಂತ್ರದಿಂದ ತಲೆ ಹಾಳುಮಾಡುವುದಕ್ಕಾಗಿ ಕರೆಸಲ್ಪಟ್ಟವಳೆಂದೂ, ಅದಕ್ಕಾಗಿ ಚಿಕ್ಕಮ್ಮನ ಪ್ರೋತ್ಸಾಹವಿದೆಯೆಂದೂ ತಿಳಿಯಿತು. ಇದರೊಂದಿಗೆ ಈ ಪ್ರೇಯಸಿಗೆ ಸಹಾಯಕಳಾಗಿದ್ದ ಮನೆಕೆಲಸದ ದಾಸಿಯಿಂದ ರಾಯನಿಗೆ ಇನ್ನಷ್ಟು ಸಮಾಚಾರ ಸಿಕ್ಕಿತು. ಈ ಹಿಂದೆ ಮೂರು ಬಾರಿ ಚಿಕ್ಕಮ್ಮ ಪ್ರಾಣಾಪಹರಣಕ್ಕೆ ಯತ್ನಿಸಿದ್ದಳೆಂದೂ—ಹಾಲಿಗೆ ವಿಷ ಬೆರೆಸಿ, ಆಹಾರಕ್ಕೆ ಹುಚ್ಚು ತಗಲುವಂತಹ ಮದ್ದು

ಹಾಕಿ, ಮತ್ತೊಮ್ಮೆ ಮಂಕುಬೂದಿ ಎರಚಲು ಯತ್ನಿಸಿದ್ದಳೆಂದೂ, ಅದು ಅಕಸ್ಮಿಕವಾಗಿ ತಪ್ಪಿಹೋಗಿತ್ತೆಂದೂ—ತಿಳಿಯಿತು.

ರಾಯನಿಗೆ ತನ್ನ ಜೀವಕ್ಕೆ ಸಂಚಕಾರ ಬಂದಿದೆ ಎಂದು ತಿಳಿಯಿತು. ಚಿಕ್ಕಟ್ಟಿ ಒಂದಲ್ಲ ಒಂದು ದಿನ ತನ್ನ ನೆತ್ತರಿನ ಓಕುಳಿಯಾಟಕ್ಕೆ ಹಿಂದೆ—ಮುಂದೆ ನೋಡುವವಳಲ್ಲವೆಂದೂ ತಿಳಿಯಿತು. ಹಾಗೆಯೇ ಹೆಂಗಸರ ಬಗ್ಗೆಯೇ ಒಂದು ಮಹಾದ್ವೇಷ ಬೆಳೆಯಿತು.

ರಾಯನು ಮರುದಿನವೇ ರಾಜ್ಯಸೂತ್ರ ವಹಿಸಿಕೊಂಡ. ಚಿಕ್ಕಮ್ಮನಿಂದ ಬೇರೆಯಾಗಿರತೊಡಗಿದ. ಆಮೇಲೊಂದು ದಿನ ರಾಯನಿಗೆ ಸಿಕ್ಕಿದ ವರ್ತಮಾನದಂತೆ ತನ್ನನ್ನು ನಶಿಸಲು ಸಿದ್ಧಗೊಳಿಸಿಟ್ಟ ಅಡುಗೆಯನ್ನೇ ಆಕಸ್ಮಿಕವಾಗಿ ವಿಜಯಾನಂದ ರಾಯನು ತಿಂದುದರಿಂದಲೇ ಆತನಿಗೆ ಪಾರ್ಶ್ವವಾಯು ಬರುವಂತಾಯಿತೆಂದೂ, ಆಹಾರವನ್ನು ಒಂದೆರಡು ತುತ್ತು ತಿನ್ನುವಾಗಲೇ ಚಿಕ್ಕಮ್ಮನಿಗೆ ಈ ವಿಚಾರ ತಿಳಿದು ಆ ಆಹಾರವನ್ನು ತೆಗೆದೊಗೆದಳೆಂದೂ, ಆ ಒಗೆದ ಆಹಾರ ತಿಂದ ಬೇಟೆ ನಾಯಿಗಳೆರಡು ಆ ಕೂಡಲೇ ತಮ್ಮ ಅಸು ನೀಗಿದವೆಂದೂ ಅದನ್ನು ನೋಡಿದವರ ವರದಿ ನಂದೂರಾಯನಿಗೆ ದೊರೆಯಿತು. ಕೇವಲ ಒಂದೆರಡು ತುತ್ತು ತಿಂದುದರಿಂದ ವಿಜಯಾನಂದನು ಪ್ರಾಣಾಪಾಯಕ್ಕೆ ಈಡಾಗದೆ ಹೋದರೂ, ಅದರಿಂದಾಗಿಯೇ ಅರ್ಧವಾತದಲ್ಲಿ ನರಳುವಂತಾದನೆಂದೂ ತಿಳಿಯಿತು.

ಚಿಕ್ಕಮ್ಮನ ಹಲವಾರು ಕಾರಸ್ಥಾನಗಳಲ್ಲಿ ಸ್ತ್ರೀಯರೇ ಸೇರಿಕೊಂಡವರೆಂದೂ, ಅವರು ತನ್ನೆದುರು ನಗುನಗುತ್ತ ಒಳಗಿಂದೊಳಗೆ ಯಾವ ರೀತಿ ಕುತ್ತಿಗೆ ಕೊಯ್ಯುವರೆಂದೂ ತಿಳಿದ ಮೇಲಂತೂ ನಂದೂರಾಯನ ರೋಷ ಮತ್ತಷ್ಟು ಹೆಚ್ಚಿತು.

ರಾತ್ರಿ-ಹಗಲು ನಂದೂರಾಯನ ಪ್ರಜ್ಞೆ ಚಿಕ್ಕಮ್ಮನ ಕಾರಸ್ಥಾನದ ಬಗ್ಗೆಯೇ ಯೋಚಿಸತೊಡಗಿತು. ಆ ಬಗ್ಗೆ ಯೋಚನೆಯು ಪ್ರತೀಕಾರದ ಹೊಗೆಯಿಂದ ಕವಿದುಕೊಳ್ಳತೊಡಗಿದಾಗ ಅವನ ಕಣ್ಣೆದುರು ಪೂಜ್ಯ ಚಿಕ್ಕತಂದೆಯ ಪವಿತ್ರರೂಪ ಎದುರು ಬರುತ್ತಿತ್ತು. ಕ್ರೋಧತಪ್ತ ಮನಸ್ಸು ಬಲವಂತ ಶಾಂತಿಗೊಳಗಾಗುತ್ತಿತ್ತು.

ಅಷ್ಟರಲ್ಲೇ ವಿಜಯಾನಂದನ ಮರಣವು ಸಂಭವಿಸಿತು. ಸಾಮಂತ ರಾಜ್ಯವು ಶೋಕದಿಂದ ತುಂಬಿ ಹೋಗಿದ್ದರೆ, ನಂದೂರಾಯನ ಕ್ರೋಧ ಜ್ವಾಲಾಮುಖಿಯು ನಡಿದೆದ್ದು ಪ್ರವಹಿಸಿತು. ಇಂತಹ ದುಃಖದ ಬರ್ಬರ ಸಂದರ್ಭದಲ್ಲೂ ನಂದೂರಾಯ ಗಂಟುಮೋರೆ ಹಾಕಿಕೊಂಡದ್ದು ಅನೇಕರಿಗೆ ಅಚ್ಚರಿಯನ್ನುಂಟುಮಾಡಿತ್ತು. ಆದರೆ ಚಿಕ್ಕಮ್ಮ ಮಾತ್ರ ಹೆದರಿಯೇ ಬಿಟ್ಟಳು.

ರಾಜೋಚಿತವಾಗಿ ನಂದೂರಾಯನು ತನ್ನ ಚಿಕ್ಕಪ್ಪನ ಅಂತ್ಯಕ್ರಿಯೆಯನ್ನು ವೈಭವದಿಂದ ನೆರವೇರಿಸಿದನು. ಇಡೀ ರಾಜ್ಯದಲ್ಲೇ ಆ ಬಗ್ಗೆ ವ್ಯವಸ್ಥೆಮಾಡಿದನು. ಲಕ್ಷಾಂತರ ವರಹಗಳ ವೆಚ್ಚಮಾಡಿದನು. ನಂದೂರಾಯನ ಪರೋಪಕಾರ ಬುದ್ಧಿಯನ್ನು, ಅವನು ಹಿರಿಯರ ಮೇಲೆ ತೋರಿದ ಭಕ್ತಿಯನ್ನು ಕಂಡು ತಮ್ಮ

ರಾಜ್ಯಕ್ಕೆ ಯೋಗ್ಯ ರಾಜನೇ ದೊರೆತನೆಂದು ಪ್ರಜೆಗಳು ಸಂತೋಷಗೊಂಡರು. ಅದಕ್ಕಾಗಿ ಎಲ್ಲ ಕಡೆ ಸ್ಥಳೀಯರು ಹರ್ಷಾತಿರೇಕದಿಂದ ಉತ್ಸವವನ್ನಾಚರಿಸಿ ತಮ್ಮ ರಾಜ್ಯಭಕ್ತಿಯನ್ನು ವ್ಯಕ್ತಪಡಿಸಿದುದೂ ಉಂಟು.

ವಿಜಯಾನಂದನು ನಿಧನಗೊಂಡ ಹದಿನಾರನೆಯ ದಿನ ಮಾತ್ರ ನಂದೂರಾಯನ ಕೋಪೋದ್ರಿಕ್ತ ಪ್ರತೀಕಾರದ ಪ್ರಳಯಾಗ್ನಿಯು ಇಡೀ ರಾಜ್ಯವನ್ನೇ ದಂಗು ಬಡಿಸಿತು. ಆ ದಿನ ಅವನು ತನ್ನ ಮೊದಲ ಓಲಗವನ್ನು ಕರೆದಿದ್ದನು. ರಾಜ್ಯದ ಎಲ್ಲಾ ಪ್ರತಿಷ್ಠಿತರನ್ನೂ ಉದ್ದೇಶಪೂರ್ವಕವಾಗಿ ಆಹ್ವಾನಿಸಿದ್ದನು. ಸಭೆ ತುಂಬಿ ಬರಬೇಕೆಂದೇ ಕಟ್ಟಪ್ಪಣೆ ವಿಧಿಸಿದನು. ಅಂತೆಯೇ ತುಂಬಿದ ಸಭೆಯಲ್ಲಿ ಚಿಗುರು ಮೀಸೆಯ ನಂದೂರಾಯನು ತನ್ನನ್ನು ಸಾಕಿ ಬೆಳೆಸಿದ ಚಿಕ್ಕಮ್ಮನನ್ನು ಚಿತ್ರ ಹಿಂಸೆಯಿಂದ ವಧಿಸಿದ ರೀತಿ ಕಂಡು ಇಡೀ ರಾಜ್ಯವೇ ನಡುಗಿಹೋಯಿತು. ಪೈಶಾಚಿಕ ಅಟ್ಟಹಾಸದಲ್ಲೇ ರಾಜನು ತನ್ನ ಭಟರಿಂದ ಚಿಕ್ಕಮ್ಮನನ್ನು ಓಲಗ ಸಾಲೆಗೆ ಎಳೆತಂದು, ಆಕೆಯ ಒಂದೊಂದೇ ಅವಯವವನ್ನು ತಿವಿದು-ತಿವಿದೂ, ಕತ್ತರಿಸಿ ಕೊಂದ ರೀತಿ ಕಂಡು ಎಷ್ಟೋ ಮಂದಿ ನೋಡುತ್ತಿದ್ದ ಹಾಗೆ ಪ್ರಜ್ಞಾ ಶೂನ್ಯರಾದರು. ಚಿಕ್ಕಮ್ಮನ ಕರುಣಾರ್ದ್ರ ಚೀತ್ಕಾರವನ್ನು ಕಂಡು ಎಲ್ಲರ ಕಣ್ಣು ಗಳಲ್ಲೂ ನೀರು ಕೋಡಿ ಹರಿಯುತ್ತಿದ್ದರೂ, ನಂದೂರಾಯನ ಕಣ್ಣುಗಳಲ್ಲಿ ಮಾತ್ರ ಕಿಡಿ ಹಾರುತ್ತಿದ್ದಿತು. ಅವಳ ನೆತ್ತರನ್ನು ತನ್ನ ಹಣೆಗೆ ತಿಲಕವಾಗಿರಿಸಿಕೊಂಡ. ನಂದೂರಾಯನು ಕೊನೆಯದಾಗಿ ಹೇಳಿದ ಮಾತು : " ನನ್ನ ರಾಜ್ಯದಲ್ಲಿ ಹೆಂಗಸಿನ ಯಾವ ಮಾತಿಗೂ ಇನ್ನು ಮುಂದೆ ಮನ್ನಣೆ ಇಲ್ಲ. ಹೆಂಗಸಿನ ಯಾವುದೇ ಬಹಿರಂಗ ಪ್ರವೇಶಕ್ಕೂ ಆಸ್ಪದವಿಲ್ಲ. ಹೆಂಗಸು ಗಂಡಿನ ಆಳಾಗಿ ಬದುಕಬೇಕು. ಇದು ನನ್ನ ಆಜ್ಞೆ. ಈ ಆಜ್ಞೆಯನ್ನು ಉಲ್ಲಂಘಿಸುವ ಹೆಂಗಸಿಗೆ ಮರಣದಂಡನೆ; ಗಂಡಸಿಗೆ ಆಜನ್ಮ ಕಾರಾಗೃಹವಾಸ."

ಹೆಂಗಸಿನ ಮೇಲೆ ಈ ರೀತಿ ಏಕೆ ನಂದೂರಾಯನ ದ್ವೇಷದ ಉರಿ ಹೊತ್ತಿ ಕೊಂಡಿತೋ ಜನರಿಗೇ ಅರ್ಥವಾಗಲಿಲ್ಲ. ಚಿಕ್ಕಮ್ಮನ ಕಾರಸ್ಥಾನದ ಕತೆ ಕೇವಲ ಪಿಸುಮಾತಿನಂತೆ ರಾಜಧಾನಿಯ ಒಂದೆರಡು ಕಡೆ ಹಬ್ಬಿಕೊಂಡಿತ್ತಷ್ಟೇ ಹೊರತು ಇಡೀ ರಾಜ್ಯಕ್ಕೆ ಅದು ತಿಳಿದೇ ಇರಲಿಲ್ಲ. ಅಂತೂ ನಂದೂರಾಯನ ಬಗ್ಗೆ ಹೊಗಳಿ ಕೊಂಡವರೇ ಅವನ ಕೃತ್ಯ ಕಣ್ಣಾರೆ ಕಂಡು ನಡುಗಿಹೋದರು.

ನಂದೂರಾಯನ ರಾಜ್ಯಾಳಿಕೆಯು ಬಹು ವೈಭವದಲ್ಲೇ ಮುಂದುವರಿಯಿತು. ಅವನು ತನ್ನ ಬಹುಭುಜಬಲ ಪರಾಕ್ರಮದಿಂದ ನೆರೆಹೊರೆಯ ಪ್ರದೇಶಗಳನ್ನೆಲ್ಲಾ ಗೆದ್ದುಕೊಂಡು ತನ್ನ ರಾಜ್ಯವನ್ನು ವಿಸ್ತರಿಸಿದನು. ಸಾಮಂತ ರಾಜನಾಗಿದ್ದವನು ಮಹಾರಾಜಾಧಿರಾಜನಾದನು. ಅವನು ತನ್ನ ರಾಜಧಾನಿಯನ್ನು ಕೇರಳದ ಕರಾವಳಿಯ ತಟದಲ್ಲಿ ಬದಲಾಯಿಸಿದನು. ನೆರೆ ರಾಜ್ಯದಿಂದ ತಂದ ಅನರ್ಘ್ಯ ಹಣದಿಂದ ಅವನ ರಾಜಧಾನಿ ಕದಂಬಿನ ಪೆರುವಾಯಿಲವು ರೂಪುಗೊಂಡಿತು.

ನಂದೂರಾಯನದು ಸಾಹಸ ಜೀವನ. ತನ್ನ ರಾಜ್ಯವಿಸ್ತರಣಾಕಾಂಕ್ಷೆ ಅವನಲ್ಲಿ ದಿನ-ದಿನಕ್ಕೆ ಚಿಮ್ಮುವ ಕಾರಂಜಿಯಂತೆ ಪುಟಿದೇಳುತ್ತಲೇ ಇತ್ತು. ಅವನು ಕಾಳಗದ ಸಾಲನ್ನೇ ನಿರ್ಮಿಸಿದ. ನೆರೆಯ ಬಲಿಷ್ಠ ರಾಜರ ಮೇಲೆಲ್ಲಾ ಯುದ್ಧ ಹೂಡಿದ. ಅವನ ರಾಜಧಾನಿ ಆಯಕಟ್ಟಾದ ನಿಸರ್ಗದ ಅನುಕೂಲ ಆಯದಲ್ಲಿ ದ್ದುದರಿಂದ ಅವನನ್ನು ಸೋಲಿಸುವುದು ಇತರರಿಂದ ಆಗುತ್ತಿರಲಿಲ್ಲ. ಆದರೆ ನಂದೂರಾಯ ಪಳಗಿದ ಸೈನ್ಯಪಡೆಯೊಂದಿಗೆ ಮಿಂಚಿನ ಧಾಳಿಯಿಟ್ಟು ರಾಜ್ಯ ವಿಸ್ತರಿಸುತ್ತಿದ್ದ.

ಅವನು ಪಟ್ಟದ ರಾಣಿಯನ್ನಾಗಿ ಯಾರನ್ನೂ ಸ್ವೀಕರಿಸಲಿಲ್ಲ. ಹಾಗೆಂದು ಅವನ ಅಂತಃಪುರದಲ್ಲಿ ನೂರಾರು ಸ್ತ್ರೀಯರಿದ್ದರು. ಕೇವಲ ತನ್ನ ವಿಷಯ ತೃಪ್ತಿಗಾಗಿ ಅವರನ್ನಿಟ್ಟುಕೊಂಡಿದ್ದ. ತನಗೆ ಇಚ್ಛೆಯಾದಾಗ ಸ್ತ್ರೀ ಅಂತಃಪುರವನ್ನು ಪ್ರವೇಶಿಸಿ ಮನಸ್ವೀ ವರ್ತಿಸುತ್ತಿದ್ದ. ಕಾಮೋದ್ರಿಕ್ತ ಉನ್ಮತ್ತನಂತೆ ತನ್ನ ವಿಲಾಸ ಪೂರ್ಣ ಕೇಳಿಯಾಟದಲ್ಲಿ ಹಲವಾರು ಹೆಂಗಸರನ್ನ ವಿಚಿತ್ರ ಚಿತ್ರಹಿಂಸೆಗೊಳಪಡಿಸಿ ಕೊಂದುದೂ ಉಂಟಂತೆ. ನಂದೂರಾಯನಿಗೆ ಹೆಂಗಸರನ್ನು ಚಿತ್ರಹಿಂಸೆಗೀಡು ಮಾಡುವುದೆಂದರೆ, ಅವರ ನರಳಾಟ-ಚೀರಾಟ ಕೇಳುವುದೆಂದರೆ ಬಹು ಸಂತೋಷ ವಾಗುತ್ತಿತ್ತಂತೆ. ನಂದೂರಾಯನ ಈ ಹಿಂಸಮನೋವೃತ್ತಿ ಅನೇಕರನ್ನು ರೊಚ್ಚಿಗೆಬ್ಬಿಸಿದರೂ, ಅದನ್ನು ನೇರವಾಗಿ ಪ್ರತಿಭಟಿಸುವ ಧೈರ್ಯವಾಗಲೀ, ಸಾಹಸವಾಗಲೀ ಇಲ್ಲ.

ಆದರೆ ಜನ ಎಷ್ಟು ದಿನ ಸಹಿಸಿಯಾರು? ಹೆಂಗಸು ಬೆಳೆದು ದೊಡ್ಡವಳಾದ ಮೇಲೆ ರಾಜಬೀದಿಯಲ್ಲಿ ತಿರುಗದಂತೆ ಮಾಡಬಹುದು. ಆದರೆ ಚಿಕ್ಕ ಹೆಣ್ಣು ಮಕ್ಕಳನ್ನು ಎಷ್ಟು ದಿನ ತಾನೇ ಅದುಮಿ ಹಿಡಿಯಬಹುದು? ಅವರೆಲ್ಲಾದರೂ ಮನೆ ಮಂದಿಯ ಕಣ್ಣು ತಪ್ಪಿಸಿ ಬೀದಿಗೆ ಬಂದರೆಂದರೆ ರಾಜಭಟರು ಒಂದಿಷ್ಟೂ ಕನಿಕರ ಪಡದೆ ಆ ಮಕ್ಕಳ ಕೈ ಕಾಲು ಕತ್ತರಿಸಿಬಿಡುತ್ತಿದ್ದರು. ಈ ದಾರುಣ ದೃಶ್ಯ ನಂದೂರಾಯನ ರಾಜ್ಯದಲ್ಲಿ ಸಾಮಾನ್ಯವಾಗಿತ್ತು.

ಆದರೆ ನಂದೂರಾಯನ ದಕ್ಷಿಣ ಭಾಗದ ಹೆಂಗಸರು ಮಹಾ ಸಾಹಸಿಗಳು. ಅವರು ಕೇರಳ ವಂಶಜರು ತಾನೇ? ಅವರೆಲ್ಲರೂ ಒಟ್ಟುಗೂಡಿ ರಾಜನಲ್ಲಿಗೆ ಹೋಗಿ ರಾಜನ ಮನಸ್ಸನ್ನು ಪರಿವರ್ತಿಸಬೇಕೆಂದು ಯೋಚಿಸಿದರು. ಆ ಬಗ್ಗೆ ಆ ಭಾಗದ ಎಲ್ಲ ಪ್ರದೇಶದ ಹಿರಿಯರೂ ಒಂದಾದರು. ಹೆಂಗಸರು ಅವನ ರಾಜಧಾನಿಗೆ ಹೋಗುವುದು ಯೋಗ್ಯವಲ್ಲವೆಂದೂ, ರಾಜನು ಈಗಾಗಲೇ ಕೊಸೂರು ರಾಜನೊಡನೆ ಯುದ್ಧಮಾಡುತ್ತಿದ್ದು, ಅಲ್ಲಿಂದ ಹಿಂತಿರುಗಿ ಬರುವಾಗ ಒಟ್ಟಾಗಿ ಬಿನ್ನವಿಸಿಕೊಳ್ಳ ಬೇಕೆಂದೂ ನಿರ್ಧರಿಸಿದರು. ಸಾಮಾನ್ಯವಾಗಿ ನಂದೂರಾಯನು ವಿಜಯಿಯಾಗಿ ರಾಜಧಾನಿಗೆ ತೆರಳುವಾಗ ಸಂತೋಷಮನಸ್ಕನಾಗಿರುತ್ತಿದ್ದ. ಇದು ಸಹಜವೇ ಆಗಿದ್ದಿತು. ಆದರೆ ಈ ಬಾರಿ ಮಾತ್ರ ಕೊಸೂರು ರಾಜನು ನಂದೂರಾಯನನ್ನು

ಸಾಕುಬೇಕಾಗಿ ಮಾಡಿಬಿಟ್ಟನು. ನಂದೂರಾಯನು ಪ್ರಥಮಬಾರಿ ಅಪಜಯದ ಕಹಿಯನ್ನುಂಡು ರಾಜಧಾನಿಗೆ ಹಿಮ್ಮೆಟ್ಟುತ್ತಿದ್ದನು, ಈ ಸಂದರ್ಭದಲ್ಲಿ ಕೇರಳದ ಆ ವಲಯದ ಹೆಂಗಸರಿಗೆ ನಂದೂರಾಯನೇ ವಿಜಯಿಯಾಗಿ ಬರುತ್ತಿದ್ದಾನೆಂದೇ ಯಾರೋ ತಪ್ಪು ವರದಿ ಸಲ್ಲಿಸಿದರು. ಹೆಂಗಸರು ಶುಭ್ರವಸನಧಾರಿಗಳಾಗಿ ಫಲ-ಪುಷ್ಪಗಳೊಂದಿಗೆ ಮಂಗಳಕರ ಸ್ವಾಗತಕ್ಕೆ ಇದಿರು ನಿಂತರು. ಆ ಪ್ರದೇಶದಲ್ಲಿ ಮಹಾರಾಜನು ಬರುವ ದಾರಿಯ ಎರಡು ಬದಿ ನಿಂತ ಈ ಸುಂದರ ಸ್ತ್ರೀಯರ ಸಾಲು ಕಂಡು ಅನೇಕರಿಗೆ ಹೆದರಿಕೆ ಉಂಟಾಗಿರಬೇಕು. ನಂದೂರಾಯನ ಮನಃ ಪ್ರವೃತ್ತಿ ಯಾವ ಬಗೆಯದೆಂದು ಹೇಳುವುದು ಕಷ್ಟ. ಹೆಂಗಸರೊಂದಿಗೆ ನೆರೆದ ಗಂಡಸರಿಗೂ ಯಾವ ಶಿಕ್ಷೆ ವಿಧಿಸಬಹುದೋ ಎಂದು ಹೆದರಿ ಎಷ್ಟೋ ಹೆಂಗಸರು ಆ ಸ್ಥಳ, ಆ ಊರು ಬಿಟ್ಟು ಬಹಳ ದೂರ ಹೋಗಿ ಅವಿತುಕೊಂಡವರುಂಟು.

ನಂದೂರಾಯನು ಈ ಪ್ರದೇಶಕ್ಕೆ ಬರುವ ಒಂದು ಹರದಾರಿ ದೂರದಲ್ಲಿ ಅವನ ರಥದ ಗಾಲಿಗಳು ಕೆಸರಲ್ಲಿ ಸಿಕ್ಕಿಕೊಂಡವು. ಅವನ ಪದಾತಿದಳ, ಯುದ್ಧದಳ ಎಷ್ಟೋ ಮುಂದರಿದು ಹೋಗಿದ್ದಿತು. ರಾಜನು ಯಾವುದೇ ಆಡಂಬರದೊಂದಿಗೆ ಬರಲಿಷ್ಟವಿಲ್ಲದೆ ಸ್ವಲ್ಪ ದೂರದಲ್ಲಿ ಬರುತ್ತಿದ್ದುದರಿಂದ ಅವನ ರಥ ಕೆಸರಲ್ಲಿ ಸಿಕ್ಕಿಕೊಂಡ ಸಮಾಚಾರ ಎಷ್ಟೋ ದೂರ ಸಾಗಿಹೋಗಿದ್ದ ಸೇನಾಪಂಗಡಕ್ಕೆ ತಿಳಿಯದಾಯಿತು. ಅರಸನ ಅಂಗರಕ್ಷಕರು ಆ ವೈಭವಪೂರ್ಣ ಮಹಾರಥವನ್ನು ಮೇಲೆಳೆದು ತರಲು ಎಷ್ಟು ಪ್ರಯತ್ನಿಸಿದರೂ ಆಗಲಿಲ್ಲ. ರಾಜನ ರಥ ಒಂದು ಹರದಾರಿ ದೂರದಲ್ಲಿ ಹೂಳಿ ನಿಂತಿದೆ ಎಂದು ತಿಳಿದ ಈ ಹೆಂಗಳೆಯರ ಗುಂಪು ಅಲ್ಲಿಗೆ ಹಿಂಡಾಗಿ ಧಾವಿಸಿತು. ರಾಜನ ಮುಂದಿದ್ದ ಪದಾತಿದಳಕ್ಕೆ ಆಗಾಗಲೇ ಅವನ ಅಂಗರಕ್ಷಕ ಭಟರಲ್ಲೊಬ್ಬ ತಿಳಿಸಲು ಧಾವಿಸಿದ್ದನು.

ಹೆಂಗಳೆಯರ ಗುಂಪು ಹಿಂಡಾಗಿ ಬರುತ್ತಿರುವುದನ್ನು ಕಂಡು, ನಂದೂರಾಯನ ಹೃದಯದಲ್ಲಡಗಿದ್ದ ವಿದ್ವೇಷವು ಹೆಡೆಮುಟ್ಟಿದ ಹಾವಿನಂತೆ ತಲೆಯೆತ್ತಿ ನಿಂತಿತು. ತನ್ನ ಸೋಲಿನ ಸಮಯ ತಮ್ಮ ವ್ಯಂಗ್ಯನುಡಿ ಸಲ್ಲಿಸಲು ಈ ಹೆಂಗಳೆಯರ ಗುಂಪು ಬಂದಿದೆ ಎಂದು ಆತ ಭಾವಿಸಿದ. ಒಂದು ಕಡೆ ಸೋಲಿನ ಅಪಮಾನ; ಮತ್ತೊಂದು ಕಡೆ ರಥದ ಹಠಾತ್ ಅಪಘಾತ; ಇನ್ನೊಂದು ಕಡೆ ತನ್ನ ಜನ್ಮದ್ವೇಷಿಗಳ ಗುಂಪು ತನ್ನ ಆಜ್ಞೆ ಮೀರಿದ ಪ್ರತ್ಯಕ್ಷ ಉದ್ಧಟತನ. ರಾಜ ಹುಚ್ಚನಾದ. ಅವನು ಅವುಡು ಕಚ್ಚಿ ನಿಂತ. ನೆಲ ಮುಟ್ಟಿ ಹೇಳಿದ: " ಈ ಹೆಂಗಳೆಯರನ್ನೆಲ್ಲಾ ಬಂಧಿಸಿರಿ!" ಬಂದ ಹೆಂಗಳೆಯರು ಎಷ್ಟೇ ತಮ್ಮ ಸಂಕಷ್ಟ ಹೇಳಲು ಪ್ರಾರ್ಥಿಸಿದರೂ ರಾಜ ಹತ್ತಿರ ಬರಲು ನಿರಾಕರಿಸಿದ. ಬೊಬ್ಬಿಟ್ಟು ಪ್ರಾರ್ಥಿಸುತ್ತಿದ್ದ ಹೆಂಗಳೆಯರ ನಾಲಿಗೆ ಕತ್ತರಿಸಲು ಹೇಳಿದ. ಈ ರೀತಿ ಒಬ್ಬೊಬ್ಬ ಹೆಂಗಳೆಯರ ಭೀಕರ ಚಿತ್ರಹಿಂಸೆ ಕಂಡು ಉಳಿದವರು ಮೌನವಾಗಿ ಮುಂದಿನ ಭೀಕರ ಶಿಕ್ಷೆಯನ್ನನುಭವಿಸಲು ಸಿದ್ಧರಾಗಿ ನಿಂತರು. ಎಲ್ಲರ ಸುಮಂಗಲ ಮುಖದಲ್ಲೂ ಪ್ರೇತಛಾಯೆ ಮನೆಮಾಡಿತು. ರಾಜನ

ಮುಂದೆ ಹೋಗಿದ್ದ ಸೈನ್ಯದ ಒಂದು ತುಕಡಿ ಆಗ ರಾಜನ ರಥದ ಅಪಘಾತ ಸುದ್ದಿ ಕೇಳಿ ಧಾವಿಸಿ ಬಂದಿತು. ರಾಜ ಬಂದ ಸೈನ್ಯಕ್ಕೆ ಮೊದಲು ಆ ಹೆಂಗಳೆಯರೆಲ್ಲರ ಕೂದಲು ಸಂಪೂರ್ಣ ಬೋಳಿಸಿ, ಆ ಕೂದಲಿನಿಂದ ಅವರೇ ಹಗ್ಗ ಹೊಸೆದು ಕೊಡಬೇಕೆಂದೂ, ಆ ಹಗ್ಗದಿಂದ ಕೆಸರಲ್ಲಿ ಸೇರಿಹೋದ ರಥವನ್ನು ಎಳೆದು ಆ ಹೆಂಗಸರೇ ರಾಜಧಾನಿಯ ತನಕ ತರಬೇಕೆಂದೂ ಆಜ್ಞೆ ವಿಧಿಸಿದ. ಸುಂದರ ಕೇಶರಾಶಿಯ ಲಕ್ಷಣವಂತ ಹೆಣ್ಮಕ್ಕಳ ತಲೆಕೂದಲಿನ ಮುಂಡನವಾಯಿತು. ಆ ಕೂದಲಿನಿಂದ ಹಗ್ಗ ಹೊಸೆಯುವುದು ಸಾಮಾನ್ಯವೆ? ಅದೂ ರಥಕಟ್ಟುವ ಹಗ್ಗ! ರಾಜಾಜ್ಞೆಗೆ ಚ್ಯುತಿ ಇದೆಯೆ? ಹೆಂಗಸರ ರಕ್ತದೋಕುಳಿಯಲ್ಲಿ ಸಂತೃಪ್ತನಾಗಿ ರಾಜ ತನ್ನ ಅಪಜಯದ ಸೇಡು ತೀರಿಸಿಕೊಂಡ.

ಈ ಘಟನೆ ನಡೆದ ಮೇಲಂತೂ ರಾಜನನ್ನ ಎದುರಿಸುವವರೇ ಇಲ್ಲವಾಯಿತು. ಇಡೀ ರಾಜ್ಯವೇ ನಂದೂರಾಯನ ಅದಮ್ಯ ದ್ವೇಷ ಪ್ರತೀಕಾರದ ಜ್ವಾಲೆಯಲ್ಲಿ ಸಿಲುಕಿ ದಹಿಸತೊಡಗಿತು.

* * * *

ಹೀಗೆ ೨೦ ವರ್ಷಗಳು ಕಳೆದುವು. ರಾಜನ ಸ್ತ್ರೀದ್ವೇಷ ಮಾಯವಾಗಲಿಲ್ಲ. ಈ ಸಂದರ್ಭದಲ್ಲೇ ಒಂದು ಘಟನೆ ನಡೆಯಿತು. ರಾಜನ ಹಿರಿಯ ಮಂತ್ರಿ ಒಂದು ದಿನ ಯುವರಾಜಪಟ್ಟಕ್ಕೆ ಯಾರನ್ನು ನೇಮಿಸುವುದೆಂದು ಮೆಲ್ಲನೆ ಸಲಹೆ ಮಾಡಿದಾಗ ನಂದೂರಾಯನ ಪ್ರಜ್ಞೆ ಪ್ರಥಮ ಬಾರಿ ವಿವೇಕದ ದಾರಿಯಲ್ಲಿ ಕೇವಲ ಕೆಲ ನಿಮಿಷಗಳ ಕಾಲ ಮುಂದರಿದಂತೆ ಕಂಡಿತು. ಹೌದು, ಈಗ ಏನು ಮಾಡಬೇಕು? ರಾಣಿವಾಸದಲ್ಲಿರುವ ಒಂದು ಹೆಣ್ಣಿಗೂ ಗಂಡು ಸಂತಾನವಿಲ್ಲ. ಯಾರೂ ಹೆರಲಿಲ್ಲವೆಂದರೂ ಸಲ್ಲುತ್ತಿತ್ತು. ರಾಜನು ಗಂಡು ಸಂತಾನವನ್ನೀಯದ ರಾಣೀವಾಸವನ್ನು ಕೂಡಲೇ ಸೆರೆಮನೆಗಟ್ಟಿದ. ಪಾಪ, ರಾಜನ ಹುಚ್ಚು ಆಜ್ಞೆಯನ್ನು ಯಾರು ಪ್ರತಿಭಟಿಸುತ್ತಾರೆ?

ರಾಜನು ತನ್ನ ಉತ್ತರಾಧಿಕಾರಿಯ ಬಗ್ಗೆ ಯಾವಾಗಲೂ ಯೋಚಿಸತೊಡಗಿದ ಹಾಗೆ ಅವನಿಗೆ ಹೆಂಗಸರ ಬಗ್ಗೆ ಯಾವುದೋ ಒಂದು ಅಂತರಾಳದ ಕರುಣಾರ್ದ್ರ ಭಾವ ಮಿಂಚಿ ಮಾಯವಾಗತೊಡಗಿದಂತೆ ಕಂಡಿತು. ಈ ಸಂದರ್ಭದಲ್ಲೇ ಒಂದು ದಿನ ಏಕಾಂತವಾಗಿ ಅರಮನೆಯ ಕಟಾಂಜನದಲ್ಲಿ ಕುಳಿತು ಶೂನ್ಯದೃಷ್ಟಿಯಿಂದ ಫಲ-ಪುಷ್ಪಭರಿತವಾದ ತನ್ನ ಉದ್ಯಾನವನ್ನು ನಿರೀಕ್ಷಿಸುತ್ತಿದ್ದ. ಈ ಮೂಕ ಜೀವಿಗಳಾದ ಸಸ್ಯಗಳಲ್ಲೂ ಸಂತಾನದ ಅಮೃತತ್ವವಿದೆ. ಆದರೆ ತನ್ನ ಈ ಪರಾಕ್ರಮಕ್ಕೆ ಅನುಗುಣವಾದ ಒಂದು ವಂಶಬೀಜವಿಲ್ಲವಾಯಿತಲ್ಲಾ ಎಂದು ಕೊರಗತೊಡಗಿತು ಮನಸ್ಸು. ಅದಕ್ಕೆ ತಾನು ಹೊಣೆಗಾರನೆಂದು ಮನಸ್ಸು ಒಪ್ಪದಾಯಿತು. ರಾಣಿವಾಸದವರು ನಿಷ್ಪ್ರಯೋಜಕರು ಎಂದಿತು ಒಳಕುದಿಗೊಂಡ ಮನಸ್ಸು. ಈ ರೀತಿ ತನ್ನ ವಂಶಾವಳಿಯನ್ನು ನಿರ್ನಾಮಮಾಡಲೆಂದೇ ಹೆಂಗಸರು

ಒಂದಾಗಿದ್ದರೆಂದು ಭಾವನೆ ಮೂಡಿದಾಗಲೇ ಉದ್ಯಾನದಲ್ಲಿ ಹನ್ನೆರಡು ವರ್ಷದ ಬಾಲೆಯೊಬ್ಬಳು ನಿರ್ಭೀತಳಾಗಿ ಒಂದು ಪೇರಿಳೆ ಗಿಡದ ಬುಡದಲ್ಲಿ ನಿಂತು, ಪೇರಿಳೆ ಹಣ್ಣುಗಳನ್ನು ತಿನ್ನುತ್ತಿರುವುದನ್ನು ಕಂಡ ನಂದೂರಾಯನ ಕಣ್ಣುಗಳು ಕಿಡಿ ಕಾರತೊಡಗಿದುವು. ಕ್ಷಣಾರ್ಧದಲ್ಲಿ ರಾಜಭಟರು ಆ ಹುಡುಗಿಯನ್ನು ಬಂಧಿಸಿದರು. ಹೆಂಗಸರಿಗೆ ಚಿತ್ರಹಿಂಸೆ ನೀಡಿ ಅವರ ತಲೆಕೂದಲಿನಿಂದ ಹಗ್ಗ ಹೊಸೆದು ರಥ ಎಳೆದ ಘಟನೆಯಾದ ಮೇಲೆ ಹೆಂಗಸರ ಹಾವಳಿ ಸಂಪೂರ್ಣ ಅಡಗಿಹೋಗಿತ್ತು. ಈಗ ಪುನಃ ತನ್ನ ಅರಮನೆಯ ಪ್ರಾಂಗಣದಲ್ಲಿ ಏಕಾಏಕಿ ಒಂದು ಹೆಣ್ಣು ನಿರ್ಭಯ ವಾಗಿರಬೇಕಾದರೆ? ರಾಜನಿಗೆ ಈ ಹೆಣ್ಣಿನ ಬಹಿರಂಗ ಕೊಲೆಮಾಡಿಸಿ, ಇನ್ನೆಂದೂ ಹೆಂಗಸರು ಅಪ್ಪಿತಪ್ಪಿಯೂ ಬಹಿರಂಗ ಸ್ಥಳಕ್ಕೆ ಬಾರದಂತೆ ಮಾಡಬೇಕೆಂದು ನಿರ್ಧರಿಸಿ, ಮಾರನೆಯ ದಿನ ಓಲಗವನ್ನು ಕರೆಯಲು ಆಜ್ಞಾಪಿಸಿದ. ಆ ಓಲಗಕ್ಕೆ ಎಲ್ಲರೂ ಬಂದೇ ತೀರಬೇಕೆಂದು ಆಜ್ಞೆ ವಿಧಿಸಿದ. ಆ ತನಕ ಆ ಅರಿಯದ ಹೆಣ್ಣು ಕೂಸು ಕಠಿಣ ನಿರ್ಬಂಧದಲ್ಲಿ ಕಾರಾಗಾರದಲ್ಲಿ ಕೊಳೆಯಬೇಕೆಂದು ಆಜ್ಞಾಪಿಸಿದ.

ಇದೆಲ್ಲವೂ ಕ್ಷಣಾರ್ಧದಲ್ಲಿ ನಡೆದುಹೋಯಿತು.

* * * *

ಪೂರ್ವ ನಿಶ್ಚಯದಂತೆ ತೌಳವ ಸಾಮ್ರಾಜ್ಯದ ಈ ಭೀಮಪುರುಷನು ಓಲಗ ಸಾಲೆಯನ್ನು ರುದ್ರಮುಖ ಮುದ್ರೆಯೊಂದಿಗೆ ಪ್ರವೇಶಿಸಿ ಆಸೀನನಾದ.

ಏನೊ ಅರಿಯದ ಹನ್ನೆರಡು ವರ್ಷದ ಬಾಲೆಯನ್ನು ಕೈ-ಕಾಲಿಗೆ ಭಯಂಕರ ಸರಪಳಿ ತೊಡಿಸಿ ಎಳೆದು ತರಲಾಯಿತು. ಮೂರು ದಿನದ ಉಪವಾಸದಿಂದ ಜರ್ಝರಿತವಾದ ಆ ಹೆಣ್ಣು ಮಗಳ ರಾಜಸ ಮುಖಮುದ್ರೆಯೂ ಗರ್ವದಿಂದ ಕೋಪೋದ್ರಿಕ್ತವಾಗಿತ್ತು. ಬಳಲಿ ಬಸವಳಿದಿದ್ದರೂ, ಅವಳ ಮುಖದಲ್ಲಿ ಕ್ರೌರ್ಯವೇ ಮನೆಮಾಡಿತ್ತು.

ವೃದ್ಧ ಮಂತ್ರಿ ಏನೋ ಹೇಳಲು ಎದ್ದುನಿಲ್ಲಲು, ನಂದೂರಾಯನು ಮಾತ ನಾಡಗೊಡದೆ ತಾನೇ ಅಂದಿನ ಆಜ್ಞೆಯನ್ನು ಹೇಳಿಬಿಟ್ಟ—

"ರಾಜಾಜ್ಞೆಯನ್ನು ಮೀರಿ ನನ್ನ ಅರಮನೆಯ ಪ್ರಾಂಗಣಕ್ಕೆ ಧೈರ್ಯದಿಂದ ಧಾವಿಸಿ ಬಂದ ಈ ಹೆಣ್ಣು ಹುಡುಗಿಗೆ ಮರಣ ಶಿಕ್ಷೆ ವಿಧಿಸಿದ್ದೇನೆ. ಅವಳ ಶಿರಚ್ಛೇದನ ನನ್ನ ಸಮ್ಮುಖದಲ್ಲಿ ಈಗಲೇ, ಇಲ್ಲೇ ಆಗಬೇಕು."

ಅಲ್ಲಿ ನೆರೆದ ಸಭಿಕರ ಹೃದಯವೆಲ್ಲ ಹೆಪ್ಪುಗಟ್ಟಿದಂತಾಯಿತು; ಅವರ ಕರುಳು ಕಿತ್ತುಬರುವಂತಾಯಿತು. ಏನೂ ಅರಿಯದ ಕೇವಲ ಹನ್ನೆರಡು ವರ್ಷದ ಹಸುಗೂಸನ್ನು ನಿರ್ದಯವಾಗಿ ರುಂಡ ಹಾರಿಸುವ ಈ ಆಜ್ಞೆಯನ್ನು ನಮ್ಮ ಈ ಕಣ್ಣುಗಳಿಂದ ಹೇಗೆ ನೋಡುವುದೆಂದು ಎಲ್ಲರೂ 'ಹಾಯ್' ಎಂದು ಬಿಟ್ಟರು. ಈ ನಿಟ್ಟುಸಿರಿನ 'ಹಾಯ್' ರವದಿಂದ ರಾಜನ ನರಮಂಡಲ ಉದ್ರಿಕ್ತವಾಯಿತು. "ಯಾರು 'ಹಾಯ್' ಎನ್ನುವವರು? ಅವರು ಕೂಡಾ ಈ ಕುನ್ನಿಯಂತೆ ರುಂಡ ಕಳೆದುಕೊಳ್ಳಬೇಕಾಗುವುದು."

ರಾಜನ ಆಜ್ಞೆ ಪಾಲಿಸಲು ಭಟರು ನಿಮಿಷಾರ್ಧದಲ್ಲಿ ಸನ್ನದ್ಧರಾದರು. ಆ ಹುಡುಗಿಯ ಬಳಿಗೆ ಧಾವಿಸಿ ಬಂದರು. ಕತ್ತಿ ಹಿರಿದು ಯಮಸದೃಶರೂಪಿ ಸೈನಿಕರಿಬ್ಬರು ಹುಡುಗಿಯ ಎಡ-ಬಲದಲ್ಲಿ ಕತ್ತಿ ಝಳಪಿಸುತ್ತಾ ನಿಂತರು. ಸಭಿಕರಲ್ಲಿ ಹೆಚ್ಚಿನವರು ಕಣ್ಣು ಮುಚ್ಚಿದರು. ರಾಜನು ಅಟ್ಟಹಾಸದಿಂದ ಸುತ್ತಲೂ ನೋಡಿದನು.

ಆವರೆಗೆ ಸಹಿಸಿ ನಿಂತ ಪ್ರಧಾನಿಗೆ ಮತ್ತೆ ಸಹಿಸಲಾಗಲಿಲ್ಲ. ಆ ವೃದ್ಧ ಸೆಟೆದು ನಿಂತು ಹೇಳಿದ: "ಮಹಾರಾಜ! ಈ ಹಸುಳೆಯನ್ನು ಕೊಂದು ರಾಜ್ಯದ ಓಲಗವನ್ನು ಅಪವಿತ್ರಗೊಳಿಸಬೇಡಿರಿ. ಇಲ್ಲಿ ಈತನಕ ಆದ ರಕ್ತದೋಕಳಿ ಆಟದ ಹುಚ್ಚುತನ ಸಾಕು. ಸಹನೆಗೂ ಒಂದು ಮಿತಿ ಇದೆ. ಪ್ರಜೆಗಳು ಕೆರಳಿ ನಿಂತರೆ ರಾಜನ ಬಾಳು ವಿನಾಶ ಹೊಂದುವುದು. . . ."

ರಾಜನು ಮಂತ್ರಿಯ ಮಾತಿನಿಂದ ಸಂಪೂರ್ಣ ವಿವೇಕಶೂನ್ಯನಾದನು. ಅವನ ಜೀವನದಲ್ಲಿ ಈತನಕ ತನ್ನ ಕೈಕೆಳಗಿನವರು ಪ್ರತಿಮಾತು ಹೇಳಿದ್ದನ್ನು ಕೇಳಿದ್ದಿಲ್ಲ. ರಾಜನು ಹೇಳಿದ: "ಮಂತ್ರಿ, ಸಾಕು. ನಿನ್ನ ನಾಲಿಗೆಯನ್ನು ಸೀಳಿಬಿಡಲು ಆಜ್ಞೆ ಇತ್ತಿದ್ದೇನೆ. ಇದಕ್ಕೂ ಮಿಕ್ಕ ಆ ಹೆಣ್ಣಿನ ರಕ್ಷಣೆಯ ಮಾತು ಹೇಳಿದರೆ ನಿನ್ನ ರುಂಡವನ್ನು ಹಾರಿಸಲು ಆಜ್ಞೆ ಕೊಡುತ್ತೇನೆ."

ವೃದ್ಧಾಪ್ಯದ ನೆರಿಗೆಯುಳ್ಳ ಮಹಾಮಂತ್ರಿಯ ಮುಖದಲ್ಲೂ ರೌದ್ರತೆ ತಾಂಡವವಾಡಿತು. "ಇಂತಹ ಪಿಶಾಚಿ ದೊರೆಯ ಆಸ್ಥಾನದಲ್ಲಿರುವುದಕ್ಕಿಂತ ಸಾಯುವುದು ಮೇಲು" ಎಂದು ಬೊಬ್ಬಿಟ್ಟ.

ರಾಜನು ಭಾವಾವೇಶಗೊಂಡವನಂತೆ ಸಿಂಹಾಸನದ ಬಲಿಪೀಠವನ್ನು ಬಲವಾಗಿ ಬಡಿದು, ಮಂತ್ರಿಯನ್ನು ಬಂಧಿಸುವಂತೆ ಆಜ್ಞಾಪಿಸುತ್ತಾ ಹೇಳಿದ—

"ಮೊದಲು ಆ ಹುಡುಗಿಯ ಶಿರಚ್ಛೇದನವಾಗಲಿ. ಆ ನಂತರ ಈ ಮಂತ್ರಿಯದೂ ಆಗಬೇಕು. ರಾಜನ ಮಾತಿಗೆ ಪ್ರತಿಭಟಸುವವನು ಯಾರೇ ಆದರೂ ಅವನಿಗೆ ಎಂತಹ ಶಿಕ್ಷೆ ಕಾದಿದೆ ಎಂಬುದು ಜನತೆಗೆ ಮನದಟ್ಟಾಗಲಿ. ಹ್ಞೂ, ಏನು ನೋಡುತ್ತಿರುವಿರಿ? ಕುನ್ನಿ ಭಟರೆ, ಆಜ್ಞೆ ನೆನಪಿರಲಿ!"

ಹುಡುಗಿಯ ಸುಕೋಮಲ ರುಂಡವು ಕ್ಷಣಾರ್ಧದಲ್ಲಿ ರಕ್ತದೋಕುಳಿಯ ಕಾರಂಜಿ ಚಿಮ್ಮಿಸುತ್ತಾ ನೆಲದಲ್ಲಿ ಹೊರಳಾಡಿತು.

ವೃದ್ಧ ಮಂತ್ರಿ ಭಯಂಕರವಾಗಿ ಅರಚುತ್ತ ಹೇಳಿದ: "ಅರಸಾ! ನಿನ್ನ ಹುಚ್ಚು ಆವೇಶದಿಂದ ನಿನ್ನ ಏಕಮಾತ್ರ ವಂಶದ ಕುಡಿಯನ್ನು ನೀನೇ ಕೈಯಾರೆ ಕೊಂದೆ. ಆ ಮಗು ನಿನ್ನ ಪುತ್ರಿ. ರಾಣಿವಾಸದವರು ನಿನ್ನ ಸ್ತ್ರೀ ದ್ವೇಷಕ್ಕೆ ಹೆದರಿ ಗುಪ್ತವಾಗಿ ಸಾಕುತ್ತಿದ್ದರು. ರಾಣಿವಾಸದವರನ್ನು ಸೆರೆಮನೆಗಟ್ಟಿದಾಗ ಆಕೆಯನ್ನು ತೋಟದ ಮಾದಿಯ ಕೈಗೊಪ್ಪಿಸಿದ್ದರು. ಆದರೆ ನಿನ್ನ ಪೈಶಾಚಿಕ ಮನೋವೃತ್ತಿಯಿಂದ ನಿನ್ನ ವಂಶದ ಏಕಮಾತ್ರ ಕುಡಿಯೇ ನಶಿಸಿ. . . ."

ಮೊದಲೇ ಕೊಟ್ಟಿದ್ದ ರಾಜಾಜ್ಞೆಯಂತೆ ಸೈನಿಕರು ಮಂತ್ರಿಯ ತಲೆಯನ್ನು ಹಾರಿಸಿಬಿಟ್ಟರು.

ರಾಜನು ಮಹಾಮಂತ್ರಿಯ ಮಾತಿಗೆ ಲಕ್ಷ್ಯವನ್ನಿತ್ತು ತನ್ನ ಮೊದಲಿನ ಆಜ್ಞೆಯನ್ನು ಮರೆತುಬಿಟ್ಟಿದ್ದರಿಂಧ ಅವನು ತನ್ನ ಆಜ್ಞೆಯನ್ನು ಹಿಂತೆಗೆಯುವ ಬಗ್ಗೆ ಯೋಚಿಸುವುದರೊಳಗೆ ಮಹಾಮಂತ್ರಿಯ ರುಂಡ ಆ ಹಸುಳೆಯ ರುಂಡದೊಂದಿಗೆ ಉರುಳಿಬಿದ್ದಿತು.

ರಾಜಾ ನಂದೂರಾಯನು ದೊಪ್ಪನೆ ಸಿಂಹಾಸನದಿಂದ ಉರುಳಿ ಬಿದ್ದ !*

—ಎನ್. ನಾರಾಯಣ ಬಲ್ಲಾಳ

---

* ಇಲ್ಲಿನ ಕಥಾವಸ್ತು ಕೇವಲ ಐತಿಹ್ಯ ಪ್ರಧಾನವಾದುದು.

ನಿನ್ನೆದೆಯ ವಲ್ಮೀಕವನ್ನು ಕೆದಕು

ಕೇಳು, ಹೇ ಮನುಜ!
ನಾನೆಂಬೆ 'ಕಪಿ ತನೂಜ'!

ಹೇಗಿದ್ದರೇನಂತೆ ಚರಮದಾ ಹೊದಿಕೆ!
ಹಿಂದೆಂದಿನದೊ ಚೇಷ್ಟೆ ಉದುರಿದೆಯೆ ಅದಕೆ?
ಬಾಲವೊಂದುದುರಿದೊಡೆ
ಆಯಿತೇ ಮುನ್ನಡೆ?
ಒರೆದಿಹನು ಆದಿಕವಿ—
"ಪುನರಾಯಾನ್ ಮಹಾಕಪಿಃ"

*　　*　　*

ಹಿಂದೊಬ್ಬನಿದ್ದ—ಬಹು ಹಳೆಯ ಕತೆ ಕಂತೆ—
ನೂರು ಯಾಗವ ಗೆಯ್ದ 'ಮನು'ವವನು.
ಜ್ಞಾನ ಯಜ್ಞವ ಗೆಯ್ದ;
ಕುಲಪೀಠದಧಿಪತಿಯು ಆದ;
ದಿವ್ಯ ಶುಚಿ-ಶಚಿಯಾಳಿದ;
ಅವನು-ಕೇಳ್-ಮಂತ್ರದ್ರಷ್ಟಾರ!

ನಿನದೊ? ನಿಜ ಹೇಳು—
ಹೊಡೆದೆ ನೀ ನೂರು ಶರಣು
ಯಾರಿಂಗೆ? ಕೇಳು ಮುನಿ 'ಯಾಸ್ಕ'ನನು—
'ಹೇರು ಭಾರವ ಹೊತ್ತ ಬರಿಯ ಸ್ಥಾಣು;
ನೀನಾದೆ ಇಂದ್ರನಿಂದು.

ಅವ ಮಂತ್ರ ದ್ರಷ್ಟಾರ.
ಅಳಿಸವನ ಹೆಸರ,
ಬಳಿ ನಿನ್ನ ಕೆಸರ,
ಓವೋ ಪಕೀರ!
(ಅಲ್ಪವಾನರಗೇಕೆ ಮಹಾಪ್ರಾಣದ ಬಯಕೆ!)
ಶಚಿಯನಾಳಲು ಹೊರಡು!
ಕೇಳೆಲೋ 'ಶಿಷ್ಯ—ಕೊರಡು'

ಆಣತಿಯ ಕೊಡು, "ಸರ್ಪ, ಸರ್ಪ"
ಕೇಳು ಋಷಿ ಶಾಪವನು—
"ಭವ ಸರ್ಪಃ"

ಹೇ ಮನುಜ,
ಕಪಿ ತನೂಜ!

'ಮನುವು ಮಾಡಿದುದೆಲ್ಲ 'ಕಲಸು ಮೇಲೋಗರ'
ಆತ ಗೆಯ್ದುದ ಬಳಿಯೆ ನಿನಗೀಗ ಸಡಗರ!
ನಿನ್ನೆದೆಯ ವಲ್ಮೀಕವನ್ನು ಕೆದಕು,
ನೋಡು ಋಷಿ ಇಹನೆ!
ಹೆಡೆಯೊಡೆಯನೆಡೆಮಾಡಿಕೊಂಡಿಹನೆ?
ದಿವಿಯಿಂದ ಋಷಿತಳದ ತಳಕೆ ನೂಕು.

ಹೇ ಕಪಿತನೂಜ!
ಆಗು ನೀ ಮನು-ಜ.

—ಸಿ. ಜಿ. ಪುರುಷೋತ್ತಮ

ರೈಲ್ವೆ ನಿಲ್ದಾಣದಲ್ಲಿ ಒಂದು ಸಂಜೆ

ಇಂದು ಶ್ರೀರಾಮನವಮಿ. ಯಾವುದೋ ಅವಸರದ ಕಾಗದವನ್ನು ಬರೆಯಬೇಕಾಯಿತು. ಪೋಸ್ಟ್ ಆಫೀಸಿನ ಪೆಟ್ಟಿಗೆಯಲ್ಲಿ ಅದನ್ನು ಹಾಕಲು ಆಗಲೇ ಕಾಲ ಮೀರಿಹೋಗಿದ್ದುದರಿಂದ ರೈಲ್ವೆ ಸ್ಟೇಷನ್ನಿಗೆ ಓಡಿ ಬಂದೆ. ಸ್ಟೇಷನ್ನಿನ ಹೊರವಲಯದಲ್ಲಿರುವ ಕೆಂಪು ಪೆಟ್ಟಿಗೆಯ ಹೊಟ್ಟೆಯೊಳಕ್ಕೆ ಅದನ್ನು ಇಳಿಯಬಿಟ್ಟು ಹಾಗೆಯೇ ಪೇಟೆಗೆ ಹೋಗಿಬಂದುಬಿಡೋಣವೆಂದು ನಗರಾಭಿಮುಖವಾಗಿ ನಾಲ್ಕು ಹೆಜ್ಜೆ ನಡೆದೆ. ಎಲ್ಲಿದ್ದಿತೊ ಏನೋ, ಇದ್ದಕ್ಕಿದ್ದಂತೆಯೇ ಕರಿಮೋಡ ಆಕಾಶವನ್ನು ಆವರಿಸಿತು. ಹತ್ತು ಅಡಿ ಮುಂದುವರಿಯುವಷ್ಟರಲ್ಲಿ ಪಟಪಟನೆ ತೋರಹನಿಗಳು ಉದುರಲಾರಂಭಿಸಿ ಅತ್ತಿತ್ತ ತಿರುಗಿ ನೋಡುವನಿತರಲ್ಲೇ ಜೊರೋ ಎಂದು ಬಿರುಮಳೆ ಸುರಿಯತೊಡಗಿತು. ಶ್ರೀರಾಮಚಂದ್ರನು ಭಕ್ತಶಿರೋಮಣಿಗಳ ದಾಹವನ್ನು ತಣಿಸಲು ವರ್ಷವೇಷವನ್ನು ಕಳೆದು ಧರೆಗಿಳಿದು ಬಂದಂತಾಯಿತು. ನನ್ನ ಕೈಯಲ್ಲಿ ಕೊಡೆಯಿರಲಿಲ್ಲ. ತನ್ನ ಮುದ್ದುಮಕ್ಕಳಾದ ಮಾನವರನ್ನು ಕೀಟಲೆಮಾಡಿ ಸಂತೋಷಪಡುವುದು ಪ್ರಕೃತಿಮಾತೆಗೆ ಬಹು ಇಷ್ಟವೆಂದು ತೋರುತ್ತದೆ. ಆದ್ದರಿಂದಲೇ ನಾವು ಎಂದು ಮುನ್ನೆಚ್ಚರಿಕೆ ವಹಿಸಿ ಬೆಚ್ಚಗೆ ಬಟ್ಟೆ ಹಾಕಿಕೊಂಡು ಛತ್ರಿ ಹಿಡಿದು ಹೊರಡುತ್ತೇವೋ ಅಂದು ಔಷಧಕ್ಕೆ ಬೇಕು ಎಂದರೂ ಒಂದು ಹನಿಯೂ ಬೀಳುವುದಿಲ್ಲ. ನಿನ್ನೆ ಮಳೆ ಬರಲಿಲ್ಲವೆಂದು ಇಂದು ಶಸ್ತ್ರರಹಿತರಾಗಿ ಹೊರಟರೆ ಅನಿರೀಕ್ಷಿತವಾದ ವರ್ಷಭೈರವನ ದರ್ಶನಭಾಗ್ಯ ಮಾತ್ರವಲ್ಲದೆ ಅವನ ಪರಮಾನುಗ್ರಹಕ್ಕೂ ನಾವು ಪಾತ್ರರಾಗಬಹುದು. ಈ ಪರಿಸ್ಥಿತಿಗೆ ಸಿಕ್ಕಿಬಿದ್ದ ನಾನು ಬೇರೆ ಯಾವ ಆಶ್ರಯವನ್ನೂ ಕಾಣದೆ ಹಿಂದಕ್ಕೆ ತಿರುಗಿ ರೈಲ್ವೆ ನಿಲ್ದಾಣಕ್ಕೆ ಧಾವಿಸಿ ಇಲ್ಲಿ ವರುಣದೇವನ ನಿರಂತರ ಶರಾಘಾತದಿಂದ ರಕ್ಷಣೆ ಪಡೆಯುತ್ತಿದ್ದೇನೆ. ದುಡುಕಿ ಮುಂದೆ ನುಗ್ಗದೆ ಹೀಗೆ ಹಿಮ್ಮೆಟ್ಟಿ ಸ್ಟೇಷನ್ನಿಗೆ ಬಂದುದು ಒಳ್ಳೆಯದೇ ಆಯಿತು. ಏಕೆಂದರೆ "ಕಣ್ಣುಮುಚ್ಚಿಕೊಂಡು" ಸುರಿಯಲು ಆರಂಭವಾದ ಮಳೆ ಒಂದು ಗಂಟೆಯ ಮೇಲಾದರೂ ಇನ್ನೂ ಎಡೆಬಿಡದೆ ಹೊಯ್ಯುತ್ತಿದೆ. ಇದರ ಪರಿಣಾಮವಾಗಿ ಸೋದರ ಮಾನವರ ಸಮೀಕ್ಷೆಯಲ್ಲಿ ಆಸಕ್ತನಾದ ನನಗೆ ಅನಿರೀಕ್ಷಿತವಾಗಿ ಹೊಸದೊಂದು ಅನುಭವ ವಿಸ್ತರಣಕ್ಷೇತ್ರ ದೊರೆತಂತಾಯಿತು. ಇಲ್ಲಿ ನೆರೆದಿರುವ ಜನಗಳಲ್ಲಿ ಅದೆಷ್ಟು ವೈವಿಧ್ಯ ಎದ್ದು ಕಾಣುತ್ತಿದೆ. ವೈವಿಧ್ಯವೇ ಜಗತ್ತಿನ ಜೀವ ಜೀವಾಳವೆನ್ನುವುದಾದರೆ ಈ ರೈಲ್ವೆ ನಿಲ್ದಾಣ ನಿಜಕ್ಕೂ ಒಂದು ಕಿರಿಯ ಜಗತ್ತು ಎನ್ನಲಡ್ಡಿಯಿಲ್ಲ.

ಅಗೋ, ಅಲ್ಲಿ ಕಂಬಕ್ಕೆ ಒರಗಿ ನಿಂತಿದ್ದಾನೆ ಸೂಟುಧಾರಿಯಾದ ಯುವಕನೊಬ್ಬ. ಅವನ ಕೈಗಳೆರಡೂ ಷರಾಯಿಯ ಜೇಬಿನಲ್ಲಿ ವಿಶ್ರಾಂತಿಸುಖವನ್ನು ಅನುಭವಿಸುತ್ತಿವೆ. ಅವನ ಬಾಯಲ್ಲಿ ಒಳ್ಳೆಯ ಠೀವಿಯಿಂದ ಮೆರೆಯುತ್ತಿರುವ

ಸಿಗರೇಟಿನ ಹೊಗೆ ಅವನ ಹೃದಯದಲ್ಲಿ ಉಕ್ಕಿ ಹರಿಯುತ್ತಿರುವ ಸ್ವರ್ಗಾನಂದದ ದೃಶ್ಯವೇ ಗೋಚರವಾಗುತ್ತಿರುವಂತೆ ತೋರುತ್ತಿದೆ. ಬಳುಬಳುಕಿ ಮೇಲೇರುತ್ತಿರುವ ಅದರ ವೈಯಾರಕ್ಕೆ ಯಾವ ಲತಾಂಗಿಯ ಮೈಭಂಗಿ ಸರಿಬಂದೀತು? ಧೂಮಸೇವನೆಯಿಂದ ಉನ್ಮತ್ತನಾದಂತಿಲ್ಲಾ ಅವನ ವದನಾರವಿಂದದಲ್ಲಿ—ಅದರಲ್ಲೂ ನಯನದ್ವಯಗಳಲ್ಲಿ—ಅದೆಂತಹ ಪ್ರಸನ್ನತೆ ಹೊರಹೊಮ್ಮುತ್ತಿದೆ! ಅವನಿಗೆ ಈ ಪ್ರಪಂಚದಲ್ಲಿ ಯಾವ ಚಿಂತೆಯೂ ಇರುವಂತೆ ಕಾಣುವುದಿಲ್ಲ. ಇವನ ಬಾಳುವೆಯ ಭಾರವನ್ನು ತಂದೆತಾಯಂದಿರೋ ಅತ್ತೆ ಮಾವಂದಿರೋ ಹೊತ್ತಿರಬೇಕು. ಇವನ ಸಂಸಾರದ ರಥವನ್ನು ಬೇರಾವ ಕೈಗಳೋ ಎಳೆಯುತ್ತಿರಬೇಕು. ವಸ್ತ್ರಾಲಂಕಾರಭೂಷಿತನಾಗಿ ನಿರಂತರ ಧೂಮಪಾನೋದ್ಯುಕ್ತನಾಗಿ ಜಗತ್ತಿನ ನಿಜಸ್ವರೂಪವನ್ನು ನೋಡಲು ಕೂಡ ಇಷ್ಟವಿಲ್ಲದವನಂತೆ ಬಿಸಿಲಿರಲಿ ನೆರಳಿರಲಿ ಕಣ್ಣಿಗೆ ಬಣ್ಣದ ಕನ್ನಡಕವನ್ನು ಸಿಕ್ಕಿಸಿಕೊಂಡು ಎಲ್ಲೋ ನಡೆಯುವ ಕ್ರಿಕೆಟ್ ಆಟದ ಸ್ಕೋರುಗಳನ್ನು ಅಧಿಕಾರವಾಣಿಯಿಂದ ಚರ್ಚಿಸುತ್ತ ಹೋಟಲುಗಳಿಗೆ ಸಿನಿಮಾಗಳಿಗೆ ಹೋಗಿಬರುವುದೇ ನಾಗರಿಕತೆಯ ಪರಕಾಷ್ಠೆ, ಸಂಸ್ಕೃತಿಯ ಅತ್ಯುನ್ನತ ಸೋಪಾನವೆಂದು ಬಗೆದಿರುವವರ ಪ್ರತಿನಿಧಿಯಿವನು. ಇಂಥವರಲ್ಲಿ ಬಹುಪಾಲು ಜನರ ಬಾಹ್ಯಾಲಂಕಾರಕ್ಕೂ ಅಂತರಂಗದ ಅತಿಹೇಯವೂ ಅಸಹ್ಯವೂ ಆದ ಆದರ್ಶ ಆಕಾಂಕ್ಷೆಗಳಿಗೂ ಮುಚ್ಚಲಾರದಂತಹ ಅಂತರವಿರುತ್ತದೆ. "ಎ ನೈಸ್ ಮ್ಯಾನ್ ಈಸ್ ಎ ಮ್ಯಾನ್ ಆಫ್ ನ್ಯಾಸ್ಟಿ ಐಡಿಯಾಸ್" ಎಂಬ ಸ್ವಿಫ್ಟನ ಮಾತು ಇಂಥವರ ಗುಣವೈಶಿಷ್ಟ್ಯವನ್ನು ಚೆನ್ನಾಗಿ ವ್ಯಕ್ತಪಡಿಸುತ್ತದೆ.

ಆ ಯುವಕನ ಹಿಂದೆಯೇ ಯಾರೊಡನೆಯೋ ಮಾತಾಡುತ್ತ ದೇಶದ ಸಕಲ ಆಗುಹೋಗುಗಳೂ ತನ್ನನ್ನೇ ಅವಲಂಬಿಸಿವೆಯೋ ಎನ್ನುವಂತೆ ಅಟ್ಟಹಾಸದಿಂದ ಬೀಗುತ್ತಿರುವ ಮಹಾಪುರುಷನನ್ನು ನಾನು ಬಲ್ಲೆ. ನಮ್ಮ ಮನೆಗೆ ನಾಲ್ಕು ಬೀದಿ ಆಚೆ ಇದ್ದಾನೆ ಅವನು. ರಾಷ್ಟ್ರಸೇವಾಧುರೀಣನೆಂದು ಹಲವು ಜನರಲ್ಲಿ ಇವನ ಖ್ಯಾತಿ ಹಬ್ಬಿದೆ. ಇವನ ಉಡಿಗೆ ತೊಡಿಗೆಗಳೂ ಭಾಷಣಗಳೂ ಈ ನಂಬಿಕೆಗೆ ಬೆಂಬಲವಾಗಿವೆ. ಆದರೆ ಇವನ ಸ್ವಾಮಿಕಾರ್ಯವೆಲ್ಲಾ ಸ್ವಕಾರ್ಯಸಾಧನೆಗೆ ಒಂದು ಮಾಧ್ಯಮ ಮಾತ್ರ. ದೇಶಭಕ್ತರನ್ನು ಕುರಿತು ಡಾಕ್ಟರ್ ಜಾನ್ಸನ್ ಆಡಿರುವ ಸುಪ್ರಸಿದ್ಧವಾದ ವಾಕ್ಯಕ್ಕೆ ಇವನಂಥವರು ಉತ್ತಮ ನಿದರ್ಶನ. ಇವನು ಧರಿಸಿರುವ ಅಚ್ಚ ಬಿಳುಪಿನ ಬಟ್ಟೆ ಅನೇಕ ಪಾಪಗಳನ್ನು ಮರೆಮಾಡಿ ಇವನ ನಡೆನುಡಿಗಳಿಗೊಂದು ಪರಿಶುಭ್ರತೆಯ ಹೊದಿಕೆಯನ್ನು ದಯಪಾಲಿಸುತ್ತದೆ. ಇವನ ಮನೆಯ ಹಜಾರದಲ್ಲಿ ಬಂದವರೆಲ್ಲರ ಕಣ್ಣುಗಳನ್ನೂ ಕೋರೈಸುವಂತೆ ತೂಗುಹಾಕಿರುವ ಗಾಂಧೀಜಿಯವರ ಚಿತ್ರವೊಂದಿದೆ. ಇವನಂತಹ ಅನುಯಾಯಿಯ ಕೈಗೆ ಸಿಕ್ಕಿ ಆ ಮಹಾತ್ಮರು ಅನುಭವಿಸುತ್ತಿರುವ "ಚಿತ್ರಹಿಂಸೆ" ಅವರ ಆತ್ಮಕ್ಕೇ ಗೊತ್ತು. ಇವನು ಆಡುವ ಮಾತೆಲ್ಲಾ ರಾಷ್ಟ್ರೋದ್ಧಾರ, ಸರ್ವೋದಯ, ಮನೋ

ವೈಶಾಲ್ಯದ ಆವಶ್ಯಕತೆ, ಅಹಿಂಸೆ ಮತ್ತು ಕ್ಷಮಾಗುಣಗಳ ಹಿರಿಮೆ—ಇವಕ್ಕೆ ಸಂಬಂಧಪಟ್ಟವು; ಮಾಡುವ ಕೆಲಸ ಮಾತ್ರ ಪ್ರತಿಯೊಂದೂ ಸ್ವಪ್ರಯೋಜನ ಸ್ವಜನೋದ್ಧಾರ, ಸ್ವಜಾತಿಪ್ರೇಮ, ಪ್ರತೀಕಾರ ಮನೋಭಾವಗಳಿಂದ ಪ್ರೇರಿಸಲ್ಪಟ್ಟಿರುವುವು. ಇವನ ಚರ ಸ್ಥಿರ ಆಸ್ತಿ ದಿನದಿನಕ್ಕೂ ವೃದ್ಧಿಯಾಗುತ್ತಿದೆ ಎನ್ನುತ್ತಾರೆ. ಇಂಥ ಭಕ್ತಾಗ್ರಣಿಗಳಿಂದ ಸೇವೆ ಕೈಗೊಳ್ಳುತ್ತಿರುವ ಭಾರತಮಾತೆಗೆ ಜೈ!

ಓಹೋ! ಅಲ್ಲಿ ನಿಂತಿರುವಾತ ದುಡ್ಡಿರುವ ದೊಡ್ಡಪ್ಪನೆಂದು ಅವನ ವಸ್ತ್ರ ವೈಭವವನ್ನೂ ಕೈಬೆರಳುಗಳಿಗೆ ಅವನಿಟ್ಟುಕೊಂಡಿರುವ ಉಂಗುರಗಳನ್ನೂ ನೋಡಿದರೇನೇ ಗೊತ್ತಾಗುತ್ತದೆ. ಅವನು ಈ ಊರಿನ ಘನ ಶ್ರೀಮಂತರಲ್ಲೊಬ್ಬ. ನಗರದ ಫ್ಯಾಷನಬಲ್ ಬಡಾವಣೆಯಲ್ಲಿ ಇತ್ತೀಚಿನ ಮಾದರಿಯ ಸಣ್ಣದೊಂದು ಅರಮನೆಯನ್ನೇ ಕಟ್ಟಿಸಿಕೊಂಡಿದ್ದಾನೆ. ಅಲ್ಲಿ ತಾಂಡವವಾಡುವ ಬಣ್ಣಬಣ್ಣದ ಸುಖಾಸನಗಳೇನು, ರತ್ನಗಂಬಳಿಗಳೇನು, ಹೂದೋಟವೇನು, ತಿಳಿನೀರ ಕಾರಂಜಿಗಳೇನು? ಮನೆಯಲ್ಲಿ ಹಗಲು ಹೊತ್ತು ಅರ್ಧ ತಾಸನ್ನೂ ಕಳೆಯದ ಇವನ ಆಹ್ಲಾದಕ್ಕಲ್ಲ ಅವು ನಿರ್ಮಿತವಾಗಿರುವುದು, ನೋಡುವವರ ಗಮನವನ್ನು ಸೆಳೆವುದಕ್ಕೆ. ಧನಕನಕ ವಸ್ತುವಾಹನಗಳ ಮೆರೆದಾಟದಲ್ಲಿ ಎತ್ತಿದ ಕೈಯಾದ ಅವನ ಹೆಂಡಿರು ಮಕ್ಕಳು ಚಲಿಸುವ ಬ್ಯಾಂಕುಗಳು. ಅವನು ಶ್ರೀಮಂತವರ್ಗದವರು ಹೋಗಿಬರುವ ಕ್ಲಬ್ಬುಗಳಿಗೆಲ್ಲಾ ಮೆಂಬರು. ನಿಮಿಷಕ್ಕಿಷ್ಟು ಎಂದು ಲೆಕ್ಕಾಚಾರ ಹಾಕುವವನಿವನು. ಆದುದರಿಂದ ಕ್ಲಬ್ಬಿನಲ್ಲಿ ಕೂಡ ಅವನು ಮಾಡುವುದು ದುಡ್ಡಿಟ್ಟು ಇಸ್ಪೇಟಾಡುವುದು. ಗ್ರಂಥವ್ಯಾಸಂಗ ಹಾಗಿರಲಿ, ಪತ್ರಿಕಾಪಠಣೆಗೂ ಇವನಿಗೆ ಕಾಲ ಸಿಕ್ಕದೆಂದು ಕಾಣುತ್ತದೆ. ಮುಂಜಾವಿನಿಂದ ಮಧ್ಯರಾತ್ರಿಯವರೆಗೂ ವ್ಯಾಪಾರ ವಹಿವಾಟುಗಳ ಚಿಂತೆಯೇ ಚಿಂತೆ. ಇವನು ಮನೆಯವರೊಡನೆ ಯಾವಾಗ ಎಷ್ಟುಹೊತ್ತು ಕುಶಲ ಸಂಭಾಷಣಾಮಗ್ನನಾಗಿರುತ್ತಾನೋ ಅವರೇ ಬಲ್ಲರು. "ಬಾಳೆಲ್ಲ ಬದುಕಲ್ಕೆ ಬಿಯಮಾಗಲಾಬಾಳೊಂದು ಬಾಳೆ? ಗೋಡೆ ಗೋಡೆಯ ನಡುವೆ ಎಡೆಯಿರ್ಪುದೇ ಗೋಡೆಯಿರ್ಪುದಕೆ ಸಾರ್ಥಕಂ" ಎಂಬ ಕವಿವಾಣಿಯ ಸತ್ಯ ಅರಿವಾಗಬೇಕಾದರೆ ಇವನಂಥವರನ್ನು ನೋಡಬೇಕು. ಯಾರೋ ದೂರಪ್ರಾಂತ್ಯದ ಭಾರಿ ಗಿರಾಕಿಗಳನ್ನು ರೈಲಿಗೆ ಬಿಡಲು ಅವನೀಗ ಇಲ್ಲಿಗೆ ಬಂದಿರುವನೆಂದು ತೋರುತ್ತದೆ.

ಇವನೂ ವ್ಯಾಪಾರಿ, ಅಗೋ ಆ ಕಂಬಕ್ಕೊರಗಿ ಕುಳಿತಿರುವ ಮುದುಕಿಯೂ ವ್ಯಾಪಾರಿ. ಅವಳೆದುರಿಗೆ ಒಂದು ಮಕ್ಕರಿ ಕಡಲೆಕಾಯಿ, ನಾಲ್ಕೈದು ಬೆಲ್ಲದ ಚೂರುಗಳು ಇವೆ. ಬೆಳಗಿನಿಂದ ಸಂಜೆಯವರೆಗೂ ಒಂದು ಕಡೆ ತಳವೂರಿ ಅಸದೃಶವಾದ ಸಹನೆಯಿಂದ ಕೊಳ್ಳುವವರ ಬರವಿಗಾಗಿ ಕಾಯುತ್ತಿರುವ ಈ ಮುದಿ ಹೆಣ್ಣು ನಿಜವಾಗಿಯೂ ಕರ್ಮಯೋಗಿ, ತಪಸ್ವಿನಿ. ಬಿಸಿಲಿರಲಿ ನೆರಳಿರಲಿ ಮರವೊಂದರ ಬುಡದ ಬಳಿ ಕುಳಿತು ಕಾಲವನ್ನು ನೂಕುವವಳಿವಳು. ಈ ಇಳಿವಯಸ್ಸಿನಲ್ಲಿ ಇವಳಿಗೇಕೆ ವ್ಯಾಪಾರ ವ್ಯವಹಾರಗಳ ಕಷ್ಟವೋ ತಿಳಿಯದು. ಇವಳನ್ನು ನೋಡಿ

ಕೊಂಡು ಅನ್ನಬಟ್ಟೆ ಕೊಟ್ಟು ಕಾಪಾಡುವವರ ಅಭಾವವೋ ಅಥವಾ ಉಂಡು ಉಡಲು ಬೇಕಾದಷ್ಟಿದ್ದರೂ ಬೇಸರಹರಣಕ್ಕಾಗಿ ಇವಳು ಹೀಗೆ ಮಾರಾಟದಲ್ಲಿ ತೊಡಗಿರುವಳೋ ಅಂತೂ ನಿರಂತರ ಶ್ರಮಜೀವಿಯಿವಳು. ಮೂರು ಕಾಸು ಆರು ಕಾಸುಗಳ ಲಾಭಕ್ಕಾಗಿ ಗಂಟೆಗಟ್ಟಲೆ ಪಂಚಭೂತಗಳ ಪೂರ್ಣಪ್ರಭಾವಕ್ಕೆ ಮೈಯೊಡ್ಡಿ ಕುಳಿತಿರುವ ಇವಳೆಲ್ಲಿ, ಕ್ಷಣಮಾತ್ರದಲ್ಲಿ ಸಹಸ್ರಾರು ರೂಪಾಯಿಗಳನ್ನು ಗಳಿಸುವ ಆ ಲಕ್ಷಾಧೀಶ್ವರನೆಲ್ಲಿ?

ಆ ಮುದುಕಿಗೆ ಎರಡು ಅಡಿ ಆಚೆ ಗೋಡೆಗೊರಗಿ ಕಾಲುಚಾಚಿ ಅರ್ಧ ನಿದ್ರಾಸಕ್ತನಾಗಿ ಬಿದ್ದಿರುವ ಪ್ಲ್ಯಾಸ್ಟಿಕ್ ಸಾಮಾನುಗಳ ವ್ಯಾಪಾರಿಯನ್ನು ನೋಡು. ಚಪ್ಪಟೆಯಾದ ಅವನ ಬುಟ್ಟಿಯ ತುಂಬಾ ಬಗೆಬಗೆಯ ಪ್ಲ್ಯಾಸ್ಟಿಕ್ ಪದಾರ್ಥಗಳು ತಾವು ನವನಾಗರಿಕತೆಯ ಶಿಶುಗಳೆಂಬ ಹೆಮ್ಮೆಯಿಂದ ತಲೆಯೆತ್ತಿ ಪಕ್ಕದಲ್ಲಿರುವ ಆ ಬಡಮುದುಕಿಯ ಕಡಲೆಕಾಯಿ ಬೆಲ್ಲದುಂಡೆಗಳನ್ನು ಕಂಡು ಕಿಲಕಿಲ ನಗುತ್ತಿರುವಂತೆ ವಿದ್ಯುದ್ದೀಪಗಳ ಬೆಳಕಿನಲ್ಲಿ ಮೆರೆಯುತ್ತಿವೆ. ಕೋಮಲ ಶರೀರಿಗಳಾದ ಹೆಣ್ಣು ಗಂಡುಗಳಿಂದ ಮೊದಲುಗೊಂಡು ಏರೋಪ್ಲೇನುಗಳವರೆಗೂ ಆಧುನಿಕ ಪ್ರಪಂಚದ ವಿವಿಧ ಸಲಕರಣೆಗಳನ್ನೂ ಜೀವನದ ನಾನಾ ದೃಶ್ಯಗಳನ್ನೂ ಈ ಪ್ಲ್ಯಾಸ್ಟಿಕ್ ಸಾಮಾನುಗಳು ಪ್ರತಿನಿಧಿಸುತ್ತವೆ. ಈ ಕಾಲವನ್ನು "ಪ್ಲ್ಯಾಸ್ಟಿಕ್ ಯುಗ"ವೆಂದು ಕರೆಯುತ್ತಾರೆ. ಈ ಮಾತಿನ ನಿಜವಾದ ಅರ್ಥ ಏನೇ ಇರಲಿ, ಇಂದಿನ ಜೀವನ ಬಹು ಸೂಕ್ಷ್ಮವಾದುದು, ತೂಕವಿಲ್ಲದ್ದು, ಸಭ್ಯರೆನ್ನಿಸಿಕೊಳ್ಳುವ ಇಂದಿನ ಜನ 'ಥಳಕು ಬಳುಕಿನ' ನೀರ್ವೀರ್ಯರು, ಅಲ್ಪಾಯುಗಳು ಎಂಬುದನ್ನು ಈ ಪ್ಲ್ಯಾಸ್ಟಿಕ್ ಕೃತಿಗಳು ಸೂಚಿಸುತ್ತವೆ. ಎಷ್ಟೋ ಮಂದಿ "ಅರ್ವಾಚೀನ"ರು ಪ್ಲ್ಯಾಸ್ಟಿಕ್ ವಸ್ತುಗಳಿಗಿಂತಲೂ ಹೆಚ್ಚೇನೂ ವಿಶ್ವಾಸಯೋಗ್ಯರಲ್ಲ.

ಆ ಕಡೆ ಸಿಗರೇಟು ಅಂಗಡಿಯ ಮುಂದೆ ಗುಂಪುಗೂಡಿ ಹರಟುತ್ತಿರುವ ಸೂಟುಬೂಟಿನ ಯುವಕರು ವಿದ್ಯಾರ್ಥಿಗಳೆಂದು ಅವರ ನಿರಂತರವಾದ ಹಾಸ್ಯೋಕ್ತಿ ಗಳಿಂದಲೂ ನಡುನಡುವೆ ಇದ್ದಕ್ಕಿದ್ದಂತೆಯೇ ಅಗ್ನಿಪರ್ವತದ ಶಿಲಾರಸ ಪ್ರವಾಹ ದಂತೆ ಉಕ್ಕಿ ಹೊರಬೀಳುವ ಅವರ ನಗುವಿನ ಲಹರಿಯಿಂದಲೂ ತಿಳಿಯಬಹುದು. ಇಷ್ಟು ಹೊತ್ತು ಒಂದೇ ಸಮನಾಗಿ ಅವರು ಏನು ಹರಟುತ್ತಿರುವರೋ ದೇವರೇ ಬಲ್ಲ. ಅಂತೂ ಪ್ರಪಂಚ ಇವರಿಗೆ ಸುಂದರವೂ ಸುಖಕರವೂ ಆದ ಹೂದೋಟವೆಂದು ಕಾಣುತ್ತದೆ. ಇಲ್ಲದಿದ್ದರೆ ಅವರು ಇಷ್ಟು ನಿಸ್ಸಂಕೋಚವಾಗಿ ನಿರರ್ಗಳವಾಗಿ ಹೀಗೆ ಆರಾಮವಾಗಿ ಕೊನೆಯೇ ಇಲ್ಲದ ರೀತಿ ಹರ್ಷೋನ್ಮತ್ತರಾಗಿರಲು ಹೇಗೆ ಸಾಧ್ಯ? ಇವರು ಬಿ.ಎ., ಬಿ.ಎಸ್‌ಸಿ. ವರೆಗೆ ಓದುವ ಬಡಪಾಯಿಗಳಲ್ಲವೆಂದು ಇವರನ್ನು ನೋಡಿದರೇನೇ ಗೊತ್ತಾಗುತ್ತದೆ. ಇವರೆಲ್ಲಾ "ಮೆಡಿಕೋ"ಗಳಿರಬೇಕು. ಮೆಡಿಕಲ್ ವಿದ್ಯಾರ್ಥಿಗಳನ್ನು ಅವರ ವೇಷಭೂಷಣಗಳಿಂದಲ್ಲದೆ ಅವರು ಒಬ್ಬರನ್ನೊಬ್ಬರು "ಡಾಕ್ಟರ್" ಎಂದು ಸಂಬೋಧಿಸುವುದರಿಂದಲೂ ಗುರುತಿಸಬಹುದು. ನಾಲ್ಕನೆ

ವರ್ಷದ ಪರೀಕ್ಷೆ ಇನ್ನೂ ಎಷ್ಟೇ ದೂರವಿರಲಿ, ಅದನ್ನೂ ಅದಕ್ಕೆ ಮೊದಲು ಬರುವ ಪರೀಕ್ಷೆಗಳನ್ನೂ ದಾಟಿ "ಡಿಗ್ರಿ" ಪಡೆಯುವ ಸಾಧ್ಯತೆ ಸಾಮರ್ಥ್ಯಗಳು ಎಷ್ಟೇ ಸಂದೇಹಾಸ್ಪದವಾಗಿರಲಿ, ಮೆಡಿಕಲ್ ಕಾಲೇಜಿಗೆ ಕಾಲಿಟ್ಟ ಪ್ರತಿ ವಿದ್ಯಾರ್ಥಿಯೂ ತನ್ನ ಸಹಪಾಠಿಗಳ ದೃಷ್ಟಿಯಲ್ಲಿ "ಡಾಕ್ಟರ್" ಆಗಿಬಿಡುತ್ತಾನೆ; ತಾನು ಈಗಾಗಲೇ ವೈದ್ಯವೃತ್ತಿಯ ಕ್ಷೇತ್ರದಲ್ಲಿ ಪೂರ್ಣಾನುಭವವನ್ನು ಗಳಿಸಿರುವ ಸಿದ್ಧಹಸ್ತನೇನೋ ಎನ್ನುವಂತೆ ಒಂದು ಬಗೆಯ ಸ್ವಪ್ರತಿಷ್ಠೆಯನ್ನು ಮುಖಭಂಗಿಯಲ್ಲೂ ನಡೆನುಡಿಗಳಲ್ಲೂ ಪ್ರದರ್ಶಿಸುತ್ತಾನೆ! ಚಿಂತೆಯ ಚಂಡಮಾರುತನ ಹೊಡೆತಕ್ಕೆ ಸಿಕ್ಕಿ ಬೀಳದ ತಾರುಣ್ಯಕ್ಕೆ ಸಹಜವಾದ ಆತ್ಮವಿಶ್ವಾಸವಿದು!

ಅವರ ಕೆಲದಲ್ಲೇ ಕುಳಿತಿರುವ ಆ ಹೆಣ್ಣುಮಕ್ಕಳ ಪುಟ್ಟ ಕೂಟ ಎಷ್ಟು ಮನೋಹರವಾಗಿದೆ! ಅವರು ಆಧುನಿಕ ವಿದ್ಯಾಭ್ಯಾಸಕ್ಕೆ ಅಪರಿಚಿತರು, ಪೂರ್ವಾಚಾರಪರರು ಎಂಬುದಕ್ಕೆ ಅವರುಟ್ಟಿರುವ ಬಟ್ಟೆಗಳೂ ತೊಟ್ಟಿರುವ ಆಭರಣಗಳೂ ಇಟ್ಟುಕೊಂಡಿರುವ ಅರಿಸಿನ ಕುಂಕುಮಗಳೂ ಎದ್ದು ಕಾಣುವಂತೆ ಕಟ್ಟಿಕೊಂಡಿರುವ ಮಾಂಗಲ್ಯಗಳೂ ಕರಿಮಣಿ ಸರಗಳೂ ಸಾಕ್ಷಿ. ನಾಲ್ಕೈದು ಮಂದಿ ಹಿರಿಯರ ಮಧ್ಯೆ ಅವರೆಲ್ಲರ ಪ್ರೀತ್ಯಾದರಗಳಿಗೆ ಪಾತ್ರಳಾಗಿ ಕುಳಿತಿರುವ ನೂತನ ವಸ್ತ್ರಾಭರಣ ಭೂಷಿತಳೂ ಪುಷ್ಪಾಲಂಕೃತಳೂ ಆದ ಹದಿನೈದು ಹದಿನಾರು ವರ್ಷಗಳ ಆ ಹುಡುಗಿ ನವವಧುವೆಂದು ಲೋಕಾನುಭವವುಳ್ಳವರು ಯಾರಾದರೂ ಹೇಳಬಹುದು. ಲಿಪ್‌ಸ್ಟಿಕ್ ಪೌಡರುಗಳನ್ನು ಅರಿಯದ, ಕಪ್ಪೇ ಪ್ರಧಾನವಾಗಿರುವ ಅವಳ ವದನದಲ್ಲಿ ಶೋಭಿಸುತ್ತಿರುವ ಸರಳವೂ ಸಮ್ಮೋಹಕವೂ ಆದ ವರ್ಚಸ್ಸು ನೋಡುವವರ ನಯನಗಳನ್ನು ಸೆಳೆಯುತ್ತದೆ. ಸಂಸಾರದ ಗುರುತರ ಭಾರವನ್ನು ಹೊರಲು ಗಂಡನ ಮನೆಗೆ ಹೊರಟಿರುವಳೆಂದು ತೋರುತ್ತದೆ ಆ ಹೆಣ್ಣು. ತನ್ನ ಹೊಸ ಸ್ಥಾನಮಾನಗಳ ಅರಿವು ಅವಳಿಗೊಂದು ಅಪೂರ್ವವಾದ ಗಾಂಭೀರ್ಯವನ್ನೂ "ಗತ್ತ"ನ್ನೂ ನೀಡಿದೆ. ಅವಳನ್ನು ಬೀಳ್ಕೊಡಲು ಬಂದಿರುವ ಆ ಹಿರಿಯ ಹೆಂಗೆಳೆಯರು ಎಷ್ಟು ಬಗೆಯಲ್ಲಿ ಅವಳ ಒಡವೆವಸ್ತುಗಳನ್ನು ಸರಿಪಡಿಸಿ ಮುಂಗುರುಳುಗಳನ್ನು ತಿದ್ದಿ ಅವಳು ಮುಡಿದಿರುವ ಹೂವಿನ ದಂಡೆ ಜಾರಿಬೀಳದಂತೆ ಸಿಕ್ಕಿಸಿ ಪ್ರೀತಿಯ ಮಾತುಗಳನ್ನಾಡಿ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ತಮ್ಮ ವಾತ್ಸಲ್ಯವನ್ನು ಮತ್ತೆ ಮತ್ತೆ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ವ್ಯಕ್ತಪಡಿಸುತ್ತಿದ್ದಾರೆ! ಈಗ ಇಷ್ಟು ಜನರ ಹಿರಿಯಾಸೆ ಹರಕೆಗಳಿಗೆ ಕಾರಣಳಾಗಿ ಪತಿಗೃಹಕ್ಕೆ ತೆರಳುತ್ತಿರುವ ಆ ವಧು ಜೀವನದಲ್ಲಿ ಏನೇನು ಕಾಣಲಿರುವಳೊ! ದೇವರು ನಮಗೆ ದಯಪಾಲಿಸಿರುವ ಭಾಗ್ಯವಿಶೇಷಗಳಲ್ಲಿ ಭವಿಷ್ಯವನ್ನು ಕುರಿತು ನಮಗಿರುವ ಮೌಢ್ಯವೂ ಒಂದು. ಅದಿರಲಿ, ಈ ಮುಗ್ಧ ನೆಂಟರಿಷ್ಟರ ನಡೆನುಡಿಗಳಿಂದ ಒಂದು ಸತ್ಯ ವಿದಿತವಾಗುತ್ತದೆ. ಐಶ್ವರ್ಯ ಬಡತನಗಳು ಮನುಷ್ಯರ ಬಾಹ್ಯಜೀವನದ ಪರಿಕರಗಳಿಗೆ ಸಂಬಂಧಪಟ್ಟಿರುವುವೇ ಹೊರತು ಅವರ ರಾಗಭಾವಗಳಿಗಲ್ಲ. ಸುಖದುಃಖಗಳಿಗೆ ಬಡವರು ಬಲ್ಲಿದರು ವಿದ್ಯಾವಂತರು ನಿರಕ್ಷರಸ್ಥರು ಎಂಬ ಭೇದವಿಲ್ಲ.

"ಮಳೆ ಬಂದು ನಿಂತಹಾಗೆ" ಎಂಬ ಕನ್ನಡದ ಗಾದೆ ಎಷ್ಟು ಅರ್ಥಗರ್ಭಿತವಾದುದು ! ಅಗೋ, ಮಳೆ ನಿಂತಿತು ; ಇಷ್ಟು ಹೊತ್ತು ಭೋರೆಂಬ ಅದರ ಸದ್ದಿನಲ್ಲಿ ಅಶ್ರುತವಾಗಿ ಹೋಗಿದ್ದ ಇತರ ಶಬ್ದಗಳು ಈಗ ಕಿವಿಗೆ ಗೋಚರವಾಗತೊಡಗಿವೆ. ಅತ್ತ ಜಟಕಾ ಗಾಡಿಗಳು ಒಂದರ ಹಿಂದೊಂದರಂತೆ ನಿಲ್ದಾಣದ ಹೊರಗಡೆ ಬಂದು ಸಾಲ್ಗೂಡಿ ನಿಲ್ಲುತ್ತಿವೆ. ಅನೇಕ ಗಾಡಿಗಳಲ್ಲಿ ಜನ ಬಂದಿಳಿಯುತ್ತಿದ್ದಾರೆ. ಇವರು ಆ ನವವಧುವಿನಂತೆಯೇ ಅರಸೀಕೆರೆ ರೈಲಿನಲ್ಲಿ ಪ್ರಯಾಣ ಕೈಕೊಳ್ಳುವವರು. ಬೆಂಗಳೂರಿನಿಂದ ಬರುವ ಚಾಮುಂಡಿ ಎಕ್ಸ್‌ಪ್ರೆಸ್ ರೈಲೂ ಈಗಾಗಲೇ ಮೈಸೂರನ್ನು ತಲುಪಲಿದೆ. ಅದರಲ್ಲಿ ಬರುವ ಜನರನ್ನು ಕರೆದೊಯ್ಯಲು ಅನೇಕ ಅಶ್ವಶಕಟಗಳು ಕಾತರಿಸುತ್ತಿವೆ. ಅಗೋ, ರೈಲು ಇನ್ನು ಸ್ವಲ್ಪ ಹೊತ್ತಿನಲ್ಲೇ ಬರುವುದನ್ನು ಸೂಚಿಸುವ ಘಂಟಾನಾದ !

ನಿಲ್ದಾಣದ ಒಳಭಾಗದಲ್ಲಿ ನೀಳವೂ ಶುಭ್ರವೂ ಆದ ಪ್ಲಾಟ್‌ಫಾರಮ್ಮಿನ ಆದ್ಯಂತವೂ ವಿದ್ಯುದ್ದೀಪಗಳು ಗೋಳಗಳಲ್ಲಿ ಕೊಳವೆಗಳಲ್ಲಿ ಪ್ರಜ್ವಲಿಸಿ ಈ ಸ್ಥಳಕ್ಕೊಂದು ಅಪರೂಪವಾದ ಸೊಬಗನ್ನೂ ಕಳೆಯನ್ನೂ ಕೊಟ್ಟಿವೆ. ಅಲ್ಲೊಬ್ಬರು ಇಲ್ಲೊಬ್ಬರು ರೈಲಿನಲ್ಲಿ ಬಂದಿಳಿಯುವ ಬಂಧುಮಿತ್ರರನ್ನು ಸ್ವಾಗತಿಸಲು ಕಾದಿದ್ದಾರೆ. ರೈಲು ಬರುವುದಕ್ಕೆ ಇನ್ನೂ ಕೆಲ ನಿಮಿಷ ಬೇಕು. ಅಷ್ಟರಲ್ಲಿ ಒಂದಿಷ್ಟು ಕಾಲಾಡಿಸಿ ಆ ಕಡೆ ತುದಿಯಲ್ಲಿರುವ ಉಪಾಹಾರಗೃಹವನ್ನು ಹೊಕ್ಕು ಬರೋಣ. ದಾರಿಯಲ್ಲಿ ಉದ್ದಕ್ಕೂ ಎಡಗಡೆ ಗೋಡೆಯ ಮೇಲೆ ಒಂದರೊಡನೊಂದು ಸ್ಪರ್ಧಿಸುತ್ತಿರುವ ಜಾಹೀರಾತುಗಳ ಮೇಲೆ ಕಣ್ಣಾಡಿಸು. ನೂರಾರು ಜಾಹೀರಾತುಗಳನ್ನು ಹೀಗೆ ಒಂದರ ಪಕ್ಕದಲ್ಲಿ ಒಂದನ್ನು ಅಳವಡಿಸಿದ್ದರೆ ಯಾವ ಉದ್ದೇಶ ಸಾಧಿತವಾಗುತ್ತದೆಯೋ ನಾನರಿಯೆ. ಅವುಗಳಲ್ಲಿ ಅರ್ಥಬದ್ಧವಾದ ಕ್ರಮವಾವುದೂ ಕಾಣುವುದಿಲ್ಲ. ಬಂದ ಬಂದಂತೆ ಚಿತ್ರವನ್ನೋ ಪ್ರಕಟಣೆಯನ್ನೋ ಗೋಡೆಯ ಮೇಲೆ ಅವಕ್ಕಾಗಿ ನಿಗದಿಯಾಗಿರುವೆಡೆಗೆ ಏರಿಸಿರುತ್ತಾರೆ. ರೇಷ್ಮೆ ಬಟ್ಟೆಗಳ ಜಾಹೀರಾತಿನ ಪಕ್ಕದಲ್ಲಿ ರೈಸ್ ಮಿಲ್ಲಿಗೆ ಸಂಬಂಧಪಟ್ಟ ಪ್ರಕಟಣೆ, ವೃತ್ತಪತ್ರಿಕೆಯೊಂದರ ಆತ್ಮಸ್ತುತಿಯ ಬದಿಯಲ್ಲೇ ಧರ್ಮಗ್ರಂಥವೊಂದನ್ನು ಜನಪ್ರಿಯವಾಗಿ ಮಾಡುವ ಪ್ರಯತ್ನ, ಫಲಾಹಾರಮಂದಿರವೊಂದರ ಸ್ವಪ್ರಶಂಸೆಯ ಕೆಲದಲ್ಲೇ ಯಾವುದೋ ಸಿಮೆಂಟು ಕಬ್ಬಿಣಗಳ ಹಿರಿಮೆಯನ್ನು ಕೊಂಡಾಡುವ ಮಾತಿನ ವೈಖರಿ, ಎಲ್ಲರೂ ನೋಡಲೇಬೇಕೆಂದು ಹೇಳುವ ಚಿತ್ರವೊಂದರ ಅದ್ಭುತ ರಮಣೀಯತೆಯನ್ನು ಎತ್ತಿ ಹಿಡಿಯುವ ಪಟಕ್ಕೆ ನಾಲ್ಕಂಗುಲ ಆಚೆಯೇ ಉಳಿತಾಯದ ಆವಶ್ಯಕತೆಯನ್ನು ಜನಸಾಮಾನ್ಯರಿಗೆ ಬೋಧಿಸುವ ಸರ್ಕಾರಿ ಪ್ರಕಟಣೆ—ಇವೆಲ್ಲವೂ ಯಾವ ತರ್ಕಕ್ಕೂ ಸಿಕ್ಕದೆ ಒಟ್ಟೊಟ್ಟಿಗೆ ಬಂದರೆ ಅದೊಂದು ವೈಚಿತ್ರ್ಯವಲ್ಲವೆ? ಇಷ್ಟೊಂದು ಜಾಹೀರಾತುಗಳನ್ನು ರೈಲ್ವೆ ನಿಲ್ದಾಣದಲ್ಲಿ ಪ್ರದರ್ಶಿಸುವುದರ ಪ್ರಯೋಜನವೇನು ? ನಮ್ಮ ರೈಲ್ವೆ ಗಾಡಿಗಳಲ್ಲಿ ನಿಂತುಕೊಳ್ಳುವುದಕ್ಕೆ ಕೂಡ ಜಾಗ ಸಿಕ್ಕುವುದು ಕಷ್ಟವಾಗಿ ಇಳಿಯುವಾಗ ಹತ್ತುವಾಗ ಒಳಕ್ಕೆ

ಬರುವಾಗ ಹೊರಕ್ಕೆ ಹೋಗುವಾಗ ಮೈಮೇಲೆ ಅರಿವೇ ಇಲ್ಲದೆ ಅತ್ತಿತ್ತ ತಿರುಗಿ ನೋಡದೆ ಒಬ್ಬರ ಮೇಲೊಬ್ಬರು ನುಗ್ಗುವ ನಮ್ಮ ಜನ ಈ ಜಾಹೀರಾತುಗಳನ್ನು ಓದುವುದಕ್ಕೆ ಬೇಕಾದ ಸಮಯವನ್ನಾಗಲಿ ತಾಳ್ಮೆಯನ್ನಾಗಲಿ ಎಲ್ಲಿಂದ ತಂದಾರು? ಇದಲ್ಲದೆ, ಊರಿಗೆ ಬಂದು ಕಾಲಿಡುತ್ತಿದ್ದಹಾಗೆಯೇ ಹಣವನ್ನು ಉಳಿತಾಯ ಮಾಡಿ, ಭಗವದ್ಗೀತೆಯ ಇಂಥ ಒಂದು ಭಾಷಾಂತರವನ್ನು ಪಠಿಸಿ, ಇಂಥ ಕಂಪೆನಿಯವರು ತಯಾರಿಸಿರುವ ಹಲ್ಲುರುಗಳನ್ನೇ ಉಪಯೋಗಿಸಿ ಮೊದಲಾದ ಹೇಳಿಕೆಗಳು ಯಾರಿಗೆ ತಾನೇ ಬೇಕಾಗಿದ್ದಾವು? ಬಟ್ಟೆ ಅಂಗಡಿಗಳು, ಹೋಟೆಲುಗಳು, ಸಿನಿಮಾ ಮಂದಿರಗಳು, ಸುತ್ತಮುತ್ತ ಇರುವ ನೋಡತಕ್ಕ ಸ್ಥಳಗಳು ಇತ್ಯಾದಿಗಳನ್ನು ಕುರಿತ ಪ್ರಕಟಣೆಗಳನ್ನು—ಪ್ರಯಾಣಿಕರು ಅವನ್ನು ನೋಡಲಿ ಬಿಡಲಿ—ರೈಲ್ವೆ ನಿಲ್ದಾಣಗಳಲ್ಲಿ ಪ್ರದರ್ಶಿಸುವುದು ಅನುಚಿತವಲ್ಲವೆನ್ನಬಹುದು. ಆದರೂ ಕೃಷ್ಣರಾಜಸಾಗರವನ್ನು ನೋಡಿ, ಬೇಲೂರು ಹಳೆಬೀಡುಗಳನ್ನು ಮರೆಯಬೇಡಿ, ಎನ್ನುವ ಪಟಗಳ ಸನಿಯದಲ್ಲೇ ಕಾಶ್ಮೀರಕ್ಕೆ ಭೇಟಿಕೊಡಿ, ಡಾರ್ಜಿಲಿಂಗ್ ಉತ್ತಮ ವರ್ಗದ ಪರ್ವತಧಾಮ ಎಂದು ಘೋಷಿಸುವುದು ನ್ಯಾಯವೆ? ಈ ಪ್ರಕಟಣೆಗಳು ನಮ್ಮವರಿಗಲ್ಲ, ನಮ ದೇಶಕ್ಕೆ ಬಂದು ಹೋಗುವ ವಿದೇಶೀಯರಿಗಾಗಿ ಎನ್ನಬಹುದು. ಆದರೆ ಅಂಥವರು ಎಷ್ಟು ಜನರಿದ್ದಾರು?

ಬೆಂಗಳೂರು ರೈಲು ಬಂದೇ ಬಿಟ್ಟಿತು. ಏನು ಭವ್ಯವಾಗಿದೆ ಈ ಎಂಜಿನ್! ಚಿಕ್ಕಂದಿನಿಂದಲೂ ರೈಲ್ವೆ ಎಂಜಿನ್‌ಗಳನ್ನು ಕಂಡರೆ ನನ್ನಲ್ಲಿ ಒಂದು ಬಗೆಯ ಭಯಭಕ್ತಿಗಳು ಉತ್ಪನ್ನವಾಗುತ್ತವೆ. ಯಂತ್ರಗಳು ಪ್ರಕೃತಿಯ ಸೊಬಗನ್ನು ಹಾಳುಮಾಡುತ್ತವೆ ಎಂಬ ಆಪಾದನೆ ನಿಜವಿರಬಹುದು. ಆದರೂ ಎಷ್ಟೋ ಯಂತ್ರಗಳು ನೋಡುವುದಕ್ಕೆ ತುಂಬಾ ಸುಂದರವಾಗಿರುತ್ತವೆ ಎಂದು ಒಪ್ಪಿಕೊಳ್ಳಬೇಕು. ಭೀಕರ ಮನೋಹರವಾದ ಅಂಥ ಯಂತ್ರಗಳಲ್ಲಿ ರೈಲ್ವೆ ಎಂಜಿನ್ನುಗಳಿಗೆ ಮುಖ್ಯಸ್ಥಾನ ಲಭಿಸಬೇಕು. ರೈಲ್ವೆ ಎಂಜಿನ್ ಮನುಷ್ಯ ನಿರ್ಮಿತವಾದ ಅತ್ಯಾಕರ್ಷಕ ವಸ್ತುಗಳಲ್ಲಿ ಒಂದೆಂದು ನನ್ನ ಭಾವನೆ. ಸ್ವಭಾವತಃ ನಿಸರ್ಗ ಪ್ರೇಮಿಯಾದ ನಾನು ಅದರ ರುದ್ರರಮ್ಯತೆಗೆ ಮಾರುಹೋಗಿದ್ದೇನೆ; ಎಷ್ಟೋ ಸಾರಿ ಈ ಎಂಜಿನ್‌ಗಳು—ಅದರಲ್ಲೂ ಭೀಮಾಕಾರದ ಬ್ರಾಡ್‌ಗೇಜ್ ರೈಲ್ವೆ ಎಂಜಿನ್‌ಗಳು—ಕನಸಿನಲ್ಲಿ ಕಾಣಿಸಿಕೊಂಡಾಗ ಕೂಡ ಆನಂದಾತಿರೇಕದಿಂದ ರೋಮಾಂಚಿತನಾಗಿದ್ದೇನೆ. ಇಷ್ಟು ವಯಸ್ಸಾದ ಮೇಲೆ ಇಂದೂ ನಾನು ರೈಲ್ವೆ ಎಂಜಿನ್‌ಗಳನ್ನು ಕಂಡರೆ ಎಳೆಯರಂತೆ ನಲಿಯುವುದನ್ನು ಬಿಟ್ಟಿಲ್ಲ.

ಗಾಡಿ ನಿಲ್ಲುತ್ತಿದ್ದ ಹಾಗೆಯೇ ಏನು ಗುಜು ಗುಜು, ಏನು ಗಲಭೆ ಗಲಿಬಿಲಿಗಳು! ಇಷ್ಟು ಹೊತ್ತೂ ಎಲ್ಲಿದ್ದರೋ ಗಾಡಿಗಳೊಳಕ್ಕೆ ನುಗ್ಗುತ್ತಿರುವ ಈ ಕೂಲಿಯವರು! ಆದಷ್ಟು ಹೊರೆ ಹೊತ್ತು ಆದಷ್ಟು ಸಂಭಾವನೆಯನ್ನು ಗಳಿಸಬೇಕೆಂಬುದೊಂದೇ ಇವರ ಯೋಚನೆ. ತಮ್ಮ ಸೇವೆಯನ್ನು ಪುರಸ್ಕರಿಸಿ ಹೇರಳವಾಗಿ ತೆರ

ಬಲ್ಲ ದಾತಾರರಾರೆಂಬುದನ್ನು ಇವರು ಬಲ್ಲರು. ಆದ್ದರಿಂದಲೇ ಇವರು ಧಾವಿಸುವುದು ಮೊದಲನೆ ಮತ್ತು ಎರಡನೆ ವರ್ಗದ ಗಾಡಿಗಳ ಕಡೆಗೆ ಮಾತ್ರ. ಹೊಸಬರನ್ನು ಧನಿಕರನ್ನು ದುಡ್ಡು ಖರ್ಚುಮಾಡುವುದಕ್ಕಾಗಿಯೇ ಮೈಸೂರಿನಂಥ ನಗರಕ್ಕೆ ಸಂಸಾರಸಮೇತರಾಗಿ ಬಂದಿಳಿವವರನ್ನು ಇವರು ಮುಖ ನೋಡುತ್ತಿದ್ದಹಾಗೆಯೇ ಪತ್ತೆಮಾಡುತ್ತಾರೆ. ಕೆಲವು "ಸೀಜನ್"ಗಳಲ್ಲಂತೂ ಅವರನ್ನು ಹಿಡಿಯುವವರೇ ಇಲ್ಲ. ಮಾನವಸಮಾಜದ ಇತರ ಕ್ಷೇತ್ರಗಳಲ್ಲಿರುವಂತೆಯೇ ಈ ಕೂಲಿಯವರಲ್ಲೂ ಮೇಲ್ಜಾತಿ ಕೀಳ್ಜಾತಿಗಳುಂಟು. ರೈಲ್ವೆ ಅಧಿಕಾರಿಗಳಿಂದ ಅನುಮತಿ ಪಡೆದು ತಮ್ಮ ಉದ್ಯೋಗವನ್ನೂ ಸಂಖ್ಯೆಯನ್ನೂ ತೋಳಮೇಲೆ ಪ್ರದರ್ಶಿಸುವ ನಿರ್ದಿಷ್ಟ ವಸನಧಾರಿಗಳಾದ "ಲೈಸೆನ್ಸ್ಡ್" ಕೂಲಿಯವರದು ಒಂದು ಪಂಗಡ, ಈ ಲೈಸೆನ್ಸ್ ಇಲ್ಲದೆ ಕೇವಲ ಧೈರ್ಯ ಆತ್ಮವಿಶ್ವಾಸಗಳನ್ನೇ ನಂಬಿಕೊಂಡು ನಿಲ್ದಾಣದೊಳಕ್ಕೆ ನುಸುಳಿಬಂದು "ಕಳ್ಳಸಂತೆ"ಯಲ್ಲಿ ಕೂಲಿಮಾಡುವವರದು ಇನ್ನೊಂದು. ಸಾಮಾನ್ಯವಾಗಿ ಇವರು ಹುಡುಗರು. ಇವರ ಆಶ್ರಯದಾತರು ಇವರಂತೆಯೇ ಕೆಳದರ್ಜೆಯರಾದ ಮೂರನೆ ತರಗತಿಯ ಪ್ರಯಾಣಿಕರು. ಇವರನ್ನು ಕಂಡರೆ "ಲೈಸೆನ್ಸ್ಡ್" ಕೂಲಿಯವರಿಗೆ ಅದೇನು ತಿರಸ್ಕಾರ! ಇವರು ಕಡಿಮೆ ಮಟ್ಟದ ಕೂಲಿಯನ್ನು ತೆಗೆದುಕೊಂಡು ತಮ್ಮ ಸಂಪಾದನೆಗೆ ಸಂಚಕಾರ ತರುತ್ತಾರೆಂಬ ಅಸೂಯೆ ಬೇರೆ ಅವರನ್ನು ಕಾಡುತ್ತದೆ. ಉದರಭರಣಕ್ಕಾಗಿ ಜನ ನಡೆಸುವ ಪರಸ್ಪರ ಹೋರಾಟ ಬೇರೆಬೇರೆಯ ಕ್ಷೇತ್ರಗಳಲ್ಲಿ ಬೇರೆಬೇರೆಯ ರೀತಿಗಳಲ್ಲಿ ಅಭಿವ್ಯಕ್ತವಾಗುತ್ತದೆ. ಮೂಲತಃ ಮನುಷ್ಯ ಸ್ವಾಭಿಮಾನಿಯೆನ್ನುವ ತತ್ವದಲ್ಲಿ ಸತ್ಯವಿಲ್ಲವೆಂದು ಹೇಳುವುದು ಕಷ್ಟ.

ಈ ಸ್ವಾಭಿಮಾನ ಸ್ವಾರ್ಥಚಿಂತನೆಗಳು ರೈಲಿನಿಂದ ಇಳಿಯುವ ನೂರಾರು ಸಾವಿರಾರು ಪ್ರಯಾಣಿಕರ ಮುಖಗಳಲ್ಲಿ ವಿವಿಧ ವೇಷಗಳಲ್ಲಿ ಪ್ರಕಟವಾಗುತ್ತವೆ, ತಾವು ಮೊದಲು ಎಂಬ ಭಾವನೆ ಎಲ್ಲೆಲ್ಲೂ ಎದ್ದು ಕಾಣುತ್ತದೆ. ಈ ಉತ್ಸುಕತೆಗೆ ಅವಸರಕ್ಕೆ ನಾನಾ ಕಾರಣಗಳಿರಬಹುದು. ಈ ಊರಿಗೆ ಬಂದಿಳಿಯುತ್ತಿರುವ ಇವರೆಲ್ಲರ ಮನಗಳಲ್ಲೂ ಎಷ್ಟೆಷ್ಟು ತೆರನಾದ ಉದ್ದೇಶಗಳು ಆಶಯಗಳು ಆತಂಕಗಳು ಇವೆಯೋ ಯಾರು ಬಲ್ಲರು? ಸುಖಾನುಭವಕ್ಕಾಗಿ ಹಲವರು ದಯಮಾಡಿಸಿದ್ದರೆ ದುಃಖಾರ್ತರಾಗಿ ಬಂದಿರುವವರೆಷ್ಟು ಮಂದಿಯೋ! ಜೀವನದಲ್ಲಿ ಬೆಳಕು ಕಂಡಿತು ಎಂಬ ನೆಮ್ಮದಿಯಿಂದ ಬಂದವರ ಪಕ್ಕದಲ್ಲೇ ನಿರಾಶೆಯ ಕತ್ತಲಲ್ಲಿ ದಿಕ್ಕು ಕಾಣದವರಂತೆ ಹೆಜ್ಜೆಯಿಡುತ್ತಿರುವವರು ಕೆಲಬರು. ಸುತ್ತಣ ಸನ್ನಿವೇಶಗಳನ್ನು ಮರೆತು ಸ್ವಪ್ನಪ್ರಪಂಚದಲ್ಲಿ ಓಡಾಡುವ ನೂತನ ಪ್ರಣಯಿಗಳ ಜೊತೆಯಲ್ಲೇ ಲೌಕಿಕ ಕಾರಣಗಳಿಗಾಗಿ ಕೋರ್ಟು ಕಛೇರಿ ಹತ್ತಲಿರುವ ವ್ಯವಹಾರ ಚತುರರಿರುವರು. ಯಾವುದಾದರೂ ಕೆಲಸ ಸಿಕ್ಕೀತೇ ಎಂದು ವಿಧಿಯ ಮೇಲೆ ಭಾರ ಹಾಕಿ ಬಂದಿರುವ ನಿರುದ್ಯೋಗಿಗಳ ಕೆಲದಲ್ಲೇ ರಜ ಮುಗಿದು ಮತ್ತೆ ಕೆಲಸಕ್ಕೆ ಹಿಂದಿರುಗ

ಮನುಷ್ಯನೂ, ಅವನ ಪ್ರತಿಬಿಂಬವೂ

ಮಾನವನೊಬ್ಬನು ಎದುರಾಳಿಲ್ಲದೆ ತನ್ನನು ತಾನೇ ಒಲಿದಿದ್ದ.
ಮನದೊಳು ತಾನೇ ಲೋಕದಿ ಭವ್ಯನು ಎನ್ನುತಲಾತನು ತಿಳಿದಿದ್ದ.
ಕನ್ನಡಿ ತೋರ್ಪುದು ಸುಳ್ಳೆಂದೆನ್ನುತ ಹೆಮ್ಮೆಯ ತನ್ನೊಳು ಬಲಿದಿದ್ದ.
ವಿಧಿ ತಾ ಸುಮ್ಮನೆ ನಿಲ್ಲದೆ ಅವನನು ಉತ್ತಮಗೊಳಿಸಲು, ಎತ್ತೆತ್ತ
ನೋಡಿದರಲ್ಲಿಯೆ, ನುಡಿಯದ, ಹೆಂಗಳ ಮಂತ್ರಿಗಳೆನಿಸುವ, ಮುಕುರುಗಳ
ನಿಲ್ಲಿಸೆ, ಕನ್ನಡಿ ತಂಡವು ಶೋಭಿಸಿ, ಅಂಗಡಿ ಸಾಲಲಿ ನಿಂತಿತ್ತು.
ಮನೆಯಲಿ ಕನ್ನಡಿ, ನಗರದ ತರುಣರ ಕಿಸೆಯಲಿ ಕನ್ನಡಿ, ಹೆಣ್ಣುಗಳ
ಡಾಬೊಳು ಕನ್ನಡಿ, ಮಾಡುವುದೇನು, ತನ್ನನೆ ಒಲಿದಿಹನಾರ್ಸಿಸನು ?
ಗೂಢದ ಠಾವನು ಹುಡುಕುತಲವನು, ಯಾರಿಗು ಕಣ್ಣಿಗೆ ಕಾಣಿಸನು.
ಕನ್ನಡಿ ಕಾಣುವ ಭಯದಿಂದಾತನು ಈ ಪರಿ ಮರೆಯಾಗಿರಲಾಗ
ತಿಳಿಯಾಗಿಹ ನೀರಿನ ಕಾಲುವೆಗದು ವಿಧಿಯಿಂದಾಗಿದ್ದಿತು ಜಾಗ.
ಕಂಡನು ತನ್ನಯ ಬಿಂಬವ ನೀರೊಳು, ಕನಲಿದ, ಕಣ್ಣದು ಕೆಂಪಾಗಿ,
ನೆರಳೊಳು ಮರುಳಿಹುದೆನ್ನುತಲವನು, ನೀರನು ತೊರೆಯಲು, ಸೊಂಪಾಗಿ
ಕಣ್ಣಿಗೆ ಹಬ್ಬವ ಮಾಡುವ ಕಾಲುವೆ ಕೊಟ್ಟಿತು ಕಷ್ಟವ, ಬಿಡಲಂದು.
ಎನ್ನಯ ಮಾತಿದು ಲೋಗರಿಗೆಲ್ಲಾ ಅನ್ವಯವಪ್ಪುದು ತಾನಿಂದು.
ತನ್ನನೆ ಮೆಚ್ಚಿದ ಮನುಜನೆ ಆತ್ಮವು, ಕನ್ನಡಿ ಹೆರವರಲಿಹ ಕುಂದು.
ನಮ್ಮಯ ತಪ್ಪನು ತೋರ್ಪುದು ನಿಜದಿಂ, ಕಾಲುವೆಯೆಂಬುದು ತಾನೀಗ,
ಲಾರೋಷ್ ಫೂಕೋ ಪ್ರಭು ಬರೆದಿಟ್ಟಿಹ ಸೂತ್ರದ ಪುಸ್ತಕ ತಿಳಿ ಬೇಗ.

(ಅನುವಾದ) —ಟಿ. ಎಸ್. ಸುಬ್ಬರಾಯ

ಗುಜರಾತಿ ಸಾಹಿತ್ಯ ಚರಿತ್ರೆ

ಗುಜರಾತ್ ದೇಶವು ಭಾರತದ ಪಶ್ಚಿಮ ಭಾಗದ ಸಮುದ್ರತೀರದಲ್ಲಿದೆ. ಈ ಪ್ರದೇಶದ ಜನರಾಡುವ ಭಾಷೆಗೆ ಗುಜರಾತಿ ಎಂದು ಹೆಸರು. ಗುಜರಾತ್ ದೇಶವು, ಇದುವರೆಗೆ ಗುಜರಾತ್ ಎಂದು ಕರೆಯಲ್ಪಡುತ್ತಿದ್ದ ಪ್ರಾಂತ, ಸೌರಾಷ್ಟ್ರ ಮತ್ತು ಕಚ್ ಭಾಗಗಳನ್ನೊಳಗೊಂಡಿದೆ. ಇದರ ಜನಸಂಖ್ಯೆ ಸುಮಾರು ಒಂದು ಕೋಟಿ ಅಯ್ವತ್ತು ಲಕ್ಷ.

ಗುಜರಾತಿ ಭಾಷೆಯು ಸಂಸ್ಕೃತದಿಂದ ಶೌರಸೇನಿ ಪ್ರಾಕೃತ ಮತ್ತು ಗೌರ್ಜರ ಅಪಭ್ರಂಶಗಳ ಮೂಲಕ ತನ್ನ ಸ್ವರೂಪವನ್ನು ತಾಳಿದೆ. ಗುಜರಾತಿಯು ಪ್ರತ್ಯೇಕವಾದ ಭಾಷೆಯಾಗಿ ಸ್ಪಷ್ಟರೂಪವನ್ನು ತಾಳಿದುದು ಸುಮಾರು ಹನ್ನೆರಡನೆಯ ಶತಮಾನದ ಅಂತ್ಯಭಾಗದಲ್ಲಿ. ಆದರೆ ಸ್ಪಷ್ಟ ಗುಜರಾತಿ ನಾಮಧೇಯವನ್ನು ಪಡೆದುದು ಹದಿನೇಳನೆಯ ಶತಮಾನದಲ್ಲಿ. ಆ ಹೆಸರಿನ ಪ್ರಾಂತ ನಿರ್ಮಾಣವಾದ ಮೇಲೆಯೇ.

ಗುಜರಾತ್ ದೇಶದ ಸಾಹಿತ್ಯ ಚರಿತ್ರೆಯ ಆದಿ ಕ್ರಿ.ಶ. ಒಂದೆರಡನೆಯ ಶತಮಾನದ ಕಾಲಕ್ಕೆ ಹೋಗುತ್ತದೆ. ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿಯೇ ಆದಿ ಕಾಲದ ಗ್ರಂಥಗಳೆಲ್ಲವೂ ರಚಿತವಾದುವು. ಹದಿನೇಳನೆಯ ಶತಮಾನದವರೆಗೆ ರಾಜಾಸ್ಥಾನ ಮತ್ತು ಮಾಲ್ವಗಳೊಂದಿಗೆ ಬೆಳೆದುಬಂದುವು. ಆ ಶತಮಾನದಲ್ಲಿ ಈ ಮೂರು ಭಾಗಗಳೂ ಐಕ್ಯಗೊಂಡುವು. ಮೊದಲಿಂದಲೂ ಇವುಗಳ ಭಾಷೆ ನಿಕಟ ಸಂಬಂಧವನ್ನು ಪಡೆದಿದ್ದುವು.

ಆದಿಕಾಲದಿಂದ ಗುಜರಾತಿನಲ್ಲಿ ಪೌರಾಣಿಕ ಮತ್ತು ಧಾರ್ಮಿಕ ಕತೆಗಳೆಂಬ ಎರಡು ಪ್ರತ್ಯೇಕ ಸಾಹಿತ್ಯರೀತಿ ಬೆಳೆದುಬಂದಿದೆ. ಧಾರ್ಮಿಕ ಕತೆಗಳೆಲ್ಲ ಧಾರ್ಮಿಕ ಹಿನ್ನೆಲೆಯಿಂದ ಕೂಡಿದ ಪ್ರಣಯ ಕತೆಗಳು. ಇದುವರೆಗೆ ತಿಳಿದ ಮಟ್ಟಿಗೆ 'ತರಂಗ ಲೋಲ'ವೆಂಬುದು ಮೊದಲನೆಯ ಧರ್ಮ ಕತೆ, ಪ್ರಾಕೃತ ಭಾಷೆಯಲ್ಲಿದೆ. ಸೌರಾಷ್ಟ್ರ ದೇಶದ ಪಾಲಿಟಾನದ ಪಾದಲಿಪ್ತಾಚಾರ್ಯರೆಂಬುವರು ಅದರ ಕರ್ತೃ. ಈ ಪ್ರಣಯ ಕತೆಯಲ್ಲಿ ಎಂದೂ ಅಗಲದ ಚಕ್ರವಾಕ ಪಕ್ಷಿಗಳು ಪ್ರೇಮದ ಪ್ರತೀಕವಾಗಿ ಕತೆಯಲ್ಲಿ ಪ್ರಧಾನ ಪಾತ್ರವನ್ನು ವಹಿಸುವುವು.

ಗುಜರಾತಿನ ಪ್ರಾಚೀನ ಸಾಹಿತ್ಯ ಚರಿತ್ರೆಯಲ್ಲಿ ಸಂಸ್ಕೃತ ಗ್ರಂಥಗಳು ಬಹು ಮುಖ್ಯ ಸ್ಥಾನವನ್ನಾಕ್ರಮಿಸಿವೆ. ಸೌರಾಷ್ಟ್ರದಲ್ಲಿ ಜನಿಸಿ ಭಟ್ಟಿಕಾವ್ಯವನ್ನು ರಚಿಸಿದ ಭಟ್ಟಿಕವಿಯೂ ಅಬು ಪ್ರಾಂತದಲ್ಲಿ ಜನಿಸಿದ ಶಿಶುಪಾಲ ವಧೆಯ, ಕರ್ತೃವಾದ ಮಾಘಕವಿಯೂ ಈ ನಾಡಿನಲ್ಲಿ ಏಳೆಂಟನೆಯ ಶತಮಾನದಲ್ಲಿ ಭಹು ಪ್ರಖ್ಯಾತ ಗ್ರಂಥಕರ್ತರಾಗಿ ಕೀರ್ತಿವೆತ್ತಿದ್ದಾರೆ.

ಸುಮಾರು ಕ್ರಿ.ಶ. ೭೫೦ರಲ್ಲಿ ಹರಿಭದ್ರನೆಂಬ ಮತ್ತೊಬ್ಬ ಸುಪ್ರಸಿದ್ಧ ಕವಿ

ಇಲ್ಲಿ ಕಾಣಿಸಿಕೊಂಡನು. ಚಿತ್ತೋಡಿ ಜೈನಸಾಧುವೀತ. ಆತನು 'ಷಡ್ದರ್ಶನ ಸಮುಚ್ಚಯ' ಎಂಬ ದರ್ಶನಗ್ರಂಥವನ್ನೂ ಕೆಲವು ಧರ್ಮಕತೆಗಳನ್ನೂ ರಚಿಸಿದ್ದಾನೆ. ಆತನ ಧೂರ್ತಾಖ್ಯಾನವು ಅಂದಿನ ಕಾಲದ ಆಚಾರ ವಿಚಾರಗಳನ್ನು ಕುರಿತ ಬಹು ಕಟುವಾದ ವಿಡಂಬನ.

ಹತ್ತು, ಹನ್ನೊಂದು, ಹನ್ನೆರಡನೆಯ ಶತಮಾನಗಳಲ್ಲಿ ಗುಜರಾತಿನಲ್ಲಿ ಸಂಸ್ಕೃತ, ಪ್ರಾಕೃತ, ಅಪಭ್ರಂಶ ಮತ್ತು ದೇಶಭಾಷೆಯಲ್ಲಿ ವಿಶೇಷ ಗ್ರಂಥರಚನೆಯಾಯಿತು. ದಕ್ಷಿಣಗುಜರಾತ್ ಅಥವಾ ಲಾಟ ಪ್ರಾಂತದಲ್ಲಿ ಅನೇಕ ಕವಿಗಳಿದ್ದರು. ಅಲ್ಲಿ ಲಾಟಿ ಎಂಬ ಪ್ರತ್ಯೇಕ ಭಾಷಾಮಾರ್ಗವಿದ್ದಿತು. ಹಾಸ್ಯಪೂರ್ಣತೆಯೇ ಅದರ ವೈಶಿಷ್ಟ್ಯ. ಆ ಕಾಲದ ನಿಜವಾದ ಸಾಹಿತ್ಯಕೇಂದ್ರಗಳು ಗುಜರಾತ್ ಭಾಗವನ್ನೊಳಗೊಂಡಿದ್ದ ಮಾಲ್ವ ದೇಶದ ಉಜ್ಜಯಿನಿ ಮತ್ತು ಧಾರಾನಗರಗಳು. ಅಲ್ಲಿಯ ಪಾರಮಾರ ದೊರೆಗಳಲ್ಲಿ ಅನೇಕರು ಸ್ವತಃ ಕವಿಗಳೂ ಕವಿಜನಾಶ್ರಯರೂ ಆಗಿದ್ದರು. ಪಾರಮಾರ ಭೋಜನು ಬಹುಶಾಸ್ತ್ರಜ್ಞ, ಪಂಡಿತ, ಉದಾರಿಯಾದ ವಿದ್ವಜ್ಜನ ಪರಿಪಾಲಕ. ಇಲ್ಲಿಯವರೆಗೆ ಭಿನ್ನ ಶಾಸ್ತ್ರಗಳಿಗೆ ಸಂಬಂಧಪಟ್ಟ ಆತನಿಂದ ರಚಿತವಾದ ಮೂವತ್ತೊಂಬತ್ತು ಗ್ರಂಥಗಳು ಗುರುತಿಸಲ್ಪಟ್ಟಿವೆ. ಆತನ ಚರಿತ್ರೆಯಾದ "ಶೃಂಗಾರಮಂಜರಿ"ಯು ಬಹು ಆಕರ್ಷಕವಾಗಿದೆ.

ಮುಂದೆ ಅಧಿಕಾರವು ಅನಹಿಲವಾಡದ ಚಾಲುಕ್ಯರ ಕೈವಶವಾಯಿತು. ಅವರೇ ಇಂದಿನ ಗುಜರಾತಿನ ವಾಸ್ತವ ನಿರ್ಮಾಪಕರು. ಅವರು ಸ್ವತಃ ಕವಿಗಳಲ್ಲದಿದ್ದರೂ ವಿದ್ಯಾಪಕ್ಷಪಾತಿಗಳಾಗಿದ್ದರು. ಅವರಲ್ಲಿ ಸುಪ್ರಸಿದ್ಧನಾದ ಜಯಸಿಂಹನ ಆಶ್ರಯದಲ್ಲಿ ಬಹುಶ್ರುತನಾದ ಹೇಮಚಂದ್ರನಿದ್ದನು. ಆತನ ಅನೇಕ ಗ್ರಂಥಗಳು ಉಪಲಬ್ಧವಾಗಿ ಪ್ರಕಟವಾಗಿವೆ. ಅವು ಆ ಕಾಲದ ಭಾರತೀಯ ಸಾಹಿತ್ಯ ಮತ್ತು ವಿಜ್ಞಾನಗಳ ಕೈಗನ್ನಡಿಯಾಗಿವೆ. ಆತನು ಅಲಂಕಾರ, ವ್ಯಾಕರಣ, ನ್ಯಾಯಶಾಸ್ತ್ರ ನಿಘಂಟು, ಜೀವನಚರಿತ್ರೆ ಮೊದಲಾದ ವಿಷಯಿಕವಾದ ಗ್ರಂಥಗಳನ್ನೇ ಅಲ್ಲದೆ ತಾತ್ಕಾಲಿಕ ಇತಿಹಾಸ ವಿಷಯಿಕವಾದ ಕವನಗಳನ್ನೂ ರಚಿಸಿದ್ದಾನೆ. ಆತನ ಅನೇಕ ಶಿಷ್ಯರಲ್ಲಿ ಪ್ರಸಿದ್ಧನಾದ ರಾಮಚಂದ್ರನು ಅನೇಕ ನಾಟಕಗಳನ್ನು ರಚಿಸಿರುವುದಲ್ಲದೆ ನಾಟ್ಯಶಾಸ್ತ್ರ ವಿಷಯಿಕವಾದ ಲಕ್ಷಣಶಾಸ್ತ್ರವೊಂದನ್ನೂ ರಚಿಸಿದ್ದಾನೆ. ಹೇಮಚಂದ್ರನ ನೇತೃತ್ವದಲ್ಲಿ ಸಂಸ್ಕೃತ ಸಾಹಿತ್ಯ—ಅದರಲ್ಲಿಯೂ ಸಂಸ್ಕೃತ ನಾಟಕಗಳು—ಬಹು ವಿಶೇಷವಾಗಿ ಅಭಿವೃದ್ಧಿಯಾದುವು. ಈಗ ಗೊತ್ತಿರುವ ಸುಮಾರು ಆರುನೂರು ಸಂಸ್ಕೃತ ನಾಟಕಗಳಲ್ಲಿ ಇಪ್ಪತ್ತಾರು ಗುಜರಾತಿಗೆ ಸಂಬಂಧಪಟ್ಟವು. ಅವುಗಳಲ್ಲಿ ಇಪ್ಪತ್ತುಮೂರು ಹೇಮಚಂದ್ರ ಅಥವಾ ಅವನ ಶಿಷ್ಯರಿಂದ ರಚಿತವಾದುವು.

ಗುಜರಾತಿನ ಹನ್ನೆರಡು ಹದಿಮೂರನೆಯ ಶತಮಾನದ ಕಾವ್ಯ, ನಾಟಕ ಮತ್ತು ಕತೆಗಳು ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಲ್ಲಿ ಉಪಲಬ್ಧವಾಗಿವೆ. ಅವೆಲ್ಲ

ದೀರ್ಘ, ಕೃತಕ, ಆಡಂಬರಯುಕ್ತ; ಧಾರ್ಮಿಕ ಉತ್ಸಾಹಗಳ ಫಲಮಾತ್ರ. ವಾಸ್ತವ ಜೀವನಕ್ಕೆ ವಿಶೇಷವಾಗಿ ಸಂಬಂಧಪಟ್ಟವಲ್ಲ. ಸ್ಥೂಲವಾಗಿ ಹೇಳುವುದಾದರೆ ಇಲ್ಲಿಯ ವರೆಗಿನ ಸಂಸ್ಕೃತ ಪ್ರಾಕೃತ ಗ್ರಂಥಗಳೆಲ್ಲ ಪಂಡಿತರಿಂದ ಪಂಡಿತರಿಗಾಗಿಯೇ ರಚಿತ ವಾದುವು. ಅಂತಹ ಕಾಲದಲ್ಲಿಯೂ ಸಾಮಾನ್ಯ ಜನಗಳ ಉಪಯೋಗಕ್ಕಾಗಿ ನೈತಿಕ ಕತೆಗಳೂ ಜನಪದ ಗೀತೆಗಳೂ ದೇಶಭಾಷೆಯಲ್ಲಿಯೇ ಉದ್ಭವಿಸಿ ಸಾಮಾನ್ಯ ಜನರ ಮಧ್ಯೆ ಮಂದಗಾಮಿಯಾಗಿ ಬೆಳೆಯುತ್ತಿದ್ದುವು.

ಕ್ರಿ.ಶ. ೧೨೯೭ರಲ್ಲಿ ಅಲ್ಲಾವುದ್ದೀನ್ ಖಿಲ್ಜಿಯಿಂದ ಗುಜರಾತ್ ಆಕ್ರಮಿತವಾದ ಮೇಲೆ ಹಿಂದಿನ ರಾಜರು ನಡಸಿಕೊಂಡು ಬಂದ ಸಾಹಿತ್ಯಪಂಥಗಳೆಲ್ಲ ಮಾಯ ವಾದವು. ಪಂಡಿತರಿಗೂ ವಿದ್ವಾಂಸರಿಗೂ ರಾಜಾಶ್ರಯ ತಪ್ಪಿದುದರಿಂದ ಅವರು ಹಳ್ಳಿಗಳಿಗೆ ಹೋಗಿ ತಮ್ಮ ಕೃಷಿ ಕರ್ಮಕ್ಕೆ ಜನರಾಡುವ ಭಾಷೆಯನ್ನು ಮಾಧ್ಯಮ ವನ್ನಾಗಿ ಆರಿಸಿಕೊಂಡು ಅದರಲ್ಲಿ ಉದ್ಗ್ರಂಥಗಳನ್ನು ರಚಿಸಲು ಪ್ರಾರಂಭಿಸಿದರು. ವಾಸ್ತವವಾದ ಜೀವನಸಾಹಿತ್ಯಕ್ಕೂ ಕೃತಕಸಾಹಿತ್ಯಕ್ಕೂ ಇದ್ದ ಅಂತರ ಮಾಯ ವಾಗಿ ಏಕಮುಖವಾದ ದೇಶೀಯಸಾಹಿತ್ಯ ಬೆಳೆಯಲು ಪ್ರಾರಂಭವಾಗಿ ಗುಜರಾತಿ ನಲ್ಲಿ ಒಂದು ನವಸಾಹಿತ್ಯಯುಗದ ಅಂಕುರಾರ್ಪಣವಾಯಿತು.

ಈ ಹಳ್ಳಿಯ ಗುಜರಾತಿಸಾಹಿತ್ಯದ ಮೂಲವನ್ನು ಸುಮಾರು ಕ್ರಿ.ಶ. ೧೧೦೦ರ ವೇಳೆಗೆ ಗುರುತಿಸಬಹುದು. ಈ ಭಾಷೆಯಲ್ಲಿ ೧೧–೧೨ನೆಯ ಶತಮಾನ ಗಳಿಂದ ಪದ್ಯ ಗದ್ಯಾತ್ಮಕವಾದ ಉದ್ಗ್ರಂಥಗಳು ರಚಿತವಾಗಿರುವುದಕ್ಕೆ ಇತ್ತೀಚಿಗೆ ಅನೇಕ ಗ್ರಂಥಗಳು ಉಪಲಬ್ಧವಾಗಿರುವುದೇ ಸಾಕ್ಷಿಯಾಗಿದೆ. ಆದರೂ ಆದಿ ಕಾಲದ ಗುಜರಾತಿ ಸಾಹಿತ್ಯದಲ್ಲಿ ಪ್ರಧಾನವಾದುವು ಫಾಗು ಗೀತೆಗಳು, ಬಾರ ಮಾಸಿಗಳು, ಗರಬಿಗಳು ಮತ್ತು ರಾಸಗಳು. ಫಾಗು ಗೀತೆಗಳು ಸಾಮಾನ್ಯವಾಗಿ ಸುಗ್ಗಿಯ ಹಾಡುಗಳು. ಬಾರಮಾಸಿಗಳು ಋತುಮಾನಗಳನ್ನು ಅನುಸರಿಸಿ ವರ್ಷದ ಹನ್ನೆರಡು ತಿಂಗಳಿನಲ್ಲಿಯೂ ಹಾಡುವ ಲಘುಗೀತೆಗಳು. ಸ್ತ್ರೀಯರು ದೀಪದ ಕಂಬದ ಸುತ್ತಲೂ ತಾಳಲಯಗಳ ಸಮನ್ವಯದೊಡನೆ ನಾಟ್ಯವಾಡಿಕೊಂಡು ಹಾಡುವ ಗೀತೆಗಳು ಗರಬಿಗಳು. ಇವು ಗುಜರಾತಿಗೆ ಬಹು ವಿಶೇಷವಾದುವು. ಇವು ಗಳ ವೈಭವವನ್ನು ಇಂದೂ ಗುಜರಾತಿನಲ್ಲಿ ಅಲ್ಲಲ್ಲಿ ಕಾಣಬಹುದಾಗಿದೆ.

ರಾಸಗಳು ಒಂದು ವಿಧವಾದ ನಾಟ್ಯಗೀತಗಳು. ರಾಧಾಕೃಷ್ಣರ ಪ್ರಣಯ ಸಂಬಂಧವಾದವು. ಪ್ರಧಾನವಾದ ಹಬ್ಬಹರಿದಿನಗಳ ಕಾಲದಲ್ಲೆಲ್ಲಾ ಇದನ್ನೂ ಹಾಡುವ ಪದ್ಧತಿಯಿತ್ತು. ಅನೇಕ ಜನ ಸ್ತ್ರೀ ಪುರುಷರು ಗುಂಪು ಸೇರಿ ರಾಸಲೀಲೆ ಗಳನ್ನು ಅಭ್ಯಾಸಮಾಡಿ ಊರಿಂದ ಊರಿಗೆ ಸಂಚಾರಮಾಡಿ ಜನರ ಮುಂದೆ ಪ್ರದರ್ಶನ ನಡೆಸಿ ಅವರ ಮನರಂಜನೆಗೆ ಕಾರಣವಾಗುತ್ತಿದ್ದರು. ಒಂದು ವಿಧದಲ್ಲಿ ಮುಂದೆ ಗುಜರಾತಿನಲ್ಲಿ ರೂಪಗೊಂಡ 'ಯಾತ್ರೆ'ಗಳೆಂಬ ರೂಪಕಗಳಿಗೆ ಈ ರಾಸ ಲೀಲೆಗಳೇ ಮೂಲವೆಂದು ಹೇಳಬಹುದು. ಯಾವ ಸಂಪ್ರದಾಯ ನಿರ್ಬಂಧವಿಲ್ಲದೆ

ದೇಶೀಯ ರಾಗತಾಳಗಳಿಗೆ ಹೊಂದಿಕೊಳ್ಳಬಹುದಾದ ಸ್ವತಂತ್ರ ಗತಿ ರಾಸಗಳ ವೈಶಿಷ್ಟ್ಯ. ವಸಂತ ಋತುವಿನಲ್ಲಿ ಹಾಡುತ್ತಿದ್ದ ಈ ರಾಸಗಳೇ ಮೇಲೆ ಹೇಳಿದ ಫಾಗು ಗೀತೆಗಳು.

ಕಾಲಾನುಕಾಲದಲ್ಲಿ ಅಂದರೆ ಸುಮಾರು ಹನ್ನೊಂದನೆಯ ಶತಮಾನದ ಅಂತ್ಯದ ವೇಳೆಗೆ ರಾಸಗಳ ಅರ್ಥ ವ್ಯತ್ಯಾಸವಾಗತೊಡಗಿತು. ಅಪಭ್ರಂಶ ಛಂದಸ್ಸುಗಳಾದ ದೋಹ ಚಪಾಯಿ ವೃತ್ತಗಳಲ್ಲಿ ತಾಳಲಯಬದ್ಧವಾಗಿ ರಚಿತವಾಗುವ ದೀರ್ಘವಾದ ಕಥನಕವನಗಳನ್ನೆಲ್ಲ ರಾಸಗಳೆಂಬ ಅಭಿಧಾನದಿಂದ ಕರೆಯುವ ರೂಢಿ ಬಂದಿತು. ಕ್ರಿ. ಶ. ೧೧೮೫ರಲ್ಲಿ ಶಾಲಿಭದ್ರನಿಂದ ರಚಿತವಾದ ಭರತೇಶ್ವರ ಬಾಹುಬಲಿ ರಾಸವೆ ಇಂತಹ ಮೊದಲನೆಯ ರಾಸ. ಮೊದಮೊದಲು ಜನಪ್ರಿಯ ಚರಿತೆಗಳೂ ಧರ್ಮಕತೆಗಳೂ ರಾಸಗಳೆಂದು ಕರೆಯಲ್ಪಟ್ಟು ಕಾಲಾನುಕಾಲದಲ್ಲಿ ವಿಷಯ, ಶೈಲಿ, ರೀತಿಗಳ ಯಾವ ಗಣನೆಯಿಲ್ಲದೆ ಸಾಮಾನ್ಯವಾಗಿ ಹಾಡಲು ಯೋಗ್ಯವಾದ ಎಲ್ಲ ಕವನಗಳನ್ನೂ ರಾಸಗಳೆಂದು ಕರೆದು ಹಾಡಲು ಮೊದಲುಮಾಡಿದರು. ಇದರ ಫಲವಾಗಿ ರಾಸಗಳ ವೈಶಿಷ್ಟ್ಯ ನಾಶವಾಗಿ ಅದರ ಆಕರ್ಷಣೆ ಕಡಿಮೆಯಾಯಿತು.

ಪ್ರಾಚೀನ ಗುಜರಾತಿ ಭಾಷೆಯಲ್ಲಿ ರಾಸಗಳಂತೆಯೇ ಧರ್ಮಕತೆಗಳೂ ಪ್ರಧಾನ ಸ್ಥಾನವನ್ನಾಕ್ರಮಿಸಿವೆ. ಇವೆಲ್ಲ ಸಾಮಾನ್ಯವಾಗಿ ಜೈನ ಸಾಧುಗಳಿಂದ ರಚಿತವಾದುವು. ಪದ್ಯ ಗದ್ಯಗಳೆರಡರಲ್ಲಿಯೂ ರಚಿತವಾಗಿವೆ. ಮತಪ್ರಚಾರವೇ ಇದರ ಪ್ರಧಾನವಾದ ಗುರಿ. ಅದ್ಭುತವಾದ ಸನ್ನಿವೇಶಗಳು, ಸ್ವಮತಪ್ರಶಂಸೆ ಮತ್ತು ಪರಮತ ಖಂಡನೆ, ಪ್ರಾಸಬದ್ಧವಾದ ಆಕರ್ಷಕ ಶೈಲಿ, ಅಲಂಕಾರ ಭೂಯಿಷ್ಠವಾದ ಭಾಷೆ ಇವು ಇವುಗಳ ಸಾಮಾನ್ಯಸ್ವರೂಪ. ಸೋಮಸುಂದರನ 'ರಂಗಸಾಗರನೇಮಿ ಫಾಗ' 'ಉಪದೇಶಮಾಲಾ' ಮತ್ತು 'ಯೋಗಶಾಸ್ತ್ರ'ಗಳೂ ತರುಣಪ್ರಭನ 'ಪ್ರತಿಕ್ರಮಣ ಬಾಲಾವಬೋಧ' ಮಾಣಿಕ್ಯಚಂದ್ರನ 'ಪೃಥ್ವೀಚಂದ್ರ ಚರಿತ್ರೆ' ಇವು ಈ ಜಾತಿಗೆ ಸೇರಿದವು.

ಗುಜರಾತಿಯಲ್ಲಿ ವೀರಗೀತಗಳಿಲ್ಲದೇ ಇಲ್ಲ. ಆದಿಕಾಲದಲ್ಲಿ ಸಂಸ್ಕೃತ ಪ್ರಾಕೃತ, ಅಪಭ್ರಂಶಗಳಲ್ಲಿ ರಚಿತವಾಗಿದ್ದಂತೆಯೇ ಪ್ರಾಚೀನ ಗುಜರಾತಿಯಲ್ಲಿಯೂ ಅನೇಕ ವೀರಕವನಗಳು ರಚಿತವಾಗಿದ್ದಿರಬೇಕು. ಆದರೆ ಅವುಗಳಲ್ಲಿ ಅನೇಕವು ನಾಶವಾಗಿವೆ. ಈಗ ಉಪಲಬ್ಧವಾಗಿರುವುವು ಶ್ರೀಧರ ವಿರಚಿತವಾದ 'ರಣಮಲ್ಲ ಚಂದ್' ಮತ್ತು ಪದ್ಮನಾಭ ವಿರಚಿತ 'ಕಾನ್ಹಾಡಾಡೇ ಪ್ರಬಂಧ' ಎಂಬೆರಡೇ. ಈದರಿನ ವೀರನಾದ ರಣಮಲ್ಲನ ಅದ್ಭುತ ಸಾಹಸಗಳನ್ನು ವರ್ಣಿಸುವ ಕಿರುಕವನ 'ರಣಮಲ್ಲಚಂದ್' ಅದರಲ್ಲಿ ಹರಿಗೀತ, ತ್ರೋಟಕ, ಭುಜಂಗ ಮುಂತಾದ ಛಂದಸ್ಸುಗಳಿಂದ ಕೂಡಿದ ಎಪ್ಪತ್ತು ಪದ್ಯಗಳು ಮಾತ್ರ ಇವೆ. ಭಾಷೆಯು ಬಹು ಪ್ರಾಚೀನತಮವಾದುದಾದರೂ ನಾಟಕೀಯವಾಗಿಯೂ ಪ್ರಾಸಬದ್ಧವಾಗಿಯೂ ಇದೆ.

'ಕಾನ್ಹಾಡಾಡೇ ಪ್ರಬಂಧ'ವು ಒಂದು ಸಾಂಪ್ರದಾಯಿಕ ಶೈಲಿಯಲ್ಲಿ ರಚಿತವಾದ

ಮಹಾಕಾವ್ಯ. ಹದಿಮೂರನೆಯ ಶತಮಾನಾಂತ್ಯದಲ್ಲಿ ಗುಜರಾತನ್ನು ಆಕ್ರಮಿಸಿಕೊಂಡ ಮಹಮ್ಮದೀಯರೊಡನೆ ಗುಜರಾತ್ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕಾಗಿ ನಡಸಿದ ಅದ್ಭುತ ಸಾಹಸ ಪ್ರದರ್ಶನದ ವಿಷಯ ಇದರ ಕಥಾವಸ್ತು. ಆ ಕಾಲದ ಜನರ ಅಸೀಮ ದೇಶಭಕ್ತಿ ಪರಾಕ್ರಮಗಳ ಪ್ರತೀಕವೇ ಇದಾಗಿದೆ. ಕೃತಿಕಾರನಾದ ಪದ್ಮಾನಾಭನು ವಿಶಾಲ ನಗರದವನು. ಚಹಮಾನ ವಂಶದ ಅಖೇರಾಜನ ಆಸ್ಥಾನ ಕವಿ. ಗ್ರಂಥದ ಭಾಷೆ ಹಳೆಯ ಗುಜರಾತಿ. ಶೈಲಿ ವಿಶೇಷ ಸರಳವಲ್ಲದಿದ್ದರೂ ಭಾವಪೂರ್ಣವಾಗಿದೆ. ಕಾವ್ಯದ ಉದ್ದಕ್ಕೂ ವಾಚಕರ ಮನಸ್ಸನ್ನು ಸೆಳೆಯತಕ್ಕದ್ದಾಗಿದೆ. ಆದರೂ ಸಾಂಪ್ರದಾಯಿಕ ರಾಜಪುತ್ರ ಮತ್ತು ಮಹಮ್ಮದೀಯರ ಹೆಸರುಗಳೂ ದೀರ್ಘವಾದ ನೈತಿಕ ಉಪದೇಶಗಳೂ ಜುಗುಪ್ಸೆಯನ್ನುಂಟುಮಾಡುವ ವರ್ಣನೆಗಳೂ ಅಲ್ಲಲ್ಲಿ ಬರುತ್ತವೆ. ಪುನರುಕ್ತಿಗಳಿಲ್ಲದಿಲ್ಲ. ಇಷ್ಟಾದರೂ ಕಥನ ಕವನಗಳ ದೃಷ್ಟಿಯಿಂದ ಇದು ಅನೇಕ ರಾಸಗಳಿಗಿಂತ ಉತ್ತಮವಾಗಿದೆ.

೧೫ನೆಯ ಶತಮಾನದಿಂದ ೧೮ನೆಯ ಶತಮಾನದವರೆಗೆ ಗುಜರಾತನ್ನು ಅಹಮದಾಬಾದ್ ಸುಲ್ತಾನರೂ ಮೊಗಲರೂ ಆಳಿದರು. ಈ ಕಾಲದಲ್ಲಿ ರಾಜಕೀಯ ಚರಿತ್ರೆಗೂ ಜನಜೀವನಕ್ಕೂ ಸಂಬಂಧವು ಪೂರ್ಣವಾಗಿ ತಪ್ಪಿಹೋಯಿತು. ಜನರ ದೃಷ್ಟಿಕೋಣ ಸಂಕುಚಿತವಾಗಿ ಜೀವನಕ್ಷೇತ್ರ ವಿಕಾಸವಾದುದರಿಂದ ಅವರಲ್ಲಿ ಪ್ರತ್ಯೇಕ ಮನೋಭಾವವೂ ಹೊಸ ಸಾಹಿತ್ಯ ಸಂಪ್ರದಾಯವೂ ಪ್ರಾರಂಭವಾದುವು. ಜನಸಾಮಾನ್ಯರು ರಾಜಕೀಯ ಪರಿವರ್ತನೆಗಳನ್ನೂ ಸಾಮಾಜಿಕ ಆಗುಹೋಗುಗಳನ್ನೂ ಮರೆತು ಆಧ್ಯಾತ್ಮಿಕ ಮನೋಭಾವವುಳ್ಳವರಾದರು.

ಇಂತಹ ಕಾಲದಲ್ಲಿ ಪ್ರಾಚೀನಕಾಲದಿಂದ ಅನುಸ್ಯೂತವಾಗಿ ಬೆಳೆದುಬಂದ ಪುರಾಣಗಳು ಜನಜೀವನದ ಮೇಲೆ ವಿಶೇಷ ಪರಿಣಾಮಕಾರಿಯಾದುವು. ಪರಮತೀಯರ ಭಿನ್ನ ಆಚಾರ ವ್ಯವಹಾರಗಳ ಮಧ್ಯೆ ಪೌರಾಣಿಕ ಕತೆಗಳೂ ಧಾರ್ಮಿಕ ಪುರುಷರ ಜೀವನ ಚರಿತ್ರೆಗಳೂ ಹಿಂದುಗಳ ಐಕ್ಯತೆಗೂ ಅವರ ಆತ್ಮೋದ್ಧಾರಕ್ಕೂ ಸಹಾಯಕಗಳಾದುವು. ಈ ಆಪತ್ಕಾಲದಲ್ಲಿ ಪ್ರಾಚೀನ ಪಂಡಿತರೂ ವಿದ್ವಾಂಸರೂ ಕವಿಗಳೂ ಸ್ವಧರ್ಮ ರಕ್ಷಣೆಗಾಗಿಯೂ ಸಂಸ್ಕೃತಿಯ ಪುನರುದ್ಧಾರಕ್ಕಾಗಿಯೂ ಅದ್ಭುತ ರೀತಿಯಲ್ಲಿ ಹೊಸ ವಾತಾವರಣಕ್ಕೆ ಹೊಂದಿಕೊಂಡು ದೇಶಭಾಷೆಗಳ ಮೂಲಕ ಆರ್ಯ ಸಂಸ್ಕೃತಿಯ ಸತ್ವಸಾರವನ್ನು ಜನಸಾಮಾನ್ಯದಲ್ಲಿ ಪ್ರಚಾರಮಾಡಲು ಹೊರಟರು.

ಈ ಕಾಲಕ್ಕೆ ಸರಿಯಾಗಿ ಅಂದರೆ ಸುಮಾರು ೧೪ನೆಯ ಶತಮಾನದ ಆರಂಭದಲ್ಲಿ ಭಗವದ್ರಾಮಾನುಜ ಪಂಥೀಯನಾದ ರಮಾನಂದನು ಜನ್ಮವೆತ್ತಿ ತನ್ನ ಹೊಸ ಪಂಥವನ್ನು ಸ್ಥಾಪಿಸಿದನು. ದೈವಭಕ್ತಿ, ಹೃದಯಪರಿಶುದ್ಧಿ, ಸರ್ವಸಮಾನತೆ ಇವೇ ಅವನ ಉಪದೇಶದ ಸಾರ. ಇದನ್ನು ಸಾಧಿಸುವ ಪ್ರಯತ್ನದಲ್ಲಿ ಆತನು ಪ್ರಾಚೀನಕಾಲದಿಂದ ಬಂದ ವೇದ, ಶಾಸ್ತ್ರ, ಯಜ್ಞ, ಆಚಾರ, ವರ್ಣ ಮತ್ತು

ಸಂಸ್ಕೃತ ಭಾಷೆಯನ್ನೂ ಪ್ರತಿಭಟಿಸಿದನು. ಆತನ ಉಪದೇಶಗಳು ಕೆಳವರ್ಗದ ಹಿಂದೂ ಮಹಮ್ಮದೀಯರಿಬ್ಬರ ಮೇಲೂ ವಿಶೇಷ ಪರಿಣಾಮಕಾರಿಯಾದುವು. ಆದುದರಿಂದಲೇ ನೆಯ್ಗೆಯವನಾದ ಕಬೀರ್, ಚಮ್ಮಾರನಾದ ರಾಯ್‌ದಾಸ್, ನಾಯಿಂದನಾದ ಸೇನ್, ಕಟುಕನಾದ ಸದ್ನಾ, ಬ್ರಾಹ್ಮಣನಾದ ನರಹರಿದಾಸ್ ಮೊದಲಾದವರೆಲ್ಲ ಅವನ ಶಿಷ್ಯವರ್ಗದಲ್ಲಿ ಸೇರಿದರು. ಕಬೀರ ಪಂಥವು ಅನೇಕ ಶಿಷ್ಯಸಂಪತ್ತಿಯನ್ನು ಪಡೆಯಿತು. ರಾಯ್‌ದಾಸನ ಶಿಷ್ಯನಾದ ಗುರುನಾನಕ್ ಸಿಕ್‌ಮತಸ್ಥಾಪಕನಾದನು. ನರಹರಿದಾಸನ ಶಿಷ್ಯನೇ ರಾಮಚರಿತ ಮಾನಸದ ಕರ್ತೃವಾದ ತುಳಸೀದಾಸ್. ಇವರೆಲ್ಲರ ಪ್ರಭಾವವು ಆ ಕಾಲದ ಸಾಹಿತ್ಯ ಸಂಸ್ಕೃತಿಗಳ ಪುನರುದ್ಧಾರಕ್ಕೆ ಪ್ರೇರಕಗಳಾದುವು. ರಾಮೋಪಾಸಕರಾದ ರಮಾನಂದೀಯರು ರಾಮ, ಕೃಷ್ಣ ಭಕ್ತಿಯನ್ನು ಅಭಿವೃದ್ಧಿಗೊಳಿಸಿ, ಪೌರಾಣಿಕ ಸಾಹಿತ್ಯವನ್ನು ಬೆಳಸಿ ದೇಶ ಭಾಷೆಯ ಬೆಳವಣಿಗೆಗೆ ವಿಶೇಷ ಸಹಾಯಮಾಡಿದರು.

ಗುಜರಾತಿನಲ್ಲಿ ರಮಾನಂದೀಯರ ಉಪದೇಶದ ಫಲವಾಗಿ ಆಖ್ಯಾನವೆಂಬ ಒಂದು ಹೊಸ ಸಾಹಿತ್ಯರೀತಿ ಬಳಕೆಗೆ ಬಂದಿತು. ಸಂಸ್ಕೃತಕ್ಕೆ ಪ್ರಾಶಸ್ತ್ಯವಿದ್ದ ಕಾಲದಲ್ಲಿ ಸಂಸ್ಕೃತ ಪುರಾಣಗಳನ್ನು ಪಂಡಿತರು-ಪೌರಾಣಿಕರು ಜನಸಾಮಾನ್ಯರಿಗೆ ಅಕ್ಷರಶಃ ಓದಿ ಅದರ ನೇರವಾದ ಸರಳಾನುವಾದವನ್ನು ವಿವರಿಸುತ್ತಿದ್ದರು. ಆ ಭಾಷೆಗೆ ಪ್ರೋತ್ಸಾಹ ಕಡಿಮೆಯಾದ ಮೇಲೆ ಪಂಡಿತರ ಸಂಖ್ಯೆಯೂ ಕಡಿಮೆಯಾಯಿತು. ಸಂಸ್ಕೃತಭಾಷಾ ಪರಿಚಿತರಾದವರೂ ವಿರಳರಾದರು. ಅವರ ಸ್ಥಾನದಲ್ಲಿ ಜನಗಳ ಮನರಂಜನೆಗಾಗಿ ಕತೆಗಳನ್ನು ಹೇಳುತ್ತಿದ್ದ ಭಟ್ಟರೆಂಬ ಬ್ರಾಹ್ಮಣ ವರ್ಗವು ಉದ್ಭವವಾಯಿತು. ಮೇಲೆಯೇ ತಿಳಿಸಿರುವಂತೆ ಇವರಿಗೆ ಸಂಸ್ಕೃತ ಭಾಷಾಜ್ಞಾನವಾಗಲಿ ಮೂಲ ಪುರಾಣಗಳ ಪೂರ್ಣ ಪರಿಚಯವಾಗಲಿ ಇಲ್ಲ. ಪುರಾಣಗಳ ಕತೆಯ ಆಧಾರದ ಮೇಲೆ ದೇಶೀಯ ಭಾಷೆಯಲ್ಲಿ ರಚಿತವಾದ ತತ್ಸಂಬಂಧವಾದ ಕಾವ್ಯಗಳ ಸಹಾಯದಿಂದ ಹೊಸ ಉಪಕತೆಗಳನ್ನೂ ತಾತ್ಕಾಲಿಕ ಸಂಗತಿಗಳನ್ನೂ ಒಟ್ಟುಗೂಡಿಸಿ ಜನಗಳಿಗೆ ಆಕರ್ಷಕವಾಗುವಂತೆ ಉಪನ್ಯಾಸ ಮಾಡತೊಡಗಿದರು. ಇವರು ಗುಜರಾತ್ ದೇಶಭಾಷೆಗೆ ಮಾಡಿದ ಸೇವೆ ಅಪಾರವಾದುದು. ಈ ಭಟ್ಟರು ಮಾನ್ ಅಥವಾ ಗಾಗರ್ ಎಂಬ ತಾಮ್ರದ ತಾಳವಾದ್ಯದ ಸಹಾಯದಿಂದ ತಮ್ಮ ಆಖ್ಯಾನಗಳನ್ನು ಪ್ರವಚನಮಾಡುತ್ತಿದ್ದುದರಿಂದ ಇವರಿಗೆ ಗಾಗೇರಿಯಾ ಭಟ್ಟರೆಂಬ ಉಪನಾಮಧೇಯವಾಯಿತು. ಇವರು ಸ್ಥಳದಿಂದ ಸ್ಥಳಕ್ಕೆ ಸಂಚಾರಮಾಡಿ ಸ್ಥಳೀಯ ಜನಗಳ ಮನಸ್ಸನ್ನು ಆಕರ್ಷಿಸಿ ಅವರ ಆದರಾತಿಥ್ಯಗಳಿಗೆ ಪಾತ್ರರಾಗಿ ಮಾಸಾಂತರಗಳು ಅಲ್ಲಿ ಆಖ್ಯಾನಗಳನ್ನು ನಡಸಿ ಅವರಿಂದ ವಿಶೇಷವಾಗಿ ಬಹುಮಾನಿತರಾಗುತ್ತಿದ್ದರು. ಈ ಆಖ್ಯಾನಗಳಲ್ಲಿ ಅನೇಕವು ಗ್ರಂಥಸ್ಥವಾಗದೆ ಬಾಯಿಪಾಠವಾಗಿಯೇ ಇದ್ದು ಕಾಲಕಾಲಕ್ಕೆ ಭಟ್ಟನ ಪಾಂಡಿತ್ಯ ಪ್ರೌಢಿಮೆಗಳಿಗನುಗುಣವಾಗಿ ಅನೇಕ ರೂಪಾಂತರವನ್ನು ತಾಳಿವೆ. ಸಾಮಾನ್ಯಾಕಾರದಲ್ಲಿ ಇವು

ರಾಸಗಳಂತಿದ್ದರೂ ಇವುಗಳ ಕಥನಭಾಗವು ಸಂಗ್ರಹವಾಗಿಯೂ ಭಾಷೆಯು ಸಂಸ್ಕೃತಭೂಯಿಷ್ಠವಾಗಿಯೂ ಭಿನ್ನ ಭಾಗಗಳ ಜೋಡಣೆಯು ಕ್ರಮಬದ್ಧವಾಗಿಯೂ ಇದ್ದು ಮೂಲ ಪೌರಾಣಿಕ ಕತೆಗಳ ಸರಳಾನುವಾದವಾಗಿರುತ್ತವೆ.

ಭಾಲನ್ ಎಂಬುವನು ಆಖ್ಯಾನ ಸಾಹಿತ್ಯದ ಜನಕನೆಂದು ಹೇಳಬಹುದು. ಅವನು ಪಾಟಣ ದೇಶದ ಮೋಢ ಬ್ರಾಹ್ಮಣ. ಸುಮಾರು ಹದಿನೈದನೆಯ ಶತಮಾನದಲ್ಲಿದ್ದವನು. ಈತನ ಗ್ರಂಥಗಳಿಂದ ಇವನಿಗೆ ಪುರಾಣೇತಿಹಾಸಗಳ ಪೂರ್ಣ ಪರಿಚಯವಿತ್ತೆಂದು ಊಹಿಸಬಹುದಾಗಿದೆ. ಮೊದಲು ಶೈವನಾಗಿದ್ದ ಇವನು ರಮಾನಂದೀಯರ ಸಂಪರ್ಕದಿಂದ ಉಚ್ಚ ರಾಮಭಕ್ತನಾಗಿ ಆ ಕಾಲಕ್ಕೆ ಸಾರ್ವತ್ರಿಕವಾಗಿ ಬೇಕಾಗಿದ್ದ ಆಖ್ಯಾನಗಳನ್ನು ದೇಶಭಾಷೆಯಲ್ಲಿ ರಚಿಸಿ ಮಹೋಪಕಾರ ಮಾಡಿದನು. ಇದರಿಂದ ಅವನು ಸಂಪ್ರದಾಯಬದ್ಧರಾದ ವೈದಿಕ ವಿದ್ವಾಂಸರ ಆಗ್ರಹಕ್ಕೂ ಪಾತ್ರವಾಗಬೇಕಾಯಿತು. ಅದಕ್ಕೆ ಹೆದರದೆ ಅವನು ಮೊದಮೊದಲು ಸಾಮಾನ್ಯವಾದ ಪುರಾಣ ಕತೆಗಳ ಅನುವಾದವನ್ನು ಮಾತ್ರ ಮಾಡಲು ಹೊರಟು ಕಾಲಾನುಕಾಲದಲ್ಲಿ ಅವುಗಳನ್ನು ಹಿಗ್ಗಿಸಿ ಕುಗ್ಗಿಸಿ ಮಾರ್ಪಡಿಸಿ ಹೊಸ ವಿಷಯಗಳನ್ನು ಸೇರಿಸಿ ಕೊನೆಗೆ 'ಆಖ್ಯಾನ'ಗಳೆಂಬ ಹೊಸ ಸಾಹಿತ್ಯ ರೀತಿಯನ್ನು ಸ್ಥಾಪಿಸಿದನು. ಅವನ ಬರವಣಿಗೆ ಬಹು ಸರಳವಾಗಿಯೂ ಭಾವಪೂರ್ಣವಾಗಿಯೂ ಇದೆ. ಆದಿಕಾಲದಲ್ಲಿ ಅವನು 'ಹರಸಂವಾದ', 'ಸಪ್ತಶತಿ' ಮತ್ತು 'ಮೃಗೀ ಆಖ್ಯಾನ' ಎಂಬ ಗ್ರಂಥಗಳನ್ನು ರಚಿಸಿದನು. ಮುಂದೆ ಭಾಲನು ಸಂಸ್ಕೃತದ ಉದ್ದಾಮ ಗದ್ಯಕವಿಯಾದ ಬಾಣನ ಕಾದಂಬರಿಯನ್ನು ಗುಜರಾತಿ ಭಾಷೆಯಲ್ಲಿ ಸಂಗ್ರಹಿಸಿದನು. ಇದು ಎಲ್ಲ ದೃಷ್ಟಿಯಿಂದಲೂ ಬಹು ಶ್ಲಾಘ್ಯವಾಗಿ ಕೃತಿ ಕರ್ತನಿಗೆ ವಿಶೇಷ ಕೀರ್ತಿಯನ್ನು ತರತಕ್ಕದ್ದಾಗಿದೆ. ಅವನ ಕೃತಿರಚನೆಯ ಕ್ಷೇತ್ರ ಬಹು ವಿಸ್ತಾರವಾದುದು. 'ರಾಮವಿರಹ', 'ರಾಮಬಾಲಚರಿತ', 'ಜಲಂಧರಾಖ್ಯಾನ', 'ದೂರ್ವಾಸಾಖ್ಯಾನ', 'ಧ್ರುವಾಖ್ಯಾನ', 'ಕೃಷ್ಣವಿಷ್ಟಿ', 'ಕೃಷ್ಣ ಬಾಲಚರಿತ ದಶಮಸ್ಕಂಧ', 'ರುಕ್ಮಿಣೀ ಹರಣ', 'ಸತ್ಯಭಾಮಾ ವಿವಾಹ' ಮೊದಲಾದುವು ಅವನ ಆಖ್ಯಾನಗಳಲ್ಲಿ ಮುಖ್ಯವಾದುವು. ಭಾಲನು ಕೃಷ್ಣ ಚರಿತೆಗೆ ಸಂಬಂಧಪಟ್ಟ ಗ್ರಂಥಗಳಲ್ಲೆಲ್ಲ ಗರಬಿಗಳನ್ನು ಉಪಯೋಗಿಸಿಕೊಂಡು ಭಾಷೆಗೆ ಒಂದು ಸರಳತೆಯನ್ನೂ ಭಾವಪ್ರದರ್ಶನಕ್ಕೆ ಪ್ರೇರಕತೆಯನ್ನೂ ಉಂಟುಮಾಡಿದನು. ಇದರ ಜನಪ್ರಿಯತೆಯನ್ನು ಕಂಡು ಮುಂದಿನ ಅನೇಕ ಕವಿಗಳು ಇದನ್ನು ಅನುಕರಿಸಿದ್ದಾರೆ. ಗುಜರಾತಿ ಸಾಹಿತ್ಯ ಚರಿತ್ರೆಯಲ್ಲಿ ಭಾಲನಿಗೆ (ಒಂದು ಪ್ರತ್ಯೇಕ ಸಾಹಿತ್ಯ ರೀತಿಯನ್ನು ಸ್ಥಾಪಿಸಿದುದರಿಂದ) ವಿಶೇಷ ಸ್ಥಾನವಿದೆ. ಆ ಮಾದರಿಯಲ್ಲಿ ಮುಂದೆ ಅನೇಕರು ಆಖ್ಯಾನಗಳನ್ನು ರಚಿಸಿದರೂ ಪ್ರೇಮಾನಂದನು ವಿನಾ ಮತ್ತಾರೂ ಅವನನ್ನು ಮೀರಿಸಲಾಗಲಿಲ್ಲ. ಅವನಿಗೆ ಭಾಷಾಂತರ ಕಲೆಯೇ ಅಲ್ಲದೆ ದೇಶ ಭಾಷೆಗೆ ಅಳವಡಿಸಿಕೊಳ್ಳುವ ರೀತಿಯೂ ಅತ್ಯುತ್ತಮವಾಗಿ ತಿಳಿದಿತ್ತು. ಆದುದ

ರಿಂದಲೇ ಆತನು ಹಿಂದಿನಿಂದ ಬಂದ ಸಾಹಿತ್ಯಮಾರ್ಗವನ್ನು ಛಂದಸ್ಸು, ಶೈಲಿ, ರೀತಿ, ದೃಷ್ಟಿಕೋಣ ಮತ್ತು ಯೋಗ್ಯತೆಗಳಲ್ಲಿ ಮಾರ್ಪಡಿಸಿದನು.

ಮೇಲೆಯೇ ತಿಳಿಸಿರುವಂತೆ ಹದಿನೈದನೆಯ ಶತಮಾನದ ವೇಳೆಗೆ ಉತ್ತರ ಭಾರತದಲ್ಲಿ ಅನೇಕ ಭಕ್ತಿಪಂಥಗಳು ತಲೆದೋರಿ ಜನಗಳ ಮೇಲೆ ವಿಶೇಷ ಪರಿಣಾಮ ಕಾರಿಯಾದುವು. ವೈಯಕ್ತಿವಾದ ಭಕ್ತಿ ಅಥವಾ ಐಹಿಕ ಪ್ರೇಮವೇ ಆರಾಧ್ಯ ದೈವದ ಸಾಕ್ಷಾತ್ಕಾರ ಮಾರ್ಗಕ್ಕೆ ಸಾಧನವಾಯಿತು. ಈ ಭಕ್ತಿಪಂಥಗಳು ಭಾರತದ ಅನೇಕ ಕಡೆ ಅನೇಕ ರೂಪವನ್ನು ತಾಳಿ ದೇಶಾದ್ಯಂತ ರೂಢಮೂಲವಾದುವು. ದಕ್ಷಿಣ ಭಾರತದಲ್ಲಿ ಹತ್ತನೆಯ ಶತಮಾನಕ್ಕೆ ಹಿಂದೆಯೇ ಆಳ್ವಾರ್ರುಗಳು ಭಕ್ತಿ ಮಾರ್ಗದ ಸ್ಥಾಪಕರಾಗಿ ಪ್ರಪತ್ತಿತತ್ವವನ್ನುಪದೇಶಿಸಿದ್ದರು. ಅವರ ಪಂಥದವರೇ ಆದ ಆಚಾರ್ಯರುಗಳು ಅದಕ್ಕೆ ದಾರ್ಶನಿಕ ರೂಪವನ್ನು ಸಿದ್ಧಾಂತಗೊಳಿಸಿದ್ದರು. ಸುಮಾರು ಕ್ರಿ. ಶ. ೧೧೫೦ರಲ್ಲಿ ನಿಂಬಾರ್ಕನು ತೆಲಂಗಾಣದಲ್ಲಿ ಹೊಸ ಭಕ್ತಿ ಪಂಥ ವನ್ನು ಸ್ಥಾಪಿಸಿ ರಾಧಾಕೃಷ್ಣ ಭಕ್ತಿಯನ್ನು ಪ್ರಚಾರಗೊಳಿಸಿದನು. ವಿಷ್ಣುಸ್ವಾಮಿ ಜ್ಞಾನೇಶ್ವರ, ವಲ್ಲಭಾಚಾರ್ಯ, ನಾಮದೇವ, ಏಕನಾಥ, ತುಕಾರಾಮ ಮೊದ ಲಾದವರು ಮಹಾರಾಷ್ಟ್ರದಲ್ಲಿ ಕೃಷ್ಣರುಕ್ಮಿಣಿಯರ ಕಾಂತಭಾವರೂಪವಾದ ಭಕ್ತಿ ಮಾರ್ಗವನ್ನು ಬಳಕೆಗೆ ತಂದರು. ಹಾಗೆಯೆ ವಂಗದೇಶದಲ್ಲಿ ಚೈತನ್ಯನು ತನ್ನ ಮಧುರಭಾವರೂಪವಾದ ಭಕ್ತಿಪಂಥವನ್ನು ಸ್ಥಾಪಿಸಿದನು. ಈ ಭಕ್ತಿಪಂಥ ಸ್ಥಾಪಕರೆಲ್ಲರೂ ಯಮುನಾ ತೀರದಲ್ಲಿರುವ ಮಥುರೆ ಮತ್ತು ವೃಂದಾವನಗಳನ್ನು ತಮ್ಮ ಭಕ್ತಿಕೇಂದ್ರಗಳನ್ನಾಗಿ ಮಾಡಿಕೊಂಡು ಅಲ್ಲಿಯ ಕೃಷ್ಣನನ್ನು ಆರಾಧ್ಯ ದೈವವಾಗಿ ಅಂಗೀಕರಿಸಿ ಅವನನ್ನು ಸಾಕ್ಷಾತ್ಕರಿಸಲು ಹೆಣಗಾಡಿದರು. ವೃಂದಾವನ ದಲ್ಲಿ ಅನೇಕ ಸಾಧುಸಂತರು ಮೇಳಗೊಂಡು ಪರಸ್ಪರ ಭಕ್ತಿಸಂಬಂಧವಾದ ಅಭಿಪ್ರಾಯಗಳ ವಿನಿಮಯದಿಂದ ತಮ್ಮ ಪಂಥಗಳ ಪುಷ್ಟೀಕರಣಕ್ಕೆ ಬೇಕಾದ ಶಕ್ತಿ ಸಂಪತ್ತುಗಳನ್ನು ಶೇಖರಿಸಿಕೊಂಡು ದೇಶಾದ್ಯಂತ ಆರ್ಯ ಸಂಸ್ಕೃತಿಯ ಪ್ರಸಾರಕ್ಕೆ ಪ್ರಧಾನವಾದ ಸಾಧನಗಳಾದರು. ಇವರ ಕಾರ್ಯ ೧೬ನೆಯ ಶತಮಾನದಲ್ಲಿ ಗುಜರಾತನ್ನೂ ಮುಟ್ಟಿ ಮೀರಾಬಾಯಿ ಮತ್ತು ನರಸಿಂಹ ಮೆಹ್ತ ಎಂಬ ಇಬ್ಬರು ಉದ್ದಾಮ ಭಕ್ತಿಕವಿಗಳನ್ನು ಸೃಷ್ಟಿಮಾಡಿತು.

ಪಶ್ಚಿಮ ಭಾರತದ ಪ್ರಧಾನ ಕವಿಯತ್ರಿ ಮೀರಾಬಾಯಿ. ರಾಜಪುಟಾಣದ ಭಾಗವಾದ ಮೆರ್ತಾ ಪ್ರಾಂತದ ದೊರೆಯಾದ ರಾವ್‌ದುರಾಜಿಯ ಪೌತ್ರಿ. ಸುಮಾರು ಕ್ರಿ. ಶ. ೧೫೦೦ರಲ್ಲಿ ಜನಿಸಿದಳು. ಉಚ್ಚ ವೈಷ್ಣವ ಭಕ್ತನಾದ ಇವಳ ಪಿತಾಮಹನು ಇವಳ ಮೇಲೆ ವಿಶೇಷ ಪ್ರಭಾವವನ್ನು ಬೀರಿದನು. ಚಿತ್ತೋಡಿನ ರಾಣಾಸಂಗನ ಮಗನಾದ ಭೋಜರಾಜನನ್ನು ಮದುವೆಯಾದಳು. ಆದರೆ ಅವನು ಕ್ರಿ. ಶ. ೧೫೧೭ರಲ್ಲಿ ವಿಧಿವಶನಾದನು. ಅವನ ತಮ್ಮನಾದ ವಿಕ್ರಮನು ಚಿತ್ತೋಡಿನ ಉತ್ತರಾಧಿಕಾರಿಯಾದನು.

ಪತಿವಿಯೋಗವಾದ ಮೇಲೆ ಮೀರಳು ಪ್ರಪಂಚವನ್ನೇ ಮರೆತು ಕೃಷ್ಣ ಭಕ್ತಿಯಲ್ಲಿ ಮಗ್ನಳಾದಳು. ಅನವರತವೂ ಸ್ವಯಂಕೃತವಾದ ಭಕ್ತಿಗೀತಗಳನ್ನು ಹಾಡುತ್ತ ಕಾಲಹರಣ ಮಾಡತೊಡಗಿದಳು. ಇದು ಅವಳ ಭಾವಮೈದುನನಿಗೆ ಸರಿದೋರಲಿಲ್ಲ. ಆದುದರಿಂದ ಅವನು ಇವಳನ್ನು ಚಿತ್ರಹಿಂಸೆಗೆ ಗುರಿಪಡಿಸಿದನು. ಮೀರಳು ಅದನ್ನೂ ಲಕ್ಷ್ಯಮಾಡದೆ ತನ್ನ ದಾರಿಯಲ್ಲಿಯೇ ಮುಂದುವರಿದಳು. ಅವಳ ನಡತೆ ರಾಜಪುತ್ರ ಗಾಂಭೀರ್ಯಕ್ಕೆ ಕಳಂಕತರುವುದೆಂದು ಭಾವಿಸಿ ರಾಣನು ಅವಳ ಕೊಲೆಗೂ ಯತ್ನಿಸಿದನು. ಪ್ರೇಮಮತ್ತಳಾದ ಮೀರಳು ನಿರ್ಭೀತಿಯಿಂದ ತನ್ನನ್ನು ಗೋಪಿಯೆಂದೇ ಭಾವಿಸಿ ನಾಯಕನಾದ ಕೃಷ್ಣನಲ್ಲಿ ಪ್ರೇಮಜೀವನವನ್ನು ಭಾವಿಸುತ್ತಿದ್ದಳು. ಆಕೆಗೆ ಕೃಷ್ಣಭಗವಾನ್ ಪ್ರತ್ಯಕ್ಷ ವ್ಯಕ್ತಿಯಾಗಿದ್ದ. ಅವನ ಅವರತ ಆರಾಧನೆಗಾಗಿ ದ್ವಾರಕೆಯಲ್ಲಿ ಹೋಗಿ ನೆಲಸಿದಳು. ಚಿತ್ತೋಡಿಗೆ ಅನೇಕನ ವಿಪತ್ತುಗಳೊದಗಿದುವು. ಜನರು ಅವುಗಳಿಗೆಲ್ಲ ಮೀರಳು ಹೊರಟುಹೋದುದೇ ಕಾರಣವೆಂದು ಆರೋಪಣೆ ಮಾಡಿದರು. ರಾಣನೇ ಅವಳು ಹಿಂತಿರುಗಬೇಕೆಂದು ಪ್ರತ್ಯಕ್ಷವಾಗಿ ಪ್ರಾರ್ಥಿಸಿದ. ಮೀರಳು ಒಪ್ಪಲಿಲ್ಲ. ಬಂದೇ ಬರಬೇಕೆಂದು ಬ್ರಾಹ್ಮಣರು ಒತ್ತಾಯಮಾಡಿದಾಗ ದೇವಾಲಯದ ಗರ್ಭಗೃಹಕ್ಕೆ ಹೋಗಿ ಅಲ್ಲಿ ಐಕ್ಯವಾದಳು.

ಗುಜರಾತ್, ರಾಜಪುತ್ರಸ್ಥಾನ, ಮಥುರೆ ಮೊದಲಾದ ಪ್ರದೇಶದ ಜನರೇ ಅಲ್ಲದೆ ಈಚಿಗೆ ಹಿಂದೀ ಭಾಷೆಯವರು ಕೂಡ ಮೀರಳನ್ನು ತಮ್ಮ ಕವಯತ್ರಿಯೆಂದು ಕೊಂಡಾಡಿ ಗೌರವಿಸುತ್ತಾರೆ. ಆದರೆ ಆ ಕಾಲದಲ್ಲಿ ಅವಳು ರಚಿಸಿದುದು ಹಳೆಯ ಗುಜರಾತಿ ಅಥವಾ ಪಶ್ಚಿಮ ರಾಜಾಸ್ಥಾನಿಯಲ್ಲಿ ಮಾತ್ರ. ಈಗಲಾದರೆ ಆಕೆಯ ಭಕ್ತಿಗೀತೆಗಳು ವಿವಿಧ ಭಾಷೆಗಳಲ್ಲಿ ಸಿಕ್ಕುತ್ತವೆ. ಅವುಗಳ ಮಿತಿ ಚಿಕ್ಕದು. ವೈವಿಧ್ಯವಿಲ್ಲದಿದ್ದರೂ ಸೂಕ್ಷ್ಮವೂ ಗಾಂಭೀರ್ಯಯುತವೂ ಆಗಿವೆ: ಭಾವಪೂರ್ಣತೆ, ನಯ ಮತ್ತು ನಾದಮಯವಾಗಿರುವುದು ಅವುಗಳ ಪ್ರಧಾನ ಗುಣ. ಗೀತೆಗಳಲ್ಲಿ ಬರುವ ಮೀರಳ ಹಂಬಲ ಬಹು ಆಕರ್ಷಕವಾಗಿಯೂ ಹೃದಯಸ್ಪರ್ಶಿಯಾಗಿಯೂ ಇವೆ. ಅವಳ ಕವಿತಾಮಾರ್ಗ ಅಲಂಕಾರರಹಿತವಾಗಿರುವುದರಿಂದ ಸಹಜವಾಗಿದೆ; ಋಜುವಾಗಿದೆ. ಭಾವನಾದಗಳ ಸಾಮರಸ್ಯವನ್ನೂ ಅಲ್ಲಿ ಕಾಣಬಹುದು. ಗೀತಗಳ ಭಾವಸಮೃದ್ಧಿಯನ್ನು ಭಾಷಾಂತರಿಸುವುದು ಆಗದ ಕೆಲಸ.

ಮೊದಲೇ ತಿಳಿಸಿರುವಂತೆ ವಲ್ಲಭಾಚಾರ್ಯ ಗೋಸ್ವಾಮಿಯು ತನ್ನ ಮತ ಪ್ರಚಾರ ಕಾರ್ಯಕ್ಕಾಗಿ ಭಾರತದಲ್ಲೆಲ್ಲಾ ಸಂಚಾರ ಮಾಡಿ ೧೫೦೭ರಲ್ಲಿ ಗುಜರಾತಿಗೆ ಬಂದು ವ್ರಜದಲ್ಲಿ ಶ್ರೀನಾಥ ದೇವಾಲಯವನ್ನು ಪ್ರತಿಷ್ಠಿಸಿ ಶಿಷ್ಯಸಂಪತ್ತನ್ನು ಸಂಗ್ರಹಿಸಿ ೧೫೩೧ರಲ್ಲಿ ದೈವಾಧೀನನಾದನು. ಆತನ ಮಗನಾದ ವಿಠಲನಾಥನು ತಂದೆಯ ಮತವನ್ನು ಪರಿಷ್ಕರಿಸಿದನು. ಅವನಿಗೆ ತನ್ನ ತಂದೆ ಕೃಷ್ಣಭಕ್ತ ಮಾತ್ರನಲ್ಲ, ಸಾಕ್ಷಾತ್ ಕೃಷ್ಣನೇ ಆದನು. ತಂದೆಯು ಅಭಿನಯಿಸಿದ ರಾಸಲೀಲೆ

ಗಳನ್ನು ಮಗನೂ ಇತರ ಅನುಯಾಯಿಗಳೂ ಅನುಕರಿಸಿದರು. ಪಂಥದ ನಾಯಕರು ರಾಸಲೀಲೆಯಲ್ಲಿ ಅಭಿನಯಿಸುತ್ತಿದ್ದ ಕೃಷ್ಣನ ಪಾತ್ರವು ಆ ಪಂಥದ ಪ್ರಧಾನ ಗುಣವಾಗಿ ಅಂಗೀಕೃತವಾಯಿತು. ಪ್ರತಿಯೊಬ್ಬ ಆಚಾರ್ಯನೂ ಅನೇಕ ಮಹಿಳೆಯರ ಪತಿಯೂ ರಾಸಲೀಲೆಯ ಕೇಂದ್ರ ವ್ಯಕ್ತಿಯೂ ಆಗಿ ರಾಸಲೀಲೆಯ ನ್ನಾಡುವುದು ಅವನ ಪ್ರಧಾನ ಕರ್ತವ್ಯವಾಯಿತು. ಸಹಜೀಯ ಪಂಥದ ಶರಣಾಗತಿ ತತ್ವವು ಈ ಭಕ್ತಿತತ್ವದೊಡನೆ ಮಿಳಿತವಾಗಿ ಸ್ತ್ರೀಪುರುಷರ ಕೆಳಮಟ್ಟದ ಆತ್ಮಾರ್ಪಣೆಯ ಸ್ಥಿತಿಗೆ ಇಳಿಯಿತು. ಆಚಾರ್ಯಪೀಠಸ್ಥರೂ ಧರ್ಮನಾಯಕರೂ ತಮ್ಮನ್ನು ಶ್ರೀಕೃಷ್ಣನೆಂದೇ ಭಾವಿಸತೊಡಗಿದರು. ಸಾಮಾನ್ಯ ಜನಗಳ ಮನರಂಜನೆಯ ಸಾಧನೆಗಳಾಗಿದ್ದ ರಾಸಲೀಲೆಗಳಿಗೆ ಧಾರ್ಮಿಕ ಪೂಜ್ಯತೆಯುಂಟಾಯಿತು.

ವಿಠಲನಾಥನು ಗುಜರಾತಿನಲ್ಲಿ ಈ ಪಂಥಕ್ಕೆ ಸೇರಿದ ಅನೇಕ ದೇವಾಲಯಗಳನ್ನು ಕಟ್ಟಿಸಿ ಮತಪ್ರಚಾರಮಾಡಿ ಶಿಷ್ಯಸಂಪತ್ತಿಯನ್ನು ಗಳಿಸಿ ಹಿಂದಿಯಲ್ಲಿ ಅಷ್ಟಛಾಪಗಳೆಂದು ಪ್ರಸಿದ್ಧರಾದ ಸೂರದಾಸ್ ಮೊದಲಾದ ಕವಿಶ್ರೇಷ್ಠರಿಗೆ ಪ್ರೇರಕನಾದನು. ವಿಠಲನ ಮಗನು ಈ ಮತವನ್ನು ಇನ್ನೂ ತರ್ಕಬದ್ಧವನ್ನಾಗಿಸಿದನು. ವಿವಾಹಾತ್ಪೂರ್ವ ಪ್ರತಿಕನ್ಯೆಯನ್ನೂ ಆಚಾರ್ಯನಿಗೆ ಮೊದಲಕಾಣಿಕೆಯಾಗಿ ಅರ್ಪಿಸುವುದು ಅಕ್ಷರಶಃ ಸತ್ಯವಾದ ಒಂದು ಧಾರ್ಮಿಕ ಸಂಪ್ರದಾಯವಾಗಿ ಪರಿಣಮಿಸಿತು.

ಗೋಪಾಲದಾಸನಿಂದ ಗುಜರಾತಿ ಭಾಷೆಯಲ್ಲಿ ೧೫೭೦ರಲ್ಲಿ ರಚಿತವಾದ 'ವಲ್ಲಭಾಖ್ಯಾನ'ದಲ್ಲಿ ಈ ಪಂಥದ ಪ್ರಭಾವ ಸ್ಪಷ್ಟವಾಗಿ ಕಾಣುತ್ತದೆ. ಈ ಪಂಥಾನುಯಾಯಿಗಳು ಗೋಸ್ವಾಮಿಯನ್ನೆ ಪ್ರತ್ಯಕ್ಷ ದೈವವೆಂದು ಭಾವಿಸಿ ಆತನ ಗುಣ ವೈಭವಗಳನ್ನು ಬಹು ವಿಜೃಂಭಣೆಯಿಂದ ವರ್ಣಿಸಿದ್ದಾರೆ. ಈ ಪಂಥದ ಗ್ರಂಥಗಳು ವಿಶೇಷವಾಗಿ ರಾಸಲೀಲೆ—ಮತ್ತು ಇತರ ಶೃಂಗಾರ ಪದಗಳು—ಗುಜರಾತಿ ಸಾಹಿತ್ಯದಲ್ಲಿ ಪ್ರಧಾನ ಸ್ಥಾನವನ್ನಾಕ್ರಮಿಸಿ ಸಾಮಾನ್ಯ ಜನಗಳ ಮೇಲೆ ಬಹುಮಟ್ಟಿಗೆ ಪರಿಣಾಮಕಾರಿಯಾಗಿವೆ.

೧೬ನೆಯ ಶತಮಾನದಲ್ಲಿ ನರಸಿಂಹ ಮೆಹ್ತನೆಂಬ ಮತ್ತೊಬ್ಬ ಭಕ್ತ ಒಂದು ಹೊಸ ಭಕ್ತಿಪಂಥದ ಮಾರ್ಗದರ್ಶಕನಾದನು. ಇದುವರೆಗೆ ಅವನ ಕಾಲವು ಕ್ರಿ. ಶ. ೧೪೧೪-೧೪೮೦ ರವರೆಗೆ ಎಂದು ಭಾವಿಸಲ್ಪಟ್ಟಿತ್ತು. ಈಚಿನ ಸಂಶೋಧನೆಯಿಂದ ಅವನು ೧೫೦೦ರಿಂದೀಚಿನವನೆಂದು ಸಿದ್ಧಾಂತವಾಗಿದೆ. ೧೬ನೆಯ ಶತಮಾನದ ವೇಳೆಗೆ ಆತನ ಕೀರ್ತಿ ದೇಶದಲ್ಲೆಲ್ಲಾ ಸರ್ವತ್ರ ವ್ಯಾಪಿಯಾಗಿದ್ದಿತು. ಆತನ ಜೀವನ, ಆತನ ಗ್ರಂಥಗಳು, ಆತನಿಗೊದಗಿದ ಕಷ್ಟಕಾಲದಲ್ಲೆಲ್ಲಾ ಕೃಷ್ಣನೇ ಸಾಕ್ಷಾತ್ತಾಗಿ ಸಹಾಯಮಾಡಿದ ಪವಾಡಗಳು ಗುಜರಾತೀಯರ ಮೇಲೆ ಅದ್ಭುತ ಪ್ರಭಾವವನ್ನು ಬೀರಿವೆ. ಆತನ ವಿಷಯವಾಗಿ ಪ್ರಪ್ರಥಮವಾಗಿ ಹಾಡಿದ ಗುಜರಾತಿ ಕವಿ ವಿಶ್ವನಾಥ ಜಾನಿ (೧೬೫೨).

ನರಸಿಂಹನೇ ಸ್ವವಿಷಯವಾಗಿ ತನ್ನ ಗ್ರಂಥಗಳಲ್ಲಿ ಕೆಲವು ವಿಷಯಗಳನ್ನು ಹೇಳಿಕೊಂಡಿದ್ದಾನೆ. ಜೂನಾಗಡದ ಸಮೀಪದಲ್ಲಿರುವ ತಲಾಜ ಆತನ ಜನ್ಮಸ್ಥಳ. ವಡನಗರ ಬ್ರಾಹ್ಮಣನಾದ ಕೃಷ್ಣದಾಸನ ಕಿರಿಯ ಮಗ. ಬಹು ಕಾಲದಿಂದಲೂ ನಾಗರರ ವೈದುಷ್ಯವೂ ಶುದ್ಧಜೀವನವೂ ಲೋಕಪ್ರಸಿದ್ಧವಾಗಿ ಆತನ ಕಾಲಕ್ಕೆ ಬಹು ಪ್ರಖ್ಯಾತವಾಗಿದ್ದಿತು. ನರಸಿಂಹನು ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡು ಅಣ್ಣನ ಪೋಷಣೆಯಲ್ಲಿ ಬೆಳೆದನು. ಯಾತ್ರಾರ್ಥಿಗಳಾದ ಸಾಧುಗಳ ಸಹವಾಸದಿಂದ ಭಕ್ತಿಪಂಥದ ಪರಿಚಯಮಾಡಿಕೊಂಡು ಭಕ್ತಿಗೀತೆಗಳನ್ನು ಹಾಡಿ ಗೋಪಿಯರಂತೆ ಕೃಷ್ಣನನ್ನು ಮಧುರಭಾವದಿಂದ ಆರಾಧಿಸತೊಡಗಿದನು. ಪೂಜ್ಯಭಾವದಿಂದ ಪೂಜಿಸುತ್ತಿದ್ದ ಆತನ ಹಿರಿಯರಿಗೆ ಈತನ ಈ ಮಧುರಭಾವವು ಬಹು ಜಿಗುಪ್ಸೆಯನ್ನೂ ಭಯವನ್ನೂ ಉಂಟುಮಾಡಿತು. ಆತನಿಗೆ ಮೊದಲನೆಯ ಸಲ ನಿಶ್ಚಯವಾಗಿದ್ದ ಕನ್ಯೆ ತಪ್ಪಿಹೋಗಿ ಕೊನೆಗೆ ಮಾಣಿಕ್ಯಬಾಯಿ ಎಂಬ ವಧುವಿನೊಡನೆ ವಿವಾಹವಾಯಿತು. ಬಹು ಸಾಧುಸ್ವಭಾವದನಾದ ಅವನು ಗೃಹಸ್ಥಾಶ್ರಮಕ್ಕೆ ಕಾಲಿಟ್ಟ ಅಲ್ಪಕಾಲದಲ್ಲಿಯೇ ಅವನ ಅತ್ತಿಗೆಯ ಅಪಹಾಸ್ಯಕ್ಕೆ ಗುರಿಯಾಗಿ ಮನೆಬಿಟ್ಟು ಕಾಡಿಗೆ ಓಡಿದನು. ಅಲ್ಲಿ ಒಂದು ಶಿವಲಿಂಗವನ್ನು ಏಳು ದಿನ ಪೂಜಿಸಿದ ಮೇಲೆ ಶಿವನು ಪ್ರತ್ಯಕ್ಷನಾಗಿ ಅವನನ್ನು ದ್ವಾರಕಿಗೆ ಕರೆದೊಯ್ದನು. ಅಲ್ಲಿ ತನ್ನ ನಾಯಕನಾದ ಕೃಷ್ಣನು ಗೋಪಿಯರೊಡನೆ ರಾಸಲೀಲೆಯಾಡುತ್ತಿದ್ದ ಪ್ರತ್ಯಕ್ಷ ದರ್ಶನವಾಯಿತು. ಆ ಕಾಲದಲ್ಲೆಲ್ಲಾ ಈತನು ದೀಪಧಾರಿಯಾಗಿದ್ದುಕೊಂಡು ಆ ಸೌಖ್ಯವನ್ನು ಪೂರ್ಣವಾಗಿ ಅನುಭವಿಸಿ ತನ್ನ ಅದ್ಭುತವಾದ ಭಾವಪರವಶತೆಯಿಂದ ಕೃಷ್ಣನಲ್ಲಿ ಆತ್ಮಸಂಶ್ಲೇಷವನ್ನು ಪಡೆದು ಮನೆಯಿಂದ ಓಡಿಸಿ ಈ ಸೌಖ್ಯಕ್ಕೆ ಕಾರಣಭೂತಳಾದ ಅತ್ತಿಗೆಯನ್ನು ಮನಸಾರ ಅಭಿವಂದಿಸಿದನು.

ಅಣ್ಣನ ಮನೆಯನ್ನು ಬಿಟ್ಟಮೇಲೆ ನರಸಿಂಹನು ಜೂನಾಗಡದಲ್ಲಿ ಒಂದು ಸಣ್ಣ ಮನೆಯಲ್ಲಿ ವಾಸಿಸುತ್ತಿದ್ದನು. ಆ ಮನೆಯ ಸನ್ನಿವೇಶವು ಇಂದಿಗೂ 'ನರಸಿಂಹ ಮೆಹ್ತಾನೋ ಚೋರೊ' ಎಂಬ ಹೆಸರಿನಿಂದ ಗುರುತಿಸಲ್ಪಡುತ್ತಿದೆ. ಆತನಿಗೆ ಕನ್ವರ್ ಬಾಯ್ಸ್, ಶ್ಯಾಮಲ್ ಎಂಬ ಇಬ್ಬರು ಮಕ್ಕಳಾದರು. ಊರಿನ ಧರ್ಮಿಷ್ಠರ ಸಹಾಯದಿಂದ ಅವನ ಸಂಸಾರ ಸುಗಮವಾಗಿ ಸಾಗುತ್ತಿತ್ತು. ಜನರ ಅಪಹಾಸ್ಯವು ಅವನಲ್ಲಿ ಯಾವ ವ್ಯತ್ಯಾಸವನ್ನೂ ಉಂಟುಮಾಡಲಿಲ್ಲ. ಪ್ರತಿನಿತ್ಯವೂ ಹಗಲಿರುಳು ಅವನು ಭಕ್ತಿ, ನೀತಿ, ಆಧ್ಯಾತ್ಮಿಕ ಪದಗಳನ್ನೂ ಭಜನೆಗಳನ್ನೂ ರಾಧಾಕೃಷ್ಣ ವಿಷಯಕವಾದ ಪ್ರಣಯ ಗೀತೆಗಳನ್ನೂ ತನ್ನ ಕರತಾಳದ ಸಹಾಯದಿಂದ ಹಾಡುತ್ತಿದ್ದನು. ಅವನಿಗೆ ಮನೋರಾಜ್ಯದಲ್ಲಿ ಗೋಚರವಾಗುತ್ತಿದ್ದ ಭಕ್ತಿ ಪ್ರಪಂಚವು ತನ್ನ ಭೌತ ಪಾರ್ಥಿವ ಪ್ರಪಂಚಕ್ಕಿಂತ ಹೆಚ್ಚು ಸತ್ಯವಾಗಿ ಕಾಣುತ್ತಿದ್ದಿತು. ಆದರೆ ಅವನ ದಾರಿದ್ರ್ಯ ಅವನನ್ನು ಸಮಾಜದ ಅವಹೇಳನಕ್ಕೆ ಗುರಿ ಮಾಡುತ್ತಿತ್ತು. ಅಂತಹ ಸಂದರ್ಭದಲ್ಲೆಲ್ಲಾ ಕೃಷ್ಣಪರಮಾತ್ಮನೇ ಪ್ರತ್ಯಕ್ಷವಾಗಿ

ಬಂದು ನೆರವು ನೀಡಿದ ಪವಾಡ ಪ್ರಸಂಗಗಳ ವಿವರಣೆ ಮುಂದಿನ ಕವಿವೃಂದದಿಂದ ಬಹು ವಿವರವಾಗಿ ವರ್ಣಿತವಾಗಿವೆ.

ನರಸಿಂಹನು ಪುಂಕನೂ ಅಲ್ಲ; ಕವಿ ಮಾತ್ರನೂ ಅಲ್ಲ. ಅವನ ಜೀವನ ಒಂದು ಪ್ರತ್ಯೇಕ ಜೀವನ ದರ್ಶನದಿಂದ ಪ್ರೇರಕವಾಗಿತ್ತು. ಅವನ ಹೃದಯದಲ್ಲಿ ಅಖಂಡ ಜೀವರಾಶಿಯ ಕಷ್ಟಸುಖಗಳಿಗೆ ಎಡೆಯಿತ್ತು. ಕೀಳು ಮೇಲೆಂಬ ಭಾವನೆ ಅವನಿಂದ ಬಹುದೂರದಲ್ಲಿತ್ತು. ದೀನದಲಿತರಲ್ಲಿ ಅವನಿಗಿದ್ದ ವಿಶ್ವಾಸ ಮಮತೆಗಳು ಸರ್ವಾದರಣೀಯ. ತನ್ನ ಕುಲಮದ ಜಾತಿಮದಗಳನ್ನೂ ದೂರಮಾಡಿ ಅಸ್ಪೃಶ್ಯ ರಲ್ಲಿಯೂ ಸಮದರ್ಶಿಯಾಗಿರುತ್ತಿದ್ದನು. ಅವನು ಒಬ್ಬ ಜಲಗಾರನ ಮನೆಗೆ ಭಜನೆಗೆ ಹೋದ ಪ್ರಯುಕ್ತ ತನ್ನ ಸಮಾಜದಿಂದ ಬಹಿಷ್ಕೃತನಾದನು. ಆಗ ಕವಿಯು ಬಹು ದುಃಖದಿಂದ "ದೇವ ನನ್ನನ್ನು ದರಿದ್ರನನ್ನಾಗಿರಿಸಬೇಡ, ನಾಗರ ಕುಲದಲ್ಲಿ ಹುಟ್ಟಿಸಬೇಡ" ಎಂದು ದೇವರನ್ನು ಬೇಡಿಕೊಂಡನಂತೆ. ಇದಾದ ಸ್ವಲ್ಪ ದಿನಗಳಲ್ಲಿಯೇ ನಾಗರಬ್ರಾಹ್ಮಣರೆಲ್ಲ ಭೋಜನಕ್ಕೆ ಕುಳಿತಾಗ ಅವರೊಬ್ಬೊಬ್ಬರ ಪಕ್ಕದಲ್ಲಿಯೂ ಒಬ್ಬೊಬ್ಬ ಅಸ್ಪೃಶ್ಯ ಕುಳಿತಿರುವಂತೆ ಕಂಡುಬಂದಿತಂತೆ. ಇದರ ಅರ್ಥವನ್ನು ತಿಳಿದುಕೊಂಡು ಅವನ ಬಹಿಷ್ಕಾರವನ್ನು ನಿವಾರಿಸಲು, ಆ ದೃಶ್ಯ ಮಾಯವಾಯಿತಂತೆ. ಇದೇ ಅಲ್ಲದೆ ನರಸಿಂಹನು ಕೃಷ್ಣನಿಂದ ಹುಂಡಿ ಪಡೆದುದೂ ರಾಜನಿಗೆ ಕೃಷ್ಣನಿಂದ ಹಾರವನ್ನು ದೊರಕಿಸಿಕೊಟ್ಟುದೂ ಮುಂದಿನ ಅನೇಕ ಕವಿಗಳಿಂದ ಉಲ್ಲೇಖಿತವಾಗಿವೆ. ನರಸಿಂಹನಿಗೆ ಕೊನೆಯ ಕಾಲದಲ್ಲಿ ಅನೇಕ ಅಪಘಾತಗಳುಂಟಾದುವು. ಹೆಂಡತಿ ಸತ್ತಳು, ಮಗ ತೀರಿಕೊಂಡ, ಮಗಳು ವಿಧವೆಯಾದಳು. ಕವಿ ಮಾತ್ರ ತನ್ನ ಸ್ಥಿತಪ್ರಜ್ಞತ್ವವನ್ನು ಕಳೆದುಕೊಳ್ಳದೆ ಅಚಲಿತವಾದ ಕೃಷ್ಣಭಕ್ತಿಯಿಂದ ಬಹು ದೀರ್ಘಕಾಲ ಬಾಳಿದನು.

ಬಹುಕಾಲದವರೆಗೆ ವಲ್ಲಭಪಂಥದವರು ಅವನ ಪದಗಳನ್ನು ಬಹು ಪೂಜ್ಯತೆ ಯಿಂದ ಕಾಣುತ್ತಿದ್ದರು. ಅವರ ದೃಷ್ಟಿಯಲ್ಲಿ ಅವನು ಭವಿಷ್ಯತ್ಪ್ರಪಂಚದ ದೇವ ದೂತನೆಂಬ ಭಾವನೆಯಿದ್ದುದರಿಂದ ಆತನ ಪದಗಳಿಗೆ ಬಹು ಪ್ರಾಶಸ್ತ್ಯ ಬಂದು ಅನೇಕರ ಬಾಯಲ್ಲಿ ಹಾಯ್ದು ಬಹು ವಿಕಾರವಾಗಿ ತನ್ನ ಮೂಲರೂಪದಿಂದ ಬಹು ಭಿನ್ನವಾಗಿ ಹೋಗಿವೆ. ಅವನ 'ಹಾರಮಾಲೆ'ಯೆಂಬ ಸುಪ್ರಸಿದ್ಧ ಕೃತಿಯು ಅನೇಕ ಪ್ರಕ್ಷಿಪ್ತಗಳಿಂದ ಕೂಡಿ ರೂಪಾಂತರಿತವಾಗಿ ಮುಂದೆ ಪ್ರೇಮಾನಂದನಿಂದ ಸಂಶೋಧಿತವಾಗಿದ್ದರೂ ಈಗ ಮೂಲಕ್ಕೆ ಎರಡರಷ್ಟು ಬೃಹದಾಕಾರವನ್ನು ತಾಳಿದೆ.

'ಶ್ಯಾಮಲ್‌ಸಾ-ನೋ-ವಿವಾಹ' ಅವನ ಆತ್ಮಕತೆಗೆ ಸಂಬಂಧಪಟ್ಟ ಮತ್ತೊಂದು ಕವನ. ಇದರಲ್ಲಿ ಅವನ ಜೀವನಕ್ಕೆ ಸಂಬಂಧಪಟ್ಟ ಅವನ ಅತ್ತಿಗೆಯ ಅವಹೇಳನ, ಮುಂದಿನ ಭಕ್ತಿಜೀವನ, ಮಗನ ವಿವಾಹ, ಕೃಷ್ಣನ ಸಹಾಯ, ಮೊದಲಾದ ಅನೇಕ ವೈಯಕ್ತಿಕ ವಿಷಯಗಳ ದೀರ್ಘ ವರ್ಣನೆಯಿದೆ.

ಆತನ ಕೃತಿಗಳಲ್ಲೆಲ್ಲ ೭೪೦ ಪದಗಳನ್ನುಳ್ಳ 'ಶೃಂಗಾರಮಾಲಾ' ಎಂಬ

ಅಭಿಧಾನದಿಂದ ಸಂಗ್ರಹೀತವಾಗಿದೆ. ಅವೆಲ್ಲ ಚೈತನ್ಯಮನೋಭಾವದವು. ಚೈತನ್ಯ ಮಿರಾರಾ ಅವರಿಗೆ ಹೇಗೋ ಹಾಗೆ ನರಸಿಂಹನಿಗೂ ಶ್ರೀಕೃಷ್ಣ ಜೀವಂತನಾದ ಮದವಣಿಗ; ಪ್ರಿಯ. ತಾನು ಶಂಕರನೊಡನೆ ದ್ವಾರಕಿಗೆ ಹೋದ ಹಾಗೂ, ಅಲ್ಲಿ ರಾಧಾಕೃಷ್ಣರ ರಾಸಲೀಲೆಯ ಕಾಲದಲ್ಲಿ ದೀಪಧಾರಿಯಾಗಿದ್ದ ಹಾಗೂ, ತನ್ನ ಕೈಸುಟ್ಟುಹೋದರೂ ತಿಳಿಯದೆ ಆ ನೃತ್ಯವನ್ನು ನೋಡುತ್ತಿದ್ದ ಹಾಗೂ, ಇದ್ದಕ್ಕಿದ್ದ ಹಾಗೆ ಆತನ ಪುರುಷಭಾವ ಮಾಯವಾಗಿ ಗೋಪಿಯಾದ ಹಾಗೂ ಇತರ ಗೋಪಿಯರೊಂದಿಗೆ ತಾನೂ ಕೃಷ್ಣನ ರಾಸಲೀಲೆಯಲ್ಲಿ ಭಾಗಿಯಾದ ಹಾಗೂ ಮಧ್ಯೆ ರಾಧೆಯೊಡನೆ ಸಂಭಾಷಿಸಿ ಅವಳ ಅನುಮತಿಯ ಮೇಲೆ ತಾನು ಕೃಷ್ಣನ ಸಂಶ್ಲೇಷವನ್ನು ಪಡೆದು ಅಲ್ಲಿಂದ ಮುಂದೆ ಅವನನ್ನು ಎಂದೆಂದಿಗೂ ತನ್ನ ಹೃದಯ ಮಂದಿರದಲ್ಲಿ ಸೆರೆಹಿಡಿದ ಹಾಗೂ ಕವಿಯೇ ಈ ಗ್ರಂಥದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾನೆ.

ನೂರ ಇಪ್ಪತ್ತುಮೂರು ಪದಗಳಿಂದ ಕೂಡಿದ 'ರಾಸಸಹಸ್ರಪದಿ' ಎಂಬ ಅವನ ಮತ್ತೊಂದು ಗ್ರಂಥವು ಭಾಗವತ ಮತ್ತು ಬ್ರಹ್ಮವೈವರ್ತದಲ್ಲಿ ವರ್ಣಿತವಾಗಿರುವ ರಾಸಲೀಲೆಯ ಆಧಾರದ ಮೇಲೆ ರಚಿತವಾದುದು. ಇದು ಅನುವಾದವೂ ಅಲ್ಲ, ಸಮನ್ವಯವೂ ಅಲ್ಲ. ಸ್ವಂತ ಅನುಭವಸಾಮ್ರಾಜ್ಯದ ಸುಂದರ ಚಿತ್ರಗಳಿಂದ ಕೂಡಿದ ಉತ್ತಮ ಕಲಾಕೃತಿ. ಭಾಗವತದ ಒಂದು ವಾಕ್ಯ, ಒಂದು ಪದಗುಂಫ, ಇಲ್ಲಿ ಒಂದು ಚಿತ್ರಪುಂಜವಾಗಿ ಬೆಳೆದಿದೆ. ಆತನ 'ಚಾತುರಿ'ಗಳು ಗೀತಗೋವಿಂದದ ಆಧಾರದ ಮೇಲೆ ರಚಿತವಾದುದು. 'ವಸಂತ ನಾನ್ ಪದೊ' ವಸಂತ ಋತುವಿನ ವರ್ಣನೆ, 'ಹಿಂದೊಳಾ ನಾನ್ ಪದೋ' ಎಂಬುದು ಡೋಲೋತ್ಸವ ವಿಷಯಕವಾದುದು. ಈ ಎಲ್ಲ ಪದಗಳೂ ಗುಜರಾತಿನ ಸ್ತ್ರೀಪುರುಷರಿಗೆ ತಮ್ಮ ಜೀವನದಲ್ಲಿ ಎಂದೂ ಇಲ್ಲದ ಪ್ರೇಮ ಶೃಂಗಾರ ಸಂತೋಷಗಳ ಅನುಭವವನ್ನು ಇಂದಿಗೂ ಉಂಟುಮಾಡುತ್ತಿವೆ.

ಅವನ ಇತರ ಕೃತಿಗಳು ಭಾಗವತ ದಶಮಸ್ಕಂಧಕ್ಕೆ ಸಂಬಂಧಪಟ್ಟುವು. 'ಶ್ರೀಕೃಷ್ಣಜನ್ಮ', 'ಬಾಲಲೀಲ', 'ನಾಗದಮನ', 'ದಾನಲೀಲ', 'ಮಾನಲೀಲ', 'ಸುದಾಮ ಚರಿತ್ರ', 'ಗೋವಿಂದಾಗಮನ' ಮೊದಲಾದುವು ಅವನ ಅಪರವಯಸ್ಸಿನ ಬೇರೆ ಬೇರೆ ಕಾಲದಲ್ಲಿ ರಚಿತವಾದುವು. ಆಖ್ಯಾನಗಳ ದೃಷ್ಟಿಯಿಂದ ಇವು ಬ್ಹಾಲನ್ ಕವಿಗಿಂತ ಒಂದು ಮೆಟ್ಟಲು ಮುಂದೆಯೂ ಪ್ರೇಮಾನಂದನಗಿಂತ ಒಂದು ಮೆಟ್ಟಲು ಹಿಂದೆಯೂ ಇರುವಂತೆ ಕಾಣುತ್ತದೆ. ಇವೆಲ್ಲ ಕವಿಯ ಪ್ರತಿಭಾ ವೈಖರಿಯಿಂದ ಅತಿ ಮನೋಹರವಾದ ಉಚ್ಛಕೃತಿಗಳು.

'ಸುರತ ಸಂಗ್ರಾಮ' ಮಾತ್ರ ವಸ್ತುತಂತ್ರಗಳೆರಡರ ದೃಷ್ಟಿಯಿಂದಲೂ ಒಂದು ಸ್ವತಂತ್ರ ಕೃತಿಯೆಂದೇ ಹೇಳಬಹುದು. ಕಾವ್ಯದೃಷ್ಟಿಯಿಂದ ಉತ್ತಮ ದರ್ಜೆಗೆ ಸೇರಿದುದು. ಇದರ ವಸ್ತು ಬಹು ಆಕರ್ಷಕವಾಗಿದೆ.

ವಸಂತಕಾಲದ ಒಂದು ಪ್ರಾತಃಕಾಲ ಕೃಷ್ಣನು ತನ್ನ ಹತ್ತು ಗೆಳೆಯ

ರೊಡನೆ ಮೊಸರು ಮಾರಲು ಹೋಗುತ್ತಿದ್ದ ಗೋಪಿಯರನ್ನು ತಡೆದು ಸುಂಕ ಕೇಳುವ ನೆಪದಲ್ಲಿ ರಾಧೆಯನ್ನು ಕಟುವಾಗಿ ಬಯ್ಯುವನು. ರೌದ್ರಸರ್ಪಿಣಿಯ ಹಾಗೆ ಅವಳು ಮೇಲೆ ಬಿದ್ದು ಕೃಷ್ಣನನ್ನು ಬಿಗಿಯಾಗಿ ತಬ್ಬಿಹಿಡಿಯುವಳು. ಗೋಪ ಗೋಪಿಯರಿಗೆ ಸಂಗ್ರಾಮವು ಪ್ರಾರಂಭವಾಗುವುದು. ಮಧ್ಯೆ ನಂದನ ಪ್ರವೇಶದಿಂದ ತಾತ್ಕಾಲಿಕವಾಗಿ ತಪ್ಪಿದ್ದು ಅವನು ಹೋದ ಮೇಲೆ ಪುನಃ ಪ್ರಾರಂಭ ವಾಗುವುದು. ಮುಂದಿನ ಹುಣ್ಣಿಮೆಯ ರಾತ್ರಿ ಪುನಃ ಪ್ರಾರಂಭವಾಗತಕ್ಕದ್ದೆಂದೂ ಸೋತವರು ಗೆದ್ದವರಿಗೆ ದಾಸರಾಗಬೇಕೆಂದೂ ಒಪ್ಪಂದವಾಗುವುದು. ಅದಕ್ಕನು ಗುಣವಾಗಿ ಹುಣ್ಣಿಮೆಯ ರಾತ್ರಿ ರಾಧೆಯು ತನ್ನ ಸಖಿಯರೊಡನೆ ಹೊರಟು ಪ್ರತಿಪಕ್ಷದವರು ತಮಗೆ ಶರಣಾಗತರಾಗಬೇಕೆಂದು ನರಸಿಂಹ ಮೆಹ್ತನ ಮೂಲಕ ಸಂದೇಶವನ್ನು ಕಳುಹಿಸುವಳು. ಎದುರಾಳಿಗಳಾದ ಗೋಪರು ಸೋಲಬೇಕೇ ಬೇಡವೇ ಎಂದು ವಿಚಾರಮಾಡುವರು. ಅಧೀನರಾಗಬೇಕೆಂಬ ಪಕ್ಷಕ್ಕೆ ಹೆಚ್ಚು ಮತ ದೊರಕುತ್ತಿರುವ ಸಂದರ್ಭದಲ್ಲಿ ಕೃಷ್ಣನು ಪ್ರವೇಶಿಸಿ ನಿಷೇಧಿಸುವನು. ಆ ವೇಳೆಗೆ ಸರಿಯಾಗಿ ನರಸಿಂಹನು ಸಂದೇಶಪತ್ರದೊಡನೆ ಪ್ರವೇಶಿಸಿ ಗೋಪರು ಗೋಪಿಯರಿಗೆ ಸೋಲುವುದು ಹೆಚ್ಚು ವಿವೇಕವೆಂದು ಉಪದೇಶಿಸುವನು. ಅದಕ್ಕೆ ಯಾರೂ ಒಪ್ಪುವುದಿಲ್ಲ. ಸೈನ್ಯವು ಹೊರಟು ಗೀತಗೋವಿಂದಕರ್ತೃವಾದ ಜಯ ದೇವನ ಮೂಲಕ ಗೋಪಿಯರಿಗೆ ಪತ್ರಕಳುಹಿಸಿ ತಕ್ಷಣ ಅವರು ಅಡಿಯಾಳಾಗ ಬೇಕೆಂದು ಕೋರುವರು. ಅದನ್ನು ರಾಧೆಯು ಬಹು ಉದಾಸೀನದಿಂದ ತಿರಸ್ಕರಿಸಿ ಪ್ರಪಂಚ ಸೃಷ್ಟಿಯಲ್ಲಿ ಕ್ಷೇತ್ರಬೀಜನ್ಯಾಯದಿಂದ, ಸ್ತ್ರೀಯರಿಗೇ ಅಗ್ರಸ್ಥಾನ ಸಲ್ಲ ಬೇಕೆಂದು ಹೇಳಿಕಳುಹಿಸುವಳು.

ಸಾಮೋಪಾಯ ಫಲಕಾರಿಯಾಗದಿರಲು ಉಭಯಪಕ್ಷಗಳೂ ದಂಡೋಪಾಯ ದಲ್ಲಿ ಮುಂದುವರಿಯುವುವು. ಚುಂಬನ, ಆಲಿಂಗನ, ಕಟಾಕ್ಷಭ್ರೂವಿಕ್ಷೇಪಣಾದಿಗಳು ಪರಸ್ಪರ ಪ್ರಾರಂಭವಾಗುವುವು. ಕವಿಯೂ ಈ ಸಂಗ್ರಾಮದಲ್ಲಿ ಸೂಕ್ತಸ್ಥಾನವನ್ನು ಪಡೆದು ಭಾಗಿಯಾಗುವನು. ಮೊದಲ ಸಲ ಗೋಪರು ಸೋಲುವರು. ಮಧ್ಯೆ ಕೃಷ್ಣನು ಅವರಿಗೆ ಸಹಾಯಕನಾಗಿ ಬರುವನು. ರಾಧೆಯು ಅವನನ್ನು ಎದುರಿಸ ಲಾರದೆ ಹಿಂಜರಿದು ಹಿಂದಿನಿಂದ ನಿರೀಕ್ಷಾಸ್ತ್ರವನ್ನು ಪ್ರಯೋಗಿಸುವಳು. ಗೋಪರು ಸೋತು ಓಡುವರು. ಕೃಷ್ಣನೂ ಮೂರ್ಛೆಹೋಗಿ ರಣರಂಗದಿಂದ ಹೊರಕ್ಕೆ ಒಯ್ಯ ಲ್ಪಡುವನು. ಜಯಶಾಲಿಗಳಾದ ಸ್ತ್ರೀಯೋಧರು ಸೋತವರನ್ನು ವ್ರಜದವರೆಗೆ ಓಡಿಸಿ ಕೊಂಡು ಹೋಗಿ ನಾಯಕನನ್ನು ಸೋಲಿಸಿ ಅವರ ರಾಜ್ಯಕ್ಕೆ ಒಡೆಯರಾಗುವರು.

ನರಸಿಂಹನ ಇತರ ಪದಗಳಲ್ಲಿರುವ ಛಂದಸ್ಸಿನ ಮಾರ್ದವವೂ ಶಬ್ದಗಾಂಭೀ ರ್ಯವೂ ಇಲ್ಲಿ ಬಹುಶಕ್ತಿಯುಕ್ತವಾಗಿ ರಣಗೀತೆಯಂತೆ ಮಾರ್ಪಡುವುವು. ಶಬ್ದಾರ್ಥ ಗಳ ಮೇಳನ ಇಲ್ಲಿ ಅತಿಹಿತವಾಗಿದೆ. ರಾಧೆಯ ಪಾತ್ರವಂತೂ ಬಹುಸ್ಪಷ್ಟವಾಗಿ ಚಿತ್ರಿತವಾಗಿದೆ. ಆಕೆಯ ಪ್ರತಿಷ್ಠೆ, ಆತ್ಮಗೌರವ ಪ್ರತಿಭಟಿಸುವ ಮನೋಭಾವ

ದೃಢಸಂಕಲ್ಪಗಳು ಅವಳನ್ನು ಗುಜರಾತಿ ಸಾಹಿತ್ಯದ ಇತರ ಎಲ್ಲ ನಾಯಕ ನಾಯಕಿಯರಿಗಿಂತ ಬಹು ಮೇಲ್ಮಟ್ಟಕ್ಕೆ ಏರಿಸಿವೆ.

ಕವಿಯ ಶೈಲಿಯ ವೈಭವವನ್ನು ನೋಡಬೇಕು ಆತನ ಜ್ಞಾನ ಭಕ್ತಿ ವೈರಾಗ್ಯ ವಿಷಯಕವಾದ ಪದಗಳಲ್ಲಿ. ವೇದಾಂತಗೀತೆಗಳಲ್ಲಂತೂ ಅವನ ಜೀವನದ ವಿವಿಧ ಮುಖವು ಬಹು ಸ್ಪಷ್ಟವಾಗಿ ಚಿತ್ರಿತವಾಗಿವೆ. ದೈವದಲ್ಲಿ ಅನನ್ಯಶರಣತ್ವ, ದುಃಖದಲ್ಲಿ ತಗ್ಗದ ದಾರ್ಢ್ಯ, ಭಗವಂತನ ಸದ್ಗುಣಗಳಲ್ಲಿ ಅಚಲವಾದನಂಬಿಕೆ, ಆತನ ಸೃಷ್ಟಿಸಾಮಾನ್ಯದಲ್ಲಿ ಸೀಮಾತೀತವಾದ ಪ್ರೇಮ-ಇವು ಆತನ ಪದಗಳ ಪ್ರಧಾನ ಗುಣವಾಗಿ ಆತನ ಅನುಯಾಯಿಗಳಿಗೆ ಜೀವಂತಪ್ರೇರಣೆಯಾಗಿವೆ. ಅವನದು ಅನುಭವವೇದಾಂತ. ಬೇಡರೂ ಜಲಗಾರರೂ ಅವನನ್ನು ಭಜನೆಗೆ ಕರೆಯುತ್ತಾರೆ. ಅವನು ಹೋಗುತ್ತಾನೆ. ಎಲ್ಲಿ ಭಿನ್ನತೆ ತಲೆದೋರುತ್ತದೆ ಅಲ್ಲಿ ದೇವನು ಇಲ್ಲವಾಗುತ್ತಾನೆ ಎನ್ನುವುದು ಅವನ ಸಿದ್ಧಾಂತ. ಪರಬ್ರಹ್ಮನ ದೃಷ್ಟಿಯಲ್ಲಿ ಸರ್ವವೂ ಸಮ. ಆದುದರಿಂದಲೇ ಅವನ ಅಭಿಪ್ರಾಯದ ಪ್ರಕಾರ ವಿಷ್ಣುವನ್ನು ಪೂಜಿಸುವುದರಿಂದಲೇ ವೈಷ್ಣವತ್ವ ಪ್ರಾಪ್ತಿಯಾಗುವುದಿಲ್ಲ. ಆರ್ಯಧರ್ಮದ ಸಾರಸರ್ವಸ್ವವಾದ ಸರ್ವಸಮತ್ವ ಮನೋಭಾವವನ್ನು ಆಚರಣೆಗೆ ತಂದಾಗ ಮಾತ್ರ ಆ ಹೆಸರು ಅವನಿಗೆ ಒಪ್ಪುತ್ತದೆ. ಅದನ್ನೇ ಅವನು ತನ್ನ 'ವೈಷ್ಣವ ಜನತೋ ತೇನೇ ಕಹಿಯೇ' ಎಂಬ ಗಾಂಧೀಜಿಯವರಿಗೆ ಪರಮಪ್ರಿಯವಾದ ಗೀತೆಯಲ್ಲಿ ಹಾಡಿರುವುದು.

ಅವನು ಮುಂದಿನ ಪೀಳಿಗೆಯವರಿಗೆ ಬಿಟ್ಟಿರುವ ಆಸ್ತಿ ಅಮೋಘವಾದುದು. ಗುಜರಾತಿ ಸಾಹಿತ್ಯದ ಮೇಲೆ ಅದರ ಪರಿಣಾಮ ಅಗಾಧ. ಪ್ರಭಾತಿಯಾ ಛಂದಸ್ಸಿನಿಂದ ಕೂಡಿದ ಆತನ ಗೀತಗಳು ಪ್ರಭಾತಗೀತೆಗಳಾಗಿ ಅನೇಕರ ಬಾಯಲ್ಲಿ ತಾಂಡವವಾಡುತ್ತಿವೆ. ಅವನ ಅಭಿರುಚಿ ಅನೇಕ ಸಲ ಒರಟು, ಮೀರಾಬಾಯಿಯ ಮಾರ್ದವವನ್ನೂ ಸೂರದಾಸನ ಸೌಷ್ಠವವನ್ನೂ ತುಳಸೀದಾಸನ ಗಾಂಭೀರ್ಯವನ್ನೂ ಉಚ್ಚಕಾವ್ಯಕ್ಕೆ ಆವಶ್ಯಕವಾದ ಲಘುಚಲನೆಯನ್ನೂ ಅವನ ಅಲಂಕಾರಭೂಯಿಷ್ಠವಾದ ಭಾಷೆಯಲ್ಲಿ ಕಾಣಲಾಗುವುದಿಲ್ಲ. ಆದರೂ ಅವನು ನಿರ್ಜೀವವಾಗಿದ್ದ ಸಂಪ್ರದಾಯ ಮಾರ್ಗವನ್ನು ಬಿಟ್ಟು ಗುಜರಾತಿ ಸಾಹಿತ್ಯವನ್ನು ಆತ್ಮೀಯವಾದ ಕಲೆಯಾಗುವಂತೆ ಮಾರ್ಪಡಿಸಿದನು. ನರಸಿಂಹನು ಭಕ್ತನಾಗಿ, ಕವಿಯಾಗಿ, ಆರ್ಯಸಂಸ್ಕೃತಿಯ ಪ್ರತೀಕವಾಗಿ ಗುಜರಾತಿ ಸಾಹಿತ್ಯದಲ್ಲಿ ಬಹು ಉಚ್ಚಸ್ಥಾನವನ್ನು ಗಳಿಸಿದ್ದಾನೆ.

ಇತಿಹಾಸ ಪೂರ್ವಕಾಲದಿಂದಲೂ ಭಾರತದಲ್ಲಿ ಜನಪ್ರಿಯವಾದ ಕಥಾಸಾಹಿತ್ಯ ರಾಶಿಯಿದೆ. ಭಾಸನಿಂದ ಹಿಡಿದು ಎಲ್ಲ ಕವಿಗಳೂ ಇದನ್ನು ಬಹುಮಟ್ಟಿಗೆ ಉಪಯೋಗಿಸಿಕೊಂಡಿದ್ದಾರೆ. ಸಂಸ್ಕೃತ, ಪ್ರಾಕೃತ, ಅಪಭ್ರಂಶ, ಪ್ರಾಚೀನ ಮತ್ತು ನವೀನ ದೇಶಭಾಷೆಗಳು ಇವುಗಳ ಸುವರ್ಣತಂತುವನ್ನು ತಮ್ಮಲ್ಲಿ ಅಳವಡಿಸಿಕೊಂಡು ಪ್ರವೃದ್ಧಮಾನವಾಗಿವೆ.

'ಜಾತಕ'ಗಳು ಇವನ್ನು ಮೊದಲು ಉಪಯೋಗಿಸಿಕೊಂಡವು. ಪೈಶಾಚೀ

ಪ್ರಾಕೃತದಲ್ಲಿ ಬೃಹತ್ಕಥೆಯನ್ನು ರಚಿಸಿದ ಗುಣಾಢ್ಯನೇ ಈ ಜಾನಪದ ಕಥಾ ಪ್ರಪಂಚದ ಪಿತಾಮಹನೆಂದು ಹೇಳಬಹುದು. ಕಥಾಸರಿತ್ಸಾಗರದಲ್ಲಿ ಇದನ್ನು ಸಂಗ್ರಹಿಸಿದವನು ಸೋಮದೇವ. ಬೃಹತ್ಕಥಾಮಂಜರಿ ಎಂಬ ಹೆಸರಿಂದ ಕ್ಷೇಮೇಂದ್ರನು ಇಂಥದೇ ಮತ್ತೊಂದು ಗ್ರಂಥವನ್ನು ರಚಿಸಿದನು. ಪಂಚತಂತ್ರವೂ ಈ ರೀತಿಯ ಮತ್ತೊಂದು ಕಥಾಗುಚ್ಛ. ಅರೇಬಿಯನ್ ನೈಟ್ಸ್ ಕಥೆಗಳಿಗೂ ಸ್ವಲ್ಪಮಟ್ಟಿಗೆ ಇವೇ ಮೂಲ. ಇವೇ ಅಲ್ಲದೆ ವೇತಾಲ ಪಂಚವಿಂಶತಿಕಾ, ಸಿಂಹಾಸನ ದ್ವಾತ್ರಿಂಶಿಕಾ, ಶುಕಸಪ್ತತಿ ಮೊದಲಾದುವು ಈ ಜಾತಿಯವು. ಪೌರಾಣಿಕ ಗ್ರಂಥಗಳ ಪ್ರಭಾವ ಕಡಿಮೆಯಾಗುತ್ತಾ ಬಂದಹಾಗೆಲ್ಲ ಇವುಗಳು ಗುಜರಾತಿ ಜನಗಳ ಹೃದಯವನ್ನು ಸೂರೆಗೊಳ್ಳಲು ಪ್ರಾರಂಭವಾದುವು. ಅನೇಕ ಕವಿಗಳು ಧಾರ್ಮಿಕ ಸಾಹಿತ್ಯದಿಂದ ತಮ್ಮ ದೃಷ್ಟಿಯನ್ನು ಲೌಕಿಕ ಸಾಹಿತ್ಯದ ಕಡೆಗೆ ತಿರುಗಿಸಿದರು. ಧಾರ್ಮಿಕ ಸಾಹಿತ್ಯವೂ ವಾಸ್ತವಿಕ ಜೀವನದಂತೆ ಚಿತ್ರಿತವಾಗಲು ಮೊದಲು ಮಾಡಿದವು.

ಗುಜರಾತಿನ ಕತೆಗಳೆಲ್ಲ ಮಹಮ್ಮದೀಯರ ಆಕ್ರಮಣಕ್ಕೆ ಹಿಂದಿನ ಕಾಲದ ಜೀವನಚಿತ್ರಗಳನ್ನು ಕೊಡತಕ್ಕವಾಗಿವೆ. ಇವು ಯಾವ ಒಂದು ಪಂಥದವರಿಂದ ರಚಿತವಾದುವಲ್ಲ. ಜನಸಾಮಾನ್ಯರ ಬುದ್ಧಿವಿಕಾಸಕ್ಕೂ ಸುಖಸಂತೋಷಕ್ಕೂ ಇವುಗಳ ಮೂಲವು ಬಹು ಅನಿವಾರ್ಯಸಾಧನಗಳಾದುವು. ಈ ಕತೆಗಳು ಧರ್ಮ ಕತೆಗಳಂತೆ ಸಾಂಕೇತಿಕವಾಗಿರಲಿಲ್ಲ. ಅಲ್ಲಿಯ ನೈತಿಕಭಾಗವು ಮಾನವೀಯತೆಯ ಬೆಲೆಯನ್ನು ಕಡಿಮೆಮಾಡಲಿಲ್ಲ. ಅವು ಶುದ್ಧವಾದ ಸರಳವಾದ ಮನರಂಜಕ ಸಾಹಿತ್ಯವಾಗಿದ್ದುವು. ಪವಾಡಗಳು, ಅದ್ಭುತ ವ್ಯಾಪಾರಗಳು, ಮಂತ್ರ, ಶೂನ್ಯ, ಮಾಟ ಅಭಿಚಾರ, ಶರೀರಪರಿವರ್ತನೆ, ಪರಕಾಯ ಪ್ರವೇಶ, ವ್ಯಭಿಚಾರ, ಕನ್ಯಾಹರಣ, ಸಹ ವಿದ್ಯಾಭ್ಯಾಸ, ಸ್ತ್ರೀ ಸ್ವಾತಂತ್ರ್ಯ, ಸಾಮೂಹಿಕ ವಿವಾಹ ಪದ್ಧತಿ, ಪ್ರೇಮಪರಾಕಾಷ್ಠೆ, ವಿಶ್ವಾಸಘಾತುಕತನ ಮೊದಲಾದುವು ಇವುಗಳ ಪ್ರಧಾನ ವಸ್ತುಗಳು. ನಾಯಕ ನಾಯಕಿಯರ ಪ್ರೇಮಪರಾಭವಗಳೂ ವಿರಹಮೇಳನಗಳೂ ಕಥೆಯ ಭಾವೋದ್ರೇಕವನ್ನು ಅನುಸ್ಯೂತವಾಗಿ ನಡಸುತ್ತಿದ್ದವು. ಪಾತ್ರರಚನೆಯಲ್ಲಿ ಮಾನವೀಯತೆಯ ಯಥಾವತ್ತಾದ ಚಿತ್ರವಿಲ್ಲದಿರುವುದು ಇವುಗಳ ಕೊರತೆ.

ಪ್ರಹೇಳಿಕಾ ಅಥವಾ ಸಮಸ್ಯಾಪರಿಹಾರ ಭೂಯಿಷ್ಠವಾದ ಗ್ರಂಥಗಳು ಸಂಸ್ಕೃತದಿಂದ ಗುಜರಾತಿಗೆ ಬಂದ ಕೊಡಿಗೆ. ಈಗ ಐವತ್ತು ವರ್ಷಗಳವರೆಗೆ ಗುಜರಾತಿಯಲ್ಲಿ 'ಕೊಯ್ಡ ಪರಿಹಾರ ಅಥವಾ ಸಮಸ್ಯಾಪೂರಣ' ಒಂದು ಸಾಮಾನ್ಯವಾದ ಮನರಂಜನೆಯ ಕಾಲಕ್ಷೇಪವಾಗಿತ್ತು. ಅನೇಕ ನಾಯಕಿಯರು ಬಹು ಜಟಿಲವಾದ ಸಮಸ್ಯೆಗಳನ್ನು ಸೂಚಿಸಿ ಅವನ್ನು ಪರಿಹಾರಮಾಡಿದವರನ್ನೇ ಮದುವೆಯಾಗುವೆವೆಂದು ಪ್ರತಿಜ್ಞೆ ಮಾಡುತ್ತಿದ್ದುದೂ ರೂಢಿಯಲ್ಲಿತ್ತು.

ಇಂತಹ ಕತೆಗಳಿಗೆ ವಿಶೇಷವಾಗಿ ಮೂಲವಾಗಿದ್ದುದು 'ವೇತಾಲ ಪಂಚ

ವಿಂಶತಿಕಾ.' ಗುಪ್ತರ ಎರಡನೆಯ ಚಂದ್ರಗುಪ್ತನೇ ಕಾವ್ಯಗಳ ಉಜ್ಜಯನಿಯ ವಿಕ್ರಮಾದಿತ್ಯ. ಇವನು ಅನೇಕ ಅದ್ಭುತ ಕತೆಗಳ ನಾಯಕ. ಈತನಿಗೆ 'ಪರದುಃಖ ಭಂಜನ' ಎಂಬ ಹೆಸರೂ ಉಂಟು. ಈತನ ವಿಷಯಕವಾದ ಕತೆಗಳು ಗುಜರಾತಿನಲ್ಲಿ ಬಹು ಪ್ರಸಿದ್ಧವಾಗಿದ್ದುವು. ಹಳೇ ಗುಜರಾತಿ ಭಾಷೆಯಲ್ಲಿ ಈ ವಿಷಯಕವಾದ ಕಥಾಸಂಗ್ರಹವು ೧೫೬೭ರಲ್ಲಿ ದೇವಶೀಲನೆಂಬುವನಿಂದ ರಚಿತವಾಯಿತು. ಸುಮಾರು ೧೬೬೮ರವರೆಗೆ ಈ ವಿಷಯವಾಗಿ ಆ ಭಾಷೆಯಲ್ಲಿ ಅಯ್ದು ಜನ ಗ್ರಂಥರಚನೆ ಮಾಡಿದರು.

ಗುಜರಾತಿನಲ್ಲಿ ಇಂತಹ ಜನಪ್ರಿಯವಾದ ಮತ್ತೊಂದು ಕತೆಯೆಂದರೆ 'ಸಿಂಹಾಸನ ದ್ವಾತ್ರಿಂಶಿಕಾ.' ಇದು ಮಹಾರಾಷ್ಟ್ರೀ ಪ್ರಾಕೃತದ ಮೂಲದ ಆಧಾರದ ಮೇಲೆ ಕ್ಷೇಮಂಕರನೆಂಬ ಸಾಧುವಿನಿಂದ ರಚಿತವಾಯಿತು. ಇದರಲ್ಲಿ ಉಜ್ಜಯಿನಿಯ ಭೋಜರಾಜನು ವಿಕ್ರಮನ ಸಿಂಹಾಸನವನ್ನು ಕಂಡುಹಿಡಿದು ಅದನ್ನು ಒಂದೊಂದು ಸಲ ಹತ್ತಲು ಹೊರಟಾಗಲೂ ಅಲ್ಲಿದ್ದ ಮೂವತ್ತೆರಡು ಬೊಂಬೆಗಳೂ ವಿಕ್ರಮನಂತೆ ಉದಾರಿಯೂ ಸಹಾಯಕನೂ ಆಗುವವರೆಗೆ ಹತ್ತಕೂಡದೆಂದು ನಿಷೇಧಿಸುವುವು. ಒಂದೊಂದೂ ವಿಕ್ರಮನ ಒಂದೊಂದು ಸಾಹಸಕೃತ್ಯವನ್ನು ಕುರಿತ ಕತೆಯಾಗಿರುತ್ತದೆ. ಈ ವಿಷಯವಾಗಿ ಗುಜರಾತಿಯಲ್ಲಿ ಮೊತ್ತಮೊದಲ ಗ್ರಂಥ ೧೪೬೩ರಲ್ಲಿ ಮಲಯಚಂದ್ರನಿಂದ ರಚಿತವಾಯಿತು. ೧೭೨೧ರವರೆಗೆ ಈ ವಿಷಯವಾಗಿ ಅನೇಕ ಕೃತಿಕಾರರು ಗ್ರಂಥರಚನೆಮಾಡಿದರು. ಇದನ್ನೇ ಶ್ಯಾಮಲಭಟ್ಟನೂ ಪುನಃ ರಚಿಸಿದನು.

ಹದಿಮೂರನೆಯ ಶತಮಾನದಲ್ಲಿ ಪೂರ್ಣಭದ್ರನೆಂಬ ಸಾಧುವಿನಿಂದ ಪಂಚತಂತ್ರವು ಗುಜರಾತಿ ಭಾಷೆಯಲ್ಲಿ ರಚಿತವಾಯಿತು. ೧೫ನೆಯ ಶತಮಾನದಲ್ಲಿ ಮತ್ತೆರಡು ರೂಪಾಂತರಗಳು ತಲೆದೋರಿದುವು. 'ಶುಕಸಪ್ತತಿ'ಯೂ ಮತ್ತೊಂದು ಜನಪ್ರಿಯಕತೆ. ಪರದೇಶಕ್ಕೆ ಹೋಗಿದ್ದ ಒಬ್ಬ ಮನುಷ್ಯನ ಪತ್ನಿಯೊಬ್ಬಳು ಅವನ ಪರೋಕ್ಷದಲ್ಲಿ ಉಪಪತಿಯನ್ನು ಹುಡುಕಿಕೊಂಡು ಹೋಗುವ ಸಮಯಕ್ಕೆ ಸರಿಯಾಗಿ ಅಲ್ಲಿದ್ದ ಗಿಳಿಯೊಂದು ಅನೇಕ ತೊಂದರೆಗಳಿಂದ ಪಾರಾದ ಒಬ್ಬ ಹೆಂಗಸಿನ ಕತೆಯನ್ನು ನಿರೂಪಿಸಲು ಮೊದಲುಮಾಡಿತು. ಎಪ್ಪತ್ತು ದಿನಗಳು ಕತೆಯನ್ನು ಕೇಳಿದಮೇಲೆ ಆ ಸ್ತ್ರೀಯು ತನ್ನ ದುರುದ್ದೇಶವನ್ನು ನೀಗಿ ಪರಿಶುದ್ಧಳಾದಳು. ಈ ಕತೆಯನ್ನು ರತ್ನಸುಂದರನೆಂಬುವನು ೧೫೦೨ರಲ್ಲಿ ಗುಜರಾತಿಯಲ್ಲಿ ರಚಿಸಿದನು. ಹೀಗೆಯೇ ಪತಿಪತ್ನಿಯರ ವಿಶ್ವಾಸಘಾತುಕತೆಯನ್ನು ನಿರೂಪಿಸುವ ಕತೆಗಳು ಗುಜರಾತಿನಲ್ಲಿ ಅಂದಿನಷ್ಟೇ ಇಂದೂ ಜನಪ್ರಿಯವಾಗಿವೆ.

ವಿಕ್ರಮನ ವಿಷಯವಾಗಿಯೇ ಮಂಗಳ ಮಾಣಿಕ್ ಎಂಬ ಸಾಧುವು ೧೫೨೮ರಲ್ಲಿ 'ವಿಕ್ರಮ ಆನೆ ಖಾ ಪ್ರಚೋರ ರಾಸ' ಎಂಬ ಕತೆಯನ್ನು ರಚಿಸಿದ್ದಾನೆ. ಸಿದ್ಧರಾಜನ ವಿಷಯವಾಗಿಯೂ ಇಂತಹ ಕತೆಗಳಿವೆ. ೧೫೪೯ರಲ್ಲಿ ಮತಿಸಾರ

ನೆಂಬುವನು ' ಕರ್ಪೂರ ಮಂಜರಿ ' ಎಂಬ ಗ್ರಂಥವನ್ನು ರಚಿಸಿದನು. ಇದರಲ್ಲಿ ಸಿದ್ಧಾಪುರದ ರುದ್ರಮಾಲಾ ದೇವಾಲಯದ ಬೊಂಬೆಗಳು ತಮ್ಮ ಪ್ರೇಮ ಕ್ರತೆಗಳನ್ನು ನಿರೂಪಿಸುತ್ತವೆ. ೧೬೦೭ರಲ್ಲಿ ಕನಕಸುಂದರನು ' ಕರ್ಪೂರ ಮಂಜರೀ ರಾಸ 'ವನ್ನು ರಚಿಸಿದನು.

ಗುಜರಾತಿ ಜನವನ್ನು ವಿಶೇಷವಾಗಿ ಆಕರ್ಷಿಸಿರುವ ಮತ್ತೊಂದು ಕತೆಯೆಂದರೆ ಆನಂದಧರನ 'ಕಾಮಕುಂಡಲಾ ನಾಟಕ 'ದ ಆಧಾರದ ಮೇಲೆ ರಚಿತವಾದ ಕತೆಗಳು. ಇವು ದಕ್ಷಿಣೋತ್ತರ ಭಾರತಗಳಲ್ಲೂ ಬಹು ಪ್ರಿಯವಾಗಿದ್ದಂತೆ ಕಾಣುತ್ತದೆ. ಈ ಕತೆ ಹಿಂದಿ ಮತ್ತು ಮಹಾರಾಷ್ಟ್ರ ಭಾಷೆಗಳಲ್ಲಿಯೂ ಸಿಕ್ಕುತ್ತವೆ. ನರಸಕಾಯಸ್ಥನ ಮಗನಾದ ಗಣಪತಿಯೆಂಬುವನು ೧೫೭೮ರಲ್ಲಿ ಹಳೆಯ ಗುಜರಾತಿ ಭಾಷೆಯಲ್ಲಿ ' ಮಾಧವಾನಲದೋಗ್ಧಕ ಪ್ರಬಂಧ 'ವೆಂಬ ಗ್ರಂಥವನ್ನು ರಚಿಸಿದನು. ಇದರಲ್ಲಿ ೨,೫೦೦ ದೋಗ್ಧಕ ಪದ್ಯಗಳಿವೆ. 'ಮದನಪುರಾಣ'ವು ಇದಕ್ಕೆ ಮೂಲ. ಕುಶಾಲಲಾಭ ನೆಂಬುವನು 'ಮಾಧವಕಾಮಕುಂಡಲ ರಾಸವನ್ನು ೧೫೬೦ರಲ್ಲಿ ರಚಿಸಿದನು. ಇದನ್ನೇ ಶ್ಯಾಮಲನು ' ಮಾಧವಾನಲ ' ಎಂಬ ಹೆಸರಿನಲ್ಲಿ ಆಧುನಿಕ ಗುಜರಾತಿ ಭಾಷೆಯಲ್ಲಿ ಹೊಸ ರೂಪಕ್ಕೆ ತಂದಿದ್ದಾನೆ. ಇದರ ಕತೆ ಈಗಲೂ ಬಹು ಆಕರ್ಷಕವಾಗಿದೆ.

ರಾಜಾ ಕಾಮಸೇನನು ಆಳುತ್ತಿದ್ದ ಪುಷ್ಪಾವತಿ ಎಂಬ ಪಟ್ಟಣದಲ್ಲಿ ಮನ್ಮಥ ನಷ್ಟೇ ಸುಂದರನಾದ ಮಾಧವನೆಂಬ ಬ್ರಾಹ್ಮಣನಿದ್ದನು. ನಗರದ ನಾರಿಯರೆಲ್ಲ ಅವನ ಸೌಂದರ್ಯದಿಂದ ಮೋಹಿತರಾಗಿ ಅವನ ಹಿಂದೆ ಓಡುತ್ತಿದ್ದರು. ಇವನಿಂದಾಗುವ ತೊಂದರೆಯನ್ನು ನಿವಾರಿಸುವುದಕ್ಕಾಗಿ ಜನ ದೊರೆಗೆ ಮೊರೆಯಿಟ್ಟರು. ಇದರ ವಾಸ್ತವಾಂಶವನ್ನು ಪರೀಕ್ಷಿಸಲು ಅವನನ್ನು ತನ್ನ ರಾಣಿಯ ವಾಸಕ್ಕೆ ಕರಸಿ ತನಗೂ ವಿಪತ್ತು ಸಂಭವಿಸುವುದು ಖಚಿತವಾದಾಗ ಅವನನ್ನು ಊರಿಂದ ಹೊರಗೆ ಅಟ್ಟಿದನು.

ಮಾಧವನು ಅಲ್ಲಿ ಇಲ್ಲಿ ಅಲೆದು ಕೊನೆಗೆ ಅಮರಾವತಿ ಪಟ್ಟಣಕ್ಕೆ ಬರುವನು. ಅವನ ಅದ್ಭುತ ಮೇಧಾಶಕ್ತಿಯು ಅಲ್ಲಿನ ರಾಜನ ದೃಷ್ಟಿಯನ್ನು ಸೆಳೆಯುವುದು. ರಾಜಾಸ್ಥಾನದಲ್ಲಿ ಆತನಿಗೆ ಗೌರವಸ್ಥಾನವು ದೊರಕಿತು. ಒಂದು ದಿನ ರಾಜನ ವೇಶ್ಯೆಯಾದ ಕಾಮಕುಂಡಲೆಯೆಂಬುವಳು ನಾಟ್ಯವಾಡುತ್ತಿದ್ದಾಗ ಪ್ರೇಕ್ಷಕನಾಗಿದ್ದ ಮಾಧವನು ಅವಳ ನೃತ್ಯಕೌಶಲ್ಯಕ್ಕೆ ಬೆರಗಾಗಿ ರಾಜನು ತನಗೆ ಗೌರವಸೂಚಕ ವಾಗಿ ಕೊಟ್ಟಿದ್ದ ತಾಂಬೂಲವನ್ನು ಅವಳಿಗೆ ಕೊಡುವನು. ಕುಪಿತನಾದ ರಾಜನು ಅವನನ್ನು ತನ್ನ ರಾಜ್ಯದಿಂದ ಹೊರದೂಡಿಸಲು ಆಜ್ಞೆ ಮಾಡುವನು. ಹೋಗುತ್ತಿದ್ದಾಗ ಕಾಮಕುಂಡಲೆಯು ಕಂಡು ಅವನನ್ನು ತನ್ನ ಮನೆಗೊಯ್ದು ಆದರಿಸುವಳು. ಇಬ್ಬರೂ ಪರಸ್ಪರ ಮೋಹಿತರಾಗುವರು. ಅನೇಕ ಸಮಸ್ಯೆಗಳು ಸೂಚಿತವಾಗಿ ಪರಿಹಾರವಾಗುವುವು. ಉದಯವಾದ ಮೇಲೆ ಇಬ್ಬರೂ ಬಹಳ ದುಃಖದಿಂದ ಅಗಲುವರು. ಅಗಲುವಾಗ ಕಾಮಕುಂಡಲೆಯು ಮಾಧವನನ್ನು ಹೋಗಕೂಡ ದೆಂದು ಅಂಗಲಾಚುವುದು ಬಹು ಹೃದಯವಿದ್ರಾವಕವಾಗಿದೆ.

ಮಾಧವನು ಉಜ್ಜಯನಿಗೆ ಹೋಗಿ ಅಲ್ಲಿ ತನ್ನ ಹೃದಯದ ವಿರಹದುಃಖವನ್ನು ಪದ್ಯರೂಪದಲ್ಲಿ ಅಲ್ಲಿಯ ದೇವಾಲಯದ ಗೋಡೆಯೊಂದರ ಮೇಲೆ ಬರೆಯುವನು. ವೇಷ ಮರಸಿಕೊಂಡು ಪ್ರಜೆಗಳ ಸುಖದುಃಖಗಳ ಪರೀಕ್ಷೆಗಾಗಿ ಬರುತ್ತಿದ್ದ ರಾಜಾ ವಿಕ್ರಮನು ಅದನ್ನು ನೋಡಿ ಆ ವಿರಹಿಯಾದ ಕವಿಯನ್ನು ಕರೆತರಲು ವೇಶ್ಯೆಯೊಬ್ಬಳಿಗೆ ಆಜ್ಞಾಪಿಸುವನು. ಮಾಧವನು ಸಿಕ್ಕುವನು. ಪರದುಃಖಭಂಜನನಾದ ವಿಕ್ರಮನು ಅವನ ದುಃಸ್ಥಿತಿಯನ್ನು ನೋಡಿ ಸಹಿಸಲಾರದೆ ಕಾಮಕುಂಡಲೆಯನ್ನು ಮಾಧವನಿಗೇ ಕಳುಹಿಸಬೇಕೆಂದು ಕಾಮಸೇನ ಮಹಾರಾಜನಿಗೆ ಆದೇಶವನ್ನು ಕಳುಹಿಸುವನು. ಆತನು ಒಪ್ಪದಿರಲು ಅವನ ಮೇಲೆ ದಂಡಯಾತ್ರೆ ಹೊರಡುವನು. ಹಾಗೆಯೇ ವಿಕ್ರಮನು, ಕಾಮಕುಂಡಲೆಯ ಪ್ರೇಮದ ಆಳವನ್ನು ಪರೀಕ್ಷಿಸುವುದಕ್ಕಾಗಿ ತಾನೇ ಅವಳಲ್ಲಿಗೆ ಹೋಗಿ ಅವಳನ್ನು ಅನೇಕ ರೀತಿಯಲ್ಲಿ ಪ್ರಲೋಭನಗೊಳಿಸುವನು. ಅಲ್ಲದೆ ಮಾಧವನು ಸತ್ತನೆಂದೂ ತಿಳಿಸುವನು. ತಕ್ಷಣ ಕಾಮಕುಂಡಲೆಯು ಮೂರ್ಛಿತಳಾಗುವಳು. ಮಾಧವನಿಗೆ ಕಾಮಕುಂಡಲೆಯು ಸತ್ತಳೆಂದು ತಿಳಿಸುವನು. ಅವನೂ ಮೂರ್ಛಿತನಾಗುವನು. ಬ್ರಹ್ಮಹತ್ಯಾ ದೋಷ ಬಂತೆಂದು ಹೆದರಿದ ವಿಕ್ರಮನು ತಾನೂ ಆತ್ಮಹತ್ಯಕ್ಕೆ ತೊಡಗುವನು. ಆ ವೇಳೆಗೆ ಸರಿಯಾಗಿ ಆತನ ಸ್ನೇಹಿತನಾದ ವೇತಾಳನು ಬಂದು ಪ್ರೇಮಿಗಳಿಬ್ಬರನ್ನೂ ಬದುಕಿಸುವನು. ಮುಂದೆ ಅವರು ಅನೇಕ ಕಾಲ ಸುಖವಾಗಿ ಬಾಳುವರು. ಈ ಕತೆಗೆ ಗುಜರಾತಿ ಕವಿಗಳು ನಾಯಕನಾಯಕಿಯರ ಪೂರ್ವಜನ್ಮದ ಸಂಗತಿಗಳನ್ನು ಸೇರಿಸಿ, 'ತರಂಗಲೋಲ'ದ ಮಾದರಿಯಲ್ಲಿ ಬೆಳಸಿದ್ದಾರೆ.

ಸಂಸ್ಕೃತದ ಆಧಾರದಮೇಲೆ ರಚಿತವಾದ 'ಚೋರಪಂಚಾಶಿಕೆ'ಯೆಂಬ ಮತ್ತೊಂದು ಕತೆಯೂ ಗುಜರಾತಿ ಲೇಖಕರ ದೃಷ್ಟಿಯನ್ನು ವಿಶೇಷ ಸೆಳೆದಿದೆ. ಇದರ ಕತೆಯೂ ಸ್ವಾರಸ್ಯವಾಗಿದೆ. ಕಾಶ್ಮೀರದ ಸುಪ್ರಸಿದ್ಧ ಕವಿಯಾದ ಬಿಲ್ಹಣನು ಪಂಜಾಬಿನ ದೊರೆಯಾದ ಕ್ಷಿತಿಪಾಲನ ಕುವರಿಯಲ್ಲಿ ಪ್ರೇಮಾಸಕ್ತನಾಗಿರುವನು. ಇವರ ಈ ಮೋಹವನ್ನು ತಿಳಿದು ಕ್ರುದ್ಧನಾದ ರಾಜನು ಕವಿಯನ್ನು ದೇಶದಿಂದ ಓಡಿಸುವನು. ಎದೆಯೊಡೆದ ಕವಿಯು ತನ್ನ ವಿರಹದುಃಖವನ್ನು ಐವತ್ತು ಪದ್ಯಗಳಲ್ಲಿ ತೋಡಿಕೊಂಡಿದ್ದಾನೆ. ಕೆಲವು ಗುಜರಾತಿ ಗ್ರಂಥಕರ್ತರು ಇದಕ್ಕೆ ಇನ್ನೂ ಒಳ ಪದ್ಯಗಳನ್ನು ಸೇರಿಸಿ ಅದಕ್ಕೆ ಒಂದು ಪ್ರಾದೇಶಿಕ ರೂಪವನ್ನು ಕೊಟ್ಟಿದ್ದಾರೆ. ಇದರ ಪ್ರಕಾರ ಪಾಠಣದೇಶದ ವೀರಸೇನನೆಂಬ ಕವಿಯು ತನ್ನ ಮಗಳಾದ ಶಶಿಕಲೆಗೆ ಬಿಲ್ಹಣ ಕವಿಯನ್ನು ವಿದ್ಯಾಗುರುವಾಗಿ ನೇಮಿಸುವನು. ಗುರುಶಿಷ್ಯರಿಬ್ಬರೂ ಪರಸ್ಪರ ಸುಪ್ರೀತರಾಗಿ ತಮ್ಮ ಪ್ರೇಮವನ್ನು ಬೆಳಸಿಕೊಂಡು ರಹಸ್ಯವಾಗಿ ಮದುವೆಯಾಗುವರು. ರಾಜನಿಗೆ ಇದು ತಿಳಿಯಲು ಕವಿಯನ್ನು ಮರಣದಂಡನೆಗೆ ಗುರಿಮಾಡುವನು. ಈ ಕತೆಯನ್ನು ಜ್ಞಾನಾಚಾರ್ಯನೆಂಬುವನು ಸುಮಾರು ೧೫೦೦ರಲ್ಲಿ ತನ್ನ 'ಬಿಲ್ಹಣ ಕಾವ್ಯ'ದಲ್ಲಿ ಅಳವಡಿಸಿಕೊಂಡಿದ್ದಾನೆ. ಶ್ಯಾಮಲಭಟ್ಟನೂ ತನ್ನ 'ಮದನಮೋಹನ'ದಲ್ಲಿ ಈ ಕತೆಯನ್ನು ಸೇರಿಸಿದ್ದಾನೆ.

ಉತ್ತರ ಭಾರತದ ಮಧ್ಯಯುಗದ ಸಾಹಿತ್ಯರತ್ನ ರಾಜಾಸ್ಥಾನಿಯಲ್ಲಿ ರಚಿತವಾಗಿರುವ 'ಢೋಲಾ ಮಾರುರಾ ದುಹಾ' ಎಂಬ ಗ್ರಂಥ. ಇದು ಢೋಲಾ ಮತ್ತು ಮಾರು ಎಂಬ ಪ್ರಿಯ ಪ್ರೇಯಸಿಯರ ಶೃಂಗಾರ ಕತೆ. ಇದರ ಆಧಾರದ ಮೇಲೆ ಕುಶಾಲಲಾಭನು ಸುಮಾರು ೧೫೬೧ರಲ್ಲಿ 'ಮಾರುಢೋಲಾ ಚೂಪಾಯ್' ಎಂಬ ಗ್ರಂಥವನ್ನು ರಚಿಸಿದ್ದಾನೆ. ಈ ಕತೆಯ ಮತ್ತೆರಡು ರೂಪಾಂತರಗಳೂ ಇವೆ. ಆಧುನಿಕ ನಾಟಕಕಾರನಾದ ದಯಾಬಾಯಿಯು ತನ್ನ 'ಉಮಾದೇವ್ದಿ' ಎಂಬ ನಾಟಕವನ್ನು ಇದೇ ಕಥಾವಸ್ತುವಿನ ಮೇಲೆ ರಚಿಸಿದ್ದಾನೆ.

ಕುಶಾಲಲಾಭನ ಗ್ರಂಥದ ಭಾಷೆಯು—ಕೆಲವು ಭಾಗ ಗದ್ಯದಲ್ಲಿಯೂ ಇದೆ—ಹಳೆಯ ಗುಜರಾತಿಯ ರಾಜಾಸ್ಥಾನಿ ರೂಪವನ್ನು ಪ್ರದರ್ಶಿಸುತ್ತದೆ. ವಸ್ತುವು ಸರಳವೂ ಸಹಜವೂ ಆಗಿದೆ; ವಾಸ್ತವಿಕವಾಗಿದೆ. ಭಾವಗಳು ಪ್ರಾಚೀನ ಗುಜರಾತಿಯರಿಗೆ ಬಹು ಮೋಹಕವಾಗಿದೆ. ಗ್ರಂಥ ಬಹು ಸುಂದರವಾದ ಪ್ರೇಮ ಕಾವ್ಯ. ಇಲ್ಲಿ ಚಿತ್ರಿತವಾಗಿರುವ ಶೃಂಗಾರ ಸ್ವಚ್ಛವಾಗಿ ಸರ್ವಗ್ರಾಹಿಯಾಗಿದೆ. ಶೃಂಗಾರ, ಹಾಸ್ಯ, ಕರುಣ, ವಿರಹ, ಸ್ಮಿತ, ಹೃದಯಪರಿವರ್ತನ, ಸಂಯೋಗಸುಖ ಎಲ್ಲವೂ ಬಹು ಸ್ವಾರಸ್ಯವಾಗಿ ಇಲ್ಲಿ ನಿರೂಪಿತವಾಗಿವೆ.

ಮಾರವಾಡ ದೇಶದ ಪಂಗಲ್ ಎಂಬಲ್ಲಿ ಪಿಂಗಳನೆಂಬ ರಾಜನಿದ್ದನು. ಈತನಿಗೆ ಜ್ಹಾಲರ್ ದೇಶದ ರಾಜಕುವರಿಯೂ ಸಾಮಂತಸಿಂಹನ ಮಗಳೂ ಆದ ಉಮಾಧೇವಿಯ ಸ್ವಯಂವರಕ್ಕೆ ಬರಬೇಕೆಂಬ ಕರೆ ಬರುವುದು. ಹಾಗೆಯೇ ಪಾಠಣ ಮತ್ತು ಜೂನಾಗಢದ ದೊರೆಗಳಿಗೂ ಆಹ್ವಾನ ದೊರೆಕಿತ್ತು. ಕನ್ಯೆಯ ತಾಯಿಗೆ ಗುಜರಾತನ್ನು ಕಂಡರೆ ಜಿಗುಪ್ಸೆ. ಅದು ರೋಗಿಗಳ, ಹುಚ್ಚರ, ದುರ್ಬಲರ, ಮಾನಹೀನರ ವಾಸಸ್ಥಳವೆಂದು ಅವಳ ಭಾವನೆ. ಆದುದರಿಂದ ಇತರ ರಾಜ ಕುಮಾರರು ಬಂದರೆ ಪಿಂಗಳನಿಗೆ ಕನ್ಯೆ ದೊರೆಯುವ ಸಂಭವವಿರಲಿಲ್ಲ. ಅದಕ್ಕಾಗಿ ಪಿಂಗಳನ ಸ್ನೇಹಿತರು ಉಪಾಯದಿಂದ ಸ್ವಯಂವರದ ದಿನವನ್ನೇ ಇತರರಿಗೆ ತಿಳಿಯ ಪಡಿಸದೆ ಪಿಂಗಳನೊಬ್ಬನೆ ಹಾಜರಿದ್ದು ಉಮೆಯನ್ನು ಮದುವೆಯಾಗುವ ಹಾಗೆ ಏರ್ಪಡಿಸಿದರು. ಉಮೆ ಪಿಂಗಳಿಗೆ ವಿವಾಹವಾಗಿ ಮಾರುವೆಂಬ ಮಗಳಾದಳು. ಮಾರುವಣಿ ಎಂಬುದರ ಸಂಗ್ರಹ ರೂಪವೇ ಅದು. ಅವಳ ಶರೀರವು ಕಸ್ತೂರಿಯ ವಾಸನೆಯುಳ್ಳದಾಗಿತ್ತು. ಅವಳಿಗೆ ಒಂದು ವರ್ಷವಾಗುವುದರಲ್ಲಿ ದೇಶದಾದ್ಯಂತ ಭೀಕರ ಕ್ಷಾಮ ತಲೆದೋರಿತು. ಪಿಂಗಳನೂ ಅವನ ಜನಗಳೂ ಪುಷ್ಕರತೀರ್ಥವೆಂಬ ಸ್ಥಳಕ್ಕೆ ವಲಸೆಹೋದರು. ಅಲ್ಲಿಗೆ ನಲವರಗಡದ ರಾಜನಾದ ನಳನು ತನ್ನ ಮೂರು ವರ್ಷದ ಢೋಲನೆಂಬ ಅಪರ ನಾಮಧೇಯವುಳ್ಳ ಸಾಲ್ಹಕುಮಾರನೆಂಬುವನೊಡನೆ ಯಾತ್ರಾರ್ಥಿಯಾಗಿ ಬರುವನು. ಇಬ್ಬರೂ ಬಹು ಸ್ನೇಹಿತರಾಗಿ ತಮ್ಮ ಸ್ನೇಹದ ಗುರುತಾಗಿ ತಮ್ಮ ಮಕ್ಕಳಿಬ್ಬರನ್ನೂ ವೈವಾಹಿಕ ತಂತುವಿನಿಂದ ಬಂಧಿಸುವರು. ನಳನು ತನ್ನ ಊರಿಗೆ ಹಿಂದಿರುಗುವನು. ಢೋಲನಿಗೆ ತನ್ನ ವಿವಾಹದ

ವಿಷಯವೇ ತಿಳಿಯದು. ವಯಸ್ಕನಾಗುವನು. ಮಾಲ್ವದೇಶದ ರಾಜಪುತ್ರಿಯಾದ ಮಾಲ್ವನೀ ಎಂಬುವಳನ್ನು ಮದುವೆಯಾಗುವನು.

ಢೋಲನಿಗೆ ಕುದುರೆಗಳನ್ನು ಕಂಡರೆ ತುಂಬ ಪ್ರೀತಿ. ಕುದುರೆಯ ವ್ಯಾಪಾರಿಗಳೊಂದಿಗೆ ಅವನು ಪಂಗಲು ದೇಶಕ್ಕೆ ಹೋದಾಗ ಅಲ್ಲಿಯ ಜನರಿಂದ ತಾನು ಆ ದೇಶದ ರಾಜಕುವರಿಯನ್ನು ಮದುವೆಯಾಗಿದ್ದಂತೆಯೂ ಅವಳು ಪತಿಯ ಬರವನ್ನು ನಿರೀಕ್ಷಿಸುತ್ತಿರುವಂತೆಯೂ ತಿಳಿದುಬರುವುದು. ಮಾರುವು ಪತಿಯ ಆಗಮನವನ್ನು ತಿಳಿದು ಪತ್ರದ ಮೂಲಕ ತನ್ನ ದುರವಸ್ಥೆಯನ್ನು ಆತನಿಗೆ ನಿವೇದಿಸಿಕೊಳ್ಳುವಳು. ಬಹುಕಾಲದವರೆಗೆ ಅವಳ ಪ್ರಯತ್ನಗಳೆಲ್ಲ ನಿಷ್ಫಲವಾಗುವುವು. ಒಂದು ದಿನ ಢೋಲನ ತಾಯಿಯೇ ಪ್ರಾಸಂಗಿಕವಾಗಿ ಢೋಲ ಮಾರುವಿನ ವಿವಾಹದ ವಿಷಯವನ್ನು ತಿಳಿಸಲು ಅವಳಲ್ಲಿ ಇವನಿಗೆ ಮರುಕಹುಟ್ಟುವುದು. ಮಾಲ್ವನಿಯು ಈ ಪ್ರೇಮ ಹೆಚ್ಚದಂತೆ ಕಾರ್ಯಭಾರ ಮಾಡುವುದಲ್ಲದೆ ಮಾರುವನ್ನೇ ನಿರ್ಮೂಲ ಮಾಡಲು ದೂತರ ಮೂಲಕ ಪ್ರಯತ್ನ ಪಡುವಳು. ಅದು ಫಲಕಾರಿಯಾಗುವುದಿಲ್ಲ. ಮಾರುವಿನ ಪತ್ರಗಳಿಗೆ ಮಾರುಹೋದ ಢೋಲನು ಮಾಲ್ವನಿಯ ನಿರೋಧಗಳನ್ನೆಲ್ಲಾ ದೂರ ಮಾಡಿ ಮಾರುವನ್ನು ಸೇರಿ ಅಲ್ಲಿ ಕೆಲವು ಕಾಲ ಸುಖವಾಗಿದ್ದು ಅವಳೊಡನೆ ತನ್ನ ರಾಜ್ಯಕ್ಕೆ ಹಿಂದಿರುಗುವನು. ಹೊರಡುವ ಮೊದಲೆ ಮಾರುವಿನ ಜನರು ಮಾರುವಿನಲ್ಲಿ ಮೋಹಗೊಂಡಿದ್ದ ಉಮ್ಮರ್ ಸುಮಾರ್ ಎಂಬುವನ ಪ್ರತಿಕ್ರಿಯೆಗಳ ವಿಷಯದಲ್ಲಿ ಎಚ್ಚರದಿಂದಿರಬೇಕೆಂದು ಅವರಿಗೆ ಸೂಚಿಸಿರುವರು. ದಾರಿಯಲ್ಲಿ ಮಾರುವು ಹಾವು ಕಚ್ಚಿ ಸಾಯಲು ವಿರಹದುಃಖದಿಂದ ಢೋಲನೂ ಸಾಯಲು ನಿಶ್ಚಯಿಸುವ ಸಮಯಕ್ಕೆ ಜಗದ್ರಕ್ಷಕರಾದ ಪಾರ್ವತೀ ಪರಮೇಶ್ವರರು ಅವರ ಸ್ವಚ್ಛ ಪ್ರೇಮಕ್ಕೆ ಮಾರುಹೋಗಿ ಮಾರುವನ್ನು ರಕ್ಷಿಸುವರು. ಮುಂದೆ ಅವರು ಪ್ರಯಾಣಮಾಡಿ ಉಮ್ಮರ್ ಸುಮಾರನ ಅಪಘಾತಗಳಿಂದ ಪಾರಾಗಿ ತಮ್ಮ ದೇಶವನ್ನು ಸೇರುವರು. ಢೋಲನು ಇಬ್ಬರು ಪತ್ನಿಯರೊಡನೆ ಸುಖದಿಂದಿರುವನು.

ವಿನಯಚಂದ್ರನು ಮಲ್ಲಿನಾಥ ಮಹಾಕಾವ್ಯದ ಆಧಾರದ ಮೇಲೆ ರಚಿಸಿರುವ ವಿದ್ಯಾವಿಲಾಸನ ಕತೆಯು ಮತ್ತೊಂದು ಜನಪ್ರಿಯವಾದ ಕತೆ. ಈ ವಿಷಯವಾಗಿ ಗುಜರಾತಿಯಲ್ಲಿ ಮೊತ್ತಮೊದಲು ರಚಿತವಾದ ಗ್ರಂಥವೆಂದರೆ ಹೀರಾನಂದನಿಂದ ೧೪೨೯ರಲ್ಲಿ ರಚಿತವಾದ 'ವಿದ್ಯಾವಿಲಾಸನೋ ಪವಾಡೊ' ಎಂಬುದು. ಇದರ ಬಹು ಆಕರ್ಷಕವಾದ ರೂಪವನ್ನು ಶ್ಯಾಮಲನ 'ವಿನೇಚರ್‌ನೀ ವಾರ್ತಾ' ಎಂಬ ಗ್ರಂಥದಲ್ಲಿ ಕಾಣಬಹುದು.

ಕ್ರಿ. ಶ. ೧೫ನೆಯ ಶತಮಾನದ ವೇಳೆಗೆ ಜೈನ ಸಾಧುಗಳ ಕಾರ್ಯಕಲಾಪಗಳು ಬಹು ತ್ವರಿತಗತಿಯನ್ನು ಸಾಧಿಸಿದ್ದವು. ಇವರಿಗೆ ಬ್ರಾಹ್ಮಣರಂತೆ ಕೌಟುಂಬಿಕ ಬಂಧನಗಳಿಲ್ಲದುದರಿಂದ ಇವರು ಅವರಿಗಿಂತ ಹೆಚ್ಚು ಸ್ವತಂತ್ರರಾಗಿದ್ದರು. ಅವರು ಯಾವಾಗಲೂ ಸಂಚಾರದಲ್ಲಿಯೇ, ಇದ್ದುದರಿಂದ ಗುಜರಾತಿನ ರಾಜಕೀಯ

ಸಾಮಾಜಿಕ ಏರುಪೇರುಗಳು ಅವರ ಮೇಲೆ ವಿಶೇಷ ಪ್ರಭಾವವನ್ನು ಬೀರಲಿಲ್ಲ. ಅವರ 'ಉಪಾಶ್ರಯ'ಗಳು ಬಹು ಐಶ್ವರ್ಯದಿಂದ ಕೂಡಿದ್ದುದರಿಂದ ಅವರ ಸಾಹಿತ್ಯ ಸಂಪ್ರದಾಯವೂ ಪುಸ್ತಕ ಭಂಡಾರಗಳೂ ಅವರ ಸಂಸ್ಕೃತಿಯನ್ನು ಬೆಳೆಸಲು ಸಹಾಯವಾದುವು. ಪಂಜಾಬಿನಿಂದ ದಕ್ಷಿಣದವರೆಗೆ ಅವರು ಸಂಚಾರ ಮಾಡುತ್ತಿದ್ದುದರಿಂದ ಅವರ ದೃಷ್ಟಿ ವಿಶಾಲವೂ ವೈವಿಧ್ಯಪೂರ್ಣವೂ ಆಗಿತ್ತು. ಅವರ ಏಕಾಂತ ಜೀವನವು ಅವರಿಗೆ ಸಂಸ್ಕೃತ ಅಪಭ್ರಂಶಗಳ ಅಭ್ಯಾಸಕ್ಕೆ ಪೂರ್ಣಾವಕಾಶವನ್ನು ಕಲ್ಪಿಸಿಕೊಟ್ಟವು.

ಈ ಸಾಧುಗಳೂ ತಮ್ಮ ಹಿಂದಿನವರಂತೆಯೇ ಆದಿಕಾಲದಲ್ಲಿ ತೀರ್ಥಂಕರರ, ಚಕ್ರವರ್ತಿಗಳ ಶ್ರಮಣರ ಚರಿತ್ರೆಗಳನ್ನೇ ರಚಿಸಿದರು. ಭರತ, ಋಷಭ, ನೇಮಿ ಸ್ಥೂಲಭದ್ರರು ಇವರ ಪ್ರಧಾನ ನಾಯಕರು. ಶೈಲಿ ಒರಟು; ರೀತಿಯಲ್ಲಿ ವೈವಿಧ್ಯ ವಿಲ್ಲ. ವೇದಾಂತವಾದಗಳು, ಉಪದೇಶಗಳು, ಸಜ್ಝಾಯಗಳು ಅಥವಾ ಸ್ಥಳ ಪುರಾಣಗಳು ಅವುಗಳ ವಸ್ತುಗಳು. ಅವರ ಸಾಹಿತ್ಯದ ರಚನೆಗೆ ಮತಪ್ರಚಾರವೇ ಪ್ರೇರಕ ಸಾಮಗ್ರಿ. ನೈತಿಕ ಮತ್ತು ಧಾರ್ಮಿಕ ಪರಿಪೂರ್ಣತೆಯ ಭಾರದಿಂದ ಕುಗ್ಗಿಹೋಗಿದ್ದುದರಿಂದ ಕತೆಯಲ್ಲಿರುವ ಕುತೂಹಲ ಕಡಿಮೆಯಾಗಿ ಅವರ ಶೈಲಿ ವಿದ್ವಾಂಸನಿಗೂ, ವಾಚಕನಿಗೂ ಜುಗುಪ್ಸೆಯನ್ನುಂಟುಮಾಡುತ್ತಿತ್ತು. ೧೬ನೆಯ ಶತಮಾನದ ವೇಳೆಗೆ ಈ ಸಾಧುಗಳೂ ತಮ್ಮ ದೋಷಗಳನ್ನು ತಿಳಿದುಕೊಂಡು ಹೊಸ ಸನ್ನಿವೇಶಕ್ಕೆ ಹೊಂದಿಕೊಳ್ಳಲು ಮೊದಲುಮಾಡಿದರು. ಈ ಶತಮಾನದ ಅಂತಹ ಹಿರಿಯ ಹೆಸರೆಂದರೆ ಲಾವಣ್ಯಸ್ವಾಮಿ. ಇವನ ಮೊದಲ ಹೆಸರು ಲಘುರಾಜ್. ಅಹಮದಾಬಾದಿನ ಶ್ರೀಮಾಲಿವಣಿಜ ಮನೆತನದಲ್ಲಿ ಹುಟ್ಟಿದವನು. ಎಂಟು ವರ್ಷದಲ್ಲಿಯೇ ಸಂನ್ಯಾಸಿಯಾದನು. ಇಪ್ಪತ್ತೊಂಬತ್ತಕ್ಕಿಂತ ಹೆಚ್ಚಿನ ಗ್ರಂಥಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ನಾಲ್ಕು ತೀರ್ಥಂಕರ ರಾಸಗಳು. ಒಂದು 'ರಾವಣ ಮಂಡೋದರೀ ಸಂವಾದ' 'ದೇವರಾಜ ವತ್ಸರಾಜ ಚೂಪಾಯ್' ಮತ್ತೊಂದು. ೧೫೭೨ರಲ್ಲಿ ರಚಿತವಾದ 'ವಿಮಲ ಪ್ರಬಂಧ' ಒಂದು ಉತ್ತಮ ಕಥನಕಾವ್ಯ.

ಲಾವಣ್ಯಸ್ವಾಮಿಯಾದ ಮೇಲೆ ಪ್ರಸಿದ್ಧ ಗ್ರಂಥಕರ್ತನಾದವನು ನಯಸುಂದರ ನೆಂಬ ಸಾಧು. ೧೫೬೦ರಿಂದ ೧೬೨೦ರ ನಡುವೆ ಇದ್ದವನು. ಬಹಳ ಕಾಲ ಗುಜರಾತಿ ನಲ್ಲಿದ್ದು ಪ್ರಖ್ಯಾತಳಾದ ಹೇಮಶ್ರೀಯೆಂಬ ಶಿಷ್ಯೆಯನ್ನು ಹೊಂದಿದ್ದನು. ಸಂಸ್ಕೃತ, ಪ್ರಾಕೃತ, ಹಿಂದಿ ಭಾಷೆಗಳಲ್ಲಿ ಪಂಡಿತನಾಗಿದ್ದನು. 'ರೂಪಚಂದ್ರಕುನ್ವರ ರಾಸ', 'ಪ್ರಭಾವತಿ ರಾಸ', 'ನಲದಮಯಂತಿ ರಾಸ' ಎಂಬ ಮೂರು ಗ್ರಂಥಗಳನ್ನು ರಚಿಸಿದ್ದಾನೆ. 'ರೂಪಚಂದ್ರರಾಸ' ಉತ್ತಮ ಸಾಮಾಜಿಕ ರಾಸ. ಇದರಲ್ಲಿ ಪವಾಡ ಗಳು ಬಹುಮಟ್ಟಿಗೆ ಕಡಿಮೆಯಾಗಿವೆ. ಶಬ್ದಯೋಜನೆ ಅಷ್ಟು ಶುದ್ಧವಲ್ಲದಿದ್ದರೂ ಶೈಲಿ ಆಲಂಕಾರಿಕವಾಗಿದೆ. ಸಂಸ್ಕೃತಶಬ್ದಮಯವಾಗಿದೆ. ನಾದಮಯವಾಗಿಯೂ

ಮನರಂಜಕವಾಗಿಯೂ ಲಾಲಿತ್ಯಪೂರ್ಣವಾಗಿಯೂ ಇದೆ. ಸಾಂಪ್ರದಾಯಿಕ ವರ್ಣನೆಗಳು ಕಡಿಮೆ. ಆಧುನಿಕ ದೃಷ್ಟಿಯೂ ಹಾಸ್ಯಸನ್ನಿವೇಶವೂ ಅದರ ಪ್ರಧಾನವಾದ ಗುಣಗಳು.

ನಯಸುಂದರನು ಹಳೆಯ ಗುಜರಾತಿ ಕವಿಗಳು ಉಪಯೋಗಿಸುತ್ತಿದ್ದ ಭಾಲನ್ ಶೈಲಿಗೆ ಒಂದು ಹೊಸ ರೂಪವನ್ನು ಕೊಟ್ಟನು. ಸಂಸ್ಕೃತ ಅನುವಾದಗಳಿಗೆ ಭಾವೋದ್ರೇಕಮಯವಾದ ಸನ್ನಿವೇಶಗಳನ್ನು ಸೇರಿಸಿ ಸಂಸ್ಕೃತ ಸಂಬಂಧವೇ ತಪ್ಪಿಹೋಗಿದ್ದ ಮಧ್ಯಮ ತರಗತಿಯ ಜನಕ್ಕೆ ಹೊಂದಿಕೊಳ್ಳುವ ಸಜೀವಸಾಹಿತ್ಯ ರಚನೆಯಲ್ಲಿ ತೊಡಗಿದನು. ಜನಪದಸಾಹಿತ್ಯರೂಪದಲ್ಲಿದ್ದ ರಾಸಗಳನ್ನು ಉಚ್ಚ ಮಟ್ಟಕ್ಕೇರಿಸಿ ಸಂಸ್ಕೃತ ಗ್ರಂಥಗಳ ಸಮಕ್ಕೆ ತಂದನು. ಪೌರಾಣಿಕ ಆಖ್ಯಾನಗಳು ಜನಪ್ರಿಯ ಸಾಹಿತ್ಯವಾದುವು.

೧೬೫೨ರಲ್ಲಿ ಗಂಗಾವಿಜಯನಿಂದ ರಚಿತವಾದ 'ಕುಸುಮಶ್ರೀರಾಸ'ವು ಇನ್ನೊಂದು ಸೊಗಸಾದ ಸಾಮಾಜಿಕ ರಾಸ. ಇದು ಆಧುನಿಕ ಗುಜರಾತಿ ಕೃತಿಗಳಂತೆಯೇ ಜನಪ್ರಿಯವಾದ ಶೈಲಿಯಲ್ಲಿ ರಚಿತವಾಗಿ ಸಂಸ್ಕೃತ ಶಬ್ದ ಮತ್ತು ಭಾವನೆಗಳ ಹೊರೆಯಿಂದ ದೂರವಾಗಿದೆ. ದುಹಾ ಛಂದಸ್ಸಿನಲ್ಲಿಯೇ ರಚಿತವಾಗಿ ದೇಶೀಯ ಸಂಭಾಷಣೆಗಳಿಂದ ಕೂಡಿದ ಈ ಕತೆಯ ಸರಣಿ ಬಹು ಶ್ಲಾಘ್ಯವಾಗಿದೆ. ಇಲ್ಲಿ ಪ್ರಾಸಂಗಿಕವಾಗಿ ಬರುವ ಲಘುಹಾಸ್ಯ ಪ್ರಾಚೀನ ಗುಜರಾತಿ ಸಾಹಿತ್ಯಕ್ಕೆ ಅಪರಿಚಿತವಾದುದು. ಮಧ್ಯೆ ಬರುವ ಉಪಕತೆಗಳು ಸ್ವಾರಸ್ಯವಾಗಿವೆ.

ಹೀಗೆಯೇ ವಿಶೇಷಗ್ರಂಥ ನಿರ್ಮಾಣಶಕ್ತಿಯಿಂದ ಪ್ರಸಿದ್ಧನಾಗಿದ್ದ ಬೇರೊಬ್ಬ ಸಾಧುವೆಂದರೆ ಶ್ಯಾಮಸುಂಥರ. ಈತನು ೨೦ ಬೃಹದ್ಗ್ರಂಥಗಳನ್ನೂ ಕೆಲವು ಲಘು ಕೃತಿಗಳನ್ನೂ ರಚಿಸಿದ್ದಾನೆ. ಇವುಗಳಲ್ಲಿ ಅನೇಕವು ಸಾಂಪ್ರದಾಯಿಕ ಶೈಲಿಯಲ್ಲಿ ರಚಿತವಾಗಿರುವ ತೀರ್ಥಂಕರ ವಿಷಯಕವಾದ ರಾಸಗಳು. 'ನಲದಮಯಂತಿ ರಾಸ'ವನ್ನೂ 'ಸೀತಾರಾಮಚೂಪಾಯಿ'ಯನ್ನೂ ಸಹ ಈತ ರಚಿಸಿದ್ದಾನೆ. ಇವನು ಅನೇಕ ಹೊಸ ಢಾಲ್ ಮತ್ತು ದೇಶೀಯ ಛಂದಸ್ಸನ್ನು ಬಳಕೆಗೆ ತಂದನು. ಆತನ ಆಲಂಕಾರಿಕ ಶೈಲಿಯೂ ಹಾಸ್ಯಭರಿತ ವಿವರಣೆಗಳೂ ಪ್ರೇಮಾನಂದನ ಮಟ್ಟಕ್ಕೇರಬಲ್ಲವು.

ಮೂವತ್ತೆರಡು ಗ್ರಂಥಗಳನ್ನು ನೆಯ್ದ ಜೈನ ಋಷಭದಾಸನನ್ನು ಮರೆಯುವಂತಿಲ್ಲ. ಆತನ ಕೃತಿನಿರ್ಮಾಣ ೧೬೧೨ರಿಂದ ೧೬೩೨ರವರೆಗೆ ನಡೆಯಿತು. ಇವನ ಶೈಲಿಯಲ್ಲಾಗಲಿ ಕವಿತ್ವಧೋರಣೆಯಲ್ಲಾಗಲಿ ಯಾವ ಹೊಸತನವೂ ಇಲ್ಲ. ವಿಶೇಷವಾಗಿ ಅಕ್ಷರಗ್ರಥನಕೌಶಲ್ಯ ಮಾತ್ರ ಆತನ ಪ್ರಧಾನ ಗುಣ.

ಹದಿನೇಳನೆಯ ಶತಮಾನದ ವೇಳೆಗೆ ಮೊಗಲರ ಆಶ್ರಯದಲ್ಲಿ ಗುಜರಾತ್ ಒಂದು ಶಾಂತಿಯುತವಾದ ಸಂಸ್ಥಾನವಾಗಿ ನೆಲಗೊಂಡಿತ್ತು. ಅದರ ಫಲವಾಗಿ ಹೊಸ ಸಾಹಿತ್ಯ ಸಂಪ್ರದಾಯವೊಂದು ಜನನವಾಯಿತು. ರಾಸ ಮತ್ತು ಆಖ್ಯಾನ

ಗಳಿಗೆ ಉಪಯೋಗವಾಗುತ್ತಿದ್ದ ಉಕ್ತಿ, ರೀತಿ, ತಂತ್ರ ಮತ್ತು ವಿಚಾರಶೀಲತೆಯು ವಾಸ್ತವ ಜೀವನದ ಪ್ರತಿಪಾದನೆಗೆ ಸಾಧಕವಾಯಿತು. ಗುಜರಾತಿ ಸಾಹಿತ್ಯವು ಸುಪ್ರಸಿದ್ಧರಾದ ಆಖೊ, ಪ್ರೇಮಾನಂದ್ ದಯಾರಾಮ್ ಮೊದಲಾದವರ ಕೃತಿ ರಚನೆಗಳಿಂದ ಪ್ರತ್ಯೇಕ ಆಕಾರವನ್ನು ತಾಳಿ ಬಹು ಆಕರ್ಷಕವಾಯಿತು. ಆ ಕಾಲದ ನಾಯಕ ಮತ್ತು ಪ್ರತಿನಿಧಿ ಆಖೋ ಅಥವಾ ಆಖಾಭಗತ್ ಎಂಬ ವೇದಾಂತಿ. ಈತನು ಅಹಮ್ಮದಾಬಾದಿನ ಸ್ವರ್ಣಕಾರ ಮನೆತನದವನು. ಕೆಲವು ಕಾಲ ಆತನು ರಾಜ್ಯದ ಟಂಕಸಾಲೆಯ ಅಧಿಕಾರಿಯಾಗಿ ಕೆಲಸಮಾಡಿದನು. ತಾನು ವಿಶೇಷವಾಗಿ ಪ್ರೀತಿಸುತ್ತಿದ್ದ ಪತ್ನಿಯನ್ನೂ ಸೋದರಿಯನ್ನೂ ಬಾಲ್ಯದಲ್ಲಿಯೇ ಕಳೆದುಕೊಂಡನು. ತನ್ನ ಜಾತಿ ಸಹಜವಾದ ಸ್ವರ್ಣಸ್ತೇಯವನ್ನು ಮರೆತು ತಾನು ಪ್ರೀತಿಸುತ್ತಿದ್ದ ಸೋದರಿಯೊಬ್ಬಳಿಗೆ ತನ್ನ ಚಿನ್ನವನ್ನು ಸೇರಿಸಿ ಆಭರಣವನ್ನು ಮಾಡಿಕೊಟ್ಟನು. ಆ ಹೆಂಗಸು ಅದನ್ನು ನಂಬದೆ ಪರೀಕ್ಷೆಮಾಡಿಸಿ ತೃಪ್ತಳಾದಾಗ ಆಖೊವಿಗೆ ತನ್ನ ಕೃತಜ್ಞತೆಯನ್ನು ತಿಳಿಸಲು ಹೋದಳು. ಅವಳ ಅಪನಂಬಿಕೆಗೆ ಆತನು ಅಸಹ್ಯಪಟ್ಟು ಮೋಸ ಮತ್ತು ಅನ್ಯಾಯಗಳಿಂದ ಕೂಡಿದ ಈ ಪ್ರಪಂಚದಿಂದಲೇ ವಿಮುಖನಾದನು. ಈ ಮಧ್ಯೆ ಈತನು ದ್ರವ್ಯವನ್ನು ದುರ್ವ್ಯಯಮಾಡಿದನೆಂಬ ಅಪಾದನೆಯ ಮೇಲೆ ತುರಂಗವಾಸಕ್ಕೆ ಈಡಾಗಿ ತಪ್ಪು ಸ್ಥಿರಪಡದುದರಿಂದ ಬಿಡುಗಡೆಯಾಗಿದ್ದನು. ಅವನಿಗೆ ಇದರಿಂದೆಲ್ಲ ಜೀವನದಲ್ಲಿ ಜಿಗುಪ್ಸೆಯುಂಟಾಗಿ ತನ್ನ ಆಯುಧಗಳನ್ನೆಲ್ಲಾ ಬಾವಿಗೆಸೆದು.ಮನಶ್ಶಾಂತಿ ಪಡೆಯಲು ಯಾತ್ರೆಹೊರಟನು. ಅದರಿಂದಲಾಗಲೀ ವ್ರತ ಜಪ ಸ್ತೋತ್ರಗಳಿಂದಾಗಲೀ ಏನೂ ಪ್ರಯೋಜನವಾಗಲಿಲ್ಲ. ಗೋಕುಲದ ಗೋಸ್ವಾಮಿಯವರಿಂದಲೂ ಯಾವ ಸಹಾಯವುಂಟಾಗಲಿಲ್ಲ. ಕಾಶಿಗೆ ಓಡಿ ಹೋಗಿ ಒಂದು ಗೋಡೆಯ ಹಿಂದೆ ಅವಿತುಕೊಂಡು ಒಬ್ಬ ಸಂನ್ಯಾಸಿಯ ಉಪದೇಶಾಮೃತವನ್ನು ಕೇಳುತ್ತಿದ್ದಾಗ ಶಂಕರವೇದಾಂತದಿಂದ ಆತನಿಗೆ ಮನಶ್ಶಾಂತಿಯುಂಟಾಯಿತು. ಮುಂದೆ ಆಖನು ತನ್ನ ಜನ್ಮಸ್ಥಳಕ್ಕೆ ಹೋಗಿ ಶಂಕರತತ್ವವನ್ನು ಅಭ್ಯಾಸ ಮಾಡಿ ಅದರ ಅನುಸಂಧಾನದಲ್ಲಿಯೂ ಪ್ರಪಂಚದ ಅಧರ್ಮ ಅನ್ಯಾಯಗಳನ್ನು ಪ್ರಚಾರಮಾಡುವುದರಲ್ಲಿಯೂ ತೊಡಗಿದನು. ಆತನಿಗೆ ಹರಿಯು ಪ್ರತ್ಯಕ್ಷವಾಗಿ ಗ್ರಂಥರಚನೆ ಮಾಡುವಂತೆ ಉಪದೇಶಿಸಲು ತನ್ನ ಮುಂದಿನ ಜೀವನವನ್ನೆಲ್ಲಾ ಅದರಲ್ಲಿಯೇ ಕಳೆದನು.

ಆತನ ಅದ್ವೈತ ವಿಷಯಕ ಗ್ರಂಥಗಳಲ್ಲಿ 'ಆಖೇಗೀತ', 'ಚಿತ್ತವಿಚಾರ ಸಂವಾದ', 'ಪಂಚೀಕರಣ', 'ಗುರುಶಿಷ್ಯ ಸಂವಾದ', 'ಅನುಭವ ಬಿಂದು', 'ಕೈವಲ್ಯಗೀತ', 'ಪರಮಪದಪ್ರಾಪ್ತಿ' ಮೊದಲಾದುವು ಗುಜರಾತಿ ಭಾಷೆಯವು. 'ಪಂಚದಶೀತಾತ್ಪರ್ಯ' ಮತ್ತು 'ಬ್ರಹ್ಮಲೀಲಾ' ಇವು ಹಿಂದೀ ಗ್ರಂಥಗಳು. ಆತನು ೭೦೦ ಛಪಾಗಳನ್ನೂ ಸುಮಾರು ೬೦ ಪದಗಳನ್ನೂ ರಚಿಸಿದ್ದಾನೆ. ಆತನ ಹೆಸರು ಪ್ರಖ್ಯಾತವಾಗಿರುವುದು ಇವುಗಳಿಂದಲೇ. ಆತನು ಆಗಿನ ಕಾಲದ 'ಜ್ಞಾನೀ ಕವಿ'

ಗಳಂತೆ ಆ ಕಾಲದ ದುಃಸ್ಥಿತಿಯನ್ನೂ ಅಲ್ಪತೆಯನ್ನೂ ತನ್ನ ಗ್ರಂಥಗಳಲ್ಲಿ ಪ್ರಚುರ ಪಡಿಸಿದ್ದಾನೆ. ತನ್ನ ಲಘು ಪದಗಳಲ್ಲಿ ಅವನು ಜೀವನದ ಅಸಾರತೆಯನ್ನು ಬಹು ಕಠಿಣವಾಗಿ ಟೀಕೆಮಾಡಿ ನಿಸ್ಪೃಹ ಜೀವನವನ್ನು ನಡಸುವುದರ ಆವಶ್ಯಕತೆಯನ್ನು ಪ್ರತಿಪಾದಿಸಿದ್ದಾನೆ. ಆತನಿಗೆ ಬೇಕಾದುದು ಇಹಲೋಕದ ಪೂರ್ಣ ಜೀವನವಲ್ಲ, ಪರಲೋಕಕ್ಕೆ ಸಹಾಯವಾಗುವ ನಿಸ್ಪೃಹ, ನಿಸ್ಸ್ವಾರ್ಥ ತ್ಯಾಗಜೀವನ. ಆಖನು ತನ್ನನ್ನು ಜ್ಞಾನಿಯೆಂದು ಭಾವಿಸಿದನೇ ವಿನಾ ಕವಿಯೆಂದು ಭಾವಿಸಲಿಲ್ಲ. ತನ್ನನ್ನು ಕವಿಯೆಂದು ಯಾರಾದರೂ ಸಂಬೋಧಿಸಿದರೆ ಅದು ಅಪಚಾರವೆಂದು ಎಣಿಸು ತ್ತಿದ್ದನು. ಆತನಿಗೆ ಕಾವ್ಯರಚನೆಗೆ ಬೇಕಾದ ಸಿದ್ಧತೆಗಳಿರಲಿಲ್ಲ. ಅನೇಕ ಸಲ ಅವನ ಪದಪ್ರಯೋಗ ಅಶುದ್ಧ, ಅಸ್ಪಷ್ಟ ಮತ್ತು ಅಸಂಗತ. ಛಂದಸ್ಸು, ವ್ಯಾಕರಣ, ನಿಘಂಟುಗಳ ಪರಿಚಯ ಆತನಿಗೆ ಅತ್ಯಲ್ಪ. ಸಂಸ್ಕೃತ ವಿಷಯದಲ್ಲಿ ಆತನಿಗೆ ಬಹು ಔದಾಸೀನ್ಯ. ಕವಿಗಳ ವಿಷಯದಲ್ಲಿಯೂ ಅಷ್ಟೇ ತಾತ್ಸಾರ. ಬ್ರಹ್ಮಜ್ಞಾನವಿಲ್ಲದೆ ಅಕ್ಷರಗ್ರಥನಮಾಡಿ ರಾಗದ್ವೇಷಗಳ ಸಂತೆಯಲ್ಲಿ ತೊಳಲುವ ಅವರು ಅರ್ಥ ಸಂಪಾದನೆಗಾಗಿ ವ್ಯಾಪಾರಮಾಡುವ ವರ್ತಕರೆಂಬುದು ಅವನ ಮತ. ಮತ ಧರ್ಮಗಳನ್ನು ಉಪದೇಶಮಾಡುವವರಲ್ಲಿಯೂ ಆತನಿಗೆ ನಂಬಿಕೆಯಿಲ್ಲ. ಹಾಗೆಯೇ ಸಂಪ್ರದಾಯರಾಗಿಗಳಲ್ಲಿಯೂ ಆತನಿಗೆ ಅನಾದರ. ಸಮಾಜದಲ್ಲಿ ಅಸ್ಪೃಶ್ಯತೆ ಯನ್ನುಂಟುಮಾಡಿ ದ್ವಿಜವರ್ಣಗಳಿಗೆ ಪ್ರಾಮುಖ್ಯತೆಯನ್ನುಂಟುಮಾಡುವ ವರ್ಣಾಶ್ರಮ ಪದ್ಧತಿಯಲ್ಲಿಯೂ ಜುಗುಪ್ಸೆ. ಪೌರಾಣಿಕರಲ್ಲಿಯೂ ಆತನಿಗೆ ಗೌರವ ವಿಲ್ಲ. ತನ್ನ ನಿಜವಾದ ತತ್ವವನ್ನು ಮುಂದಿನ ಮಾತಿನಲ್ಲಿ ವಿಶದಪಡಿಸಿದ್ದಾನೆ. 'ಮಧುವೂ ಐಹಿಕ ಭೋಗವೂ ಭೋಕ್ತೃವಿಗೆ ಸಮಾನ. ಅದನ್ನು ಬಿಟ್ಟರೆ ಅವನು ಸಾಯುತ್ತಾನೆ. ಸೇವಿಸಿದರೆ ಸತ್ತಂತೆಯೇ!' ಆತನ ಬೃಹದ್ಗ್ರಂಥಗಳೆಲ್ಲ ತಾತ್ವಿಕ ವಿಷಯಕವಾದುವು. ತಾನು ಕವಿಯಲ್ಲವೆಂದು ಹೇಳಿಕೊಂಡಿದ್ದರೂ ಅವನ ಪ್ರತಿಭಾಕುಂಚದ ವರ್ಣರೇಖೆಗಳು ಅಲ್ಲಿ ಕಾಣದಿಲ್ಲ. ಆತನ ವೇದಾಂತಾಭ್ಯಾಸ ಬಹು ಆಳವಾದುದು. ಪರಮಾರ್ಥದೃಷ್ಟಿ ಬಲು ಹಿರಿದು. ಅವುಗಳನ್ನು ಸೂಕ್ತ ಪದಗಳಲ್ಲಿ ಪ್ರಕಟಪಡಿಸಿರುವುದು ಆತನ ಮೇಲ್ಮೆ.

ಈ ಯುಗದ ಮತ್ತೊಬ್ಬ ಅದ್ವಿತೀಯ ಸಾಹಿತ್ಯವ್ಯಕ್ತಿ ಬರೋಡಾ ದೇಶದ ಕೃಷ್ಣಸುತನಾದ ಪ್ರೇಮಾನಂದ. ಆತನ ಜೀವನದ ವಿಷಯವಾಗಿ ಆಧಾರಭೂತ ವಾಗಿ ಹೆಚ್ಚು ವಿಷಯಗಳು ತಿಳಿದಿಲ್ಲ. ತಿಳಿದಿರುವವಲ್ಲಿ ಅನೇಕ ನಿರಾಧಾರವಾದುವು. ಅವುಗಳ ಪ್ರಕಾರ ಈ ಕವಿಯು ಬಾಲ್ಯದಲ್ಲಿಯೇ ಅನಾಥನಾಗಿ ಮಂಕನಾಗಿ ಪರಿಗಣಿ ಸಲ್ಪಟ್ಟು ರಾಮಚರಣನೆಂಬ ಸಂನ್ಯಾಸಿಯೊಡನೆ ಭಾರತದಲ್ಲೆಲ್ಲಾ ಸಂಚರಿಸಿ ಸಂಸ್ಕೃತ ಮತ್ತು ಹಿಂದೀ ಸಾಹಿತ್ಯ ಸಂಸ್ಕೃತಿಗಳನ್ನು ಅಭ್ಯಾಸಮಾಡಿದನು. ಆತನು ಮೊದಲು ಗ್ರಂಥ ರಚನೆಮಾಡಿದುದು ಹಿಂದೀ ಭಾಷೆಯಲ್ಲಿಯೇ. ಅವನ ಗುರುವು ಅವನ ಆ ಪ್ರಯತ್ನದಲ್ಲಿ ಅಸಹ್ಯಪಟ್ಟು ಮನೆಯ ಹೊಸ್ತಿಲನ್ನು ಬಿಟ್ಟು

ದೂರದ ಪರ್ವತಕ್ಕೆ ಏಕೆ ಹೋಗುತ್ತೀಯೆ ಎಂದು ಆಕ್ಷೇಪಿಸಲು ತನ್ನ ಸ್ವಂತ ಗುಜರಾತಿ ಭಾಷೆಯಲ್ಲಿ ಬರೆಯಲು ಮೊದಲುಮಾಡಿದನು.

ಆತನು ತನ್ನ ಜೀವನವನ್ನು ಸೂರತ್ತಿನಲ್ಲಿ ಗಾಗೇರಿಯಾ ಭಟ್ಟ(ಪೌರಾಣಿಕ) ನಾಗಿ ಪ್ರಾರಂಭಿಸಿದನು. ಬಹುಬೇಗನೆ ಜನಪ್ರಿಯನಾಗಿ ಬರೋಡಾ, ನಂದರದಾ ಬಾದ್, ಖಾನ್ ದೇಶಗಳಿಂದ ಆಹ್ವಾನಿತನಾದನು. ಸ್ವಶಕ್ತಿಯ ವಿಷಯದಲ್ಲಿ ಆದಿಯಲ್ಲಿ ಆತನಿಗೆ ಕಿಂಚಿತ್ ಸಂದೇಹಗಳಿದ್ದರೂ ಅಲ್ಪಕಾಲದಲ್ಲಿಯೇ ಅವು ಮಾಯವಾಗಿ ಬಹು ಪ್ರಸಿದ್ಧನಾದನು. ಆತನು ವಿಶೇಷ ಐಶ್ವರ್ಯವನ್ನುಗಳಿಸಿ ಬ್ರಾಹ್ಮಣ ಸಂತರ್ಪಣೆಯಲ್ಲಿ ವಿನಿಯೋಗಿಸಿದನು. ಆತನ ಜೀವನವು ಹೆಚ್ಚು ಆಕರ್ಷಕವಲ್ಲದಿದ್ದರೂ ಪ್ರಗತಿಪರವಾದ ಸಾಹಿತ್ಯಪೂರ್ಣವಾಗಿತ್ತು. ಆತನು ತನ್ನ ೯೮ನೆಯ ವಯಸ್ಸಿನವರೆಗೆ ಜೀವಿಸಿದ್ದನೆಂದು ಪ್ರತೀತಿ. ೬೦ರ ವರೆಗೆ ಇದ್ದಿರಬಹುದು. ಸಾಹಿತ್ಯಕ್ಷೇತ್ರದಲ್ಲಿಯೇ ನಿರತರಾದ ಸುಮಾರು ೫೨ ಶಿಷ್ಯರು ಇವನ ಕಾರ್ಯವನ್ನು ಮುಂದುವರಿಸಿದರು. ಅವರಲ್ಲಿ ೧೨ ಜನ ಸ್ತ್ರೀಯರು. ಅವನು ತನ್ನ ಅಂತ್ಯಕಾಲದಲ್ಲಿ ಮೃತ್ಯುಶಯ್ಯೆಯಲ್ಲಿದ್ದಾಗ ತನ್ನ ಶಿಷ್ಯರನ್ನೆಲ್ಲಾ ಕರೆದು ತನ್ನ ಮಗನಾದ ವಲ್ಲಭನು ಹಿಂದೀ ಕವಿಗಳ ಮಾರ್ಗದಲ್ಲಿಯೂ ರತ್ನೇಶ್ವರನು ಮರಾಠಿ ಮಾರ್ಗದಲ್ಲಿಯೂ ವಿರಜಿಯು ಪಾರ್ಸಿ ಪಂಥದಲ್ಲಿಯೂ ಸುಂದರನು ಪೌರಾಣಿಕ ಸಂಪ್ರದಾಯ ದಲ್ಲಿಯೂ ಗ್ರಂಥರಚನೆಮಾಡಬೇಕೆಂದೂ ತಿಳಿಸಿ ಮೃತಿಹೊಂದಿದನಂತೆ.

ಪ್ರೇಮಾನಂದನ ಗ್ರಂಥಗಳು ಬಹು ಜನಪ್ರಿಯವಾಗಿ ಪುರಾಣ ಸಂಪ್ರದಾಯ ಗಳನ್ನು ಸಜೀವವನ್ನಾಗಿ ಉಳಿಸಿದವು. ಕಳೆದ ೫೦ ವರ್ಷಗಳವರೆಗೆ ಗುಜರಾತಿನ ಶ್ರೀಮಂತ ಸ್ತ್ರೀ ವೃಂದದಲ್ಲಿ ಆತನ ಗ್ರಂಥಗಳಲ್ಲಿ ಯಾವುದಾದರೊಂದನ್ನು ಕಂಠಪಾಠ ಮಾಡದಿದ್ದವರೇ ಇರಲಿಲ್ಲವೆಂದು ಹೇಳಬಹುದಾಗಿತ್ತು.

ಪ್ರೇಮಾನಂದನು ಬಹು ಲೀಲಾಜಾಲವಾಗಿ ಗ್ರಂಥರಚನೆಮಾಡಿದನು. ಸುಮಾರು ೫೭ ಗ್ರಂಥಗಳು ಆತನವೆಂದು ನಿಷ್ಕೃಷ್ಟವಾಗಿವೆ. ಅವುಗಳಲ್ಲಿ ಮೂವತ್ತ ಕ್ಕಿಂತ ಹೆಚ್ಚಿನವು ಬೃಹದ್ಗ್ರಂಥಗಳು. ಇವುಗಳ ವಸ್ತುವೆಲ್ಲ ಭಿನ್ನಮೂಲವಾದುವು. 'ಚಂದ್ರಹಾಸಾಖ್ಯಾನ', 'ಋಷ್ಯಶೃಂಗಾಖ್ಯಾನ', 'ದ್ರೌಪದೀಸ್ವಯಂವರ', 'ಮಾಂಧಾತಾಖ್ಯಾನ', 'ಭಗವದ್ಗೀತಾ', 'ನಳಾಖ್ಯಾನ', 'ದ್ರೌಪದೀಹರಣ', 'ಸುಭದ್ರಾಹರಣ', 'ಅಷ್ಟಾವಕ್ರಾಖ್ಯಾನ'–ಇವು ಭಾರತದಿಂದ ಆಯ್ದುಕೊಂಡವು. 'ಲಕ್ಷ್ಮಣಾಹರಣ', 'ಓಖಾಹರಣ', 'ಸುದಾಮ ಚರಿತ್ರ', 'ವಾಮನ ಚರಿತ್ರ', 'ದಾನಲೀಲಾ ಸಪ್ತಮಸ್ಕಂಧ', 'ರುಕ್ಮಿಣೀಹರಣ', 'ಧ್ರುವಾಖ್ಯಾನ'–ಇವು ಭಾಗವತಮೂಲವನ್ನುಳ್ಳವು. 'ಮದಾಲಸಾಖ್ಯಾನ', 'ಹರಿಶ್ಚಂದ್ರಾಖ್ಯಾನ', 'ದೇವೀ ಚರಿತ್ರೆ'-ಇವು ಮಾರ್ಕಂಡೇಯ ಪುರಾಣದ ಭಾಗಗಳು. 'ರಣಯಜ್ಞ' ರಾಮಾಯಣಕ್ಕೆ ಸಂಬಂಧಪಟ್ಟ ರಾಮರಾವಣರ ಯುದ್ಧವಿಷಯಕವಾದುದು. 'ವಿವಾಹ', 'ಹುಂಡಿ', 'ಹಾರಮಾಲಾ', 'ಶ್ರಾದ್ಧ', 'ಮಾಮೇರುಣ'–ಇವು ನರಸಿಂಹಮೆಹ್ತನ

ಜೀವನಕ್ಕೆ ಸಂಬಂಧಪಟ್ಟವು. 'ಸ್ವರ್ಗನೀಸರಣಿ,' 'ವಿವೇಕವಂಜಾರೊ,' 'ಭ್ರಮರ ಪಕ್ಷಿ'–ಇವು ಸಂಕೀರ್ಣವಿಷಯಕಗಳು. ಇವುಗಳಲ್ಲದೆ ರಾಮಾಯಣ, ಮಹಾಭಾರತ, ಮಾರ್ಕಂಡೇಯಪುರಾಣ, ಭಾಗವತ ಇವುಗಳ ಸಂಪೂರ್ಣ ಗುಜರಾತಿ ಅನುವಾದ ಗಳು ಈತನಿಂದ ರಚಿತವಾಗಿವೆ.

ಈ ಗ್ರಂಥಗಳನೇಕವುಗಳಿಗೆ ಬ್ಹಾಲನ್, ವಿಷ್ಣುದಾಸ್ ಮೊದಲಾದ ಅನೇಕ ಪ್ರಾಚೀನ ಕವಿಕೃತಿಗಳ ಬಹು ಭಾಗಗಳು ಅಕ್ಷರಶಃ ಆಧಾರವಾಗಿವೆ. ಕೃತಿಚೌರ್ಯದಲ್ಲಿ ಪ್ರೇಮಾನಂದನು ಅಗ್ರೇಸರ. ಈ ವಿಷಯದಲ್ಲಿ ಅವನು ಯಾವ ನೀತಿನಿಯಮಗಳನ್ನೂ ಅನುಸರಿಸಿಲ್ಲ. ಅವನ ವೃತ್ತಿಗನುಗುಣವಾಗಿ ತನ್ನ ಶ್ರೋತೃವೃಂದಕ್ಕೆ ಬಹು ಪರಿಚಿತವಾದ ಆಖ್ಯಾನಗಳಲ್ಲಿ ತನ್ನ ಅದ್ಭುತ ಶಕ್ತಿಯನ್ನು ಪ್ರದರ್ಶಿಸಿದ್ದಾನೆ.

ಪ್ರೇಮಾನಂದನಿಗೆ ಗುಜರಾತಿ ಭಾಷೆಯ ಮೇಲೆ ವಿಶೇಷವ್ಯಾಮೋಹ. ಸಂಸ್ಕೃತ ದಷ್ಟೇ ಪುಷ್ಟವೂ ಸುಂದರವೂ ಆಗುವಂತೆ ಅದನ್ನು ಬೆಳೆಸುತ್ತೇನೆಂದು ಟೊಂಕಕಟ್ಟಿ ದುಡಿದವನವನು. ಆ ಪ್ರತಿಜ್ಞಾಪೂರ್ಣವಾಗುವವರೆಗೆ ಆತನು ತನ್ನ ಶಿರೋವೇಷ್ಟನ ವನ್ನೇ ಧರಿಸಲಿಲ್ಲವಂತೆ. ಭಾಷಾಪ್ರಯೋಗದಲ್ಲಿ ಆತನಿಗೆ ಅದ್ಭುತ ಶಕ್ತಿಯಿತ್ತು. ಸಮಕಾಲೀನ ಜೀವನದಲ್ಲಿ ಅವನಿಗೆ ಅಪರಿಚಿತವಾದುದಾವುದೂ ಇಲ್ಲ. ಅವನ ದೃಷ್ಟಿ ಬಹು ಸೂಕ್ಷ್ಮ. ಅದಕ್ಕೆ ಗೋಚರವಾಗದ ಘಟನೆಯಿಲ್ಲವೆಂದೇ ಹೇಳ ಬಹುದು. ವಸ್ತು, ಪಾತ್ರ, ಸನ್ನಿವೇಶ, ರಸಭಾವಗಳನ್ನು ಬಹು ಸ್ಪಷ್ಟ ದೀರ್ಘ ಶೈಲಿಯಲ್ಲಿ ವರ್ಣಿಸಿದ್ದಾನೆ. ಯಾವ ವಿಷಯುವನ್ನಾದರೂ ಬಹು ಮೋಹಕವಾಗು ವಂತೆ ಚಿತ್ರಿಸುವ ತಂತ್ರಕಲೆಯಲ್ಲಿ ಅವನು ಅಗ್ರಗಣ್ಯ. ಆಧುನಿಕ ಕವಿಗಳಲ್ಲಿ ವಾಸ್ತವ ಜೀವನಚಿತ್ರವನ್ನು ಕೊಡತಕ್ಕ ರಚನಾತ್ಮಕ ಕಲಾವಿದರಲ್ಲಿ ಅವನೂ ಒಬ್ಬನೆಂದು ಧೈರ್ಯವಾಗಿ ಹೇಳಬಹುದು.

ಪ್ರೇಮಾನಂದನು 'ರೋಷದರ್ಶಿಕಾ ಸತ್ಯಭಾಮಾಖ್ಯಾನ', 'ಪಾಂಚಾಲೀ ಪ್ರಸನ್ನಾಖ್ಯಾನ', 'ತಪತ್ಯಾಖ್ಯಾನ' ಎಂಬ ಮೂರು ನಾಟಕಗಳನ್ನು ರಚಿಸಿರುವಂತೆ ವದಂತಿ. ಸಾಹಿತ್ಯ ಮತ್ತು ಕಲಾದೃಷ್ಟಿಗಳಿಂದ ಇವು ಕವಿಗೆ ಗೌರವವನ್ನು ತರತಕ್ಕವಲ್ಲ. ಅವು ಅವನದಲ್ಲವೆಂದು ವಿದ್ವಾಂಸರಿಂದ ಸೂಚಿತವಾಗಿವೆ.

ಸ್ವಾಮಿನಾರಾಯಣ ಪಂಥವು ಈ ಕಾಲದ ಗುಜರಾತಿ ಸಾಹಿತ್ಯದ ಮೇಲೆ ವಿಶೇಷ ಪ್ರಭಾವವನ್ನು ಬೀರಿದೆ. ಅದರ ಸ್ಥಾಪಕನಾದ ಸಹಜಾನಂದನು ರಮಾನಂದನ ಶಿಷ್ಯ. ಅಯೋಧ್ಯೆಯ ಸಮಿಾಪದಲ್ಲಿ ಜನಿಸಿದನು. ಈ ಪಂಥದವರು ಭಗವದ್ರಾಮಾನುಜರ ಶ್ರೀವೈಷ್ಣವ ಪಂಥದಿಂದ ಕೆಲವು ತತ್ವಗಳನ್ನು ಆರಿಸಿ ಕೊಂಡಿದ್ದರೂ ತಮ್ಮದೇ ಆದ ತತ್ವಸರಣಿಯನ್ನು ರೂಪಿಸಿಕೊಂಡಿದ್ದಾರೆ. ಅದು ವಲ್ಲಭ ಪಂಥಕ್ಕೆ ನೇರ ವಿರೋಧವಾದುದು. ಶೀಲಶುದ್ಧತೆ ಅದರ ಪ್ರಧಾನವಾದ ಗುಣ. ಆ ಪಂಥದ ಸಾಧುಗಳು ಸ್ತ್ರೀಯರ ವಿಷಯವಾಗಿ ೨೬ ವ್ರತಗಳನ್ನು ತಾಳ ಬೇಕಾಗಿದ್ದಿತು. ಸ್ತ್ರೀದರ್ಶನ ಮತ್ತು ನಾಮೋಚ್ಚಾರಣಗಳೂ ಅವರಿಗೆ ನಿಷಿದ್ಧ

ಕರ್ಮಗಳು. ಕಾಥ್ಯವಾಡದ ರಿಕ್ತ ಜನಕ್ಕೆ ಈ ಪಂಥ ಬಹು ಉಪಕಾರಮಾಡಿತು. ತಮ್ಮ ಧರ್ಮಕಾರ್ಯದಿಂದ ಅನೇಕ ದೀನದಲಿತರಿಗೆ ಇವರು ಬಹು ಉಪಕಾರವನ್ನುಂಟುಮಾಡಿದರು. ಆದರೂ ಸಹಜಾನಂದನು ವಲ್ಲಭಾಚಾರ್ಯನಂತೆಯೇ ತನ್ನಲ್ಲಿಯೇ ಕೃಷ್ಣನನ್ನು ಆವಾಹಿಸಿಕೊಂಡು ಎಲ್ಲ ವಿಧವಾದ ಪೂಜೆಪುರಸ್ಕಾರಗಳನ್ನು ಪಡೆಯಲು ಮೊದಲುಮಾಡಿದನು. ಈ ಪಂಥದವರು ತಮ್ಮ ಪಾರಿಶುಧ್ಯವನ್ನುಳಿಸಿಕೊಂಡು ಹಳ್ಳಿಗಳಲ್ಲಿ ಅನೇಕ ಅನಕ್ಷರಸ್ಥರಿಗೆ ನೈತಿಕ ಉಪದೇಶಗಳನ್ನು ಮಾಡಿ ಅವರ ಜೀವನಕ್ಕೆ ಮಾರ್ಗದರ್ಶಕರಾಗಿದ್ದಾರೆ. ೧೯ನೆಯ ಶತಮಾನದ ಆದಿಭಾಗದಲ್ಲಿ ಈ ಪಂಥದ ಅನೇಕರು ಕೃತಿರಚನೆಮಾಡಿದರು. ಮುಕ್ತಾನಂದ, ಬ್ರಹ್ಮಾನಂದ, ಪ್ರೇಮಾನಂದಸಖೀ ಎಂಬ ಮೂವರು ಇವರಲ್ಲಿ ಪ್ರಸಿದ್ಧರು. ಇವರು ಕೃಷ್ಣನ ಪ್ರೇಮಜೀವನಗಳನ್ನೂ ನೈತಿಕ ಪದಗಳನ್ನೂ ಗರಬಿಗಳನ್ನೂ ರಚಿಸಿದ್ದಾರೆ. ಭಾಷಾ–ಸೌಂದರ್ಯದೃಷ್ಟಿಯಿಂದ ಬ್ರಹ್ಮಾನಂದನು ಆ ಕಾಲದ ಉಳಿದವರನ್ನೆಲ್ಲ–ದಯಾರಾಮನನ್ನು ಬಿಟ್ಟು—ಮೀರಿಸಿದ್ದಾನೆ. ಪ್ರೇಮಾನಂದನು ಭಾವಯುಕ್ತವಾಗಿ ಭಕ್ತಿಪೂರ್ಣವಾಗಿ ಹಾಡಿದ್ದಾನೆ. ನರಸಿಂಹನಂತೆ ಇವನೂ ತನ್ನನ್ನು ಗೋಪಿಯೆಂದು ಭಾವಿಸಿಕೊಂಡು ಸಹಜಾನಂದನಿಷ್ಠನಾದ ಕೃಷ್ಣನಿಂದ ವಿಶೇಷ ಆಕರ್ಷಿತನಾದನು. ಆದುದರಿಂದಲೇ ಇವನಿಗೆ ಸಖೀ ಎಂಬ ವಿಶೇಷಣವೂ ರೂಢಿಗೆ ಬಂದಿತು.

ಈ ನಿರ್ಜೀವಯುಗದಲ್ಲಿ ಸಂಪ್ರದಾಯಗಳಿಗೆ ಬದ್ಧನಾಗದೆ ಸ್ವಂತವಾದ ಉಚ್ಚಕಾವ್ಯಶಕ್ತಿಯಿಂದ ಬಹು ಎತ್ತರಕ್ಕೆ ಏರಿದ ದಯಾರಾಮನು ಉದಯಿಸಿದನು. ಈತನು ನರ್ಮದಾತೀರದ ಚಾಂಡೋಡ್ ಎಂಬ ಒಂದು ಹಳ್ಳಿಯಲ್ಲಿ ೧೭೭೭ರಲ್ಲಿ ಜನ್ಮವೆತ್ತಿದನು. ಬಾಲ್ಯದಲ್ಲಿಯೇ ಅನಾಥನಾಗಿ ಚಿಕ್ಕಮ್ಮನ ಪೋಷಣೆಯಲ್ಲಿದ್ದು ತುಂಟನಾಗಿ ಬೆಳೆದು ಬಾಯಲ್ಲಿ ಹಾಡುತ್ತ ವಾದ್ಯವನ್ನು ನುಡಿಸುತ್ತ ಸ್ಥಳದಿಂದ ಸ್ಥಳಕ್ಕೆ ಸಂಚಾರಮಾಡಿ ತರುಣನಾದನು. ಸ್ಥಳೀಯ ಹೆಂಗಸರೊಂದಿಗೆ ಹರಟುವುದು, ಅವರನ್ನು ಹಾಸ್ಯಮಾಡುವುದು, ಅವರ ಮಡಕೆಗಳನ್ನು ಒಡೆದು ಕೋಟಲೆಗೀಡು ಮಾಡುವುದು ಅವನ ಪ್ರತಿನಿತ್ಯದ ದಿನಚರಿಯಾಗಿತ್ತು. ಇಂತಹ ಒಂದು ಸಂದರ್ಭದಲ್ಲಿ ಹಿರಿಯರ ಆಗ್ರಹಕ್ಕೆ ಪಾತ್ರನಾಗಿ ತಲೆತಪ್ಪಿಸಿಕೊಂಡು ಬೇರೆ ಹಳ್ಳಿಗೆ ಓಡುತ್ತಿರುವಾಗ ಕೇಶವಾನಂದ್ ಎಂಬ ಸಂನ್ಯಾಸಿಯನ್ನು ಸಂಧಿಸಿ ಅವನ ಶಿಷ್ಯನಾದನು. ಹದಿನಾಲ್ಕನೆಯ ವಯಸ್ಸಿನ ವೇಳೆಗೆ ಎಲ್ಲ ಪವಿತ್ರಸ್ಥಳಗಳಲ್ಲಿಯೂ ಸಂಚರಿಸಿ ಪುನೀತನಾಗಿದ್ದನು. ಗಂಗಾಜಲವನ್ನು ತಲೆಯಲ್ಲಿ ಹೊತ್ತು ಪಾದಚಾರಿಯಾಗಿ ರಾಮೇಶ್ವರಕ್ಕೆ ಹೋಗಿ ಸಮುದ್ರಕ್ಕೆ ಸಂಗಮಮಾಡಿಸಿದನು. ದೇಶಾಟನದಿಂದಲೂ ಪಂಡಿತ ಭಾಷಣದಿಂದಲೂ ಆತನು ವ್ರಜ, ಹಿಂದಿ, ಸಂಸ್ಕೃತ ಭಾಷೆಗಳಲ್ಲಿಯೇ ಅಲ್ಲದೆ ಗುಜರಾತಿ ಭಾಷೆಯಲ್ಲಿಯೂ ಪಾಂಡಿತ್ಯವನ್ನು ಸಂಪಾದಿಸಿದನು. ವೈಷ್ಣವ ತತ್ವವು ಅವನನ್ನು ಆಕರ್ಷಿಸಿತು. ದಯಾಶಂಕರ್ ಎಂಬ ತನ್ನ ಹೆಸರನ್ನು ದಯಾರಾಮ್ ಎಂದು ಮಾರ್ಪಡಿಸಿಕೊಂಡು ಉಚ್ಚ ಭಕ್ತನಾದನು.

ಆತನು ಆಗರ್ಭಸುಂದರ. ಅಲಂಕಾರಪುಟ್ಟಸಾಮಿ. ತನಗೆ ವಿಶೇಷ ಸೌಕರ್ಯವಿಲ್ಲದಿದ್ದರೂ ಸ್ನೇಹಿತರ ಔದಾರ್ಯದಿಂದ ಕಾಲಕ್ಕೆ ತಕ್ಕಂತೆ ಅಲಂಕಾರ ಮಾಡಿಕೊಂಡು ಆಕರ್ಷಕನಾಗಿರುತ್ತಿದ್ದನು. ಗೋಸ್ವಾಮಿಗಳಂತೆ ಕೇಶವಿನ್ಯಾಸ ಮಾಡಿಕೊಂಡು ತಾಂಬೂಲಚರ್ವಣದಿಂದ ತಾಮ್ರಾಧರನಾಗಿ ಭಂಗಿ ಸೇವನೆ ಮಾಡುತ್ತಾ ಡಾಕಾ ಮಸ್ಲಿನ್ ಇಂದ ಮಾಡಿದ ತೆಳುವಾದ ಅಂಗರೇಕನ್ನು ಧರಿಸಿ ನಾಗಪುರದ ತೆಳುವಾದ ಧೋತಿಯನ್ನುಟ್ಟು ಹೊಸದಾಗಿ ಒಗೆದು ಬಣ್ಣಕಟ್ಟಿ ಇಸ್ತ್ರಿ ಮಾಡಿದ ಕೆಂಪು ರುಮಾಲನ್ನು ಧರಿಸಿ ಹೊರಗೆ ಬರುತ್ತಿದ್ದನು. ಬಹು ಜಾಣ್ಮೆಯಿಂದ ಸುಮಧುರ ಕಂಠದಿಂದ ಭಾವೋದ್ರೇಕವಾಗುವಂತೆ ಹಾಡುತ್ತಿದ್ದನು. ಆತನೊಡನೆ ಮಾತನಾಡುವುದು ಬಹು ಹಿತಕರವಾಗಿರುತ್ತಿತ್ತು. ಆ ಕಾಲದ ಧರ್ಮದೃಷ್ಟಿಯಿಂದ ಅವನು ಗಂಟೆಗಳಕಾಲ ಪ್ರತಿಪಕ್ಷದವರೊಡನೆ ವಾದಮಾಡಿ ಜಯಿಸುವ ಶಕ್ತಿಯುಳ್ಳವ ನಾಗಿದ್ದನು. ಅವನ ಮನೋಭಾವವು ಸ್ವತಂತ್ರವಾದುದು, ಪ್ರೇಮಮಯವಾದುದು, ಔದಾಸೀನ್ಯದಿಂದ ಕೂಡಿದುದು, ಸಂಪ್ರದಾಯ ವಿರೋಧಿಯಾದುದು. ಎಲ್ಲವಿಧವಾದ ಕಟ್ಟುನಿಟ್ಟುಗಳನ್ನೂ ಉಲ್ಲಂಘನಮಾಡುವ ಸ್ವಭಾವವುಳ್ಳುದು. ಪರರಿಗೆ ಮಣಿಯ ಲಾರದ ಆತ್ಮಗೌರವದಿಂದ ಕೂಡಿದುದು. ಕೃಷ್ಣನಲ್ಲದೆ ಮತ್ತಾರಿಗೂ ತಲೆ ತಗ್ಗಿಸುವು ದಿಲ್ಲ ಎಂಬ ಶಪಥವನ್ನು ಮಾಡಿದ್ದನು. ಅದಕ್ಕನುಗುಣವಾಗಿಯೇ ಬರೋಡದಲ್ಲಿ ಸುಪ್ರಸಿದ್ಧನಾಗಿದ್ದ ಗೋಪಾಲದಾಸನು ಅವನನ್ನು ಗಣಪತಿಯ ವಿಷಯವಾಗಿ ಕವನಮಾಡಲು ಆಹ್ವಾನಿಸಿದಾಗ ಅನ್ಯದೇವತಾ ಸ್ತೋತ್ರ ತನ್ನಿಂದ ಸಾಧ್ಯವಿಲ್ಲ ವೆಂದು ತಿರಸ್ಕರಿಸಿದನು. ಧರ್ಮದೂರವಾದ ಗೋಸ್ವಾಮಿಗಳನ್ನು ಖಂಡಿಸಲೂ ಆತನು ಹಿಂಜರಿಯಲಿಲ್ಲ. ಉತ್ಸಾಹದ ಮೂರ್ತಿಯಾದ ಆತನಿಗೆ ಶಕ್ತಿಹೀನಳಾದ ಗೋಪಿಯಾಗಿರಲು ಸಾಧ್ಯವೇ ಇರಲಿಲ್ಲ. ಆತನ ಲೈಂಗಿಕಕಾಮ ವಿಶೇಷವಾಗಿದ್ದಿತು. ಸ್ತ್ರೀಯರನ್ನು ಅವರ ಇಂದ್ರಿಯಸೌಖ್ಯಕ್ಕಾಗಿಯೇ ಪ್ರೀತಿಸುತ್ತಿದ್ದನು. ಅವನಿಂದ ಆಕರ್ಷಿತರಾದ ಸ್ತ್ರೀಯರಲ್ಲಿ ಅನೇಕರು ಸಮಾಜದ ಬಹು ಉನ್ನತಮಟ್ಟದವರು. ರತ್ನಾಬಾಯಿಯೆಂಬ ಅಕ್ಕಸಾಲೆಯ ಜ್ಞಾತಿಗೆಸೇರಿದ ವಿಧವೆಯಲ್ಲಿ ಅನುರಕ್ತನಾಗಿ ಮೂವತ್ತು ವರ್ಷಗಳ ಕಾಲ ಅವಳೊಡನೆ ಸ್ವಲ್ಪವೂ ಸಂಕೋಚವಿಲ್ಲದೆ ಸಂಸಾರ ನಡೆಸಿದನು. ಅವರ ಪ್ರೇಮಜೀವನ ಅನ್ಯಾದೃಶವಾಗಿದ್ದಿತು. ಅವರ ಸಂಬಂಧ ಜನ್ಮಾಂತರದ ವಾಸನಾಫಲವೆಂದು ಆತನು ಭಾವಿಸಿದ್ದನು. ಮಧ್ಯೆ ಸ್ವಲ್ಪಕಾಲ ಅವರಲ್ಲಿ ವಿರಸವುಂಟಾಗಿದ್ದರೂ ಅಂತ್ಯಕಾಲದವರೆಗೂ ಜೊತೆಯಲ್ಲಿದ್ದು ಅವಳ ಮುಂದಿನ ಜೀವನಕ್ಕೂ ಸೌಕರ್ಯವನ್ನು ಕಲ್ಪಿಸಿ ಕಾಲವಾದನು. ಅವನಿಗೆ ಅನೇಕ ಪ್ರಿಯಶಿಷ್ಯರಿದ್ದರು. ಯಾರಲ್ಲಿಯೂ ತಾನು ಬಹುದೊಡ್ಡವ್ಯಕ್ತಿಯೆಂದು ಹೇಳಿ ಕೊಳ್ಳಲಿಲ್ಲ.

ದಯಾರಾಮನು ೧೮೫೨ರಲ್ಲಿ ತೀರಿಕೊಂಡನು. ಆ ವೇಳೆಗೆ ಗುಜರಾತಿಗೆ ಪಾಶ್ಚಾತ್ಯ ಸಾಹಿತ್ಯ ಸಂಸ್ಕೃತಿಗಳ ಸಂಪರ್ಕವುಂಟಾಗಿದ್ದಿತು. ಅದರ ಪ್ರಭಾವ

ಜನ ಮತ್ತು ಜಾನಪದದ ಮೇಲೆ ವಿಶೇಷವಾಗಿತ್ತು. ೧೮೧೮ ಕಿರ್ಕಿಯುದ್ಧವಾದ ಮೇಲೆ ಗುಜರಾತ್ ಬ್ರಿಟಿಷರ ಅಧೀನವಾಯಿತು. ಅದರ ಫಲವಾಗಿ ದೇಶದಲ್ಲಿ ಶಾಂತಿ ನೆಲೆಗೊಂಡದ್ದರಿಂದ ಜನರು ಅದನ್ನು ಆಹ್ವಾನಿಸಿದರು. ಹೊಸದಾಗಿ ಮುಂಬೈಯಲ್ಲಿ ಸ್ಥಾಪಿತವಾದ ಎಲ್ಫಿನ್‌ಸ್ಟರ್ ಕಾಲೇಜಿನ ಪದವೀಧರರು ಗುಜರಾತಿ ಶಾಲೆಗಳಲ್ಲಿ ಉಪಾಧ್ಯಾಯರಾಗಲು ಪಾಶ್ಚಾತ್ಯ ಪ್ರಭಾವ ದೇಶದಲ್ಲೆಲ್ಲಾ ವ್ಯಾಪಿಸಿತು. ಅವರಿಗೆ ಮೊದಲು ಕಣ್ಣಿಗೆಬಿದ್ದುದು ಸಮಾಜದಲ್ಲಿದ್ದ ಕುಂದುಕೊರತೆಗಳು. ಪಾಶ್ಚಾತ್ಯ ಪೌರಸ್ತ್ಯ ಸಮಾಜಗಳಲ್ಲಿದ್ದ ವ್ಯತ್ಯಾಸ. ಭಿನ್ನದೃಷ್ಟಿಕೋಣದಿಂದ ನೋಡಿದಾಗ ಅವರಿಗೆ ವಿಧವೆಗಳ ದುಃಸ್ಥಿತಿ, ಶಿಶುವಿವಾಹ, ಅಸ್ಪೃಶ್ಯತೆ, ವರ್ಣಾಶ್ರಮಧರ್ಮ ಮತ್ತು ತತ್ಪರಿಣಾಮವಾದ ಸಮಾಜದ ಅಂತರಗಳು ಬಹು ಹೀನವಾಗಿ ಕಂಡವು. ಆಳರಸರು ಈ ಸಮಾಜದೌರ್ಬಲ್ಯವನ್ನು ಸರಿಪಡಿಸಲು ತಮ್ಮ ಸಹಾನುಭೂತಿಯನ್ನು ತೋರಿಸಿ ಸಹಕರಿಸಿದರು. ವಿದ್ಯಾಭ್ಯಾಸದ ಮೂಲಕ ಹೊಸ ವೈಜ್ಞಾನಿಕ ಸಂಶೋಧನೆಯ ಫಲ ಜನಗಳಲ್ಲಿ ಬೇರೂರುವಂತಾಯಿತು. ಬ್ರಿಟಿಷ್ ಅಧಿಕಾರಿಗಳು ತಮ್ಮ ಅಧಿಕಾರವನ್ನು ಸಮಾಜಸುಧಾರಣಾ ಕಾರ್ಯದಲ್ಲಿಯೂ ವಿದ್ಯಾಪ್ರಚಾರದಲ್ಲಿಯೂ ಸದುಪಯೋಗಿಸಿಕೊಂಡರು. ಅಲೆಕ್ಸಾಂಡರ್ ಕಿನ್‌ಲಾಕ್ ಫೋರ್ಬ್ಸ್ ಎಂಬುವನು ಕವಿದಳಪತಿರಾಮನನ್ನು ಆಹ್ವಾನಿಸಿ ತಾನು ಸ್ಥಾಪಿಸಿದ ಗುಜರಾತ್ ದೇಶಭಾಷಾ ಸಂಸ್ಥೆಯಲ್ಲಿ ಕೆಲಸಮಾಡುವಂತೆ ನೇಮಿಸಿಕೊಂಡನು. ಇದರಿಂದ ದೇಶೀಯರು ಬಹುಶ್ರುತರಾದುದಲ್ಲದೆ ದೇಶೀಯ ಸಾಹಿತ್ಯ ಸಂಸ್ಕೃತಿಗಳಲ್ಲಿಯೂ ಅಭಿಮಾನವನ್ನು ಬೆಳಸಿಕೊಂಡರು. ದಳಪತಿರಾಮನಾಗಲಿ ನರ್ಮದನಾಗಲಿ ಮುಂದಿನ ಭಾರತೀಯ ಸಮಾಜ ಯಾವ ರೀತಿಯಲ್ಲಿರಬೇಕೆಂದು ಯೋಚಿಸಿರಲಿಲ್ಲ. ಈ ಪದವೀಧರರು ಅದಕ್ಕೆ ಒಂದು ನಿಷ್ಕೃಷ್ಟರೂಪವನ್ನು ಕೊಟ್ಟರು. ಅವರು ಪಾಶ್ಚಾತ್ಯ ಸಂಸ್ಕೃತಿಯ ವೈಭವಕ್ಕೆ ಮೋಸಹೋಗದೆ ಅನುಸ್ಯೂತವಾಗಿ ಹರಿದುಬಂದ ಭಾರತೀಯ ಆಧ್ಯಾತ್ಮಪ್ರವಾಹದಿಂದ ಆಕರ್ಷಿತರಾದರು. ಅಲ್ಲಿಯ ಉತ್ತಮ ಭಾಗವನ್ನು ಆರಿಸಿ ಇಲ್ಲಿಯ ಸಾರವತ್ತಾದ ಭಾಗಗಳೊಡನೆ ಸಮನ್ವಯಮಾಡಿಕೊಂಡರು. ಮೇಧಾವಿಗಳನೇಕರು ತಮ್ಮ ಆತ್ಮಗುಣದಿಂದ ಬಹು ಸಮತೂಕದಿಂದ ಯೋಚನೆ ಮಾಡಿ ದೇಶಕ್ಕೆ ಹಿತಕರವಾದುದನ್ನು ಆಚರಣೆಗೆ ತಂದರು. ಅವರ ಕಾರ್ಯಕ್ಕೆ ಸಂಪ್ರದಾಯಕ್ಕಿಂತ ವಿವೇಚನೆ ಹೆಚ್ಚುಮಾರ್ಗದರ್ಶಕವಾಗಿತ್ತು. ಅವರು ಬಹು ಎಚ್ಚರಿಕೆಯಿಂದ ಪ್ರಾಚೀನರಿಗೆ ಮನನೋಯದಂತೆಯೂ ಆಧುನಿಕರಿಗೆ ಔದಾಸೀನ್ಯ ಬರದಂತೆಯೂ ಅನೇಕ ಸುಧಾರಣೆಗಳನ್ನು ಕಾರ್ಯರೂಪಕ್ಕೆ ತಂದರು.

೧೮೫೭ರಿಂದ ೧೯೧೪ರ ಕಾಲದಲ್ಲಿ ಗುಜರಾತಿ ಸಾಹಿತ್ಯದಲ್ಲಿ ಸಣ್ಣಕತೆ, ಖಂಡಕಾವ್ಯ, ಅಷ್ಟಷಟ್ಪದಿ, ಚರಮಗೀತೆ, ಕಾದಂಬರಿ, ಪ್ರಬಂಧ, ನಾಟಕ, ಪತ್ರಲೇಖ, ಸಂಭಾಷಣೆ ಮೊದಲಾದುವೆಲ್ಲ ಸ್ಪಷ್ಟರೂಪವನ್ನು ತಾಳಿದುವು. ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಿಂದ ಸೂಕ್ತ ಅನುವಾದಗಳು ಸಿದ್ಧವಾದುವು. ನರಸಿಂಹರಾವ್

ದಿವೇಟಿಯು ಗೀತೆಯನ್ನು ತನ್ನ ಉಕ್ತಿಮಾಧ್ಯಮವನ್ನಾಗಿ ಮಾಡಿಕೊಂಡನು. ಯುವಕ ಕಲಾಪಿ ವರ್ಡ್ಸ್‌ವರ್ತಿನ ಪ್ರಕೃತಿವರ್ಣನಾವೈಖರಿಯನ್ನು ಗುಜರಾತಿಗೆ ತಂದು ಪದ್ಯವು ಜನಪ್ರಿಯವಾಗುವಂತೆ ಮಾಡಿದನು. ಬಲಶಂಕರ್, ಕಲಾಪಿ ಮತ್ತು ಮಣಿಲಾಲ್ ಪಾರ್ಸಿ ಘಸಲನ್ನು ಬಹು ಸೊಗಸಾಗಿ ಉಪಯೋಗಿಸಿಕೊಂಡರು. ಜನಪದಗೀತೆಗಳು ನಾನಾಲಾಲನ ಗೀತೆಗಳ ಮೂಲಕವೂ ಖಬರ್‌ದಾರನ ಭಜನೆಗಳ ಮೂಲಕವೂ ಪ್ರಸಿದ್ಧಿಗೆ ಬಂದುವು. ಆಧ್ಯಾತ್ಮಿಕ ವೈಭವವನ್ನು ಕಾಂತನು ತನ್ನ ಕುಸುರಿಮಾಡಿದ ಶುದ್ಧ ಭಾಷೆಯಲ್ಲಿ ಹೊರಗೆಡವಿದನು.

ಗೋವರ್ಧನರಾಮ್‌ತ್ರಿಪಾಠಿ ಈ ಕಾಲದ ಸುಪ್ರಸಿದ್ಧ ವ್ಯಕ್ತಿ. ಈತನ ಪೌರಾಣಿಕ ಕಾದಂಬರಿಯಾದ 'ಸರಸ್ವತೀಚಂದ್ರ' ಸುಮಾರು ೧೫ ನೂರು ಪುಟಗಳ ವಿಸ್ತಾರದಲ್ಲಿ ನಾಲ್ಕು ಭಾಗಗಳುಳ್ಳದಾಗಿದೆ. ಇದು ಆಧುನಿಕ ಸುಧಾರಣೆ ಮತ್ತು ಪುನರುದ್ಧಾರದ ಅತ್ಯುತ್ತಮ ಪ್ರತೀಕವೆನ್ನಿಸಿಕೊಂಡಿದೆ. ಇದರ ರಚನೆಗಾಗಿ ಈತನು ತನ್ನ ವಕೀಲವೃತ್ತಿಯನ್ನು ಬಿಟ್ಟು ೧೪ ವರ್ಷಗಳ ಕಾಲ ಶ್ರಮಿಸಿದ್ದಾನೆ. ಆಧುನಿಕ ಗುಜರಾತಿಯಲ್ಲಿ ಇದೊಂದು ಅತ್ಯುತ್ತಮ ಸಾಹಿತ್ಯರತ್ನ. ರಾಷ್ಟ್ರೀಯತೆಯ ಅನ್ವೇಷಣ ಇದರ ಪ್ರಧಾನವಸ್ತು. ಕಾದಂಬರಿಯಲ್ಲಿ ಐಕ್ಯತೆಯಿಲ್ಲದಿದ್ದರೂ ಕಲಾಮಯವಾಗಿದೆ. ಇದರಲ್ಲಿ ಬರುವ ದುಃಖಮಯಿಯಾದ ಕುಮುದ, ಅತ್ಯಂತ ಆಧುನಿಕಳಾದ ಕುಸುಮ, ಆಡಂಬರಪೂರ್ಣಳಾದ ಅಲಕ್ಕಿಶೋರಿ, ಸುಸಂಸ್ಕೃತ ಗೃಹಿಣಿಯಾದ ಗುಣಸುಂದರಿ ಶಾಂತಮಯಿಯಾದ ಚಂದ್ರಮತಿ—ಒಬ್ಬೊಬ್ಬರೂ ವಿದ್ಯಾವಂತರಾದ ವಾಚಕರ ಮೇಲೆ ವಿಶೇಷ ಪರಿಣಾಮವನ್ನುಂಟುಮಾಡುವವರಾಗಿದ್ದಾರೆ. ಕಾದಂಬರಿಯು ಕ್ಲಿಷ್ಟವಿಲ್ಲದ ಜನರಾಡುವ ಭಾಷೆಯಲ್ಲಿ ರಚಿತವಾಗಿದ್ದರೂ ಹೊಸ ಸನ್ನಿವೇಶದ ಆವಶ್ಯಕತೆಗಾಗಿ ಸಂಸ್ಕೃತದಿಂದ ಆಯ್ದುಕೊಂಡಿರುವ ಪ್ರೌಢ ಶಬ್ದಗಳಿಂದ ಕೂಡಿದೆ.

ಪುನರುಜ್ಜೀವನ ಕಾಲದ ಮತ್ತೊಬ್ಬ ಮೇಧಾವಿ ಆನಂದಶುಕ್ರಧ್ರುವ. ಈತನ ಗದ್ಯ ತನ್ನದೇ ಆದ ಸ್ಪಷ್ಟತೆಯನ್ನೂ ಸೌಂದರ್ಯವನ್ನೂ ಹೊಂದಿದೆ. ನಿಷ್ಪಕ್ಷಪಾತಿಯಾದ ಈತನು ಪಾಶ್ಚಾತ್ಯ ವಿದ್ಯೆಯ ಪ್ರಭಾವವನ್ನುಳ್ಳವನಾದರೂ ಪೌರಸ್ತ್ಯ ಸಂಸ್ಕೃತಿಯ ಬೆಲೆಯನ್ನು ಯಥಾವತ್ತಾಗಿ ಚಿತ್ರಿಸಿದ್ದಾನೆ. ಆತನ 'ಹಿಂದೂಧರ್ಮ ಬಾಲಬೋಧಿನಿ' ಮಹಾತ್ಮಗಾಂಧಿಯವರ ಶ್ಲಾಘನೆಗೆ ಪಾತ್ರವಾಗಿದೆ.

೧೯೧೫ನೆಯ ವರ್ಷವು ಗುಜರಾತಿನ ಇತಿಹಾಸದಲ್ಲಿ ಅದರ ಭವಿಷ್ಯದ ನಿರ್ಣಾಯಕ ವರ್ಷ. ಆ ವರ್ಷವೇ ಮಹಾತ್ಮಾಗಾಂಧಿಯವರು ದಕ್ಷಿಣ ಆಫ್ರಿಕಾದಿಂದ ಸ್ವದೇಶಕ್ಕೆ ಹಿಂತಿರುಗಿದರು. ಬಂದ ಕೆಲವೇ ತಿಂಗಳಿನಲ್ಲಿ ತಮ್ಮ ವಿಶೇಷವಾದ ವೈಯಕ್ತಿಕ ಪ್ರಭಾವದಿಂದ ಸನ್ನಿವೇಶವನ್ನೆಲ್ಲಾ ವಿದ್ಯುದ್ವೇಗದಿಂದ ಪ್ರಭಾವಿತವನ್ನಾಗಿಸಿದರು. ಗಾಂಧಿ ಹೋಮ್‌ರೂಲ್ ಚಳವಳಿ, ಜಲಿಯನ್‌ವಾಲಾಬಾಗ್ ಪ್ರಸಂಗ, ರಷ್ಯಾ ದೇಶದ ಕ್ರಾಂತಿ, ಪ್ರಥಮ ಮಹಾಯುದ್ಧ ಇವೆಲ್ಲವೂ ಗುಜರಾತಿನ

ಜನರ ಮೂಲ ಜೀವನವನ್ನೇ ಅಳ್ಳಾಡಿಸಿ ಪ್ರಚಲಿತವನ್ನಾಗಿ ಮಾಡಿತು. ರಾಜಕೀಯದಲ್ಲಿಯೇ ಅಲ್ಲದೆ ಆರ್ಥಿಕ, ಧಾರ್ಮಿಕ, ಸಾಮಾಜಿಕ, ಸಾಹಿತ್ಯಕ್ಷೇತ್ರಗಳಲ್ಲಿಯೂ ಸ್ವಾತಂತ್ರ್ಯ ಚಳುವಳಿ ಪ್ರಾರಂಭವಾಯಿತು. ಗುಜರಾತಿನ ಜನರ ಜೀವನ ಮತ್ತು ಸಂಸ್ಕೃತಿ ಅತಿ ಚೈತನ್ಯಮಯವಾಗತೊಡಗಿತು.

ಈ ಕಾಲದಲ್ಲಿ ಮಹಾಪುರುಷರ ಜಯಂತಿ ಮತ್ತು ಪುಣ್ಯದಿನಗಳ ಆಚರಣೆಯು ಬಹು ವಿಜೃಂಭಣೆಯಿಂದ ಜರುಗಲು ಪ್ರಾರಂಭವಾದುವು. ಶರದುತ್ಸವ ವಸಂತೋತ್ಸವಗಳೂ ಕಲಾಪ್ರದರ್ಶನಗಳೂ ಚರ್ಚಾಕೂಟಗಳೂ ಸಮ್ಮೇಳನಗಳೂ ಜನಪದ ಸಾಹಿತ್ಯವಾಚನ ಸಂಶೋಧನಗಳೂ ಸ್ವತಂತ್ರ ನಾಟಕಾಭಿನಯಗಳೂ ಹೇರಳವಾಗಿ ಜರುಗಿದುವು.

ಗ್ರಂಥಕರ್ತರು ಜನರ ಜೀವನವನ್ನು ವಿವಿಧ ಮುಖಗಳಲ್ಲಿ ಸ್ವತಃ ನೋಡಿದ್ದಲ್ಲದೆ ಗಾಂಧೀಜಿಯವರ ಉಪದೇಶಗಳಿಂದ ಉದ್ದೀಪಿತರಾಗಿ ದೀನದಲಿತರಸೇವೆ, ಅಸ್ಪೃಶ್ಯತಾನಿವಾರಣೆ, ಗ್ರಾಮಪುನರುಜ್ಜೀವನ, ಅನಕ್ಷರತೆಯ ನಿರ್ಮೂಲನ ಮೊದಲಾದುವುಗಳನ್ನು ತಮ್ಮ ಕೃತಿಗಳ ವಸ್ತುವನ್ನಾಗಿಯೂ ಧ್ಯೇಯವನ್ನಾಗಿಯೂ ಆರಿಸಿಕೊಂಡರು.

ಈ ಕಾಲದ ಬರವಣಿಗೆಯಲ್ಲಿ ಕಲಾಭಿಜ್ಞತೆಗೆ ಹೆಚ್ಚು ಪುರಸ್ಕಾರ. ಆದುದರಿಂದ ಅವುಗಳ ವಸ್ತು ಮತ್ತು ಶೈಲಿಗಳು ಹಿಂದಿನವಕ್ಕಿಂತ ಭಿನ್ನವಾದುವು. ಸಣ್ಣಕತೆ ತನ್ನದೇ ಆದ ಬೆಳವಣಿಗೆಯನ್ನು ಹೊಂದಿತು. ಲಘುಪ್ರಬಂಧ, ಏಕಾಂಕನಾಟಕ, ಆತ್ಮಭಾಷಣ, ದಿನಚರಿ ಮೊದಲಾದ ಸಾಹಿತ್ಯ ಪ್ರಭೇದಗಳು ಉದಯವಾದುವು. ಶಿಶುಸಾಹಿತ್ಯ, ಜಾನಪದ ಗೀತೆ ಮುಂತಾದುವುಗಳಲ್ಲಿ ವಿಶೇಷ ಸಂಶೋಧನೆಗಳು ನಡೆದುವು. ವಿಜ್ಞಾನ, ವ್ಯವಸಾಯ, ಅರ್ಥಶಾಸ್ತ್ರ ಮೊದಲಾದ ವಿಷಯವಾಗಿ ಅನೇಕ ಗ್ರಂಥಗಳು ತಲೆದೋರಿದುವು. ವಿಷಯಕ್ಷೇತ್ರ ವಿಸ್ತಾರವಾಯಿತು. ಶೈಲಿಯಲ್ಲಿ ವೈವಿಧ್ಯವೂ ವ್ಯಕ್ತಿತ್ವವೂ ಪ್ರಧಾನ ಭಾಗಗಳಾದುವು.

ಪಾಶ್ಚಾತ್ಯ ಸಂಸ್ಕೃತಿಗೆ ಒಳಪಟ್ಟವರಲ್ಲಿ ದಲಪತಿರಾಮನೇ ಮೊದಲನೆಯವನು. ಆತನು ಬಹು ವಿವೇಕಿ; ಉತ್ತಮ ಶಿಕ್ಷಕ; ಆತನು ಪ್ರಾಚೀನ ಸಂಸ್ಕೃತ ಛಂದಸ್ಸುಗಳನ್ನು ಹೊಸ ಮನೋಭಾವಕ್ಕೆ ಹೊಂದುವಂತೆ ಬದಲಾಯಿಸಿ ಜೀವಂತವನ್ನಾಗಿ ಮಾಡಿದನು. ಆತನು ಬಹು ಸರಸಿ; ಉತ್ತಮವಾದ ಹಾಸ್ಯಭರಿತ ಪದ್ಯಗಳನ್ನು ರಚಿಸಿ ಜನರನ್ನು ಆಕರ್ಷಿಸಿದನು. ಆತನು ಗುಜರಾತಿ ಭಾಷೆ ಮತ್ತು ನೀತಿಯ ಸುಧಾರಣೆಗೆ ವಿಶೇಷ ದುಡಿದಿದ್ದಾನೆ. ಆತನು ತನ್ನ ಕಾವ್ಯವೊಂದರಲ್ಲಿ ವಿಧವಾಪುನರ್ವಿವಾಹವನ್ನು ಪುಷ್ಟೀಕರಿಸಿದ್ದಾನೆ. ಮತ್ತೊಂದರಲ್ಲಿ ದೇಶೀಯ ಕೈಗಾರಿಕೆಗಳು ನಾಶವಾಗಿ ದೊಡ್ಡ ದೊಡ್ಡ ಗಿರಣಿಗಳು ಆ ಸ್ಥಾನವನ್ನು ಆಕ್ರಮಿಸಿದುದಕ್ಕಾಗಿ ನೊಂದಿದ್ದಾನೆ.

ದಲಪತಿರಾಮನು ಸಮಾಜದೌರ್ಬಲ್ಯಗಳನ್ನೂ ಶೈಕ್ಷಣಿಕ ಮತ್ತು ಸಾಮಾಜಿಕ

ಸುಧಾರಣೆಗಳ ಆವಶ್ಯಕತೆಯನ್ನೂ ಮಾತ್ರ ಅರಿತಿದ್ದನು. ಆದರೆ ಪಾಶ್ಚಾತ್ಯ ಸಂಸ್ಕೃತಿಯ ಬೆಲೆಯನ್ನು ವಾಸ್ತವಿಕವಾಗಿ ಅರಿತವನು ಅವನಿಂದ ಮುಂದೆ ಬಂದ ನರ್ಮದ್. ಅವನು ಮೊದಲು ಮನಗಂಡು ಪ್ರಚಾರಮಾಡಿದುದು ವೈಯಕ್ತಿಕ ಮನೋಭಾವನೆ ಮತ್ತು ಮಾನವೀಯತೆಗಿರಬೇಕಾದ ಘನತೆ ಮತ್ತು ಗೌರವಗಳು. ವ್ಯಕ್ತಿಸ್ವಾತಂತ್ರ್ಯ, ದೇಶಪ್ರೇಮ, ಪ್ರಕೃತಿಸೌಂದರ್ಯ ಮೊದಲಾದ ವಿಷಯವಾಗಿ ಸೊಗಸಾಗಿ ಹಾಡಿದ್ದಾನೆ. ಅವನ ಆವೇಶಪೂರ್ಣವಾದ ಗುಜರಾತಿ ವರ್ಣನೆಗಳಲ್ಲಿ ಸಹಜ ಪ್ರಾಮಾಣಿಕತೆಯಿದೆ. ಆತನ ಹೊಸ ಗದ್ಯದಲ್ಲಿ ನವಜೀವ ಕಳೆಯಿದೆ. ಆದರೆ ಆವೇಶಪೂರ್ಣನೂ ಅಹಂಭಾವಭರಿತನೂ ಆದ ಅವನು ಕಲಾತ್ಮಕವಾದ ಸೃಷ್ಟಿಗೆ ಹೊಂದಿಕೊಳ್ಳಲಾರದವನಾಗಿದ್ದನು. ಆತನು ಆಧುನಿಕ ಗುಜರಾತಿ ಸಾಹಿತ್ಯದ ಜನಕನೆನ್ನುವುದರಲ್ಲಿ ಸಂದೇಹವಿಲ್ಲ. ಅನೇಕ ಹೊಸ ಕಾರ್ಯಗಳಲ್ಲಿ ತೊಡಗಿ ಮಾರ್ಗದರ್ಶಕನಾಗಿದ್ದಾನೆ. ಮತ್ತಾರ ಯಾವ ವಿಧವಾದ ಆರ್ಥಿಕ ನೆರವೂ ಇಲ್ಲದೆ ಒಬ್ಬನೇ ಮೊತ್ತಮೊದಲನೆಯ ಗುಜರಾತಿ ಕೋಶವನ್ನು ನಿರ್ಮಾಣ ಮಾಡಿದನು. ಗುಜರಾತಿನ ನವಚೈತನ್ಯದ ಪ್ರತೀಕವಾಗಿ ಆತನು ಒಂದು ದೃಷ್ಟಿಯಿಂದ ಒಬ್ಬ ವೀರಪುರುಷನಾಗಿದ್ದಾನೆ.

ಆದಿಯಲ್ಲಿ ನರ್ಮದನು ಭಾರತೀಯ ಸಾಮಾಜಿಕ ಮತ್ತು ಧಾರ್ಮಿಕ ಸಂಸ್ಥೆಗಳನ್ನು ನಿಷ್ಕರುಣೆಯಿಂದ ಖಂಡಿಸಿದನು. ಅಪರ ವಯಸ್ಸಿನಲ್ಲಿ ಪ್ರಾಚೀನ ಸಂಸ್ಕೃತಿಯ ಮಹತ್ವವನ್ನು ಕ್ರಮಕ್ರಮವಾಗಿ ಅರಿತು ತನ್ನ ವಿನಾಶಾತ್ಮಕವಾದ ಸಮಾಜ ಸುಧಾರಣೆಯ ಮನೋಭಾವವನ್ನು ತ್ಯಜಿಸಿ ಮಾರ್ದವಯುತನಾಗಿ ಸಂಪ್ರದಾಯಶರಣನಾಗತೊಡಗಿದನು. ೧೮೫೭ರಲ್ಲಿ ಬೊಂಬಾಯಿ ವಿಶ್ವವಿದ್ಯಾನಿಲಯವು ಸ್ಥಾಪಿತವಾಯಿತು. ಅಲ್ಲಿಯ ವಿದ್ಯಾರ್ಥಿಗಳು ಪಾಶ್ಚಾತ್ಯ ಇತಿಹಾಸ, ಸಾಹಿತ್ಯ ಮತ್ತು ದರ್ಶನಗಳ ಜೊತೆಗೆ ಭಾರತೀಯ ಸಾಹಿತ್ಯ ಮತ್ತು ಧಾರ್ಮಿಕ ಗ್ರಂಥಗಳನ್ನೂ ಅಭ್ಯಾಸಮಾಡಿದರು. ಇದರ ಫಲವಾಗಿ ಅವರ ಬುದ್ಧಿಶಕ್ತಿ ಕುದುರಿ ಅವರ ಹೊಸಶೈಲಿ ನೇರವಾಗಿ ಸರಳವಾಗಿ ಅಲಂಕಾರರಹಿತವಾಗಿ ಸಹಜವಾಗಿ ಅರ್ಥಗರ್ಭಿತವಾಗಿ ಸಾಮಾನ್ಯ ಜನರಿಗೆ ಆಕರ್ಷಕವಾಗಿ ರಚಿತವಾಗಲು ಪ್ರಾರಂಭವಾಯಿತು.

ಕಾವ್ಯಕ್ಷೇತ್ರದಲ್ಲಿ ಗರಬಿ, ರಾಸ, ಖಂಡಕಾವ್ಯ, ಅಷ್ಟಪಟ್ಪದಿ, ಅಣಕವಾಡು, ಚರಮಗೀತೆ, ಸಂಭಾಷಣೆ, ಮುಕ್ತಕ ಮೊದಲಾದುವು ಅಭಿವೃದ್ಧಿಯಾಗಿ ನಿಶ್ಚಿತ ಆಕಾರವನ್ನು ತಾಳಿದುವು. ಇವುಗಳಲ್ಲೆಲ್ಲಾ ಆಖೋ ಮಾರ್ಗದಲ್ಲಿ ರಚಿತವಾದ ವ್ಯಂಗ್ಯ ಕವನಗಳು ಪ್ರತ್ಯೇಕವಾಗಿ ಸ್ತುತ್ಯಾರ್ಹವಾಗಿವೆ.

ಈ ಕಾಲದ ಕವಿ ಶೃಂಗಾರ, ಪ್ರಕೃತಿ ಮತ್ತು ದೇವರುಗಳಿಗೆ ಮಾತ್ರ ಅಂಟಿಕೊಂಡಿರಲಿಲ್ಲ. ಆತನು ವಿಶ್ವಪ್ರೇಮ, ವಿಶ್ವಸೌಹಾರ್ದಗಳ ವಿಷಯವಾಗಿ ಹಾಡಿದ್ದಾನೆ. ಆತನಿಗೆ ಮರಣವೂ ಮಹನವಮಿ. ದುಃಖ, ಕರುಣೆ ಮೊದಲಾದುವು ಸುಖಸಂತೋಷಗಳಂತೆಯೇ ಜೀವನದ ಒಂದು ಅನಿವಾರ್ಯಭಾಗವಾಗಿ ಕಂಡುವು.

ಇದುವರೆಗೆ ಕಾವ್ಯದ ಪ್ರಧಾನ ವಿಷಯಗಳೆಂದು ಭಾವಿಸಲ್ಪಡುತ್ತಿದ್ದ ಅಷ್ಟಾದಶ ವರ್ಣನೆಗಳ ಸ್ಥಾನವನ್ನು ಜಾಡಮಾಲಿ, ಕಾಡಹೂವು, ಕೊಳಕುನೊಣ, ತಿಪ್ಪೇಗುಂಡಿ, ತಿಂದೆಸದ ಮಾವಿನ ಬಿತ್ತ, ಚಮ್ಮಾರಹುಡುಗ ಮೊದಲಾದುವು ಆಕ್ರಮಿಸಿಕೊಂಡವು. ಕಾವ್ಯದ ಮಹತ್ವವು ವಿಷಯದಲ್ಲಿಲ್ಲ; ಅದನ್ನು ನೋಡುವ ಕಣ್ಣಿನಲ್ಲಿ; ಅನುಭವಿಸುವ ಹೃದಯದಲ್ಲಿ ಎಂಬ ತತ್ವ ಅಂಗೀಕೃತವಾಯಿತು. ಕೆಲವು ಕಾಲದ ವರೆಗೆ ಹೊಸತನ ಹೊಸತನಕ್ಕಾಗಿಯೇ ಅಂಗೀಕೃತವಾಗುತ್ತಿತ್ತು. ಹೃದಯ ವೈಶಾಲ್ಯದಿಂಧ ಕೆಲವು ಕಾಲ ಅನಿವಾರ್ಯವಾಗಿ ಕಂಡರೂ ಅತಿ ವಾಸ್ತವಿಕತೆ, ಒರಟುತನ, ಗಾಂಭೀರರಾಹಿತ್ಯ ಹೊಸಸಾಹಿತ್ಯದ ಮೂಲಲಕ್ಷಣಗಳಾಗಿ ಪರಿಣಮಿಸಿದವು.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ವಿಶೇಷ ವ್ಯತ್ಯಾಸಗಳೇನೂ ಕಂಡುಬಂದಿಲ್ಲ. ಸ್ವಾತಂತ್ರ್ಯಪೂರ್ವಕಾಲದಲ್ಲಿ ಸ್ವಾತಂತ್ರ್ಯಸಾಧನೆಯು ಗುರಿಯಾಗಿತ್ತು. ಉತ್ತರ ಕಾಲದಲ್ಲಿ ರಾಷ್ಟ್ರಪುನರ್ನಿರ್ಮಾಣ ಆ ಸ್ಥಾನವನ್ನಾಕ್ರಮಿಸಿದೆ. ಆದರೆ ಹಿಂದಿನ ಆ ವೀರ ಉತ್ಸಾಹ ಮಾತ್ರ ಇಂದು ಕಾಣುತ್ತಿಲ್ಲ. ವಿಷಯ ವಿಸ್ತಾರದೃಷ್ಟಿಯಿಂದ ಅಖಂಡ ಪ್ರಪಂಚವೇ ಸಾಹಿತ್ಯದ ವಿಷಯವಾಗಿದೆ. ಇತರ ಎಲ್ಲ ಆಧುನಿಕ ಸಾಹಿತ್ಯಗಳಂತೆಯೇ ಗುಜರಾತಿನಲ್ಲಿಯೂ ಪ್ರಪಂಚದ ಅತ್ಯುತ್ತಮವಾದುದನ್ನೆಲ್ಲಾ ಶೇಖರಿಸಿ ತನ್ನದನ್ನಾಗಿ ಮಾಡಿಕೊಂಡು ಅತಿಸುಂದರವಾಗಿ ನಿರ್ಮಾಣ ಮಾಡಬೇಕೆಂಬ ಆಸೆ ಎಲ್ಲೆಲ್ಲಿಯೂ ತಲೆದೋರುತ್ತಿದೆ. ಕಾವ್ಯದಲ್ಲಿ ಸಂಗೀತಕ್ಕೆ ವಿಶೇಷ ಸ್ಥಾನ ದೊರೆತಿದೆ. ಆದುದರಿಂದಲೇ ಗೀತರಚನೆಯಲ್ಲಿ ಗುಜರಾತಿಗಳು ಬಹು ಜಯಶಾಲಿಗಳಾಗಿದ್ದಾರೆ. ಇಂತಹ ಸನ್ನಿವೇಶದಲ್ಲಿ ಮಹಾಕಾವ್ಯಗಳು ಆಕರ್ಷಕವಾಗಿ ಕಾಣುವುದಿಲ್ಲ. ಆದುದರಿಂದಲೇ ಇತ್ತೀಚೆಗೆ ಗುಜರಾತಿಯಲ್ಲಿ ಯಾವ ಉತ್ತಮ ಮಹಾಕಾವ್ಯಗಳೂ ಹೊರಬಿದ್ದಿಲ್ಲ.

ಪ್ರಾಚೀನ ಸಾಂಪ್ರದಾಯಿಕ ಕವಿಗಳಲ್ಲಿ ಉಮಾಶಂಕರ್ ಜೋಷಿ, ಸುಂದರಮ್, ಸುಂದರ್‌ಜಿ ಬೆಟಾಯಿ ಮೊದಲಾದವರು ಈಗಲೂ ಕೃತಿರಚನೆ ಮಾಡುತ್ತಿದ್ದಾರೆ. ಜೋಷಿಯವರ 'ವಸಂತವರ್ಷ' ಎಂಬ ಅಯ್ದನೆಯ ಕವನ ಸಂಗ್ರಹ ಇತ್ತೀಚೆಗೆ ಪ್ರಕಟವಾಗಿದೆ. ಇದರ ಕೆಲವು ಕವನಗಳಲ್ಲಿ ಅವರು ಪ್ರಕೃತಿಸೌಂದರ್ಯವನ್ನು ಅದ್ಭುತವಾಗಿ ವರ್ಣಿಸಿದ್ದಾರೆ. ಕೆಲವು ವರ್ಷಗಳ ಹಿಂದೆ ಪ್ರಕಟವಾದ ಸುಂದರಂ ಅವರ 'ಯಾತ್ರಾ' ಎಂಬ ಕವನಸಂಗ್ರಹದಲ್ಲಿ ಅವರ ಆಧ್ಯಾತ್ಮ ಬೆಳವಣಿಗೆಯ ಪ್ರತಿಬಿಂಬ ಎದ್ದು ಕಾಣುತ್ತಿದೆ. ಉಮಾಶಂಕರ್ ಪ್ರಕೃತಿಸೌಂದರ್ಯದಲ್ಲಿ ಓಲಾಡುತ್ತಿದ್ದರೆ ಸುಂದರಂ ಅವರು ಆಧ್ಯಾತ್ಮ ಪ್ರಪಂಚದಲ್ಲಿ ವಿಹರಿಸುತ್ತಾರೆ. ಇಬ್ಬರ ಅಂತ್ಯಗುರಿಯೂ ಸತ್ಯಾನ್ವೇಷಣೆಯಾದರೂ ಒಬ್ಬರ ಮಾರ್ಗ ಸೌಂದರ್ಯ, ಇನ್ನೊಬ್ಬರದು ಯೋಗ.

ಇತ್ತೀಚಿನ ಕವಿಗಳಲ್ಲಿ ರಾಜೇಂದ್ರಷಾ, ನಿರಂಜನ ಭಗತ್, ಬಾಲಮುಕುಂದ ದೇವ್, ವೇಣೀಭಾಯ್ ಪುರೋಹಿತ್, ಉಶನಸ್ ಮೊದಲಾದವರನ್ನು ಹೆಸರಿಸ

ಬಹುದು. ರಾಜೇಂದ್ರರ ದೃಷ್ಟಿ ಶುದ್ಧವೂ ಸ್ಪಷ್ಟವೂ ಆಗಿರುವುದರಿಂದ ಅವರ ಕವನಗಳು ಭಾವಪೂರ್ಣವಾಗಿವೆ. ನಿರಂಜನರ ಗತಿ ಬಹಳ ಸರಳವಾದುದು; ಸಂಪ್ರದಾಯಬದ್ಧವಲ್ಲ, ಬಹು ಋಜುಗಮನವುಳ್ಳುದು. ಬಾಲಮುಕುಂದರದು ಬಹು ಮಾಧುರ್ಯದಿಂದ ತುಂಬಿದೆ. ವೇಣೀಬಾಯ್ ಅವರದು ನಾದಮಾಧುರ್ಯ ಪೂರ್ಣವಾಗಿದೆ. ಉಶನಸ್ ಅವರದು ಚಿತ್ರಮಯವಾಗಿದೆ.

ಒಟ್ಟಿನಲ್ಲಿ ಈಗಿನ ಕಾಲದ ಗುಜರಾತಿ ಕವಿಗಳಿಗೆ ಛಂದಸ್ಸು, ಯತಿ, ನಾದಗಳ ವಿಷಯದಲ್ಲಿ ಅದ್ಭುತವಾದ ಶಕ್ತಿಯಿದೆ. ಅವರ ಶಬ್ದಕೋಶವೂ ವಿಸ್ತೃತವಾಗಿದೆ. ಸಂಸ್ಕೃತ ಶಬ್ದಪ್ರಯೋಗದ ವಿಷಯದಲ್ಲಿ ಮಾತ್ರ ಅನೇಕ ಸಲ ತಪ್ಪುಮಾಡುತ್ತಾರೆ. ಅನೇಕ ಸಲ ಅಪೂರ್ಣಾರ್ಥವುಳ್ಳ ಶಬ್ದಪ್ರಯೋಗ ಮಾಡಿರುವುದೂ ಉಂಟು. ಶಬ್ದ ಚಿತ್ರಕ್ಕಾಗಿಯೇ, ನಾದಕ್ಕಾಗಿಯೇ, ಹಾಸ್ಯಕ್ಕಾಗಿಯೇ ಶಬ್ದಪ್ರಯೋಗಮಾಡಿರುವ ಹಲವಾರು ಉದಾಹರಣೆಗಳಿವೆ. ಅವರ ಭಾವನಾಲಹರಿ ಇದ್ದಕ್ಕಿದ್ದಹಾಗೆ ಮೊಟಕಾಗುವುದೂ ಉಂಟು. ಭಾವಪೂರ್ಣವಾಗಿ ಅನುಸ್ಯೂತವಾಗಿ ಏಕಧಾರೆ ಯಿಂದ ಹರಿಯುವ ಮಹಾಕಾವ್ಯರಚನೆ ಯಾವ ಸಾಹಿತ್ಯದಲ್ಲಾಗಲಿ ದೈನಂದಿನ ಕೆಲಸವಲ್ಲ. ಅದರಂತೆಯೇ ಆಧುನಿಕ ಗುಜರಾತಿ ಸಾಹಿತ್ಯದಲ್ಲಿಯೂ ಮಹಾ ಕಾವ್ಯಗಳಿಲ್ಲದಿರುವುದಕ್ಕಾಗಿ ಚಿಂತೆಪಡಬೇಕಾಗಿಲ್ಲ. ಹಿಂದೆಯೇ ತಿಳಿಸಿರುವಂತೆ ಈಗಿನ ಕಾವ್ಯಗಳೆಲ್ಲ ಲಘುವಾದುವು, ಮಧುರವಾದುವು, ನಾದಮಯವಾದುವು ಮತ್ತು ಋಜುವಾದುವು. ಆಳ, ವೈಶಾಲ್ಯ, ದೈರ್ಘ್ಯಗುಣಗಳನ್ನು ಅವು ಇನ್ನೂ ಸಂಪಾದಿಸಬೇಕಾಗಿದೆ. ಹಾಗೆಯೇ ದಾರ್ಶನಿಕ ದೃಷ್ಟಿಯಲ್ಲಿಯೂ ವಿಶೇಷ ಮುಂದುವರಿದಿಲ್ಲವೆಂದು ಹೇಳಬಹುದು.

ಸಾಹಿತ್ಯರೀತಿಯಲ್ಲಿ ಈಗ ವಿಶೇಷವಾಗಿ ಬೆಳೆದಿರುವುದು ನಾಟ್ಯರೂಪಕ. ಇದು ಸಂಪೂರ್ಣವಾದ ನಾಟಕವೂ ಅಲ್ಲ; ದೀರ್ಘವಾದ ಕಥನವೂ ಅಲ್ಲ. ಅದು ಜೀವನದ ಪ್ರಸಿದ್ಧವಾದ ಸನ್ನಿವೇಶವನ್ನು ಆರಿಸಿಕೊಂಡು ಪದ್ಯಮಯವಾದ ಸಂಭಾಷಣೆಯ ಮೂಲಕ ಪ್ರದರ್ಶಿಸುತ್ತದೆ. ಇದರ ಉತ್ತಮ ಮಾದರಿಯನ್ನು ಉಮಾಶಂಕರ್ ಅವರ 'ಪ್ರಾಚೀನ'ದಲ್ಲಿ ನೋಡಬಹುದು. ಈ ನೃತ್ಯರೂಪಕಗಳು ಇತ್ತೀಚೆಗೆ ಬೆಳೆದುಬಂದವು. ಇವುಗಳ ವಿಷಯ ಪೌರಾಣಿಕ, ಐತಿಹಾಸಿಕ ಅಥವಾ ಕಾಲ್ಪನಿಕವಾಗಿರಬಹುದು. ಅವುಗಳ ಆಕರ್ಷಕತೆ ಆಂತರ್ಯವಾದ ಸಾಹಿತ್ಯಗುಣ ಗಳಿಗಿಂತ ಅಲ್ಲಿ ಬರುವ ನೃತ್ಯ, ಗೀತ ಮತ್ತು ನಾದಮಯತೆಯ ಮಾಧುರ್ಯವನ್ನು ಆಶ್ರಯಿಸಿರುತ್ತದೆ. ಈಚೆಗಂತು ಎಲ್ಲ ಸಾಂಸ್ಕೃತಿಕ ಸಂಘ, ವಿದ್ಯಾಸಂಸ್ಥೆಗಳೂ ತಮ್ಮ ವಾರ್ಷಿಕೋತ್ಸವಗಳಲ್ಲಿ ಈ ನೃತ್ಯರೂಪಕಗಳನ್ನು ಪ್ರದರ್ಶಿಸುವುದು ಸಂಪ್ರದಾಯವಾಗಿ ಹೋಗಿದೆ. ಜನಾಕರ್ಷಣೆಯೇ ಅವುಗಳ ಮುಖ್ಯ ಗುರಿ ಯಾಗಿರುವುದರಿಂದ ಅವು ಸಂಗೀತ ಮತ್ತು ನೃತ್ಯಗಳ ಶುದ್ಧಸಂಪ್ರದಾಯಗಳನ್ನು ಪ್ರದರ್ಶಿಸುತ್ತಿಲ್ಲವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಕವಿಸಮ್ಮೇಳನಗಳೂ ಮುಷೈರಗಳೂ ಈಗಿನ ಕಾಲದಲ್ಲಿ ಬಹು ಜನಪ್ರಿಯವಾಗಿವೆ. ಸಂಪ್ರದಾಯಬದ್ಧವಾದ ಸಂಸ್ಕೃತ ವೃತ್ತಗಳಲ್ಲಿ ರಚಿತವಾದ ವೃತ್ತಗಳನ್ನು ಕವಿಸಮ್ಮೇಳನಗಳಲ್ಲಿ ಪಠಿಸುತ್ತಾರೆ. ಉರ್ದು 'ಘಜಲ್' ಮಾದರಿಯಲ್ಲಿ ರಚಿತವಾದುವನ್ನು ಮುಷೈರಗಳಲ್ಲಿ ಹಾಡುತ್ತಾರೆ. ಇವು ಜನಗಳಿಗೆ ಕರ್ಣಾನಂದವನ್ನುಂಟುಮಾಡುತ್ತಿದ್ದರೂ ಅವುಗಳ ಅರ್ಥಗ್ರಹಣಶಕ್ತಿ ಅವರಿಗಿಲ್ಲದುದರಿಂದ ಅಷ್ಟು ಉಪಕಾರವಾಗಿಲ್ಲ. ಸಾಲದುದಕ್ಕೆ ಇವುಗಳು ತಾತ್ಕಾಲಿಕ ಸಂದರ್ಭಗಳಿಗಾಗಿ ರಚಿತವಾಗಿರುವುದರಿಂಧ ಇವುಗಳಲ್ಲಿ ಭಾವನಾಡಿಗಳನ್ನು ಮೀಟುವ, ಜೀವನದ ದರ್ಶನವನ್ನು ಪ್ರತಿಬಿಂಬಿಸುವ ಪ್ರತಿಭಾಪ್ರದರ್ಶನವನ್ನು ಕಾಣಲಾಗುವುದಿಲ್ಲ. ಅವುಗಳು ಆಕರ್ಷಕವಾಗಿರುವುದು ಅವನ್ನು ಹಾಡುವ ರೀತಿಯಿಂದ ಮತ್ತು ಅಲ್ಲಿ ಕಾಣುವ ಶಬ್ದಾಡಂಬರದಿಂದ. ಆದುದರಿಂದಲೇ ಕವಿಸಮ್ಮೇಳನಗಳಲ್ಲಿ ಶ್ಲಾಘಿತವಾದ ಯಾವ ಕವನವೂ ಅಚ್ಚಿನಲ್ಲಿ ಬಂದು ಶಾಂತರೀತಿಯಲ್ಲಿ ಓದಿದಾಗ ಗೌರವವನ್ನು ಪಡೆಯುವುದಿಲ್ಲ.

ಕಾದಂಬರಿಕ್ಷೇತ್ರದಲ್ಲಿ ಹೆಚ್ಚಿನ ಅಭಿವೃದ್ಧಿಯಾಗಿಲ್ಲ. ಆದರೂ ಕಾದಂಬರಿಯು ಬಹು ಜನಪ್ರಿಯವಾಗಿದೆ. ಜನಪ್ರಿಯತೆಯೂ ಯೋಗ್ಯತೆಯೂ ಯಾವಾಗಲೂ ಜೊತೆಯಲ್ಲಿರುವುದಿಲ್ಲವೆಂಬುದಕ್ಕೆ ಗುಜರಾತಿ ಕಾದಂಬರಿಗಳೇ ಸಾಕ್ಷಿ. ಕಳೆದ ತಲೆಮಾರಿನವರಲ್ಲಿ ಮುನ್ಷಿ, ರಮನ್‌ಲಾಲ್ ದೇಸಾಯಿ, ಜವೇರ್‌ಚಂದ್ ಮೇಘಾನಿ, ಗುಣವಂತರಾಯ್ ಆಚಾರ್ಯ, ಧೂಮಕೇತು, ಚೂನೀಲಾಲ್, ವಿ. ಷಾ ಮೊದಲಾದವರೂ ಈಗಿನ ತಲೆಮೊರೆಯವರಲ್ಲಿ ಪನ್ನಾಲಾಲ್ ಪಟೇಲ್, ದರ್ಶಕ್, ಈಶ್ವರ ಪೆಟ್ಲೀಕರ್, ಚುನ್ನೀಲಾಲ್ ಮೆಡಯ, ಸೋಫನ್, ಪೀತಾಂಬರ ಪಟೇಲ್, ಸಾರಂಗ ಬರೋತ್ ಮೊದಲಾದವರೂ ಪ್ರಸಿದ್ಧರು. ಇವರೇ ಅಲ್ಲದೆ ಗುಜರಾತಿನಲ್ಲಿ ಇನ್ನೂ ಅನೇಕ ಕಾದಂಬರಿಕಾರರಿದ್ದಾರೆ. ಇವರೆಲ್ಲ ಬಹು ಜನಪ್ರಿಯರಾಗಿರುವುದಲ್ಲದೆ ಅವರ ಕಾದಂಬರಿಗಳು ಚೆನ್ನಾಗಿ ಮಾರಾಟವಾಗುತ್ತವೆ. ಆದರೂ ಪ್ರಪಂಚದ ಮೌಲ್ಯದ ದೃಷ್ಟಿಯಿಂದ ಅನೇಕವು ಉತ್ತಮ ಮಟ್ಟದವಲ್ಲ. ದೇಸಾಯಿ ಮತ್ತು ಮೇಘಾನಿ ಇವರಿಬ್ಬರೂ ಈಗಾಗಲೇ ಕಳೆದುಹೋಗಿದ್ದಾರೆ. ಮುನ್ಷಿ ಇನ್ನೂ ತಮ್ಮ ಬೆಳವಣಿಗೆಯನ್ನು ಪೂರೈಸಿಲ್ಲ. ಪನ್ನಾಲಾಲ್ ಮತ್ತು ದರ್ಶಕ್ ಕಾದಂಬರಿಗೆ ತಮ್ಮ ಕಾಣಿಕೆಗಳನ್ನು ಸಲ್ಲಿಸಿದ್ದಾರೆ. ಪನ್ನಾಲಾಲ್‌ಗೆ ಹಳ್ಳಿಯ ಪರಿಚಯ ಚೆನ್ನಾಗಿರುವುದರಿಂದ ಅವರ ಕಾದಂಬರಿಗಳಲ್ಲಿ ಅವುಗಳ ಸುಂದರ ಪ್ರತಿಬಿಂಬ ಕಾಣುತ್ತಿವೆ. ಅವರ 'ಮಲೇಲಾ ಜೀವ್' ಮತ್ತು 'ಮಾನ್ವೀ ನೀ-ಭಾವೈ' ಎಂಬುವು ಗುಜರಾತಿ ಸಾಹಿತ್ಯದಲ್ಲಿ ಉತ್ತಮ ಕಾದಂಬರಿಗಳು. ನಗರ ಕ್ಷೇತ್ರಕ್ಕೆ ಕಾಲಿಟ್ಟಾಗ ಮಾತ್ರ ಅವರು ಬಹು ಅಪರಿಚಿತರಂತೆ ಕಾಣುತ್ತಾರೆ. ದರ್ಶಕ್ ಮತ್ತೊಬ್ಬ ಪ್ರಸಿದ್ಧ ಕಾದಂಬರೀಕಾರ, ಬಹುಶ್ರುತ, ಮೇಧಾವಿ, ಸಂಸ್ಕೃತಜ್ಞ, ಕತೆ ಹೇಳುವುದರಲ್ಲಿ ಗಟ್ಟಿಗ; ಆತನಿಗೆ ಪ್ರತ್ಯೇಕ ಜೀವನದರ್ಶನವಿದೆ. ಅದೇ ಅವನ ಕಾದಂಬರಿಯ ಮೇಲ್ಮೆಗೆ ಕಾರಣ.

ಐತಿಹಾಸಿಕ ಕಾದಂಬರಿಗಳಲ್ಲಿ ಪ್ರಾಚೀನ ವೈಭವವನ್ನು ವರ್ಣಿಸುವುದೇ

ಮುಖ್ಯಗುರಿ. ಕಳೆದ ಶತಮಾನದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಅಂಗವಾಗಿ ಪ್ರಾಚೀನ ಸನ್ನಿವೇಶಗಳನ್ನು ಕುರಿತು ಅವುಗಳ ವೈಭವನಿರೂಪಣಾತ್ಮಕವಾದ ಕಾದಂಬರಿಗಳನ್ನು ರಚಿಸುವುದು ರೂಢಿಗೆ ಬಂದಿತು. ಅದಕ್ಕನುಗುಣವಾಗಿ ಮೇಘಾನಿ ಮೊದಲಾದವರೆಲ್ಲರೂ ಹಿಂದಿನದೆಲ್ಲಾ ಪರಮೋತ್ತಮವಾದುದೆಂದೂ ಸರ್ವಶ್ರೇಷ್ಠ ವೆಂದೂ ವರ್ಣಿಸಿದರು. ಮುನ್ಷಿ ಮೊದಲಾದವರೆಲ್ಲ ಇಂದಿನ ಒಳ್ಳೆಯದಕ್ಕೆಲ್ಲ ಹಿಂದಿನವೇ ಪ್ರೇರಕಗಳೆಂದು ಬರೆದರು. ಧೂಮಕೇತುವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ವಿಶೇಷ ಉತ್ಸಾಹದಲ್ಲಿ ಪ್ರಾಚೀನ ಸನ್ನಿವೇಶಗಳಲ್ಲಿ ಉತ್ತಮವಲ್ಲ ದ್ದನ್ನೂ ಉತ್ತಮವೆಂದು ವರ್ಣಿಸಿದನು. ಹಿಂದಿನ ವಾಸ್ತವ ಜೀವನದ ಚಿತ್ರವನ್ನು ಕೊಟ್ಟವರು ಬಹುವಿರಳ. ಇದಕ್ಕೆ ನೇರ ವಿರೋಧವಾಗಿ ಗುಜರಾತಿ ಕಾದಂಬರಿ ಕಾರನು ಆಧುನಿಕವಾದುದನ್ನೆಲ್ಲಾ ವಿಮರ್ಶಾತ್ಮಕ ದೃಷ್ಟಿಯಿಂದಲೇ ನೋಡುತ್ತಾನೆ. ಅದು ಅವನಿಗೆ ಪೆಚ್ಚಾಗಿ ಕಾಣುತ್ತದೆ; ನೀಚವಾಗಿ ಕಾಣುತ್ತದೆ. ಸಣ್ಣದಾಗಿ ಕಾಣು ತ್ತದೆ. ಉತ್ಸಾಹರಹಿತವಾಗಿದೆ; ಧರ್ಮ ದೂರವಾಗಿದೆ, ಗಾಂಭೀರ್ಯರಹಿತವಾಗಿದೆ. ಇದನ್ನೆಲ್ಲಾ ಸರಿಪಡಿಸುವುದಕ್ಕೆ ಅವನು ತನ್ನ ದೃಷ್ಟಿಯನ್ನು ಹಿಂದಕ್ಕೆ ಬೀರುತ್ತಾನೆ. ವಾಸ್ತವವಾಗಿ ನೋಡುವುದಾದರೆ ಇದು ನಿಜವಲ್ಲ. ಆಧುನಿಕ ಗುಜರಾತ್ ಅಷ್ಟು ನಿರುತ್ಸಾಹಕರವಲ್ಲ. ೧೯ಗಳಲ್ಲಿ ಗಾಂಧೀಜಿ ಅಲ್ಲಿಗೆ ಬಂದು ನೆಲಸಿದ ಮೇಲೆ ಎಲ್ಲವೂ ಚೈತನ್ಯಮಯವಾಗಿ ಅಲ್ಲಿಯ ಸನ್ನಿವೇಶ ಸಂಪೂರ್ಣವಾಗಿ ಬದಲಾಯಿಸಿದೆ. ಸಾಹಿತ್ಯ ಸಂಸ್ಕೃತಿಯಲ್ಲಿ, ಧೈರ್ಯೋತ್ಸಾಹಗಳಲ್ಲಿ, ತ್ಯಾಗವೀರ್ಯದಲ್ಲಿ ಇಂದಿನ ಗುಜರಾತ್ ಹಿಂದೇನಾಗಿಲ್ಲ. ಆದುದರಿಂದ ಗುಜರಾತಿ ಕಾದಂಬರಿಕಾರರು ಚಿತ್ರಿಸಿರುವ ಸ್ಥಿತಿ ಅವನ ಆದರ್ಶಮನೋಭಾವದ ಪರಿಣಾಮ ಮಾತ್ರವೆಂದು ಹೇಳಬಹುದು.

ಕಾದಂಬರಿಗಿಂತ ಇತ್ತೀಚಿನ ಕಾಲದಲ್ಲಿ ಜನಿಸಿದ್ದರೂ ಸಣ್ಣಕತೆ ಗುಜರಾತಿನಲ್ಲಿ ಬಹು ದೃಢವಾಗಿ ಬೇರೂರಿದೆ. ಕಾದಂಬರಿಯೊಂದನ್ನು ಬಿಟ್ಟು ಉಳಿದ ಎಲ್ಲ ಸಾಹಿತ್ಯ ಪ್ರಕಾರಕ್ಕಿಂತ ಇದು ವಾಚಕ ಲೇಖಕರಿಬ್ಬರಿಗೂ ಪ್ರಿಯವಾಗಿದೆ. ಹಳಬರಲ್ಲಿ ಧೂಮ ಕೇತುವು ಈಗೀಗ ಕಾದಂಬರಿಯ ಲೇಖನದ ಕಡೆ ತಿರುಗಿದ್ದಾನೆ. ಆತನ ಸಣ್ಣ ಕತೆಗಳು ಆತನ 'ಟಂಖ'ದ ಎರಡು ಭಾಗಕ್ಕಿಂತ ಹೆಚ್ಚಿನ ಗೌರವವನ್ನು ತರತಕ್ಕು ದಾಗಿಲ್ಲ. ಝುವೇರ್ ಚಂದ್ ಮೇಘಾನಿ ಮತ್ತು ರಾಮನಾರಾಯಣ ಪಾಠಕ್ (ದ್ವಿರೇಫ್) ಈಗ ಇಲ್ಲವಾಗಿದ್ದಾರೆ. ಮುನ್ಷಿ, ಧನಸುಖಲಾಲ್ ಮೆಹ್ತಾ, ಉಮಾ ಶಂಕರ್ ಜೋಷಿ ಇವರು ಸಣ್ಣಕತೆಗಳನ್ನು ಬರೆಯುತ್ತಲೇ ಇಲ್ಲ. ಉಳಿದವರಲ್ಲಿ ಗುಲಾಬ್ ದಾಸ್ ಬ್ರೋಕರ್, ಪನ್ನಾಲಾಲ್ ಪಟೇಲ್ ಪ್ರಸಿದ್ಧರು. ಒಬ್ಬನು ಮಾನವ ಜೀವನದ ಅದ್ಭುತ ಚಿತ್ರವನ್ನೂ ಇನ್ನೊಬ್ಬನು ಗ್ರಾಮಾಂತರ ಜೀವನದ ಜೀವಂತ ವರ್ಣನೆಗಳನ್ನೂ ಕೊಡುತ್ತಿದ್ದಾರೆ. ಕಿರಿಯ ಕತೆಗಾರರಲ್ಲಿ ಜಯಂತಿ ದಲಾಲ್, ವಿನೋದಿನೀ ನೀಲಕಂಠ್, ಈಶ್ವರ ಪೆಟ್ಲೀಕರ್, ಚೂನೀಲಾಲ್ ಮೆಡಯ, ಕಿಸನ್ ಸಿನ್ಹ ಚವುಡ ಪ್ರಸಿದ್ಧರು. ಹಾಗೆಯೇ ಕೇತನ್ ಮುನ್ಷಿ, ವೇಣಿಭಾಯ್ ಪುರೋ

ಹಿತ್, ರಮಣಲಾಲ್ ಪಾಠಕ್, ಶಿಶುಕುಮಾರ ಜೋಷಿ ಇವರನ್ನು ಮರೆಯಲಾಗುವುದಿಲ್ಲ.

ಸಣ್ಣ ಕತೆಯ ತಂತ್ರವನ್ನೇ ಅನುಸರಿಸಿ ಗುಜರಾತಿಯಲ್ಲಿ ಬೇರೊಂದು ರೀತಿಯ ಕಥಾಸಾಹಿತ್ಯವು ಬೆಳೆದುಬಂದಿದೆ. ವಾಸ್ತವ ಜೀವನದ ಪರಮೋತ್ತಮ ಭಾಗವನ್ನು ನಾಟಕೀಯವಾಗಿ ಪ್ರದರ್ಶಿಸುವುದು ಇದರ ಪರಮಧ್ಯೇಯ. ಝುವೇರ್‌ಚಂದ್ ಮೇಘಾನಿ, ಕಿಸನ್ ಸಿನ್ಹಚವುಡ. ಗುಲಾಬ್‌ದಾಸ್ ಬ್ರೋಕರ್, ಜಿ. ವಿ. ಮಾವ್ ಲಂಕರ್ ಮೊದಲಾದವರು ರಚಿಸಿರುವ ಇಂತಹ ಕತೆಗಳು ಮಾನವಸ್ವಭಾವದ ಬಹು ಸುಂದರ ಭಾಗವನ್ನು ಪ್ರದರ್ಶಿಸುತ್ತವೆ.

ಸಾಮಾನ್ಯವಾಗಿ ಸಣ್ಣ ಕತೆಗಳಿಗೆ ಬಡತನ, ಅಜ್ಞಾನ, ಅಸೂಯೆ, ಲೈಂಗಿಕ ದೌರ್ಬಲ್ಯ, ಮೊದಲಾದುವುಗಳೇ ವಸ್ತುಗಳಾಗಿರುತ್ತವೆ. ಪ್ರವಾಸ, ಮೃಗಯಾ ಮತ್ತು ನೂತನ ಉದ್ಯಮಗಳ ವಿಷಯಕವಾದವೂ ಕೆಲವು ಇವೆ. ಆದರೆ ಆಧುನಿಕ ಯುಗಕ್ಕೆ ಬಹು ನಿಕಟವಾಗಿ ಸಂಬಂಧಪಟ್ಟ ೧೯೪೨ರ ರಾಜಕೀಯ ಚಳುವಳಿ, ವಂಗದಕ್ಷಾಮ, ಸ್ವಾತಂತ್ರ್ಯಸಮರ, ದೇಶದ ವಿಭಾಗ ಮತ್ತು ಅದರ ಪರಿಣಾಮ, ಪಂಚವಾರ್ಷಿಕ ಯೋಜನೆ, ದೇಶದ ಪುನರ್ರಚನೆ, ದ್ವಿತೀಯ ಮಹಾಯುದ್ಧದ ಘೋರ ಪ್ರಭಾವ ಇವು ಯಾವುವೂ ಈ ಕತೆಗಾರರ ಗಮನವನ್ನು ಅಷ್ಟಾಗಿ ಸೆಳೆದಿಲ್ಲ. ಮೊದಲಿಂದಲೂ ಗುಜರಾತಿಗಳು ಬಹಳ ಉತ್ಸಾಹಶಾಲಿಗಳು, ಕಾರ್ಯತತ್ಪರರು. ಪ್ರಾಚೀನ ಕಾಲದಿಂದ ಅವರು ಪ್ರಪಂಚದಲ್ಲಿ ಬಹುದೂರ ಸಂಚಾರಮಾಡಿ ಹೊರಗಡೆ ನೆಲಸಿಯೂ ಇದ್ದಾರೆ. ಬಹು ಭಯಂಕರವೂ ಅಪಾಯಕರವೂ ಆದ ಸನ್ನಿವೇಶಗಳಲ್ಲಿ ನಿರ್ಭಯವಾಗಿ ದುಡಿದಿದ್ದಾರೆ. ಯಾವ ರಾಜಕೀಯ ರಕ್ಷಣೆಯೂ ಇಲ್ಲದೆ ಸ್ವತಂತ್ರವಾಗಿ ವ್ಯಾಪಾರ ನಡಸಿ ವಿವಿಧ ಜನಾಂಗಗಳೊಡನೆ ಸ್ನೇಹ ಬೆಳಸಿ ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಂಡಿದ್ದಾರೆ. ಇಂತಹ ವಿಷಯವಾಗಿ ಯಾವ ಕತೆಯೂ ಇನ್ನೂ ಹುಟ್ಟಿಲ್ಲ.

ಗುಜರಾತಿ ನಾಟಕಗಳೂ ಕಾದಂಬರಿ ಮತ್ತು ಸಣ್ಣ ಕತೆಗಳಂತೆಯೇ ಬ್ರಿಟಿಷರ ಪ್ರಭಾವದಿಂದ ಉತ್ಪನ್ನವಾದುವು. ಪ್ರಾರಂಭದಿಂದಲೂ ಈ ನಾಟಕಗಳು ಇಂಗ್ಲಿಷ್ ಮತ್ತು ಸಂಸ್ಕೃತ ನಾಟಕ ತತ್ವಗಳ ಮಿಶ್ರಣದಿಂದ ಬೆಳೆದುಬಂದಿದೆ. ಅದರಲ್ಲಿಯೂ ಇಂಗ್ಲಿಷಿನ ಪ್ರಭಾವವೇ ಹೆಚ್ಚು; ಷೇಕ್ಸ್‌ಪಿಯರನ ನಾಟಕಗಳೇ ಮಾದರಿ. ಕೆಲವು ವರ್ಷಗಳ ಕಾಲ ಕೆಲವು ಸುಪ್ರಸಿದ್ಧರು ರಂಗಸ್ಥಳಕ್ಕಾಗಿಯೇ ನಾಟಕರಚನೆಮಾಡಲು ತೊಡಗಿದರು. ಕೆಲವು ವರ್ಷಗಳಾದ ಮೇಲೆ ಈ ನಾಟಕಗಳಿಗೂ ಕಾವ್ಯಗುಣಪೂರ್ಣವಾದ ನಾಟಕಗಳಿಗೂ ಸಂಬಂಧವಿಲ್ಲದಾಯಿತು. ಪಂಡಿತರೂ ಸಂಸ್ಕೃತಜ್ಞರೂ ರಂಗಸ್ಥಳ ನಾಟಕಗಳ ಕಡೆ ಕಣ್ಣೆತ್ತಿಯೂ ನೋಡಲಿಲ್ಲ. ಈ ನಾಟಕಕರ್ತರಿಗೆ ಸಾಹಿತ್ಯಾಭಿರುಚಿಯಿಲ್ಲದುದೇ ಇದಕ್ಕೆ ಕಾರಣ. ಆದುದರಿಂದ ಈಗ ಕೆಲವು ವರ್ಷಗಳ ಹಿಂದೆ ನಾಟಕಾಭಿನಯವನ್ನೇ ವೃತ್ತಿಯನ್ನಾಗಿ ಉಳ್ಳ

ಕೆಲವು ನಟರಿಂದಲೇ ಸಾಹಿತ್ಯದೃಷ್ಟಿಯಿಂದ ಉತ್ತಮವೆನಿಸಿದ ನಾಟಕಗಳು ಅಭಿನಯಿಸಲ್ಪಟ್ಟವು. ಆದರೂ ಅವೂ ಅಷ್ಟು ಆಕರ್ಷಕವಾಗಲಿಲ್ಲ. ಸಾಹಿತ್ಯವೂ ರಂಗಸ್ಥಳವೂ ಪ್ರತ್ಯೇಕವಾಗಿಯೇ ಉಳಿದುವು. ಕಾಲ ಉರುಳಿದಂತೆಲ್ಲ ಸನ್ನಿವೇಶ ವ್ಯತ್ಯಾಸವಾಯಿತು. ಚಲನಚಿತ್ರದ ಹಾವಳಿಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ ವೃತ್ತಿಕಾರ ನಟರೇ ಸಮಯಕ್ಕೆ ತಕ್ಕಂತೆ ತಮ್ಮ ತಂತ್ರವನ್ನು ಮಾರ್ಪಡಿಸಿಕೊಂಡರು. ತಾತ್ಕಾಲಿಕ ಆಸಕ್ತಿಯುಳ್ಳ ನಾಟಕಗಳು ರಚಿತವಾದುವು. ಸ್ತ್ರೀಯರೂ ಬಲಾತ್ಕಾರ ವಾಗಿ ನಟವರ್ಗದಲ್ಲಿ ಅಳವಡಿಸಲ್ಪಟ್ಟರು. ಸಂಗೀತ ಮತ್ತು ನೃತ್ಯಗಳೂ ಅಲ್ಲಲ್ಲಿ ಸೇರಿಕೊಂಡವು. ಕೆಲವು ನಾಟಕಸಂಸ್ಥೆಗಳು ಒಂದು ದೀರ್ಘವಾದ ನಾಟಕವನ್ನು ಅಭಿನಯಿಸುವ ಬದಲು ಎರಡು ಮೂರು ಏಕಾಂಕನಾಟಕಗಳನ್ನು ಪ್ರದರ್ಶಿಸಲು ಮೊದಲುಮಾಡಿದರು. ಅದು ಅವರ ಪೋಷಕರಿಗೆ ತೃಪ್ತಿಕರವಾಗಲಿಲ್ಲ. ಅದಕ್ಕಾಗಿ ಅವರು ತಮ್ಮ ಹಿಂದಿನ ಹಾದಿಯನ್ನೇ ಹಿಡಿದಿದ್ದಾರೆ. ೧೯೧೪ರಿಂದ ಮುಂದೆ ಅದನ್ನೇ ವೃತ್ತಿಯನ್ನಾಗಿ ಉಳ್ಳ ಅನೇಕ ಖಾಸಗಿ ನಾಟಕ ಸಂಸ್ಥೆಗಳು ಸ್ಥಾಪಿತ ವಾದುವು. ಚಂದ್ರವದನ ಮೆಹ್ತ ಮತ್ತು ಮುನ್ಷಿ ಇವರಿಬ್ಬರೂ ಇವನ್ನು ಜನ ಪ್ರಿಯವನ್ನಾಗಿ ಮಾಡುವುದಕ್ಕೆ ಬಹು ಶ್ರಮಿಸಿದರು. ಆದರೂ ಅವರು ಸಾಮಾನ್ಯ ಜನಮಟ್ಟಕ್ಕಿಂತ ಹೆಚ್ಚು ಮೇಲೇರಲು ಸಾಧ್ಯವಾಗಲಿಲ್ಲ. ಈ ಮಧ್ಯೆ ಖಾಸಗಿ ರಂಗಸ್ಥಳಗಳು ಸ್ವಲ್ಪ ಶಕ್ತಿಗೂಡಿಕೊಂಡವು. ಅಹಮ್ಮದಾಬಾದ್, ಬರೋಡ, ಮತ್ತು ರಾಜಕೋಟೆಗಳಲ್ಲಿ ಬಹು ಉತ್ಸಾಹದಿಂದ ನಾಟಕಪ್ರದರ್ಶನಗಳಾದುವು. ನಾಟಕತಂತ್ರದಲ್ಲಿಯೂ ರಚನೆಯಲ್ಲಿಯೂ ಗಟ್ಟಿಗರಾದ ಅನೇಕರು ಒಟ್ಟುಗೂಡಿ ದರು. ಪ್ರಹಸನಗಳೂ ವಿಡಂಬನಗಳೇ ಅಲ್ಲದೆ ವಿವಿಧ ರೂಪಕಗಳನ್ನೂ ರಚಿಸಿ ಪ್ರದರ್ಶಿಸಿದರು. ಆಂಗ್ಲ ಮತ್ತು ವಂಗನಾಟಕಗಳ ಅನುವಾದ ಮತ್ತು ಅಳವಡಿಕೆ ಗಳಿಗೆ ವಿಶೇಷ ಪ್ರೋತ್ಸಾಹ ದೊರೆಯಿತು. ಈ ಸ್ವತಂತ್ರಸಂಸ್ಥೆಗಳ ವ್ಯಕ್ತಿತ್ವ ನಿಲ್ಲಲು ಸಾಧ್ಯವಾಯಿತು. ಈ ಕ್ಷೇತ್ರದಲ್ಲಿ ನಡೆದ ಅಭಿವೃದ್ಧಿ ಆಶ್ಚರ್ಯಕರವಾಗಿದೆ. ಅಭಿನಯ ಕೌಶಲ್ಯ ಉಚ್ಚಮಟ್ಟಕ್ಕೇರಿದೆ. ರಂಗಪರಿಷ್ಕರಣವೂ ಬಹು ಸುಪುಷ್ಟ ವಾಗಿದೆ. ಪ್ರೇಕ್ಷಕರು ಸುಸಂಸ್ಕೃತರಾಗಿ ಪಕ್ಷಪಾತವಿಲ್ಲದ ಶುದ್ಧಚಿತ್ತದಿಂದ ಕೂಡಿ ರಸಪಕ್ಷಪಾತಿಗಳಾಗಿದ್ದಾರೆ. ಯೋಗ್ಯವಾದ ನಾಟಕಕೃತಿಗಳಿಲ್ಲದಿರುವುದೇ ದೊಡ್ಡ ಕೊರತೆ. ಶಾಲಾಕಾಲೇಜುಗಳು ಬಹು ಸಾಮಾನ್ಯವಾದ ಪ್ರಹಸನಗಳನ್ನೋ ವಿಡಂಬನಗಳನ್ನೋ ಪ್ರದರ್ಶಿಸುವುದರಲ್ಲಿಯೇ ತೃಪ್ತಿಗೊಳ್ಳುತ್ತಿವೆ. ಇತರ ಸಂಸ್ಥೆ ಗಳು ಪರಭಾಷೆಯ ಭಾಷಾಂತರಗಳನ್ನೂ ಅಳವಡಿಕೆಗಳನ್ನೂ ಆರಿಸುವುದರಲ್ಲಿ ನಿರತ ವಾಗಿವೆ. ಭಾಷಾಂತರಗಳೂ ಅನ್ಯಭಾಷೆಗಳ ಪರಮೋಚ್ಚಕೃತಿಗಳ ಅನುವಾದ ಗಳಲ್ಲ. ಗುಜರಾತಿನ ಕಲಾಭಿಜ್ಞ ನಟನ ಶಕ್ತಿಪ್ರದರ್ಶನಕ್ಕೆ ಉತ್ತಮ ನಾಟಕಗಳ ಆವಶ್ಯಕತೆ ಬಹಳವಾಗಿದೆ. ಕಾವ್ಯನಾಟಕಗಳಲ್ಲಂತೂ ಪೂರ್ಣನಾಟಕಗಳ ರಚನೆ ಸಂಪೂರ್ಣವಾಗಿ ನಿಂತುಹೋಗಿದೆ. ೧೯೧೪ರಲ್ಲಿ 'ರಾಯ್-ನೋ-ಪರ್ವತ್' ಎಂಬ

ನಾಟಕ ರಚನೆಯಾದ ಮೇಲೆ ಇಲ್ಲಿಯವರೆಗೆ ಗುಜರಾತಿ ಭಾಷೆಯಲ್ಲಿ ಸಾಹಿತ್ಯಗುಣ ದಿಂದಕೂಡಿದ ಒಂದು ನಾಟಕವೂ ರಚಿತವಾಗಿಲ್ಲ. ನಾನಾಲಾಲ್ ಪ್ರಾರಂಭಮಾಡಿದ ಗೀತನಾಟಕಗಳೂ ಗುಜರಾತಿ ಕ್ಷೇತ್ರಕ್ಕೆ ಹೊಂದಿಕೊಂಡಿಲ್ಲ. ಪದ್ಯನಾಟಕಗಳ ರಚನೆಯಲ್ಲಿಯೂ ಪ್ರಯತ್ನ ನಡೆದಿದೆ. ಹೆಚ್ಚು ಯಶಸ್ವಿಯಾಗಿಲ್ಲ. ಏಕಾಂಕ ನಾಟಕಗಳು ಮಾತ್ರ ನಿಷ್ಕೃಷ್ಟವಾದ ಪ್ರಗತಿಪಥದಲ್ಲಿ ನಡೆದಿವೆ. ಬಾತುಬಾಯ್ ಉಮರ್‌ವಾಡಿಯ, ಯಶವಂತಪಾಂಡ್ಯ, ಪ್ರಾಣಜೀವನ ಪಾಠಕ್ ಮೊದಲಾದವರು ಈ ರೀತಿಯ ನಾಟಕರೂಪವನ್ನು ಪ್ರಾರಂಭಿಸಿದ ದಿನದಿಂದ ಇದರ ಅಭಿವೃದ್ಧಿ ಈಗ ಉಚ್ಚಮಟ್ಟಕ್ಕೇರಿದೆ. ವಿಷಯ ಮತ್ತು ರೀತಿಗಳಲ್ಲಿ, ಈ ಕ್ಷೇತ್ರದಲ್ಲಿ ವಿಶೇಷ ವೈವಿಧ್ಯವಿದೆ. ಉಮಾಶಂಕರ್ ಜೋಷಿ ಗ್ರಾಮಜೀವನದ ವಿವಿಧ ಮುಖಗಳನ್ನು ಚಿತ್ರಿಸಿದ್ದಾರೆ. ತಮ್ಮ 'ಷಹೀದ್ ಆನೆ ಬೀಜನ ನಾಟಕೊ'ದಲ್ಲಿ ಈಗಿನ ನಾಗರಿಕತೆಯ ವೈರೂಪ್ಯವನ್ನೂ ಆಡಂಬರವನ್ನೂ ಕಾಪಟ್ಯವನ್ನೂ ವ್ಯಕ್ತಪಡಿಸಿದ್ದಾರೆ. ಗುಲಾಬ್‌ದಾಸ್ ಬ್ರೋಕರ್ ಮಾನವನ ಮನಸ್ಸಿನ ಅದ್ಭುತಪರಿವರ್ತನೆಗಳನ್ನು ವಿಶದಪಡಿಸಿದ್ದಾರೆ. ಜಯಂತಿದಲಾಲರು ತಮಗೇ ಸಹಜವಾದ ವ್ಯಂಗ್ಯರೀತಿಯಲ್ಲಿ ಆಧುನಿಕ ಕಾಲದ ಸಾಮಾಜಿಕ ಮತ್ತು ರಾಜಕೀಯ ಪದ್ಧತಿಗಳ ಅಸಾರತೆಯನ್ನು ಹೊರಗೆಡವಿದ್ದಾರೆ. ಚೂನಿಲಾಲ್ ಮೆಡಿಯರು ತಮ್ಮ ಭಾಷಾವೈಖರಿಯಿಂದ ಪ್ರೇಕ್ಷಕರನ್ನೂ—ವಾಚಕರನ್ನೂ ಕೆಲವು ಸಲ ಆದರ್ಶ ಪ್ರಪಂಚಕ್ಕೂ ಕೆಲವು ಸಲ ನಗ್ನವಾದ ವಾಸ್ತವ ಪ್ರಪಂಚಕ್ಕೂ ತೇಲಾಡಿಸುತ್ತಾರೆ. ಈ ಎಲ್ಲ ಏಕಾಂಕನಾಟಕಗಳಲ್ಲಿಯೂ ಹಾಸ್ಯ ಕರುಣರಸಗಳೂ ತಮ್ಮ ವಿವಿಧ ಮುಖಗಳಲ್ಲಿ ತಾಂಡವವಾಡುತ್ತವೆ.

ಸ್ವಾತಂತ್ರ್ಯೋತ್ತರ ಯುಗದಲ್ಲಿ ಎಲ್ಲ ಪ್ರಸಿದ್ಧಪುರುಷರೂ ತಮ್ಮ ಆತ್ಮಕತೆಗಳನ್ನು ರಚಿಸಿದ್ದಾರೆ. ಮುನ್ಷಿ, ರಮಣಲಾಲ್, ಧೂಮಕೇತು, ಧನಸುಖಲಾಲ್ ಮೆಹ್ತ ಮೊದಲಾದವರು ತಮ್ಮ ಆತ್ಮಕತೆಯನ್ನು ಸಂಪೂರ್ಣವಾಗಿ ಬರೆದಿದ್ದಾರೆ. ಚಂದ್ರವದನ ಮೆಹ್ತ ಮತ್ತು ಚಂಪ್ಷಿ ಉದ್ದೇಷಿ ಇವರಿಬ್ಬರೂ ಸ್ವಲ್ಪಮಟ್ಟಿಗೆ ತಮ್ಮ ವಿಷಯಗಳನ್ನು ತಿಳಿಸಿದ್ದಾರೆ. ಇವುಗಳಲ್ಲಿ ಕೆಲವು ವಿಷಯಪೂರ್ಣತೆಯಿಂದಲೂ ಕೆಲವು ರೀತಿ ಸೌಷ್ಠವದಿಂದಲೂ ಆಕರ್ಷಕವೂ ಉದ್ಬೋಧಕವೂ ಆಗಿವೆ. ಇವುಗಳಲ್ಲೆಲ್ಲಾ ನಾನಾ ಭಾಯ್‌ಭಟ್, ಇಂದುಲಾಲ್ ಯಾಜ್ಞಿಕ್, ಮತ್ತು ಪ್ರಭುದಾಸ ಗಾಂಧಿ ಇವರ ಆತ್ಮಕತೆಗಳು ಶ್ರೇಷ್ಠವಾದುವು. ನಾನಾಭಾಯ್ ಭಟ್ಟರ "ಚಂತರ್ ಆನೆ ಗಂತರ್," ಒಂದು ಕೃತಿರತ್ನ. ಸರಳತೆ, ಋಜುತ್ವ ಮತ್ತು ಪ್ರಾಮಾಣಿಕತೆ ಅದರ ಅಮೋಘಗುಣಗಳು. ಇಂದುಲಾಲರ ಆತ್ಮಕತೆಯಲ್ಲಿ ಗುಜರಾತಿನ ೧೯೦೨ ರಿಂದ ೧೯೨೨ರ ವರೆಗಿನ ಸ್ಥಿತಿಯ ಸ್ಪಷ್ಟ ಚಿತ್ರಣವಿದೆ. ಇಂದುಲಾಲರು ಆ ಕಾಲದ ಎಲ್ಲ ಕ್ಷೇತ್ರಗಳಲ್ಲಿಯೂ ನೇರವಾದ ಸಂಬಂಧ ಪಡೆದುದರಿಂದ ಇಂತಹ ಕೃತಿಯನ್ನು ರಚಿಸಲು ತಕ್ಕ ಯೋಗ್ಯತೆಯನ್ನು ಪಡೆದಿದ್ದರು. ಅವರ ಕೆಲವು ಸವಿನೆನಪುಗಳು

ಅದ್ಭುತವಾದ ಆತ್ಮವಿಶ್ಲೇಷಣದ ಮಾದರಿಯಾಗಿವೆ. ಪ್ರಭುದಾಸ ಗಾಂಧಿಯ ವರದು ಮೂರರಲ್ಲಿ ಸರ್ವಶ್ರೇಷ್ಠವಾದುದು. 'ಜೀವನ್-ನನ್-ಪರೋಢ್' ಅವರ ಆತ್ಮಕತೆ. ಅದರಲ್ಲಿ ಗ್ರಂಥಕರ್ತರ ಬೆಳವಣಿಗೆಯ ಒಂದೊಂದು ಮೆಟ್ಟಲನ್ನೂ ಕಾಣುವುದಲ್ಲದೆ ಗಾಂಧೀಜಿಯವರ ಸತ್ಯ ಮತ್ತು ಅಹಿಂಸಾ ತತ್ವಗಳ ಪ್ರಯೋಗ ಪರಿಚಯವುಂಟಾಗುತ್ತದೆ. ಸ್ವವಿಷಯದಲ್ಲಿ ಅವರು ನೈಚ್ಯಾನುಸಂಧಾನ ಮಾಡಿ ಕೊಂಡಿದ್ದರೂ ಅವರ ಪ್ರಕೃತಿ ವರ್ಣನೆಗಳೂ ಮಾನವೀಯ ಹೃದಯದ ಪರಿಚಯವೂ ಉತ್ತಮಕೃತಿಕಾರನ ಗೌರವವನ್ನು ತರತಕ್ಕದ್ದಾಗಿದೆ. ಗಾಂಧೀಜಿ ಮೊದಲಾದವರ ಜೀವನ ಚರಿತ್ರೆಗಳೂ ಉಚ್ಚಮಟ್ಟದಲ್ಲಿ ರಚಿತವಾಗಿವೆ. ಅವುಗಳಲ್ಲಿ ನರಹರಿಪರೀಖಕೃತ 'ಸರದಾರ್ ವಲ್ಲಭಬಾಯ್ ಪಟೇಲ್' ಕಾಂತಿಲಾಲರ 'ತಕ್ಕರಬಾಪ' ಬಾಬಲ್‌ಬಾಯ್ ಮೆಹ್ತಕೃತ 'ರವಿಶಂಕರ ಮಹರಾಜ್' ಶ್ಲಾಘ್ಯ ವಾದುವು. ದಿನಚರಿಗಳೂ ಪ್ರಸಕ್ತ ಸಾಹಿತ್ಯದ ಒಂದು ಭಾಗ. ನರಸಿಂಹರಾವ್ ದಿವೇಟಿಯರ ದಿನಚರಿಯು ವಿಧಿಯ ಕೈವಾಡದ ವಿದುರು ಮನುಷ್ಯಪ್ರಯತ್ನಗಳ ರೀತಿಯನ್ನು ಚಿತ್ರಿಸುತ್ತದೆ. ಮನುಬೆನ್ ಗಾಂಧಿಯು 'ಆಗಾಖಾನ್ ಅರಮನೆ ಯಲ್ಲಿ ಮತ್ತು ನೌಕಾಲಿಯಲ್ಲಿ' ಎಂಬ ಗ್ರಂಥದಲ್ಲಿ ಗಾಂಧೀಜಿಯವರ ದಿನಂಪ್ರತಿ ಚರ್ಯೆಯನ್ನು ವಿವರವಾಗಿ ನಿರೂಪಿಸಿದ್ದಾಳೆ. ಇವುಗಳಲ್ಲೆಲ್ಲಾ 'ಮಹದೇವ್ ಬಾಯ್‌ನೀ ಡೈರಿ' ಉತ್ತಮೋತ್ತಮವಾದುದು. ಇದು ಅಯ್ದು ಭಾಗಗಳಲ್ಲಿವೆ. ಇಲ್ಲಿ ಗಾಂಧೀಜಿ, ಸರ್ದಾರ್‌ಪಟೇಲ್ ಮತ್ತು ಮಹದೇವ ಬಾಬುರವರ ವ್ಯಕ್ತಿತ್ವ ವಿಶದವಾಗಿವೆ.

ಗುಜರಾತಿಯಲ್ಲಿ ವೈಯಕ್ತಿಕ ಪ್ರಬಂಧಗಳು ವಿಶೇಷವಾಗಿ ಬೆಳೆಯದಿದ್ದರೂ ಹಾಸ್ಯಪ್ರಬಂಧಗಳು ಯಥೋಚಿತವಾಗಿ ಬೆಳೆದಿವೆ. ಜ್ಯೋತೀಂದ್ರದೇವ್, ಬಕುಳ ತ್ರಿಪಾಠಿ, ನವನೀತ ಸೇವಕ್ ಇವರು ಇಂದಿನ ಗುಜರಾತಿ ಸಾಹಿತ್ಯದಲ್ಲಿ ಹಾಸ್ಯ ಪ್ರಬಂಧಕಾರರು. ಜ್ಯೋತೀಂದ್ರರು ಯಾವ ಸನ್ನಿವೇಶದಲ್ಲಿಯಾದರೂ ಯಾವ ವ್ಯಕ್ತಿಯಿಂದಲಾದರೂ ಉತ್ತಮ ಹಾಸ್ಯವನ್ನು ಪ್ರದರ್ಶನಮಾಡಬಲ್ಲರು. ತ್ರಿಪಾಠಿಯ ಹಾಸ್ಯದಲ್ಲಿ ನವೀನತೆಯಿದೆ. ನವನೀತರ 'ಸಪ್ತತಂತ್ರನೀ ವತೊ' ಒಂದು ಅದ್ಭುತ ವ್ಯಂಗ್ಯಚಿತ್ರ.

ಪತ್ರಿಕೆಗಳು ಗುಜರಾತಿ ಸಾಹಿತ್ಯಕ್ಕೆ ಅಮೋಘ ಸೇವೆ ಸಲ್ಲಿಸಿವೆ. ಸಲ್ಲಿಸುತ್ತಿವೆ. ಪ್ರತಿದಿನ, ವಾರ, ಮಾಸಿಕ, ತ್ರೈಮಾಸಿಕ, ಷಾಣ್ಮಾಸಿಕ ಪತ್ರಿಕೆಗಳಲ್ಲಿಯೂ ಸಾಹಿತ್ಯವಿಮರ್ಶೆ ಮತ್ತು ಕಾವ್ಯಾವಲೋಕನಗಳಿಗೆ ಯೋಗ್ಯಸ್ಥಾನ ಮೀಸಲಾಗಿದೆ. ಈಗಿನ ಸಾಹಿತ್ಯವಿಷಯಕವಾದ ಪತ್ರಿಕೆಗಳಲ್ಲಿ 'ಸಂಸ್ಕೃತಿ' ಮತ್ತು 'ಸಾಹಿತ್ಯ ಮಾಸಿಕ' ಬಹು ಉತ್ತಮಮಟ್ಟದುವು. 'ಕುಮಾರ್' ಜನಗಳ ನಡೆನುಡಿಯನ್ನು ತಿದ್ದುವುದರಲ್ಲಿ ಮೂವತ್ತುವರ್ಷಗಳಿಂದ ದುಡಿದು ಒಂದು ಸಂಸ್ಥೆಯೇ ಆಗಿಹೋಗಿದೆ. 'ಅಖಂಡಾನಂದ' ಎಂಬ ಮಾಸಿಕವು ಅಶ್ರುತಪೂರ್ವವಾದ ಚಂದಾದಾರರ ಸಂಖ್ಯೆ

ಯನ್ನು ಹೊಂದಿದೆ. ದಿನಪತ್ರಿಕೆಗಳಲ್ಲಿ 'ಜನ್ಮಭೂಮಿ' ಬಹು ಉತ್ತಮವಾದ ಸೇವೆಯನ್ನು ಸಲ್ಲಿಸಿದೆ.

ಈ ಪತ್ರಿಕೆಗಳಲ್ಲಿಯ ಒಂದು ವೈಶಿಷ್ಟ್ಯವೆಂದರೆ ಆದರಲ್ಲಿ ಪ್ರಕಟವಾಗುತ್ತಿರುವ ವ್ಯಂಗ್ಯಗೀತೆಗಳು. ೧೯೪೨ರಲ್ಲಿ ಪ್ರಾರಂಭವಾದ 'ಬ್ರಿಟಿಷರೇ ಭಾರತವನ್ನು ಬಿಟ್ಟು ಹೊರಡಿ' ಎಂಬ 'ಕ್ವಿಟ್ ಇಂಡಿಯಾ' ಚಳುವಳಿಯೇ ಈ ಗೀತೆಗಳ ಉಗಮಕ್ಕೆ ಪ್ರೇರಕ. ಪತ್ರಿಕೆ ಮತ್ತು ವಾಕ್ಸ್ವಾತಂತ್ರ್ಯಗಳಿಗೆ ಬ್ರಿಟಿಷರು ಹಾಕಿದ್ದ ನಿರ್ಬಂಧದ ಸಲುವಾಗಿ ಸರ್ಕಾರಿ ನೀತಿಗಳನ್ನು ನೇರವಾಗಿ ಖಂಡಿಸಲು ಸಾಧ್ಯವಿರಲಿಲ್ಲ. ಆದುದರಿಂದ ವ್ಯಂಗ್ಯ ಮತ್ತು ವಿಡಂಬನಗಳ ಮೂಲಕ ಹೇಯವಾದುದನ್ನೆಲ್ಲಾ ಹೊರಗೆಡಹಬೇಕಾಯಿತು. ಗುಜರಾತಿನಲ್ಲಿ ಈ ಸಾಧನವನ್ನು ಮೊದಲು ಕಂಡುಹಿಡಿದು ತನ್ನ ಆಖ್ಯಾನಗಳಲ್ಲಿ ಉಪಯೋಗಿಸಿಕೊಂಡವನು ಕರಸಂದಾಸ್ ಮಾಣಿಕ್ ಎಂಬುವನು. ಅತ್ಯಂತ ಹಾಸ್ಯ ಮತ್ತು ವಿಡಂಬನಗಳಿಂದ ಕೂಡಿದ ಆತನ 'ವೈಂಶಪಾಯನ್ ನೀವಾಣಿ'ಯು ಬ್ರಿಟಿಷ್ ಸರ್ಕಾರದ ಸಣ್ಣತನ, ಕಾಪಟ್ಯ, ಮತ್ತು ವಿರೋಧಾಭಾಸಗಳನ್ನು ಕಟುವಾಗಿ ಟೀಕಿಸಿದೆ. ಮಾಣಿಕನನ್ನು ಅನೇಕರು ಅನುಸರಿಸಿದರು. ಇಂದು 'ಜನ್ಮಭೂಮಿ', 'ಗುಜರಾತ್ ಸಮಾಚಾರ್', 'ಸಂದೇಶ್', 'ಲೋಕಸತ್ತ' ಮೊದಲಾದ ಪತ್ರಿಕೆಗಳು ಇಂತಹ ವಿಡಂಬನಗಳನ್ನು ಪ್ರತಿನಿತ್ಯವೂ ಪ್ರಕಟಿಸುವುವು.

ಗುಜರಾತಿಯರೇ ಅಲ್ಲದೆ ಅನೇಕ ಪಾರ್ಸಿಗಳು ಶುದ್ಧವಾದ ಗುಜರಾತಿಯಲ್ಲಿ ಗ್ರಂಥರಚನೆಮಾಡಿ ಆ ಸಾಹಿತ್ಯದ ಬೆಳವಣಿಗೆಗೆ ಕಾರಣಕರ್ತರಾಗಿದ್ದಾರೆ. ಕೆಲವರು ಭಾಷಾಶುದ್ಧತೆಗೆ ಅಷ್ಟು ಗಮನಕೊಡದಿದ್ದರೂ ಗುಜರಾತಿಯಲ್ಲಿ ಕತೆ, ಕವನ, ಕಾದಂಬರಿ, ನಾಟಕ ಮತ್ತು ಪ್ರಬಂಧಗಳನ್ನು ರಚಿಸಿ ವಾಚಕರ ಮೆಚ್ಚಿಗೆಗೆ ಪಾತ್ರರಾಗಿದ್ದಾರೆ.

ಸಮಕಾಲೀನ ಗುಜರಾತೀ ಸಾಹಿತ್ಯಕ್ಕೆ ಸ್ತ್ರೀಯರು ತಮ್ಮ ಕಾಣಿಕೆಯನ್ನು ಸಲ್ಲಿಸದೇ ಇಲ್ಲ. ವಿನೋದಿನೀ ನೀಲಕಂಠ್, ಲಬೂಬೆನ್ ಮೆಹ್ತ, ಕುಂದನಿಕ ಕಪೇಡಿಯಾ, ಧೀರ್‍ಬೇಬೆನ್ ಪಟೇಲ್, ಗೀತಾ ಪರೀಖ್ ಮೊದಲಾದವರು ಪ್ರಖ್ಯಾತರು.

ಆಧುನಿಕ ಗುಜರಾತಿ ಸಾಹಿತ್ಯದಲ್ಲಿ ಬಹು ಭಾಗ ಅನುವಾದಗಳು ಮತ್ತು ಅಳವಡಿಕೆಗಳು. ವಿದೇಶೀಯರಲ್ಲಿ ಷೇಕ್ಸ್‌ಪಿಯರ್, ಇಬ್ಸನ್, ಟಾಲ್‌ಸ್ಟಾಯ್. ವಿಕ್ಟರ್ ಹ್ಯೂಗೊ, ಮೌಪಾಸೆಂಟ್, ಗೋರ್ಕಿ, ಎಮರ್ಸನ್, ಪ್ಲೇಟೊ, ಷಾ ಮೊದಲಾದವರ ಗ್ರಂಥಗಳೂ, ಭಾರತೀಯರಲ್ಲಿ ಟಾಗೂರ್, ಬಂಕಿಂಚಂದ್ರ, ಶರತ್ ಛಟರ್ಜಿ, ಪ್ರೇಮಚಂದ್, ಖಂಡೇಕರ್, ಸಾನೇಗುರೂಜಿ, ಅತ್ರೆ ಮೊದಲಾದವರ ಗ್ರಂಥಗಳೂ ಅನುವಾದಿತವಾಗಿ ಸಾಹಿತ್ಯಭಂಡಾರವನ್ನು ಸುಪುಷ್ಟವನ್ನಾಗಿ ಮಾಡಿವೆ. ಆದರೂ ಟಾಲ್‌ಸ್ಟಾಯ್ ವಿನಾ ಮತ್ತಾವ ಮಹಾಕವಿಯ ಗ್ರಂಥಗಳೂ ಗುಜರಾತಿ ಭಾಷೆಗೆ ಸಂಪೂರ್ಣವಾಗಿ ಭಾಷಾಂತರವಾಗಿಲ್ಲ. ಲೋಕಪ್ರಸಿದ್ಧರೂ

ಅಜರಾಮರರೂ ಆದ ಹೋಮರ್, ವರ್ಜಿಲ್, ಡಾಂಟೆ, ಮಿಲ್ಟನ್, ಗೆಯೆಟೆ ಮೊದಲಾದವರ ಕೃತಿಗಳು ಇನ್ನೂ ಭಾಷಾಂತರಿತವಾಗಬೇಕಾಗಿದೆ.

ಗುಜರಾತಿನಲ್ಲಿ ಸಾಹಿತ್ಯಸೇವೆ ನಡಸುತ್ತಿರುವ ಅನೇಕ ಸಂಸ್ಥೆಗಳಿವೆ. ಅಹಮ್ಮದಾಬಾದಿನ 'ಗುಜರಾತಿ ವಿದ್ಯಾಸಭಾ' ಬರೋಡದ 'ಮಹಾರಾಜ ಸಯ್ಯಾಜಿರಾವ್ ವಿಶ್ವವಿದ್ಯಾನಿಲಯ' ಸೂರತ್ತಿನ 'ಚೂನೀಲಾಲ್ ಗಾಂಧಿ ಸಂಶೋಧನಾಲಯ' ಬೊಂಬಾಯಿನ 'ಭಾರತೀಯ ವಿದ್ಯಾಭವನ' ಮತ್ತು 'ಫೋರ್ಬ್ಸ್ ಗುಜರಾತಿ ಸಭಾ' ಮೊದಲಾದುವುಗಳು ಅನೇಕ ಪ್ರಾಚೀನ ಗ್ರಂಥಗಳನ್ನು ಸಂಶೋಧಿಸಿ ಪ್ರಕಟಿಸಿ ಗುಜರಾತಿ ಭಾಷಾ ಶಾಸ್ತ್ರಾಭ್ಯಾಸಕ್ಕೂ ಚರಿತ್ರ ರಚನೆಗೂ ವಿಶೇಷ ಸಹಾಯಮಾಡಿವೆ. ಸುಂದರಂ ಕೃತ 'ಅರ್ವಾಚೀನ ಕವಿತಾ' ರಾಮನಾರಾಯಣ ಪಾಠಕ್‌ಕೃತ 'ಬೃಹತ್ ಪಿಂಗಳ್' ಇವು ಕೆಲವು ವರ್ಷಗಳ ಹಿಂದೆ ಪ್ರಕಟವಾದುವು. ಈ ಪ್ರಕಟಣೆಗಳು ದೀರ್ಘಕಾಲದ ಶ್ರಮ, ಪೂರ್ಣ ಪಾಂಡಿತ್ಯ, ಮುತ್ತಿದ ವಿವೇಕ, ಸ್ವತಂತ್ರದೃಷ್ಟಿ ಇವುಗಳ ಫಲವಾಗಿ ಯಾವ ಸಾಹಿತ್ಯಕ್ಕಾದರೂ ಕೀರ್ತಿಯನ್ನು ತರಬಲ್ಲವಾಗಿವೆ.

ಕಾವ್ಯವಿಮರ್ಶೆ, ವ್ಯಾಕರಣ, ಚರಿತ್ರೆ, ಭಾಷಾಶಾಸ್ತ್ರ ಮೊದಲಾದ ಕ್ಷೇತ್ರಗಳಲ್ಲಿ ವಿಷ್ಣುಪ್ರಸಾದ ತ್ರಿವೇದಿ, ಭೋಗಿಲಾಲ್ ಸಂದೆಸರ, ಹರಿವಲ್ಲಭಬಾಯಿನಿ ಮೊದಲಾದವರಿಂದ ವಿಶೇಷ ಸಂಶೋಧನೆ ನಡೆದಿದೆ. ಆದರೂ ಈ ವಿಷಯಗಳೆಲ್ಲ ಅಲ್ಲೊಂದು ಇಲ್ಲೊಂದು ಲೇಖನರೂಪದಲ್ಲಿ ಪ್ರಕಾಶಿತವಾಗಿವೆಯೇ ವಿನಾ ಯಾವ ಒಂದು ವಿಷಯವೂ ಸಮಗ್ರದೃಷ್ಟಿಯಿಂದ ವಿವಿಧ ಮುಖಗಳನ್ನು ಕುರಿತ ಒಂದು ಸಂಪೂರ್ಣ ಗ್ರಂಥರೂಪದಲ್ಲಿ ಪ್ರಕಟವಾಗಿಲ್ಲ. ಭಾಷಾಭ್ಯಾಸದ ಮೇಲೆ ರಚಿತವಾಗಿರುವ ಒಂದು ಗುಜರಾತಿಯ ವ್ಯಾಕರಣವೂ ಇಲ್ಲಿಯವರೆಗೆ ಉಪಲಬ್ಧವಿಲ್ಲ. ಎಷ್ಟೋ ವರ್ಷಗಳ ಹಿಂದೆ ನರಸಿಂಹರಾವ್ ದಿವೇಟಿಯರಿಂದ ರಚಿತವಾದ 'ಗುಜರಾತಿ ಭಾಷೆ ಮತ್ತು ಸಾಹಿತ್ಯ' ಎಂಬ ಗ್ರಂಥವನ್ನು ಬಿಟ್ಟರೆ ಆ ವಿಷಯದಲ್ಲಿ ಆಧಾರಭೂತವಾದ ಮತ್ತೊಂದು ಗ್ರಂಥವಿಲ್ಲ. ಆಧಾರಭೂತವಾದ ಗುಜರಾತಿ ಸಾಹಿತ್ಯ ಚರಿತ್ರೆ ಇನ್ನೂ ಬರಬೇಕಾಗಿದೆ.

ಸ್ವಾತಂತ್ರ್ಯೋತ್ತರಕಾಲದಿಂದೀಚೆಗೆ ಸಾಹಿತ್ಯದ ಬೆಳವಣಿಗೆಗೆ ಸೂಕ್ತ ಸನ್ನಿವೇಶ ದೊರಕಿದೆ. ರಾಜ್ಯ ಮತ್ತು ಕೇಂದ್ರ ಸರಕಾರಗಳು ಸಾಹಿತ್ಯ ಶಕ್ತಿಯ ಮೆಚ್ಚಿಗೆಯ ಕುರುಹಾಗಿ ಉತ್ತಮ ದ್ರವ್ಯರೂಪವಾದ ಬಹುಮಾನಗಳನ್ನು ನೀಡುತ್ತಿವೆ. ಪ್ರಾದೇಶಿಕ ವಿಶ್ವವಿದ್ಯಾನಿಲಯಗಳ ಸ್ಥಾಪನೆಯು ಭಾಷಾ ಸಾಹಿತ್ಯಗಳ ಶಾಸ್ತ್ರೀಯಾಭ್ಯಾಸಕ್ಕೆ ಸಹಾಯಮಾಡಿವೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಭಾಷಾವರ್ಗಗಳ ಸಂಪರ್ಕವು ತಮ್ಮ ಪ್ರಭಾವವನ್ನು ಬೀರದಿಲ್ಲ. ಇತರ ಭಾಷೆಗಳಲ್ಲಿ ಹೇಗೋ ಹಾಗೆ ಗುಜರಾತಿಯಲ್ಲಿಯೂ ಸಾಮಾನ್ಯ ಲೇಖಕನು ಈಗ ಸ್ವಾರ್ಥದೃಷ್ಟಿಯಿಂದ ಯೋಚಿಸದೆ ವಿಶಾಲ ಹೃದಯದವನಾಗಿ ಅಂತರರಾಷ್ಟ್ರೀಯ

ಮನೋಭಾವವನ್ನು ತಾಳಿದ್ದಾನೆ. ಅವುಗಳಲ್ಲಿರುವಂತೆಯೇ ಇಲ್ಲಿಯ ಗ್ರಂಥ ಕರ್ತನೂ ಗತಿಸಿದ ಪ್ರಾಚೀನ ಇನ್ನೂ ಬೇರೂರದ ಭವಿಷ್ಯ ಪ್ರಪಂಚಗಳೆರಡರ ಮಧ್ಯೆ ಸಂಧಿ ಸಮಯದಲ್ಲಿ ಅಲೆದಾಡುತ್ತಿದ್ದಾನೆ. ಆತನು ಮೊದಲು ತನ್ನ ದೇಶ, ತನ್ನ ಭಾಷೆಗಳ ವಿಷಯದಲ್ಲಿ ಪ್ರತ್ಯಯವನ್ನು ಸಂಪಾದಿಸಿಕೊಂಡು ಮುಂದುವರಿಯ ಬೇಕಾಗಿದೆ. ಆ ದೃಷ್ಟಿಯಿಂದ ಮಾಡಬೇಕಾದ ಕೆಲಸ ಅನಂತವಾಗಿದೆ.

ಓಂ ತತ್ಸತ್

— ಎನ್. ಅನಂತರಂಗಾಚಾರ್

ಅಹಂಕಾರದ ಮುದ್ರೆಯೊತ್ತಿ . . .

ಅಹಂಕಾರದ ಮುದ್ರೆಯೊತ್ತಿ
    ನನ್ನ ಕೆಳಗೆ ಬಿಟ್ಟನು !
    ನನ್ನ ನಿಳಿಗೆ ಕೊಟ್ಟನು !
ಬೆಳುದಿಂಗಳೆ ಆಗಿದ್ದೆನೊ ?
ಕಣ್ತೆರೆಯದ ಶಿಶುವಿದ್ದೆನೊ ?
ಕರುಳ ಬಳ್ಳಿಯಿಂದ ಅನ್ನ
ಹೀರಿಕೊಳುವ ಚಿಣ್ಣನಾಗಿ
ಮಾಂಸವೇ ಆಗಿದ್ದೆನೋ ?
ಅದೇನಾಗಿದ್ದೆನೊ ?
    ಇದ್ದೆನೋ
ಇರದಿದ್ದೆನೋ ?

ಖರಕಿರಣವೆ ಆಗಿದ್ದೆನೊ ?
ತಮದ ಹಿಮವಾಗಿದ್ದೆನೊ ?
ಜೀವತುಂಬಿ ನಿತ್ಯಳಾಗಿ
ಹರಿವ ಸಲಿಲ ಸ್ರೋತದಲ್ಲಿ
ನಾನು ಒಂದಾಗಿದ್ದೆನೋ ?
ಅದೇನೆಲ್ಲಿದ್ದೆನೊ ?
    ಇದ್ದೆನೋ
ಇರದಿದ್ದೆನೋ ?

ಹೆಣ್ಣಿನಲ್ಲಿ ಗಂಡು ಎನಿಸಿ
ಗಂಡಿನಲ್ಲಿ ಹೆಣ್ಣು ಎನಿಸಿ
ಹೂವು ಹಣ್ಣು ಬಿತ್ತವೆನಿಸಿ
ಯೋಗಿಯಲ್ಲ ಯೋನಿಜ
ಕಾಮಿಯಲ್ಲ ಮನಸಿಜ
ಎನಿಸಿ, ಮರೆಯಾಗಿದ್ದೆನೋ ?
    ಇದ್ದೆನೋ
ಇರದಿದ್ದೆನೋ ?

ಕಾಣ್ಕೆಯಲ್ಲಿ ಕಣ್ಣಾಗಿ
ಪೂಣ್ಕೆಯಲ್ಲಿ ಪಣ್ಣಾಗಿ
ಬೆಳಕನೂಡಿ, ಬೆಳಗಿ, ಮಾಗಿ

ಕಲೆಯ ಬಲೆಯೊಳವಿತುಹೋಗಿ
ವೀತರಾಗನಾಗಿ, ರಾಗಿ
ಯಂತೆ, ಆತ ವೀಣೆಯನ್ನು
ನುಡಿಸುತಿದ್ದನು !
ನನ್ನ ಮುತ್ತನಿದ್ದನು !

ನಾನಾತನ ನುಡಿಯು ಮೆಚ್ಚಿ-
ಕೊಳಲು, ಆತ ತನ್ನ ಇಚ್ಛೆ-
ಯಿಂದಲೆನ್ನನೊಂದು ಬಿಚ್ಚಿ
ತೋರದಂಥ ಪೇಟಿ ಮುಚ್ಚಿ
ಅದರೊಳೆನ್ನ ಚುಚ್ಚಿ ಚುಚ್ಚಿ,
ನೆಲಕೆ ಬಿಟ್ಟನು !
ಅಹಂಕಾರ ನೆಳಲಿನಲ್ಲಿ
ಮುಚ್ಚಿಬಿಟ್ಟನು !

ಚೆಲುವು ಬೇರೆ ಎನಿಸಿ ನನಗೆ
ಬೆಳಕು ಬೇರೆ ಎನಿಸಿ ಬಗೆಗೆ
ಕತ್ತಲಿದು, ಕಷ್ಟವಿದು
ಜಗದನೋವು ನಲಿವಿದು
ಪೂರ್ಣವಿಲ್ಲಿ ಸೇರದು–ಎನಿಸಿ
ನನ್ನ ಗುಟ್ಟನು
ಅಹಂಕಾರ ನೆಳಲಿನಲ್ಲಿ
ಮುಚ್ಚಿ ಬಿಟ್ಟನು !

ಮತ್ತೆ ಬೇಗೆಯೆಲ್ಲ ಕಳೆದು
ನೋವು–ನಲಿವು ಎಲ್ಲ ಕಳೆದು
ಎಲ್ಲವು ಒಂದೆಂದು ಬಗೆದು
ನನ್ನ ನಾನು ಅರಿಯಲೆಂದು
ಮತ್ತೆ ತನ್ನ ಸೇರಲೆಂದು
ಇಳೆಗೆ ಕೊಟ್ಟನು
ಅಹಂಕಾರದ ಮುದ್ರೆಯೊತ್ತಿ
ನನ್ನ ಕೆಳಗೆ ಬಿಟ್ಟನು !
ನನ್ನನಿಳೆಗೆ ಕೊಟ್ಟನು !

—ವೇ. ರಾ ಸೊರಬ

ಚಂದ್ರಹಾಸ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ದೃಶ್ಯ ೬

[ಅದೆ ಆರಣ್ಯದ ಮತ್ತೊಂದೆಡೆ. ಮರುದಿನ ಸೂರ್ಯೋದಯಾನಂತರ ಪುಳಿಂದರ ಪಡೆಯೊಂದು ಬೇಟೆಯಾಡುತ್ತ ಬರುತ್ತದೆ.]

೧ನೆಯ ಪುಳಿಂದ: (ನೆಲವನ್ನು ಪರಿಶೀಲಿಸುತ್ತಾ) ಇದೆ ಪಂದಿ ಕೆದರಿದ ನೆಲಂ.

೨ನೆಯ ಪುಳಿಂದ: (ಇನಿತು ಮುಂಬರಿದು ನೋಡಿ) ಕಾಣ್, ಇದೆ ದಂತಿ ಕದಡಿದ ಕೊಳಂ.

೩ನೆಯ ಪುಳಿಂದ: (ಒಂದೆಡೆ ಬಗ್ಗಿನೋಡಿ) ಇದೊ ಇಲ್ಲಿ ಪುಲಿಯುಗಿದ ಮಿಗದ ಮಿದುಳ್.

೪ನೆಯ ಪುಳಿಂದ: ಇತ್ತಲಿದೆ ಸಿಂಗಮೆರಗಿದಾನೆಯ ತಲೆಯ ಮುತ್ತು!

೫ನೆಯ ಪುಳಿಂದ: ಇದೊ ಇಲ್ಲಿ ವನಮಹಿಷನುದ್ದಿಕೊಂಡ ಮರದಿಗುಡು.

೬ನೆಯ ಪುಳಿಂದ: ಇತ್ತಲಿದೆಕೋ ಸಾರಂಗಮಿಕ್ಕಡಿಗೈದ ಪಾವು!

೪ನೆಯ ಪುಳಿಂದ: ಇತ್ತಲಿದೆ ಹುಲ್ಲೆಗಳ ಹಕ್ಕೆ; ಮರಿಗಳಿಕ್ಕೆ.

೧ನೆಯ ಪುಳಿಂದ: ನಡೆ, ಮುಂದೆ ನಡೆ.

೨ನೆಯ ಪುಳಿಂದ: ಪಜ್ಜೆವಿಡಿ ಪೋಗು.

೬ನೆಯ ಪುಳಿಂದ: (ಹಿಂಜರಿದು ನಿಂತು ಎಚ್ಚರಿಕೆ ಹೇಳುವಂತೆ) ತಡೆ! ನಿಲ್ಲು!

೩ನೆಯ ಪುಳಿಂದ: ನಿಲ್ಲಲೇಕೆ? ಜಡಿ! ಬೊಬ್ಬೆಗುಡು!
[ಎಲ್ಲರೂ ಸೋವಿನ ಕಾಕು ಹಾಕುತ್ತಾರೆ.]

೬ನೆಯ ಪುಳಿಂದ: ಎಲೆಲೆ ಪೊದರೊಳಡಗು!

೫ನೆಯ ಪುಳಿಂದ: ಕೈಗೆಡೆದಿರ್, ಇಸು!

೪ನೆಯ ಪುಳಿಂದ: ತುಡು, ನಿಡುಸರಳ!

೧ನೆಯ ಪುಳಿಂದ: ಕೆಲಕ್ಕೆ ಸಿಡಿಯದಿರ್, ಪೊಡೆ, ಸಾರ್ಚು!

೪ನೆಯ ಪುಳಿಂದ: ಮರಕಡರ್, ಒಡರ್ಚು!

೩ನೆಯ ಪುಳಿಂದ: ಅಡಗಿ ಪೊಯ್!

೧ನೆಯ ಪುಳಿಂದ: ಓಡಿ, ತಡೆಗಟ್ಟಿ; ಬಡಿಕೋಲನಿಡಿ!
[೨, ೫, ೬ನೆಯ ಪುಳಿಂದರು ಹಿಡಿಡಿ ಹಿಡಿಡಿ ಎಂದೋಡುತ್ತಾರೆ.]

೪ನೆಯ ಪುಳಿಂದ : ನಮ್ಮರಸು ಕುಳಿಂದಕನೆಲ್ಲಿ?

೧ನೆಯ ಪುಳಿಂದ : ಓಡಿದನ್ ಹರಿಣನಂ ಬೆಂಬತ್ತಿ.

೩ನೆಯ ಪುಳಿಂದ : ನಮ್ಮ ಹೆಂಗಸರ ಗುಂಪೆತ್ತವೋಯ್ತು?

೧ನೆಯ ಪುಳಿಂದ : ಎಲ್ಲಿಯೊ ನಾ ಕಾಣೆ . . (ತುಸು ಪರಿಹಾಸ್ಯದಿಂದ)
ಬಡನಡುವಿನಬಲೆಯರ್ ನಮ್ಮೊಡನೆನಿತು ದೂರ
ಬಂದಪರ್? ನವಿಲ್ಗರಿಗಳಂ, ಚಮರಿವಾಲಂಗಳಂ,
ಕರಿಯ ಕುಂಭಸ್ಥಳದ ಮುಕ್ತಾಫಲಂಗಳಂ
ಹುಡುಕುತ್ತ ಹೆರಕುತ್ತ ಇನ್ನೆಲ್ಲಿಹರೊ ಕಾಣೆ.

೩ನೆಯ ಪುಳಿಂದ : ಪಾಳ್ ಕುರ್ಕನೊಂದು ನನ್ನ ಮೇಲೆಗರಿ,
ಪರಚಿ, ಗಂಟಲ್ಮುರಿದು ಕೊಲಲೆಳಸುತಿತ್ತು.
ದೊರೆ ಎಚ್ಚ ಶರದಿಂದ ಮಡಿದುರುಳ್ದುದು.
ನೋಡಿಲ್ಲಿ ನೆತ್ತರೊಸರುವ ಗಾಯ. (ತೋರಿಸುತ್ತಾನೆ.)

೪ನೆಯ ಪುಳಿಂದ : ಒರ್ ಪಂದಿ ಹೂಂಕರಿಸಿ ಕೋರೆದಾಡೆಯ ಮಸೆದು
ನುಗ್ಗಿಬಂದುದು ಕೊಲಲ್. ಕೈಗೊಡಲಿಯಿಂದಿಕ್ಕಿದೆನ್;
ತುಂಡರಿಸಿ ಕೆಡೆದುದಿಳೆಗೆ. ಇಂದಿನ ಬೇಂಟೆಯೆ ಬೇಂಟೆ!

೧ನೆಯ ಪುಳಿಂದ : ಬೇಂಟೆ ತಾಂ ಬಿನದಂಗಳರಸಲ್ತೆ?
[ಒಳಗಣಿಂದ ಪುಲಿ! ಪುಲಿ! ಸತ್ತೆನ್! ಅಯ್ಯೋ ಸತ್ತೆನ್! ಎಂಬ ಆರ್ತನಾದವೂ ಜಡಿ, ಬಡಿ, ಪೊಡೆ, ಹೊಯ್ ಎಂಬ ಕೂಗೂ ಕೇಳಿ ಬರುತ್ತವೆ.]

೪ನೆಯ ಪುಳಿಂದ : ಅದೇನದಾ ಹಳುವಿನವರ ಬೊಬ್ಬೆ?

೩ನೆಯ ಪುಳಿಂದ : ಆವನೋ ಪುಲಿಯಿಂದ ಮಡಿದನ್!
[೬ನೆಯ ಪುಳಿಂದನು ಓಡಿಬರುತ್ತಾನೆ]

೬ನೆಯ ಪುಳಿಂದ : ಇಲ್ಲೇನು ಮಾಡುವಿರಿ? ದೊಡ್ಡನರಸನನ್ ಪುಲಿ ಪಿಡಿದುದು!
ನೆರವಿಗೆ ಹೋದ ಸಣ್ಣನರಸನನ್
ಕರುಳೀಚೆಗುರುಳ್ವಂತೆ ಸೀಳಿದುದು ಹೊಟ್ಟೆಯನ್!
ಭಲ್ಲೆಯಿಂದಿರಿದ ಪುಟ್ಟನರಸನನ್
ಮೇಲ್ವಾಯ್ದು ಕಚ್ಚಿ ಬಿಸುಟಿತ್ತು!
ಕಂಡದಂ ನನಗೊ ನಡುಗುತಿದೆ ತೊಳ್ಳೆ!
ಕೊನೆಗೆ ಚಿಕ್ಕನರಸನ ಕೊಡಲಿ ಪೆಟ್ಟಿಂಗೆ
ಆರ್ಭಟಿಸಿ ನೆಗೆದುರುಳಿ ಬಿಳ್ದುದು ಸತ್ತು!
ಪೆಬ್ಬುಲಿ! ಇಪ್ಪತ್ತು ಆಳಿಗೇನ್ ಕಡಿಮೆಯಿಲ್ಲ!

೧ನೆಯ ಪುಳಿಂದ: ಬನ್ನಿ, ಬನ್ನಿ, ಓಡಿ ಬನ್ನಿ ; ಪೊತ್ತದನ್ ಕೊಂಡೊಯ್ದು
ದೊರೆಗೊಪ್ಪಿಸಲ್, ನಮಗೆ ಪೇರೌತಣಂ ಇಂದು !
[೧ನೆಯ ಮತ್ತು ೨ನೆಯ ಪುಳಿಂದರು ಓಡುತ್ತಾರೆ.]

೩ನೆಯ ಪುಳಿಂದ: ಅಯ್ಯೋ ನಮ್ಮ ದೊಡ್ಡನರಸನ್ ಸತ್ತನೆ! (ಮರುಗುತ್ತಾನೆ)

೪ನೆಯ ಪುಳಿಂದ: ಪುಲಿಯ ಕೈಯಿಂ ಮಡಿಯೆ ಪೆರ್ಮೆ ಸಾವದು ಕಣಾ !
ಮರುವುಟ್ಟಿನಲ್ಲವಗೆ ದೊರಕುವುದು ದೊರೆತನಂ !

೩ನೆಯ ಪುಳಿಂದ: ಹಾಂಗಾದರವನೆ ಪುಣ್ಯವಂತನ್ !

೪ನೆಯ ಪುಳಿಂದ: ಮತ್ತೆ ? (ಇಬ್ಬರೂ ಹೊರಡುತ್ತಾರೆ)

ಪರದೆ ಬೀಳುತ್ತದೆ

ದೃಶ್ಯ ೭

[ಅರಣ್ಯದ ಮತ್ತೊಂದು ಭಾಗ. ನಾಲ್ವರು ಪುಳಿಂದಿಯರು ಹಂದಿಯ ಕೋರೆ, ಜಿಂಕೆಯ ಕೊಂಬು, ಪುನುಗು, ನವಿಲುಗರಿ, ಮೊದಲಾದ ಆರಣ್ಯಕ ಪದಾರ್ಥಗಳನ್ನು ಸಂಗ್ರಹಿಸುತ್ತಾ ಬರುತ್ತಾರೆ.]

೧ನೆಯ ಪುಳಿಂದಿ: (ನೆಲದಕಡೆ ದೂರ ನೋಡಿ)
ಅದೇನದು ಅಲ್ಲಿ ಬಿದ್ದದೆ?

೨ನೆಯ ಪುಳಿಂದಿ: ಹೌದೆ! ಮಿಗದ ಕೊಂಬು ! (ಎಂದು ಓಡಿ ತೆಗೆದುಕೊಳ್ಳುತ್ತಾಳೆ)

೩ನೆಯ ಪುಳಿಂದಿ: ಏಕಿಂತು ಮೈಮೇಲೆ ನುಗ್ಗುವೆ ?
ಆಸೆಬುರುಕಿ! ಕೀಳ್ಪೆಣ್ಣು !

೨ನೆಯ ಪುಳಿಂದಿ: ನೀನಾರ್ಗೆ, ಕೇಳುವಳ್ ?

೩ನೆಯ ಪುಳಿಂದಿ: ಮೊದಲದನ್ ಕಂಡವಳಿಗಾ ಕೊಂಬು ಸೇರ್ದುದು.

೨ನೆಯ ಪುಳಿಂದಿ: ಕಂಡವಳಿಗಲ್ತು, ಕೊಂಡವಳ್ಗೆ.

೪ನೆಯ ಪುಳಿಂದಿ: ಅಲ್ಲೇನು ಮಾಡುವಿರಿ? ಓಡಿಬನ್ನಿ.
ನವಿಲುಗರಿಗಳ ಹಿಂಡೆ ಕೆಡೆದಿಹುದಿಲ್ಲಿ ;
[ಎಲ್ಲರೂ ಸಂಭ್ರಮದಿಂದ ಸಶಬ್ದವಾಗಿ ಓಡಿ ಆಯುತ್ತಾರೆ]

೧ನೆಯ ಪುಳಿಂದಿ: ಕಾಣಿಲ್ಲಿ, ಈ ಮರದ ಬೇರ್ಗೆ
ಪುನುಗನೊತ್ತಿದೆ ಪುನುಗುಬೆಕ್ಕು.
[ಅದನ್ನು ಒರೆಸಿ ಕುಡಿಕೆಗೆ ತುಂಬುತ್ತಾಳೆ.]

೩ನೆಯ ಪುಳಿಂದಿ : ಅಃ ಎಂತಪ್ಪ ಕಂಪು ! (ಆಘ್ರಾಣಿಸುತ್ತಾಳೆ.)

೨ನೆಯ ಪುಳಿಂದಿ : ನಿನಗೆನಿತೆ ಸಿಕ್ಕಿತು ಮೃಗಸಾರವ್ಯಕ್ತಿಕೆ, ತಂಗಿ ?

೪ನೆಯ ಪುಳಿಂದಿ : ಒಂದು ಅಂಡೆಯ ತುಂಬ.

೧ನೆಯ ಪುಳಿಂದಿ : ಮಾರಾಣಿ ಬೆಸಸಿಹಳು, ತನಗಿನಿತು ಬೇಕೆಂದು.

೩ನೆಯ ಪುಳಿಂದಿ : ಹೂವೂ ಬೇಕಂತೆ, ಆವುದೊ ನೋಂಪಿಗೆ.

೨ನೆಯ ಪುಳಿಂದಿ : ಸೌಭಾಗ್ಯವೇನಿದ್ದರೇನಂತೆ ? ಸುತರಿಲ್ಲ.
ಪಾಪ, ಕೊರಗುತಿರುವಳು ತಾಯಿ,
ಪುತ್ರನಂ ಪಡೆಯಲ್ಕೆ ನೋಂತು.

೪ನೆಯ ಪುಳಿಂದಿ : ಪುತ್ರವತಿಯಹುದು ಜನ್ಮಾಂತರದ ಪುಣ್ಯಂ.
ಮುನ್ನೆ ತಾಂ ನೋಂತುದಲ್ಲದೆ, ಪೇಳ್
ಬರಿದೆ ಬಯಸಿದೊಡೆ ಬಂದಪುದೆ ?

೩ನೆಯ ಪುಳಿಂದಿ : ಪುತ್ರನಂ ಪಡೆಯಲೆಂದೇ ನೋಂಪಿಯಂ
ಕೈಕೊಂಡಿಹಳ್.. ಅದಕೋಸುಗವೆ ಬೆಸಸಿಹಳ್
ಫಲಂಗಳಂ ಪುಷ್ಪಂಗಳಂ ತರಲ್.

೧ನೆಯ ಪುಳಿಂದಿ : ನಮ್ಮರಸಿ ಮೇಧಾವಿನಿಗೆ ತಾನಾದಂದು
ಶುಭದ ಪುತ್ರೋತ್ಸವಂ
ನಮ್ಮ ಸೌಭಾಗ್ಯಕೆಣೆಯಿಲ್ಲದಾಗುವುದು.
ಬನ್ನಿ ಹೂಗಳನಾಯ್ದು ಒಯ್ಯುವಂ . . .
ನಾ ಕುಯ್ವೆ ಸಂಪಗೆಯನ್.

೨ನೆಯ ಪುಳಿಂದಿ : ಸುರಗಿಯಂ ನಾನೇರಿ ಕೊಯ್ವೆನ್.

೩ನೆಯ ಪುಳಿಂದಿ : ಕೇದಗೆಯನಾನ್ ಮುಳ್ಳೆಣಿಸದೆಯೆ ಕೊಯ್ವೆನ್.

೪ನೆಯ ಪುಳಿಂದಿ : ಸೀತಾಳಿ ದಂಡೆಗಳನಾನ್ ತಂದಪೆನ್.
[ಇದ್ದಕಿದ್ದಂತೆ ಖುರಪುಟ ಧ್ವನಿ ಕೇಳಿಸುತ್ತದೆ.]

೧ನೆಯ ಪುಳಿಂದಿ : ಅಕೊ ಅಕೊ ಅಕೊ ! ಮಿಗ ಮಿಗ ಮಿಗ !

ಎಲ್ಲರೂ : (ನೋಡುತ್ತಾ) ಮಿಗ ! ಮಿಗ ! ಮಿಗ ! ಹೋ ! (ಕೂಗುವರು)

೧ನೆಯ ಪುಳಿಂದಿ : ಅಕ್ಕ, ಮಿಂಚಿನೋಟವ ಮುಂಚಿ ಹಾರಿತಲ್ತೆ ?

೨ನೆಯ ಪುಳಿಂದಿ : ಅಗೊ ಅಗೊ ಅಗೊ
ಬೆನ್ನಟ್ಟಿ ಓಡುತಿಹನೊರ್ವ ಬೇಂಟೆಗಾರಂ.
[ಎಲ್ಲರೂ ವಿಸ್ಮಯದಿಂದ ನೋಡುತ್ತಿರುತ್ತಾರೆ.]

೩ನೆಯ ಪುಳಿಂದಿ: ಓವೊ ಅವನೆಮ್ಮ ಅರಸು ಕುಳಿಂದಕಂ!

೧ನೆಯ ಪುಳಿಂದಿ: ಅವನಲ್ಲದಿನ್ನಾರು ಮಿಗವನಂತಟ್ಟುವರ್?

೪ನೆಯ ಪುಳಿಂದಿ: ನೋಡಕ್ಕ, ಆ ಮಿಗಂ ಕೊಂಕುಗೊರಲಿಂ
ಪಿಂತಿರುಗಿ ಹಾರುತಿದೆ!

೩ನೆಯ ಪುಳಿಂದಿ: ಆಹಾ ಅದರಡಿಗಳಿಳೆಯನೇಂ
ಮುಟ್ಟಿಯುಂ ಮುಟ್ಟದೆಯೆ ಚಲಿಸುತಿವೆ!

೪ನೆಯ ಪುಳಿಂದಿ: ಅಯ್ಯೊ, ಮತ್ತೆ,
ನಮ್ಮೆಡೆಗೆ ತಿರುಗುತಿದೆ ಸಾರಂಗ.

೨ನೆಯ ಪುಳಿಂದಿ: ಕಾಣದರ ಬಾಯಲ್ಲಿ ಜೊಲ್ಲನೊರೆ!

೪ನೆಯ ಪುಳಿಂದಿ: ಹತ್ತೆ ಸಾರ್ದುದು; ಕಾಣ್:
ಅಳ್ಕೆಯುಂತುಬ್ಬಿ ತಗ್ಗುತಿದೆ.

೧ನೆಯ ಪುಳಿಂದಿ: ಬೆಮರಿಳಿದು ಕರ್ಪುಬಣ್ಣಕೆ ತಿರುಗಿಹುದು ಮೈ!

೨ನೆಯ ಪುಳಿಂದಿ: ಓವೊ ಕಾಣ್, ಬೆನ್ನಟ್ಟಿ ಬಂದನದೊ ನಮ್ಮ ದೊರೆ.
[ಕುಳಿಂದಕನು ಬಿಲ್ಲು ಬಾಣ ಹಿಡಿದು ಧಾವಿಸಿ ಬರುತ್ತಾನೆ. ಪುಳಿಂದಿಯರನ್ನು ಕಂಡು ಕೇಳುತ್ತಾನೆ.]

ಕುಳಿಂದಕ: ಎತ್ತಲೋಡಿತಾ ಜಿಂಕೆ?

೧ನೆಯ ಪುಳಿಂದಿ: ಇತ್ತಣ್ಗೆ (ಎಂದು ಕೈ ತೋರಿಸುತ್ತಾಳೆ.)

ಕುಳಿಂದಕ: (ಸ್ವಗತ) ನಾಲ್ಕೈದು ಹರಿದಾರಿಯಿಂ ಬೆಂಕೊಂಡು
ಬಂದುದೂ ಬರಿದಾಯ್ತೆ? ಎಚ್ಚಲಗ ಲೆಕ್ಕಿಸದೆ
ಧಾವಿಸಿತೆ? ನನ್ನನೆಲ್ಲಿಗೊ ಉಯ್ವ ಪಾಂಗಿಂದೆ,
ಮರೆಯಾಗಿ ಮತ್ತೆ ತೋರಿ, ತೋರಿ ಮತ್ತೆ ಮರೆಯಾಗಿ
ಮಾರೀಚನಾಟಮಂ ಮೆರೆದುದಲ್ತೆ?....
ಇರಲಿ; ನೋಳ್ಪೆನೆಲ್ಲಿಗೆಯ್ದುವುದೆಂದು!
[ಮತ್ತೆ ಧಾವಿಸಿ ಓಡುತ್ತಾನೆ.]

೨ನೆಯ ಪುಳಿಂದಿ: ಮಿಗವನೇನ್ ಬಿಡುವನೆಂದರಿತೆಯಾ?
ಹೆತ್ತದರ ಹಿಡಿಯ ಹೊಟ್ಟೆಯ ಹೊಕ್ಕರೂ ಬಿಡನು!

೪ನೆಯ ಪುಳಿಂದಿ: ನಾವೂ ಓಡುವಂ. ಬನ್ನಿ ಹೊತ್ತಾಯ್ತು.

೩ನೆಯ ಪುಳಿಂದಿ: ಓಡಲೇನ್ ನೀನ್ ಗಂಡೇ?

೨ನೆಯ ಪುಳಿಂದಿ: ಗಂಡಸರ ಮೀರಿಹಳು ಅವಳು!
[ದೂರದಲ್ಲಿ ಕಲಕಲ ನಿನಾದ ಕೇಳುತ್ತದೆ.]

೧ನೆಯ ಪುಳಿಂದಿ: ಏನದು ಕೋಲಾಹಲಂ ?

೨ನೆಯ ಪುಳಿಂದಿ: ಪುಲಿ ಪಿಡಿದುದೊ? ಪಂದಿ ತಿವಿದುದೊ?
ನಮ್ಮವರೊಳಾವಂಗೆ ಏನಾದುದೊ? (ಕಳವಳಿಸುತ್ತಾಳೆ)

೪ನೆಯ ಪುಳಿಂದಿ: ಬನ್ನಿ, ಬನ್ನಿ ; ಬೇಗಬನ್ನಿ ; ಓಡಿಬನ್ನಿ !
[ಎಲ್ಲರೂ ಧಾವಿಸುತ್ತಾರೆ]

ಪರದೆ ಬೀಳುತ್ತದೆ

ದೃಶ್ಯ ೮

[ದಟ್ಟವಾದ ಅರಣ್ಯದ ಮಧ್ಯೆ ಹಸುರು ಹಬ್ಬಿದ ಒಂದು ಕಿರುದಿಬ್ಬದ ಮೇಲೆ ಬಾಲಕ ಚಂದ್ರಹಾಸನು ನಿದ್ರಿಸುವನೆಂಬಂತೆ ಮಲಗಿದ್ದಾನೆ. ಕತ್ತರಿಸಿದ ಕಾಲ್ಬೆರಳಿನಿಂದ ನೆತ್ತರು ಸೋರಿ ಅಲ್ಲಲ್ಲಿ ಕೆಂಪಾಗಿದೆ. ಅವನ ಮೈಮೇಲೆಯೂ ಹಾರಿದ ರಕ್ತದ ಕಲೆಗಳಿವೆ. ಮೂವರು ದಿವ್ಯಛಾಯಾಮೂರ್ತಿಗಳಾದ ದೇವಿಯರು ಬಾಲಕನ ಕನಸಿನಲ್ಲಿ ಎಂಬಂತೆ ಕಾಣಿಸಿಕೊಳ್ಳುತ್ತಾರೆ. ಅವನ ಸುತ್ತಲೂ ನೃತ್ಯವಿನ್ಯಾಸದಲ್ಲಿ ಸುಳಿಯುತ್ತಾರೆ. ತಮ್ಮ ಪುಷ್ಪಸದೃಶ ಕೈಗಳಿಂದ ಅವನ ಮೇಲೆ ತಮ್ಮ ರಕ್ಷಣಾ ಶಕ್ತಿಯನ್ನು ಪ್ರೋಕ್ಷಿಸುತ್ತಾರೆ.]

ಮೊದಲನೆಯ ದೇವಿ: ಪೃಥಿವಿಯೆದೆಯಿಂದುದಿಸಿ ಏರಿ
ಭಗವಂತನಡಿಯರಸಿ ಹಾರಿ
ಬಂದೆ ನಾ ಪ್ರಾರ್ಥನಾ ದೇವಿ !

ಎರಡನೆಯ ದೇವಿ: ಭಗವಂತನಡಿಯಿಂದೆ ಹೊಮ್ಮಿ
ಪೃಥಿವಿಯೆದೆಗವತರಿಸೆ ಚಿಮ್ಮಿ
ಇಳಿದೆನ್ನೈ ನಾ ಕೃಪಾದೇವಿ!

ಮೂರನೆಯ ದೇವಿ: ಲೋಕವನು ನಾಕಕ್ಕೆ ಬೆಸೆಯೆ
ನಾಕವನು ಲೋಕಕ್ಕೆ ಹೊಸೆಯೆ
ಐತಂದೆ ನಾ ಭಕ್ತಿದೇವಿ !
[ಹಾಡುತ್ತ ಹಾಡುತ್ತ ಅದೃಶ್ಯವಾಗುತ್ತಾರೆ.]

ಚಂದ್ರಹಾಸ: (ಮೆಲ್ಲಮೆಲ್ಲಗೆ ಎಚ್ಚತ್ತು ಕುಳಿತು ಸುತ್ತಲೂ ಬೆಬ್ಬಳಿಸಿ ನೋಡಿ)
ಏಗಳುಂ ನನಗೆ ಕನಸಿನಲಿ ಕಾಣುವಾ
ಮೂವರಾ ದಿವ್ಯಮೂರ್ತಿಗಳೆಲ್ಲಿ?
ಇಂಪಾಗಿ ಉಲಿದೆನ್ನ ಸಂತೈಸಿದರ್ ;

ನೆತ್ತರ್ ಸೋರ್ವ ಗಾಯಕ್ಕೆ ಮದ್ದಿರ್ಕ್ಕೆ
ನೋವನಾರಿಸಿದರ್ . . ಅಜ್ಜೀ, ಓ ನನ್ನಜ್ಜೀ, (ಅಳುತ್ತಾನೆ.)
ನೀ ಕಲಿಸಿದಾ ಶ್ರೀಹರಿಯ ನೆನೆಯುವೆನ್.
[ಮೆಲ್ಲನೆಯೆ ಕೀರ್ತನೆ ತೊಡಗುತ್ತಾನೆ]
ಗೋವಿಂದ ಶ್ರೀಹರಿ ಮುಕುಂದ ಮುರಾರಿ!
ಗೋವಿಂದ ಶ್ರೀಹರಿ ಮುಕುಂದ ಮುರಾರಿ!
ಗೋವಿಂದ ಶ್ರೀಹರಿ ಮುಕುಂದ ಮುರಾರಿ!
ಗೋವಿಂದ ಶ್ರೀಹರಿ ಮುಕುಂದ ಮುರಾರಿ . . . !
[ಬೇಟೆಯ ಉಡುಪಿನ ಕುಳಿಂದಕನು ಬಿಲ್ಬಿಡಿದು ಹುಡುಕುನೋಟ ಬೀರುತ್ತಾ ಪ್ರವೇಶಿಸುತ್ತಾನೆ.]

ಕುಳಿಂದಕ: ಕನಸಿನ ಕುರಂಗದಂದದಿ ಮಾಯವಾಯ್ತಲಾ
ಆ ಮಿಗಂ! ಎಲ್ಲಿಯಾದರೂ ಅಡಗಿದೆಯೊ ಇಲ್ಲಿ? . . .
ಅಃ ಏನಿದು? ಆರೊ ಹಾಡಿಹರಿಲ್ಲಿ ಇಂಚರದಿ! (ಆಲಿಸಿ)
'ಗೋವಿಂದ ಶ್ರೀಹರಿ ಮುಕುಂದ ಮುರಾರಿ!'
ಈ ದಟ್ಟ ಪಳುವದಲಿ ಮುಕುಂದನಂ ಕರೆವರಾರ್?
ಪಸುಳೆಗೊರಲಿಂ ಪೊಣ್ಮಿದಂತಿಹುದು ಶ್ರೀಹರಿಯ ನಾಮಂ.
[ಆಲಿಸುತ್ತಾ ಮುಂಬರಿದು, ನೋಡಿ, ಕಂಡು]
ಆವನೀ ಸುಕುಮಾರನಿಲ್ಲಿ ಕುಳಿತುಲಿದಿಹನ್?
ಅಯ್ಯೊ ನೆತ್ತರ್ ಮಯಂ ಮೆಯ್ಯೆಲ್ಲ! ನನ್ನ ಆ
ಜಿಂಕೆಗೆಚ್ಚಾ ಬಾಣಮೇನಾದೊಡಂ ಈ
ಬಾಲಕನ ಮೆಯ್ಗೆ ತಗುಲಿದುದೊ? ಶ್ರೀಹರೀ!
ಶ್ರೀಹರೀ! ಕಾಪಾಡು, ಕಾಪಾಡು! ಮಗೂ! ಮಗೂ! . . .
[ಓಡಿ ಚಂದ್ರಹಾಸನ ಪಕ್ಕದಲ್ಲಿ ಕುಳಿತು ಮೈದಡವಿ ಸಂತೈಸಿ]
ಏನಾದುದಯ್ ನಿನಗೆ ಕಂದ? ಏಕೆ ಈ ನೆತ್ತರ್?
ಆರವನ್? ಎಲ್ಲಿಯನ್? ಇಲ್ಲಿಗೆಂತೈತಂದೆ?
ಬಾಣಮೆಚ್ಚುದೆ ನಿನಗೆ? ಶ್ರೀಹರೀ! ಶ್ರೀಹರೀ!

ಚಂದ್ರಹಾಸ: ಬಾಣಮಲ್ತು. ಕಾಲ್‌ವೆರಳ್! (ತೋರುತ್ತಾನೆ.)

ಕುಳಿಂದಕ: ಇದೇನ್? ಕೊಯ್ದಿಹುದು ಕಾಲ್ ಬೆರಳ್!
ಆರ ಕಜ್ಜಮಿದು, ಪೇಳ್, ಕುಮಾರ?

ಚಂದ್ರಹಾಸ: ಅಜ್ಜಿಯೊಡನಿದ್ದೆನ್ನನ್
ಕಾರೊಡಲ ಚಂಡಾಲರೆಳೆತಂದು

ಕೊಲುವ ಯತ್ನವಮಾಡಿ, ಕಜ್ಜ ಕೈಗೂಡದಿರೆ,
ಕಾಲ್ಬೆರಳ ಕೊಯ್ದು ಕೊಂಡೋಡಿದರು !

ಕುಳಿಂದಕ: ಎಲ್ಲಿಂದ ತಂದರ್ ನಿನ್ನನ್ ?

ಚಂದ್ರಹಾಸ: ಅಜ್ಜಿಯೆಡೆಯಿಂ.

ಕುಳಿಂದಕ: ಆವ ಊರಿಂದೆ? ಆವ ಪೆಸರ್ ?

ಚಂದ್ರಹಾಸ: ನಾನರಿಯೆ. ಬಹುದೂರದಿಂ.

ಕುಳಿಂದಕ: ನೀನಾರವಂ, ಕಂದ ?

ಚಂದ್ರಹಾಸ: ಶ್ರೀಹರಿಯವಂ, ಅಜ್ಜಿ ಪೇಳ್ದಂದದಿಂ.

ಕುಳಿಂದಕ: ನಿನ್ನ ಪಿತನಾರು ?

ಚಂದ್ರಹಾಸ: ಶ್ರೀಹರಿ.

ಕುಳಿಂದಕ: ಊರ ಪೆಸರಂ ಪೇಳಲಾರೆಯಾ ?

ಚಂದ್ರಹಾಸ: ಶ್ರೀಹರಿಯೆ ನನ್ನೂರು.

ಕುಳಿಂದಕ: ಇರಲಿ, ಮಗು. ನಿನ್ನ ಬೆರಳಂ ತೊಳೆದು ಮದ್ದಿರ್ಕ್ಕುವೆನ್.
[ಸಗ್ಗಳೆಯ ನೀರಿಂದೆ ತೊಳೆಯುತ್ತಾನೆ.]

ಚಂದ್ರಹಾಸ: ಅಯ್ಯೊ ನೋವೂ !

ಕುಳಿಂದಕ: ಹೆದರದಿರು, ಬಾಲಕನೆ. ನಿನ್ನ ನೆಮ್ಮೂರಿಂಗೆ
ಒಯ್ದು, ಶುಶ್ರೂಷೆಗೆಯ್ದು, ಸಲಹುವೆನ್.
ನಾನುಂ ನಿನ್ನ ಶ್ರೀಹರಿಯ ಕಿಂಕರಂ!

[ಸೊಂಟದಲ್ಲಿ ನೇತಾಡುತ್ತಿದ್ದ ತುತ್ತೂರಿಯನ್ನು ಬಾಯ್ಗಿಟ್ಟು ಊದುತ್ತಾನೆ. ತನ್ನ ಧನ್ಯತೆಗೆ ತಾನೆ ಹರ್ಷಿಸಿ ತನಗೆ ತಾನೆ ಹೇಳಿಕೊಳ್ಳುತ್ತಾನೆ.]

ನೋಡಿದರೆ ರಾಜಪುತ್ರನ ತೆರದಿ ತೇಜಸ್ವಿ ;
ಶ್ರೀಹರಿಯ ದಿವ್ಯಪುತ್ರನೆ ದಿಟಂ ಎಂಬಂತೆ
ರಾಜಿಪನು. ನೆನೆಯುತಿಹನಾತನನೆ ಸಂಕಟದ
ಈ ಸಮಯದಲಿ....ಎನ್ನ ಪುಣ್ಯದ್ರುಮಂ
ಫಲಿಸಿತಿಂದು. ಮೇಧಾವಿನಿಯ ಬಂಜೆತನಮಿಂದು
ಪೋದತ್ತು. ಸಫಲಮಾಯ್ತಾಕೆಯ ಮಹಾವ್ರತಂ.
ಕತ್ತಲೆಯ ಮನೆಗಿಂದು ಮಣಿದೀಪವಾಯಿತ್ತು ;
ಬತ್ತಿದ ಸರೋವರಕೆ ನವಜಲಮೊದವಿದತ್ತು ;
ಸಂತಾನಮಿಲ್ಲದ ಕುಳಿಂದಕನ ಬಾಳ್ಗತ್ತಲೆಗೆ
ಆದುದುತ್ತಮ ಕುಮಾರೋದಯಂ! ಮುಕುಂದ ಕೃಪೆ!

ಮೃಗಯಾವ್ಯಸನದಿಂದೆ ಕಾನನಕೆ ಬಂದು ನಾಂ
ಕೃಷ್ಣಮೃಗಮಂ ಅಟ್ಟಿ ಬೆಂಬತ್ತಿದೊಡೆ
ದೊರೆಕೊಂಡನೀ ಕೃಷ್ಣಮೃಗಭಾವದರ್ಭಕಂ.
ಶ್ರೀಹರಿ, ನಿನ್ನೀ ಕೃಪಾಲೀಲೆಯನರಿವರಾರು?

[ಪುಳಿಂದರ ಒಂದು ಗುಂಪು ಬರುತ್ತದೆ.]

೧ನೆಯ ಪುಳಿಂದ: ಎತ್ತಣಿಂದಾಲಿಸಿದೆಯೋ ತುತ್ತೂರಿಯನ್?

೨ನೆಯ ಪುಳಿಂದ: ಇತ್ತಣಿಂದೆಯೆ.

೩ನೆಯ ಪುಳಿಂದ: ನಮ್ಮ ದೊರೆಗೇನಪಾಯಂ ಒದಗಿದುದೋ?

ಕುಳಿಂದಕ: ಪುಳಿಂದರಿರಾ! (ಕರೆಯುತ್ತಾನೆ.)

೪ನೆಯ ಪುಳಿಂದ: ಓವೊ ಇಲ್ಲಿಹನ್! ಇಲ್ಲಿಹನ್!

೨ನೆಯ ಪುಳಿಂದ: ಕಾಣಿಲ್ಲಿ! ಕಾಣಿಲ್ಲಿ!

[ಮುದ್ದು ಸೂಸಿ ಚಂದ್ರಹಾಸನೆಡೆಗೆ ಓಡುತ್ತಾನೆ.]

ಕುಳಿಂದಕ: ದೂರ ನಿಲ್, ಪುಳಿಂದ. ಅಂಜುವನ್ ಸುಕುಮಾರನ್.

೧ನೆಯ ಪುಳಿಂದ: ಏನ್ ಚಂದ ಈ ಸಿಸು!

೩ನೆಯ ಪುಳಿಂದ: ದೇವಲೋಕದ ಕಂದ!

೪ನೆಯ ಪುಳಿಂದ: ನಮ್ಮ ದೊರೆ ನಂದನವನಕ್ಕೆ ಬೇಂಟೆವೋಗಿ
ತಂದಿರ್ಪನೀ ಕಂದರ್ಪನಂದನನ್!

ಕುಳಿಂದಕ: (ನಗುತ್ತಾ) ನೀನ್ ಪುಳಿಂದಕವಿಯಲ್ತೆ?
ಸನ್ಮಾನಿಸುವೆನ್. ಅದಿರಲಿ. ನೀನೀಗ ಚಂದನಾವತಿಗೆ
ಮುಂದೋಡಿ ಈ ಮಂಗಳದ ಸುದ್ದಿಯಂ
ಪುರಕೆಲ್ಲ ಸಾರು. ಮಾರಾಣಿಗಿದನರುಹು.
ದೊರೆಗಾದ ಪುತ್ರೋತ್ಸವಕೆ ಪಸುರ್ತೋರಣಂಕಟ್ಟಿ
ಪಟ್ಟಣವ ಸಿಂಗರಿಸಿ
ಪ್ರಜೆಗಳೆಲ್ಲರ್ ಸಂತಸದೊಳೋಲಾಡಲಿ!

[೪ನೆಯ ಪುಳಿಂದನೂ ಮತ್ತೊಬ್ಬನೂ 'ಅಪ್ಪಣೆ' ಎಂದು ಹೊರಡುತ್ತಾರೆ.]

ಬೇಂಟೆಯಾಡಿದ ಮೃಗಂಗಳಂ ನೀಮೆ ಪಸುಗೆಗೊಂಡು
ಹಬ್ಬಮಂ ಮಾಡಿ ಉಣಿ, ಬೇಡರಿರ.

೨ನೆಯ ಪುಳಿಂದ: ಅಯ್ಯೊ ಕಾಣಿಲ್ಲಿ; ಗಾಯಗೊಂಡಿದೆ ಬೆರಳ್!

ಕುಳಿಂದಕ: ಚಂಡಾಲರೀ ತರಳನಡಿವೆರಳ ಕೊಯ್ದಿಹರು.
ನೋವ ಸೈರಿಸಲಾರದಳುತಿಹನು.

೩ನೆಯ ಪುಳಿಂದ : ಬಲ್ಲೆನಾಂ
ಮದ್ದರ್ನೊಂದನ್. ಈಗಳೆಯೆ ತಂದಪೆನ್.
[ಎಂದು ಓಡುತ್ತಾನೆ.]

ಕುಳಿಂದಕ : (೧ನೆಯ ಪುಳಿಂದನಿಗೆ)
ನೀನಿವನನ್ ಹೆಗಲ ಮೇಲೇರಿಸಿಕೊ.
[ಚಂದ್ರಹಾಸನನ್ನು ಎಚ್ಚರಿಕೆಯಿಂದ ಎತ್ತಿ ಕೂರಿಸುತ್ತಾನೆ.]
ಕಾಡಿನಿಂದಾಚೆ ಹೆದ್ದಾರಿಯಲಿ ನಿಲ್ಲಿಸಿಹ
ನನ್ನ ತೇರ್ಗಿವನನೊಯ್.
(ಒಂದನೆಯ ಪುಳಿಂದನನ್ನು ಹಿಂಬಾಲಿಸಿ ಪುಳಿಂದರೆಲ್ಲ ಹೊರಡುತ್ತಾರೆ.)
ಮೇಧಾವಿನಿಯ ಪುಣ್ಯದಿಂದೆಂತಪ್ಪ ಬೇಂಟೆ
ದೊರೆತುದಿಂದು ! ಮೇರೆವಪ್ಪುವ ಸುಖಕೆ
ಮುಚ್ಚಿವೋಪಳೊ ಏನೊ ಕಂದನಂ ಕಂಡು ?
ಕಂದನನವಳ್ ಕಾಣ್ಬ ಮುನ್ನಮೆ ನಾನ್
ಕಾಣವೇಳ್ಕಾಕೆಯನ್. ಧನ್ಯನಾಂ, ಧನ್ಯೆ ತಾಂ,
ಧನ್ಯಮೆಮ್ಮಿಾ ನಾಡು ! ಧನ್ಯಮಿಾ ಕಾಡೊ,
ಶ್ರೀ ಹರಿಯ ಕಂದನಂ ನನಗಿತ್ತ ಸಗ್ಗವೀಡು !
[ಹೊರಡಲುದ್ಯುಕ್ತನಾಗುತ್ತಾನೆ.]

ಪರದೆ ಬೀಳುತ್ತದೆ

ದೃಶ್ಯ ೯

[ಚಂದನಾವತಿಯ ರಾಜಬೀದಿ. ಪಂಡಿತರಿಬ್ಬರು ದಾನದಕ್ಷಿಣೆಯ ಭಾರಕ್ಕೆ ಕುಸಿದು, ಬಾಗಿ, ಹೊರಲಾರದೆ ಹೊತ್ತುಕೊಂಡು ಬರುತ್ತಾರೆ. ಉಸ್ಸೆಂದು ನಿಲ್ಲುತ್ತಾರೆ. ಬೆವರು ಒರಸಿಕೊಳ್ಳುತ್ತಾರೆ.]

೧ನೆಯ ಪಂಡಿತ : ದಾನವೂ ಭಾರವಾದುದು ನನಗೆ ಇದೆ ಮೊದಲ್.
ಆನೆಯನೆ ಕೊಟ್ಟರೂ ದಾನವೆಂದರೆ ನನಗೆ
ಬಲು ಹಗುರವೆಂದು ಹೆಗಲೊಳೆ ಹೊತ್ತು ತಹೆನಲ್ತೆ !

೨ನೆಯ ಪಂಡಿತ : ಇರಲಿ. ಈಗ ಒಂದಿನಿತು ಹೊರೆ ಇಳುಹಿ,
ಆಮೇಲೆ ಆನೆಯನೆ ಹೊರುವಿರಂತೆ !
[ಇಬ್ಬರೂ ಹೊರೆಗಳನಿಳುಹಿ ನೆಟ್ಟಗೆ ನಿಂತು ಸುಧಾರಿಸಿಕೊಳ್ಳುತ್ತಾರೆ]

೧ನೆಯ ಪಂಡಿತ : ಈ ಪರಿಯ ದಾನಧರ್ಮಂಗಳಂ ಹಿಂದಾರೂ
ಮಾಡಿಲ್ಲ. ಮುಂದಾರು ಮಾಡುವರೊ ನಾನರಿಯೆ !

೨ನೆಯ ಪಂಡಿತ : ಬೆಳ್ಗೊಡೆಯನೊಂದುಳಿದು ಮತ್ತೆಲ್ಲವಂ ಕೊಟ್ಟರ್
ಎಂದೆನಗೆ ಹೇಳಿದರು. ಚೆಲ್ಲಿದರು ವಿತ್ತಮಂ
ಕೋಶವೇ ಬರಿದಾಗುವನ್ನೆಗಂ.

೧ನೆಯ ಪಂಡಿತ : ಬಿಡು, ಬಿಡು ;
ಏನ್ ಮಾತು ನಿನ್ನದು ? ದೊರೆಗೆ ದೊರೆಕೊಂಡ ಆ
ಪುಣ್ಯಶಿಶುವಿನ ಹಿಮೆಯಿಂ ಅರಮನೆಯ ಅಂಗಳಕೆ
ಹೊನ್ನಮಳೆ ಸುರಿದುದಂತೆ ! ಬಡಜನರು
ಹೊರಲಾರದಲ್ಲಲ್ಲಿ ಚೆಲ್ಲುತ್ತ ಹೋದುದಂ
ನಾನೆ ಕಣ್ಣಾರೆ ಕಂಡೆನ್ ; ನನ್ನಾಣೆ !

೨ನೆಯ ಪಂಡಿತ : ಈ ರಾಜ್ಯದಲ್ಲಿನ್ನು ಹೆಣ್ಣ ನಡುವಲ್ಲದೆಯೆ
ಬಡತನಕೆ ಬೇರೆ ಆಶ್ರಯವಿರದು ! ಏನೆಂಬೆ ?

೧ನೆಯ ಪಂಡಿತ : ನಿನ್ನ ಪಾಂಡಿತ್ಯಕೆಲ್ಲಿಂದಮೈತಂದುದೀ
ರಸಿಕತ್ವಂ ? ಆ ಶಿಶುಮಹಿಮೆಯೆ ಇರಲ್ವೇಳ್ಕುಂ !
ಶುಷ್ಕಮುಂ ರಸಮಯಂ ತಾನಾದುದಕೆ ನೀನೆ
ಪರಮಂ ನಿದರ್ಶನಂ !

೨ನೆಯ ಪಂಡಿತ : ಆತನಾ ಮಹಿಮೆಯಿಂ
ಕುಂಟರಿಗೆ ಕಾಲ್ ಬಂದುದಂತೆ; ಕುರುಡರಿಗೆ
ಕಣ್ ಬಂದುದಂತೆ; ಮೂಕರಿಗೆ ಬಾಯ್ ಬಂದು
ಗಳಪತೊಡಗಿದರಂತೆ. ವೈದ್ಯರಿಂ, ಮರ್ದ್ದಿನಿಂ,
ಮಂತ್ರದಿಂ ಗುಣವಡೆಯದಿರ್ದ್ದ ರುಜೆಗಳವೆನಿತೊ
ಗುಣವಾದುವಂತೆ. (ತುಸು ನಕ್ಕು ನಾಚಿದಂತೆ ಮಾಡಿ)
ಇನ್ನೆನಗೆ ನವಯೌವನಂ ಬಂದು
ರಸಿಕತೆಯ ಬುಗ್ಗೆಯುಕ್ಕುವುದೊಂದು ಅಚ್ಚರಿಯೆ ?

೧ನೆಯ ಪಂಡಿತ : ಹರಿಭಕ್ತರಿದ್ದೆಡೆಯೊಳೇನಾಗದಿಹುದೊ !
[ಎದುರಾಗಿ ಮತ್ತೊಬ್ಬ ಪಂಡಿತ ಬರುತ್ತಾನೆ.]

೩ನೆಯ ಪಂಡಿತ : ಏನಿಲ್ಲಿ ನಿಂತುಬಿಟ್ಟಿರಿ ಮೂಟೆಗಳನಿಳುಹಿ
ನಡುಬೀದಿಯಲ್ಲಿ ?

೨ನೆಯ ಪಂಡಿತ ಏನು, ಶಾಸ್ತ್ರಿಗಳೆ,
ಹೀಗೆನ್ನುವಿರಿ ? ದೇಶದಲ್ಲಿರಲಿಲ್ಲವೇನು ತಾವು ?
ದೊರೆಗಿಂದು ದಿವ್ಯಪುತ್ರೋತ್ಸವಂ !

೩ನೆಯ ಪಂಡಿತ : ಮಗನ ಹೆತ್ತಳೆ ಮೇಧಾವಿನಿ ?

೧ನೆಯ ಪಂಡಿತ: ಇನ್ನೇನು? ಹೆತ್ತಂತೆಯೆ! ನಮ್ಮರಸು
ಬೇಂಟೆಯ ಬಿನದಕೆಳಸಿ ಕಾನನಕೆ ಹೋಗಿರಲು
ಮುರಹರನನಲ್ಲದೆ ಇನ್ನಾರನೂ ನೆನೆಯದಿಹ
ಮುದ್ದು ಮಗುವೊಂದು ದೊರಕಿದುದು. ಆ ಶಿಶುಗೆ
ನಾಮಕರಣಂಗೆಯ್ಯೆ ಹೋಗಿದ್ದೆವರಮನೆಗೆ.

೩ನೆಯ ಪಂಡಿತ: ಓಹೊ, ಹೆಸರಿಡಲೆ? ಏನೊ ಹೆಸರು?

೨ನೆಯ ಪಂಡಿತ: ಚಂದ್ರಹಾಸ!

೩ನೆಯ ಪಂಡಿತ: ಬಲು ಸೊಗಸು! ಬಲು ಸೊಗಸು!

೧ನೆಯ ಪಂಡಿತ: ಬರಿಯ ಅಂಕಿತನಾಮವಲ್ತು!

೨ನೆಯ ಪಂಡಿತ: ಹೆಸರಿನ ಹಿರಿಮೆ ಉಸಿರಿಗನ್ವಯ! ತಿಳಿಯಿತೆ?

೧ನೆಯ ಪಂಡಿತ: ಪಾಂಡಿತ್ಯವಾರಿಧಿಯ ಮಥನದಿಂದುದ್ಭವಿಸಿ
ಬಂದ ನವನೀತವದು!

೩ನೆಯ ಪಂಡಿತ: ಅನ್ವರ್ಥವೆಂತೊ? ತಿಳಿಯಲೆಳಸುವೆನು.

೧ನೆಯ ಪಂಡಿತ: ನಿರ್ಮಲಮುಖಾಂಬುಜದೊಳಿಂದುವಂ ಕಳಕಳಿಸಿ
ನಗುವನದರಿಂ . . . ಚಂದ್ರಹಾಸನ್!

೩ನೆಯ ಪಂಡಿತ: ಭಲಾ! ಭಲಾ!

೨ನೆಯ ಪಂಡಿತ: ಪಸುಳೆತನದಿಂದೆ ವೃದ್ಧಾಪ್ಯದನ್ನೆಗಂ
ಬಿಸಜನಾಭನ ಭಕ್ತಿ ದೊರೆಕೊಳದ ಮನುಜರಂ
ನಸುನಗುವ ಧವಳದೊಳ್ಪಿಂ . . . ಚಂದ್ರಹಾಸನ್!

೩ನೆಯ ಪಂಡಿತ: ಭಲಾ! ಭಲಾ! ಭಲಾ! ಬಾಪ್ಪುರೇ!

೧ನೆಯ ಪಂಡಿತ: ಪಸರಿಸುವ ಜಸದ ಬೆಳ್ಪಿಂ . . . ಚಂದ್ರಹಾಸನ್!

೨ನೆಯ ಪಂಡಿತ: ಅಸಮನ್, ಅಕ್ಷೀಣನ್, ಅಕಳಂಕನ್, ಅತಿಶಾಂತನ್
ಎಂಬೆಸೆವ ಸದ್ಗುಣಗಳೇಳ್ಗೆಯಿಂ . . . ಚಂದ್ರಹಾಸನ್!

೩ನೆಯ ಪಂಡಿತ: ಘೇ! ಉಘೇ! ಭಲಾ! ಬಾಪ್ಪುರೇ!

೧ನೆಯ ಪಂಡಿತ: ಮಂಜು ಮಹಿಮಾಸ್ಪದಂ,

೨ನೆಯ ಪಂಡಿತ: ಮಂಜುಮ ಹಿಮಾಸ್ಪದಂ,
[೩ನೆಯ ಪಂಡಿತ ಮೆಚ್ಚಿ ಮೆಚ್ಚಿ ತಲೆದೂಗುತ್ತಿರುತ್ತಾನೆ.]

೧ನೆಯ ಪಂಡಿತ: ಚಾರು ವೃತ್ತಂ,

೨ನೆಯ ಪಂಡಿತ: ಚಾರುವೃತ್ತಂ,

೧ನೆಯ ಪಂಡಿತ: ಕಲಾಪುಂಜಂ,

೧ನೆಯ ಪಂಡಿತ: (೩ನೆಯ ಪಂಡಿತನಿಗೆ) ಅರ್ಥವಾಯಿತು ತಾನೆ, ದ್ವಂದ್ವಾರ್ಥ?

೩ನೆಯ ಪಂಡಿತ: ವ್ಯರ್ಥವಾದೀತೆ ತಮ್ಮ ಅಲಂಕಾರ?
ಈ ಆಲಂಕಾರಿಕನ ಮುಂದೆ? . . . ಮುಂದೆ?

೧ನೆಯ ಪಂಡಿತ: ಸ ದಾನ ಭೋಗಂ,

೨ನೆಯ ಪಂಡಿತ: ಸದಾ ನಭೋ ಗಂ,
[ಮೂರನೆಯ ಪಂಡಿತ ತಲೆದೂಗುತ್ತಾನೆ]

೧ನೆಯ ಪಂಡಿತ: ಕುವಲಯ ಪ್ರಿಯಂ,

೨ನೆಯ ಪಂಡಿತ: ಕುವಲಯ ಅಂದರೆ ಭೂಮಿ, ಮತ್ತು ಕೈರವ, ನೈದಿಲೆ.

೩ನೆಯ ಪಂಡಿತ: ನಾನೇನು ವಿದ್ಯಾರ್ಥಿಯೆ, ತಮ್ಮ ಪ್ರವಚನಕ್ಕೆ?

೨ನೆಯ ಪಂಡಿತ: ಉಂಟೆ? ಉಂಟೆ? ಉಂಟೆ? ತಪ್ಪಾಯ್ತು!

೧ನೆಯ ಪಂಡಿತ: ರಂಜಿಸುವ ರಾಜನ್ ಎನ್ನವೊಲಾದೊಡಂ
ಮಿತ್ರ ತೇಜಕಳವಳಿದು,
ಪಗೆಯ ಭಂಜನೆಗೆ ಸಿಲ್ಕಿ,
ಬಡತನವಪ್ಪಿ, ಕಂದಿ,
ಪಳಿವಂ ಜಗವರಿಯೆ ಪೊತ್ತನ್ ಎಂದು
ಅಮೃತಾರ್ಚಿಯಂ ಜರೆದು ನಗುವನ್
ಅದರಿಂ ಚಂದ್ರಹಾಸನಿಪನ್!

೩ನೆಯ ಪಂಡಿತ: ಸತ್ತೆ, ಸತ್ತೆ, ಸತ್ತೆ, ಪಂಡಿತರೆ!
ನವನೀತಮಂ ಸವಿದು ಹೊಡೆ ಸಿಡಿದು ಹೋಯ್ತು!
ಅಲ್ಲಿ ನೋಡಿ: ಏಕೊ ಪುರ ನಿವಾಸಿಗಳ್
ಗುಂಪೆದ್ದು ಬರುತಿಹರ್!

೧ನೆಯ ಪಂಡಿತ: ಪ್ರಮಾದವಾದೀತು! ಬೇಗಬನ್ನಿ!
[೧ನೆಯ ಮತ್ತು ೨ನೆಯ ಪಂಡಿತರು ಗಂಟುಮೂಟೆ ಎತ್ತಿ ಹೊತ್ತು ಕೊಂಡು ಓಡುತ್ತಲೆ ಹೋಗುತ್ತಾರೆ. ೩ನೆಯವನು ಅವರು ಹೋಗು ವುದನ್ನೆ ನೋಡಿ ನಗುತ್ತಾ, ತಿರುಗಿ ಎದುರು ದಿಕ್ಕಿಗೆ ಹೋಗುತ್ತಾನೆ. ನಾಲ್ಕು ಜನರು ಬರುತ್ತಾರೆ.]

ಒಂದನೆಯವನು: ಪುಣ್ಯಾತ್ಮನಪ್ಪಾ! ಬಹುಕಾಲ ಬಾಳಲಿ!
ಕಣ್ಣಿಲ್ಲದೀ ಪಾಪಿಗೆ ಕಣ್ ಕೊಟ್ಟನಪ್ಪಾ!
ಬೆಳಕೆಂದರೇನೆಂದು ಇಂದು ನಾ ಕಂಡೆ.
[ಸುತ್ತಲೂ ನೋಡುತ್ತಾ ಸುಯ್ಯುತ್ತಾ ಹರ್ಷಿಸುತ್ತಾ]

ಅಃ ಎಂತೆಪ್ಪ ಲೋಕವಿದು ! ಏನಂದ ! ಏನ್ ಚಂದ !
ಇದುವರೆಗೆ ಬರಿಯ ಹೆಸರಾಗಿರ್ದುದೀ ಎಲ್ಲ:
ಈ ಆಗಸ, ಈ ಮುಗಿಲು, ಈ ಹಸುರು, ಈ ಮರ,
ಈ ಹಕ್ಕಿ, ಈ ಹೂವು, ಈ ಕೆಂಪು, ಈ ಬಿಳಿ,
[ಜೊತೆಯಿದ್ದ ಮೂವರನ್ನು ಮೆಚ್ಚಿ ಮುಟ್ಟುತ್ತಾ]
ಈ ನೀನು, ಈ ನೀನು, ಈ ನೀನು! . . .
ಏನದ್ಭುತ ಈ ಎಲ್ಲ! ಏನದ್ಭುತ ನೀವೆಲ್ಲ! . . .
ಕಣ್ಣಿರುವ ನಿಮಗೆ ಕಣ್ಣ ಧನ್ಯತೆಯೆ ತಿಳಿಯದಲ್ಲಾ !

ಎರಡನೆಯವನು: ಬರಿಯ ಕಣ್ಣಿದ್ದರೇನು ಭಾಗ್ಯವಯ್ಯಾ ?
ಹನ್ನೆರಡು ವರ್ಷಗಳಿಂದ ನರಳಿದೆನಯ್ಯಾ
ಆ ಭಯಂಕರ ರೋಗದಿಂದ ! ವೈದ್ಯವಾಯ್ತು,
ಮದ್ದಾಯ್ತು, ಮಂತ್ರವಾಯ್ತು ; ದಾನ, ಧರ್ಮ,
ತೀರ್ಥಯಾತ್ರೆ, ಎಲ್ಲ ಆಯ್ತು.
ಏನಾದರೂ ವಾಸಿಯಾಗಲಿಲ್ಲ.
ಇನ್ನೇನು ನೇಣೊಂದೆ ಉಳಿದಿತ್ತು.
ಮಾರಾಯ ಅವನು ನಮ್ಮಿಳೆಗೆ ಕಾಲಿಟ್ಟ ದಿನವೆ
ಎಲ್ಲ ಗುಣವಾಗಿ ಅರೋಗ ದೃಢಕಾಯನಾದೆ.
ಸಾವಿರ ವರ್ಷ ಬಾಳಲಿ !
ಎಂದೆಂದೂ ನಮ್ಮಿಳೆಯನಾಳಲಿ !
ಪುಣ್ಯಾತ್ಮ !

ಮೂರನೆಯವನು: ಕಾಲಿರದೆ ಬೀದಿಯಲಿ ಹೊರಳುತ್ತಿದ್ದೆನಯ್ಯಾ.
ನೋಡೀಗ ನನ್ನ ! ಬೆಟ್ಟವನು ಬೇಕಾದರೂ
ನಗುನಗುತ ಏರುವೆನು ; ಕಂದಕವ ನೆಗೆಯುವೆನು.
ಕೋಟೆಕೊತ್ತಲಗಳನು ಲಗ್ಗೆ ಹತ್ತುವೆನು !
ನಾನಿನ್ನು ಸೈನ್ಯಕ್ಕೆ ಸೇರಿ, ನಮ್ಮೊಡೆಯನಿಗೆ
ಸೇವೆ ಸಲ್ಲಿಸಿ ಬಾಳ ತೇಯುವೆನು.

ನಾಲ್ಕನೆಯವನು: ಮೂಕನಾಗಿದ್ದೆ. ಇನ್ನೇನು ? ಸಂಗೀತವನೆ
ಕಲಿತು ಆಸ್ಥಾನದಲಿ ವಿದ್ವಾಂಸನಾಗುವೆನು.

ಎಲ್ಲರೂ: ಜಯವಕ್ಕೆ ಚಂದ್ರಹಾಸಂಗೆ ! (ಎಂದು ಹೊರಡುತ್ತಾರೆ:)
[ಸೆರೆಮನೆಯಿಂದ ಬಿಡುಗಡೆಯಾದ ಇಬ್ಬರು ಬರುತ್ತಾರೆ.]

೧ನೆಯವನು: ಕೊರಳಾಣೆ, ನನ್ನಾಣೆ, ನಿನ್ನಾಣೆ !

ನಿಜವಾಗಿಯೂ ನಾನಲ್ಲಪಪ್ಪಾ ಕದ್ದವನು.
ಸುಮ್ಮನೆ ಸೆರೆಮನೆಯಲಿಟ್ಟಿದ್ದರಯ್ಯಾ.
ಇಂದೆಲ್ಲರನು ಬಿಡುಗಡೆ ಮಾಡಿದರು.

೨ನೆಯವನು : ಬ್ರಹ್ಮಹತ್ಯೆ ಗೋಹತ್ಯೆ ಮಾಡಿದವರನ್ನೂ ?

೧ನೆಯವನು : ಇದೇನು ಹೀಗೆಂದು ಕೇಳುವೆಯಲ್ಲಾ ?
ಇನ್ನು ಮುಂದೆ ನಾಡಿನ ಸೆರೆಮನೆಗಳನ್ನೆಲ್ಲ
ಮುಚ್ಚುವರಂತೆ.

೨ನೆಯವನು : ಕಳ್ಳರಿಗೆ ಕೊಲೆಪಾತಕರಿಗೆ ಗತಿ ?

೧ನೆಯವನು : ಆ ಪುಣ್ಯಾತ್ಮನೀ ನಾಡಿಗೆ ಕಾಲಿಡಲು
ಹುಲಿಯಾದಿಯಾಗಿ ಕ್ರೂರಮೃಗಗಳೂ
ಸಾಧುವಾದುವಂತೆ! ಇಂತಿರಲು
ಕಳವು ಕೊಲೆಗಳಿಗೆಲ್ಲಿ ಕತ್ತಲೆ, ಬೆಳಕಿರಲು ಮುಂದೆ ?

೨ನೆಯವನು : ಬಾ, ಭಾವ. ಗುಡಿಗೆ ಹೋಗಿ, ಶ್ರೀಹರಿಗೆ
ಹಣ್ಣು ಹೂ ಮುಡಿಪನೊಪ್ಪಿಸಿ, ಮನೆಗೆ ಹೋಗೋಣ.
ನೀನೆಂದು ಸೆರೆಯಿಂದ ಹಿಂದಿರುಗಿ ಬರುವೆಯೋ
ಎಂದು ಉಣದೆಯೆ ಉಡದೆ ಕೊರಗಿಹಳು ಅಕ್ಕ.
ಇಂದು ಅವಳಿಗೆ ಜೀವ ಬಂದಂತಾಗಿದೆ.

[ತೆರಳುತ್ತಾರೆ. ಏಳೆಂಟು ಜನ ಪಟ್ಟಣಿಗರು ಜಯಘೋಷಮಾಡುತ್ತಾ ಪ್ರವೇಶಿಸುತ್ತಾರೆ.]

೧ನೆಯವನು : ಚಂದ್ರಹಾಸಂಗೆ ಜಯವಾಗಲಿ !

ಎಲ್ಲರೂ : ಜಯವಾಗಲಿ ! ಘೇ ! ಉಘೇ !

೨ನೆಯವನು : ವಿಧುಹಾಸನಿಗೆ ಜಯವಾಗಲಿ !

ಎಲ್ಲರೂ : ಜಯವಾಗಲಿ ! ಘೇ ! ಉಘೇ !

೩ನೆಯವನು : ಶಶಿಹಾಸನಿಗೆ ಸೊಗವಾಗಲಿ !

ಎಲ್ಲರೂ : ಸೊಗವಾಗಲಿ ! ಘೇ ! ಉಘೇ !

೪ನೆಯವನು : ಶ್ರೀಹರಿಯ ಕೃಪೆಯಾಗಲ್ಲಿ !

ಎಲ್ಲರೂ : ಕೃಪೆಯಾಗಲಿ ! ಘೇ ! ಉಘೇ !

ಪರದೆ ಬೀಳುತ್ತದೆ

ಮಧ್ಯರಂಗಂ

ದೃಶ್ಯ ೧

[ಸೇನಾಶಿಬಿರದ ಬಳಿಯ ಹಕ್ಕಲಿನಲ್ಲಿ ದಳಪತಿಗಳಾದ ವೀರಸೇನ ರಣಸಿಂಹರು ತಿರುಗಾಡುತ್ತಾ ಬರುತ್ತಾರೆ. ಬಂಡೆಗಳಿವೆ, ಗಿಡ ಮರ, ಪೊದೆಗಳಿವೆ. ದೂರ ಸುತ್ತಲೂ ಕಾಡು ಅಂಚುಕಟ್ಟಿದಂತಿದೆ.]

ರಣಸಿಂಹ : ಕಾಳೆಗದ ಬಳಲಿಕೆಯ ಪರಿಹರಿಸಲೆಂಬಂತೆ
ಬೀಸುತಿದೆ ತಂಗಾಳಿ.

ವೀರಸೇನ : ಏನು ಶಾಂತಿಯ ಸಂಜೆ !
ಗಗನಮಣಿ ಪಶ್ಚಿಮಾಂಗನೆಯ ಬೈತಲೆಯ
ರಂಗುಮಾಣಿಕದಂತೆ ಪಡುವೆಟ್ಟದಂಚಿನಲಿ
ಕಂಗೊಳಿಸುತಿಹನೆಂತು !

ರಣಸಿಂಹ : ಸಂಜೆವೆಣ್ಣುಟ್ಟ
ರಕ್ತಾಂಬರವೊ ಎಂಬಂತೆ ಬೈಗುಗೆಂಪೆಸೆಯುತಿದೆ !

ವೀರಸೇನ : ಕಾಳೆಗದ ದಿನದ ಸಂಜೆಗೀ ನೆತ್ತರ್ಗೆಂಪು
ಸಹಜಮಲ್ತೆ ?....ಈ ದಿನದ ಕಾಳೆಗದಿ ನಾಳೆಯ ಗೆಲ್
ನಮ್ಮದಾದಂತಾಯ್ತು, ಅಲ್ಲವೆ, ರಣಸಿಂಹ ?

ರಣಸಿಂಹ : ಹಾಗೆಂದೆ ತೋರುತಿದೆ....ಇನ್ನೇನು ನಮ್ಮವರ್
ಸೋತು ಹಿಮ್ಮೆಟ್ಟುವರೊ ಎಂದಿರ್ದೆ. ಅನಿತರೊಳ್
ಕೇಳ್ದತ್ತು ಸೇನಾನಿ ಚಂದ್ರಹಾಸನ ವೀರ ಅಟ್ಟಹಾಸಂ.
ಕಂಡುದೆ ತಡಂ ತಮ್ಮ ನೆಚ್ಚಿನ ವೀರಮೂರ್ತಿಯಂ,
ಪಡೆಗೆ ಪಡೆ ಉಘೇ ಬೊಬ್ಬಿರಿದು,
ಭಕ್ತಿಯಾವೇಶದಿಂ ಶಕ್ತಿಯುಕ್ಕಿತೊ ಎನಲ್
ನುಗ್ಗಿದರ್ ಮುಂಗಾರ ಬಿರುಗಾಳಿಯಂತೆವೋಲ್.
ಹಿಮ್ಮೆಟ್ಟುತೋಡಿದಾ ಶತ್ರುಸೇನೆ
ಕಳೆದುಕೊಂಡುದು ತನ್ನ ಬಹುಳ ಸಂಖ್ಯೆಯಂ.

ವೀರಸೇನ : ನಮ್ಮ ಪಡೆಯೂ ಕಳೆದುಕೊಂಡಿಹುದು ತನ್ನಾಳ್ಗಳಂ.

ರಣಸಿಂಹ : ಕಳೆದಿಹುದು. ಆದೊಡಂ ಬಹಳ ಜನ ಮಡಿದಿಲ್ಲ.
ಇಂದಾದ ಕಾಳೆಗಂ ಸಮಗ್ರೈಯ ಸಮರಂ.
ಆದೊಡಂ ಶತ್ರುಪಕ್ಷದ ಮುಂದೆ ನಮ್ಮ ನಷ್ಟಂ

ಕಿರಿದೆ. ಸೇನಾನಿಯೊಂದು ಎಣೆಯಿಲ್ಲದಿಹ
ಯುದ್ಧಕೌಶಲದಿಂದೆ ನಾಳೆಯ ಜಯಂ
ನಮ್ಮದೆಂಬುದಕೆ ಸಂದೇಹಮಿಲ್ಲ.

ವೀರಸೇನ: ಸೇನಾನಿ ಚಂದ್ರಹಾಸಂ ಕ್ಷೇಮದಿಂದಿರ್ಪನಲ್ತೆ ?

ರಣಸಿಂಹ: ಆತಂಗದೇನೊ ಅಲೌಕಿಕ ರಕ್ಷೆಯಿರ್ಪಂತೆ
ತೋರುತಿದೆ. ಕೈದುಗಳ್ ಸೋಂಕಲಂಜುವುವವನ!

ವೀರಸೇನ: ಈಗಳೆಲ್ಲಿಹನು ? ನೋಳ್ಪಮಾತನಂ

ರಣಸಿಂಹ: ತನ್ನ ಗೂಡಾರದಲ್ಲಿಹನು. ನಾಳೆಯ ಸಮರ
ಸನ್ನಾಹವಂ ಚಿಂತಿಸುತಲಿಹನೆಂದು ತೋರುವುದು.
ನಾನ್ ಕಾಣೆ ಅವನ ಮೀರಿಹ ಯೋಧನಿಹನೆಂದು.
ಸರಳನೆಸೆವುದರಲ್ಲಿ ಅವನ ಮುಂದಾರಿಲ್ಲ.
ನಾನೆ ಕಂಡಿಹೆನು : ಅವನ ಬಾಣಗಳೆಂತು
ಕಾರ್ಗಾಲ ಮಳೆಯಂತೆ ಅರಿಭಟರ ಮುಚ್ಚುವುವು!
ಅವನ ಕೂರಸಿಮಿಂಚೊ? ಜವನ ಸಂಚು!
ಕಳೆದಿಹೆನು ಹನ್ನೆರಡು ವರ್ಷಗಳನ್ ಆನ್
ಅವನ ಸಂಗಾತಿಯಾಗಿ. ಅವನೆಣೆಯ ವೀರರಂ,
ಅವನೆಣೆಯ ಭಕ್ತರಂ, ಕಂಡಿಲ್ಲ, ಕೇಳಿಲ್ಲ.
ಕ್ಷಮೆಯೊಳುಂ ಕ್ಷಮೆಯನ್ನೆ ಮೀರಿಹನು.
ಎನಿತೊ ಅರಸರ ಗೆಲ್ದನಾದರೂ ಒಮ್ಮೆಯೂ
ಕ್ರೌರ್ಯಮಂ ಕ್ಷಾತ್ರಮೆಂದವನು ಭ್ರಮಿಸಲಿಲ್ಲ.

ವೀರಸೇನ: ಅಹುದು. ಅವನ ದನಿ ಸುಭಟರೆದೆಗಾವೇಶ.
ಅವನಿರಲು ಸಾವೆಂಬುವಂಜಿಕೆಯನರಿಯರಾ
ಸೈನಿಕರ್. ನಾನೆ ನೋಡಿದೆನಿಂದು. ಅರಿಭಟರ
ಮುತ್ತಿಗೆ ಸಬಲವಾಗಲೆಮ್ಮವರು ಹಿಂಜರಿಯ
ತೊಡಗಿದರ್. ಚಂದ್ರಹಾಸನ ಅಮೃತವಾಣಿಯಂ
ಉತ್ತೇಜಕದ ನುಡಿಗಳಂ ಕೇಳಿದುದೆ ತಡಂ
ಮುಗ್ಗಿದರ್ ಮುಗಿಲ ಮೊಗ್ಗರದಂತೆ;
ಹಿಗ್ಗಿದರ್, ಪೆರ್ಚ್ಚಿದರ್ ಭೈರವ ರಣಾವೇಶದಿಂ!

ರಣಸಿಂಹ: ಜಯರಮಾ ಜೀವಿತೇಶ್ವರನವನ್!

ವೀರಸೇನ: ಅವನ ಕಂಠದೊಳೊಂದು ಸಾಲಗ್ರಾಮದುಪಲಂ

ಪೊನ್ನಮನೆ ಮಾಡಿಕೊಂಡೆಸೆಯುತಿಹುದಂತೆ!
ಆತನ ವಿಚಿತ್ರ ಕಥೆಗದೆ ಮೂಲವಂತೆ!
ಆ ಮೈಮೆಯಿಂದವನಿಗೆಲ್ಲಿಯುಂ ಗೆಲ್ಲಂತೆ!
ನಿಜವೆ?

ರಣಸಿಂಹ: ಅಹುದು. ಆದರಾತನ ಗೆಲವಿಗಾ
ಬಟ್ಟೆಗಲ್ಲೊಂದು ಬರಿ ನಿಮಿತ್ತಮಾತ್ರಂ.
ಭಕ್ತಿಸತ್ತ್ವದೊಳಿರ್ಪುದಾತನಾ ಮಹಾಶಕ್ತಿ.
[ಇಬ್ಬರೂ ನಡೆಯುತ್ತಾ ಒಂದು ಬಂಡೆಯ ನೆತ್ತಿಯನ್ನೇರಿ ಕೂರುವರು]

ವೀರಸೇನ: ಅದೊ, ಎನಿತು ಸುಂದರಂ ಈ ಚಂದ್ರೋದಯಂ!

ರಣಸಿಂಹ: ಶಾಂತಿಮಂದಿರನಾಗಿ ಶೀತಕಾಂತಿಯು ಸುಧಾ
ವರ್ಷದಿಂದಿಳೆಗೆ ಹರ್ಷದ ತಣ್ಬನೆರಚುತ್ತೆ
ಬರುತಿಹನು, ರಣದ ದಣಿವಂ ಕಳೆಯಲೆಂಬಂತೆ.

ವೀರಸೇನ: ಹೋಮಾಗ್ನಿ ಧೂಮವಂ ಭೇದಿಸುತಲೇಳುವಾ
ಇಷ್ಟದೇವತೆಯಂತೆ, ಕತ್ತಲೆಯನಟ್ಟುತ್ತ
ಮೂಡಿ ಮೆರೆಯುತಿಹನಾ ಇಂದ್ರದಿಗ್ವೇದಿಯಲಿ.

ರಣಸಿಂಹ: ನಮ್ಮೆಲ್ಲ ಸಮರ ಸನ್ನಾಹವನೆ ಮೂದಲಿಸಿ
ನಗುವಂತೆ ತೋರುತಿದೆ ಈ ಚಂದ್ರಹಾಸಂ!

ವೀರಸೇನ: ಆದರೆಮಗೊಡೆಯನ್ ಆ ಚಂದ್ರಹಾಸನಲ್ತೆ?
[ಇಬ್ಬರೂ ನಗುತ್ತಾರೆ.]
ನಾಳೆ ಆತನ ಸನ್ನೆಯಲಿ ನಡೆವ ಸಮರದಲಿ
ನಮ್ಮ ಗೆಲ್ಲನೆ ಸೂಚಿಸುವ ಹೊನ್ನಲೇಪಮಂ
ತಳದೆಸೆವ ಜೊನ್ನವೆಳ್ಳಿಯ ಗುರಾಣಿಯೆನಲ್ಕೆ
ಶೋಭಿಸುತ್ತಿಹನೀ ನಿಶಾಜೀವಿತೇಶ್ವರಂ!

ರಣಸಿಂಹ: ಕುಳಿತಿಲ್ಲಿ ಒಂದಿನಿತುವೊಳ್ತು ಮೆಯ್ಮರೆಯುವಂ
ಸೌಂದರ್ಯತೀರ್ಥದಲಿ ಮುಳುಗುತಾನಂದದಿಂ!

ಪರದೆ ಬೀಳುತ್ತದೆ

ದೃಶ್ಯ ೨

[ಚಂದನಾವತಿಯ ಒಂದು ಬೀದಿ. ಕುಂತಳನಗರದ ನಿವಾಸಿಯೊಬ್ಬನು ಬರುತ್ತಾನೆ.]

ಕುಂತಳನಿವಾಸಿ: ಹಿಂದೆ ನಾನಿಲ್ಲಿಗೈತಂದಾಗಳ್ ಈ ನಾಡು
ಕಾಡ ಬೀಡಾಗಿತ್ತು. ಇಂದೊ ಹೊಸತೊಂದು

ನೋಟ ! ಸಸ್ಯಸಮೃದ್ಧಿಯಿಂ, ಪುರಗಳಿಂ,
ಉದ್ಯಾನವನಗಳಿಂ ಸಿರಿಯ ನೆಲೆವೀಡಾಗಿ
ಶೋಭಿಸಿದೆ. ಈ ನಾಡ ಜನರೆನಿತು ಪುಣ್ಯಾತ್ಮರೊ !....
ಈ ಚಂದನಾವತಿಯೊ ಸೊಬಗಿನಾಲಯದಂತೆ
ಮೆರೆಯುತಿದೆ. ಮುಗಿಲ ಮುಟ್ಟುವ ಸೌಧಶಿಖರಗಳೇನ್,
ಮಣಿಶಿಲಾಸೋಪಾನದಿಂದೆಸೆವ ಕೊಳಗಳೇನ್,
ಮೊರೆಮೊರೆದು ಪರಿವ ಪರಿಕಾಲ್ಗಳೇನ್, ತಿಳಿಯನೀರ್
ತುಂಬಿತುಳುಕುವ ಬಿತ್ತರದ ಸರೋವರಗಳೇನ್,
ಕೆರೆಗಳೇನ್ !....ಮಣಿಕೃತಕ ಶೈಲಗಳೊ,
ದುರ್ಗಮದ ಕೋಟೆಕೊತ್ತಳಗಳೊ,
ಶಿಲ್ಪಕಲೆ ಬಲೆನೆಯ್ದ ಗುಡಿಗಳೊ,
ಕಣ್ಣಿಟ್ಟ ಕಡೆ ಕಂಗೊಳಿಪವೈಸೆ !....
ಎಲ್ಲಿ ಕಿವಿಗೊಟ್ಟೊಡಂ ಸಾಮರವದಿಂಚರಂ ;
ಲಲನೆಯರ ಮೆಲ್ಲುಲಿಗಳಿಂಪು. ಹೂ ಗಂಧ
ಧೂಪ ಧೂಮದ ಕಂಪು . . ಅಃ ಪೈರು ಪಚ್ಚೆಯ ಸೊಬಗೊ !....
ಈ ನಾಡೊಳೊಂದು ಮರಿದುಂಬಿಯಾಗುದಿಸಿ ಬರೆ,
ಒಂದು ಕೋಗಿಲೆಯಾಗಿ ಪುಟ್ಟಿ ಬರೆ ಪರಮಪುಣ್ಯಂ !....
ನಮ್ಮ ಕುಂತಳನಗರಿಗಿದು ಸಗ್ಗಮೆ ದಿಟಂ !

[ಇಬ್ಬರು ಪುರಜನರು ಬರುತ್ತಾರೆ. ಕುಂತಳನಿವಾಸಿಯನ್ನು ನೋಡಿ]

ಮೊದಲನೆಯ ಪೌರ: ಆವನೊ ಹೊಸಬನಿರುವಂತೆ ತೋರುತಿದೆ.

ಎರಡನೆಯ ಪೌರ: ಸೋದರನೆ, ನಾಡಾವುದದು ನಿನ್ನ ಜನ್ಮದಿಂ
ಪುನೀತಮಾಗಿಹುದು, ಪೇಳ್. ಧನ್ಯರಪ್ಪೆವು ಕೇಳ್ದು.

ಕುಂತಳನಿವಾಸಿ: (ತನ್ನಲ್ಲಿಯೆ)
ಏನ್ ವಿನಯಮಿಾ ನಾಡವರ್ಗೆ !.... (ಪ್ರಕಾಶ)
ಅಣ್ಣಾ, ನಾನು ಕುಂತಳನಗರದಿಂ ಬಂದಿಹೆನು ;
ನಿಮ್ಮ ನಾಡಿನ ಸೊಬಗು ಸಿರಿ ವಿಭವಗಳನೆಲ್ಲ
ಕೇಳ್ದು, ಕಣ್ಣಿಂ ಕಂಡು ಧನ್ಯನಾಗಲ್ಕೆ
ಯಾತ್ರಿಕನವೋಲ್ ಇಲ್ಲಿಗೈತಂದೆ.
ನಿಮ್ಮ ನಾಡಿನ ಸಿರಿಯ, ನಿಮ್ಮ ನಗರದ ಸೊಬಗ
ಕಂಡು ಬೆರಗಾಗಿ ಹೋದೆನ್. ಹಿಂದೆ ಇಂತಿರಲಿಲ್ಲ.

ಮೊದಲನೆಯ ಪೌರ: ನಮ್ಮನಾಳುವ ಪುಣ್ಯಪುರುಷನ ಮಹಿಮೆಯಿಂ
ನಮ್ಮ ನೆಲಕಿಳಿದಿಹುದು ಆ ವೈಕುಂಠ ಕೃಪೆ !

ಕುಂತಳನಿವಾಸಿ: ನಿಮ್ಮನಾಳುವ ಪುಣ್ಯ ಪುರುಷನಾರು ?

ಎರಡನೆಯ ಪೌರ: ಕೇಳ್ದರಿಯೆಯೇಂ ನೀಂ ಚಂದ್ರಹಾಸನ ಕೀರ್ತ್ತಿಯಂ?

ಕುಂತಳನಿವಾಸಿ: ಆತನೇಂ ನಿಮ್ಮರಸನೇ ?

ಮೊದಲನೆಯ ಪೌರ: ದತ್ತುಮಗನಾತನೈ ನಮ್ಮರಸು ಕುಳಿಂದಂಗೆ.
ಆತನಿಂದಲೆ ನಮ್ಮ ಪೊಳಲ ಸಿರಿ ಇಂತು
ಪೆರ್ಚಿಹುದು. ರಾಜ್ಯವನು ಬಿತ್ತರಿಸಿ, ಅರಿನೃಪರ
ಮುರಿದಿಕ್ಕಿ, ಪ್ರಜೆಗಳೆದೆಯಲಿ ದೈವಭಕ್ತಿಯಂ
ಬಿತ್ತಿ, ಬೆಳೆದಿಹನು ಸೊಗವನೆಲ್ಲೆಲ್ಲಿಯುಂ.

ಎರಡನೆಯ ಪೌರ: ಬೇಂಟೆಯಾಡುತ್ತೆಮ್ಮ ನೃಪನಡವಿಯೊಳ್
ತಿರುಗುತಿರೆ ವನದೇವತೆಯೆ ಆ ಶಿಶುವನಾತಂಗೆ
ತಂದಿತ್ತಳಂತೆ ! ನಮ್ಮಿಾ ನಗರಿಗಾ ಬಾಲಕಂ
ಬಂದ ದಿನದಂದು ನಭದೊಳ್ ದೇವದುಂದುಭಿ
ಮೊಳಗಿತಯ್ ; ಅಭ್ರದಿಂ ಬಿಳ್ದುದು ಕನಕವೃಷ್ಟಿ !

ಕುಂತಳನಿವಾಸಿ: ನೀಂ ಪೇಳ್ದುದಂ ಕೇಳ್ದೆನಗೆ ಉಕ್ಕುತಿದೆ ಕರುಬು.
ನಮ್ಮ ನಾಡಿನ ಗೋಳನೇನೆಂಬೆನೋ !

ಮೊದಲನೆಯ ಪೌರ: ನಿಮ್ಮ ನಾಡೆಂತಿಹುದು ? ನಿಮ್ಮರಸನೆಂತು ?
ಮಳೆಬೆಳೆಗಳೆಂತು ? ಧರ್ಮಭಕ್ತಿಗಳೆಂತು ?
ನಾಡಜನರೆಲ್ಲ ಸಿರಿಸೊಗವನನುಭವಿಸಿಹರೆ ?

ಕುಂತಳನಿವಾಸಿ: ನಮ್ಮ ನಾಡಿನ ಕಥೆಯ ಕೇಳಿದರೆ
ವ್ಯಥೆಯಾಗದಿರದು ನಿಮಗೆ.
ನಮ್ಮರಸನೊಳ್ಳಿದಂ. ಮಳೆಬೆಳೆಗಳೆಲ್ಲ
ಎಂದಿನಂತೆಯೆ ಇಹವು. ರೋಗರುಜೆಬಾಧೆಯುಂ
ಎಲ್ಲಿಯೂ ತೋರಿಲ್ಲ.

ಎರಡನೆಯ ಪೌರ: ಮತ್ತೇನು ಕೊರತೆ?

ಕುಂತಳನಿವಾಸಿ: ನಮ್ಮರಸನಿಗೆ ದುಷ್ಟಬುದ್ಧಿ ಎಂಬೊನ್ ಮಂತ್ರಿ.
ವೃದ್ಧನಾಗಿಹ ದೊರೆಯನವನು ಮೂಲೆಗೆ ನೂಂಕಿ
ನಾಡನಾಳುವ ಸೂತ್ರಮಂ ತಾನೆ ಕೈಕೊಂಡು,
ಪ್ರಜೆಗಳಂ ಸುಲಿದು ಸೂಕ್ಷ್ಮವಿಧಾನಂಗಳಿಂ,
ತನಗಾಗದವರಂ ನಾನಾ ಉಪಾಯದಿಂ
ಕೊಲಿಸಿ, ಪ್ರೋತ್ಸಾಹಮಂ ಕಳ್ಳಕಾಕರಿಗಿತ್ತು,

ರಾಜ್ಯದಾದಾಯಮಂ ತನ್ನ ಬೊಕ್ಕಸಕಿಟ್ಟು
ಧೂರ್ತನಾಗಿಹನು. ಹೇಳಿಕೇಳುವರಿಲ್ಲ;
ತಾನೆತಾನಾಗಿಹನು........(ದೂರ ನೋಡಿ)
ಅದೇನದಾ ಕೋಲಾಹಲಂ?

ಮೊದಲನೆಯ ಪೌರ: ಚಂದ್ರಹಾಸನ ದಂಡು ನೆರೆಯ ರಾಜ್ಯದ ಮೇಲೆ
ಸಾಗಿತ್ತು. ಜಯವಾಯ್ತು ಎಂದೆ ತೋರುತಿದೆ.
ಕೇಳುತಿದೆ ಸೈನಿಕರ ವಿಜಯಾಟ್ಟಹಾಸಂ.
ಸೇನೆ ಹಿಂತಿರುಗಿ ಬರುತಿದೆ ನಗರ ಶಿಬಿರಕ್ಕೆ.
[ಸೈನಿಕರ ಒಂದು ಗುಂಪು ಬರುತ್ತದೆ. ಒಬ್ಬನನ್ನು ಕರೆದು ಕೇಳುತ್ತಾನೆ.]
ಪೇಳಣ್ಣ ವಾರ್ತೆಯಂ

ಸೈನಿಕ: ಮತ್ತಾವ ವಾರ್ತೆ?
ವಿಜಯವೊಂದೇ ನಮ್ಮ ವಾರ್ತೆ!

ಎರಡನೆಯ ಪೌರ: ಜಯದ ಮೇಲೆ ಜಯ! ನಮ್ಮರಸಗೆಣೆಯಾರು?

ಸೈನಿಕ: ಮತ್ತೊಂದು ಪಯಣ ಕಾದಿದೆ ನಾಳೆ.

ಮೊದಲನೆಯ ಪೌರ: ಎಲ್ಲಿಗೆ?

ಸೈನಿಕ: ಕುಂತಳ ನಗರಕ್ಕೆ.

ಕುಂತಳನಿವಾಸಿ: (ಬೆದರಿ) ಏತಕ್ಕೆ?

ಸೈನಿಕ: ರಾಯಂಗೆ
ವರ್ಷ ವರ್ಷಕೆ ನಾವು ಕುಡುವ ಸಿದ್ದಾಯಮಂ
ದುಷ್ಟಬುದ್ಧಿಗೆ ಸಲಿಸಲೆಂದು ಹೋಗುವೆವು.

ಕುಂತಳನಿವಾಸಿ: (ತನ್ನೊಳಗೆ) ಬದುಕಿದೆವು!

ಎರಡನೆಯ ಪೌರ: ಚಂದ್ರಹಾಸನೂ ಹೋಗುವನೆ?

ಸೈನಿಕ: ಇಲ್ಲ; ದೂತರು, ಮತ್ತು ಅವರ ನೆರವಿಗೆ ಸೈನಿಕರು.
(ಸೈನಿಕ ಬೇಗ ಬೇಗನೆ ಹೋಗುತ್ತಾನೆ.)

ಎರಡನೆಯ ಪೌರ: (ಕುಂತಳನಿವಾಸಿಗೆ) ಕುಂತಳಕೆ ಎಂದೊಡನೆ
ನಿನಗೆ ಬೆದರಿಕೆಯಾಯ್ತೆ?

ಕುಂತಳನಿವಾಸಿ: ಮೊದಲೇನೊ ಬೆದರಿದೆನ್, ಮತ್ತೆ ಸಂತಸವಾಯ್ತು.
ಅನಿತರಲಿ ಅವನ ವಿವರಣೆ ಕೇಳಿ ವ್ಯಥೆಯಾಯ್ತು.

ಮೊದಲನೆಯ ಪೌರ : ಏಕೆ? ನೀನೆಂದುದುರ ಅರ್ಥವೆ ಹೊಳೆಯಲಿಲ್ಲ?

ಕುಂತಳನಿವಾಸಿ : ಸೇನೆ ಮುತ್ತುವುದೆಂದು ಹೆದರಿದೆನ್. ಮತ್ತೆ,
ಚಂದ್ರಹಾಸನ ಸೇನೆ, ದುಷ್ಟಬುದ್ಧಿಗೆ ಶಿಕ್ಷೆ,
ಎಂದು ಸಂತಸವಾಯ್ತು! ಮತ್ತೆ, ದುಷ್ಟಬುದ್ಧಿಗೆ
ಸಿದ್ಧಾಯಮಂ ಕೊಡಲೆಂಬುದನು ಕೇಳಿ ವ್ಯಥೆಯಾಯ್ತು.

ಮೊದಲನೆಯ ಪೌರ : ಸೋದರನೆ, ಬಾ ನಮ್ಮ ಮನೆಗೆ.
ನಮ್ಮ ಆತಿಥ್ಯವನು ಕೃಪೆಗೈದು ಸ್ವೀಕರಿಸಿ,
ನಮ್ಮೆಲ್ಲರಂ ಧನ್ಯರನ್ನಾಗಿ ಮಾಡು.

ಎರಡನೆಯ ಪೌರ : ಇಲ್ಲಿ ಸತ್ರಗಳಿಲ್ಲ. ಜನರೆದೆಯೆ ಸತ್ರ!
ನಮ್ಮ ನಾಡಿಗೆ ಬರುವರಾರೂ
ಬಿಸಿಲು ಮಳೆ ಗಾಳಿ ಪಸಿವು ನೀರಡಿಕೆಗಳ
ಬಾಧೆಯನರಿಯರಯ್ಯಾ!

ಕುಂತಳನಿವಾಸಿ : ಮತ್ತೆ?
ಚಂದ್ರಹಾಸನ ಪ್ರಜೆಗಳಲ್ಲವೆ ನೀವು!
[ಮೂವರೂ ಹೊರಡುತ್ತಾರೆ.]

ಪರದೆ ಬೀಳುತ್ತದೆ

(ಸಶೇಷ)

ಕಮ್ಮಟದ ಕಿಡಿಗಳು

ಮೇಕು—ಇದರ ಅರ್ಥ ಮತ್ತು ನಿಷ್ಪತ್ತಿ

ಶಕುನ ಜೋಯಿಸ ಮುಂತಾದ ವಿದ್ಯೆಗಳಲ್ಲಿ ಪಾರಂಗತನಾದ ಸೂರ್ಯಮಿತ್ರಾಚಾರ್ಯನೆಂಬ ವಿದ್ವಾಂಸನು ತನಗೆ ಇನ್ನೂ ತಿಳಿಯದಿರುವ ಕೆಲವು ರಹಸ್ಯಗಳನ್ನು ಸುಧರ್ಮಾಚಾರ್ಯರೆಂಬ ಜೈನ ಯತಿಗಳಿಂದ ತಿಳಿಯಲು ಮನಸ್ಸುಮಾಡಿ ಅವರ ಬಳಿಗೆ ಹೋಗಿ ಅವರ ಕಾಲಮೇಲೆ ಕವಿದುಬಿದ್ದು ತನಗೆ ವಿದ್ಯಾರಹಸ್ಯಗಳನ್ನು ಹೇಳಿಕೊಡಬೇಕೆಂದು ಅವರನ್ನು ಬೇಡಿದಾಗ ಅವರು ನಮ್ಮಂಥ ಋಷಿರೂಪಧಾರಿಗಳಿಗಲ್ಲದೆ ಆ ರಹಸ್ಯಗಳನ್ನು ಕಲಿಯಲಾಗುವುದಿಲ್ಲವೆಂದು ಹೇಳಿದಾಗ ಸೂರ್ಯಮಿತ್ರನು ತನ್ನಲ್ಲಿಯೇ

> ತಲೆವಱಿದುಟ್ಟುದಂ ಬಿಸುಟು ಮಿಾಯದೆ **ಮೇಕದೆ** ದಂತಪಂಕ್ತಿಯಂ
> ಸುಲಿಯದೆ ಸಂಯಮೋಪಕರಣಂಗಳನಿಂಬಿನೆ ತಾಳ್ದಿ ದೇಹದೊಳ್ ।
> ಮಲಮನನಾರತಂ ತಳೆದುಪಾಸಕವಾಸದೊಳೇಕ ಭುಕ್ತಮಂ
> ಸಲಿಸುವ ಘೋರವೀರತಪಮಾತಪಮಾತಪದಿಂದಮುಗ್ರಳಂ ॥

ಎಂದು ಚಿಂತೆಮಾಡಿದನೆಂದು ಶಾಂತಿನಾಥ ಕವಿ (ಕ್ರಿ.ಶ.ಸು. ೧೦೬೮) ತನ್ನ 'ಸುಕುಮಾರ ಚರಿತೆ'ಯಲ್ಲಿ (೩–೨೯) ಹೇಳಿದ್ದಾನೆ. ಈ ಪದ್ಯದ ಅಭಿಪ್ರಾಯ; ತಲೆಯಕೂದಲನ್ನು ಕತ್ತರಿಸಿಕೊಂಡು ಬೋಳಾಗಿ ಉಟ್ಟವಸ್ತ್ರಗಳನ್ನು ತೆಗೆದುಹಾಕಿ ಬತ್ತಲೆಯಾಗಿ ಸ್ನಾನಮಾಡದೆ ಮೇಕದೆ ಹಲ್ಲುಗಳನ್ನು ಉಜ್ಜದೆ ಯತಿಗೆ ಉಚಿತವಾದ ಸಾಮಗ್ರಿಗಳನ್ನೆಲ್ಲ ಹೊಂದಿದವನಾಗಿ ಮೈಯಲ್ಲಿ ಮಲಧಾರಿಯಾಗಿ ಉಪಾಸಕನ ಮನೆಯಲ್ಲಿ ಒಂದು ಹೊತ್ತು ಊಟವನ್ನು ಮಾಡುವ ಈ ತೀವ್ರ ತಪಸ್ಸು ಬಿಸಿಲಿಗಿಂತಲೂ ಭಯಂಕರವಾದದ್ದು ಎಂದು. ಇಲ್ಲಿ ಬರುವ ಮೇಕದೆ ಎಂಬ ಶಬ್ದಕ್ಕೆ ಅರ್ಥವಾಗದೆ ಆ ಗ್ರಂಥದ ಶಬ್ದಕೋಶದಲ್ಲಿ ಅದಕ್ಕೆ ಪ್ರಶ್ನಚಿಹ್ನೆಯನ್ನು ಕಾಣಿಸಿದೆ. ಈಗ ಅದರ ಅರ್ಥನಿಷ್ಪತ್ತಿಗಳನ್ನು ತಿಳಿದುಕೊಳ್ಳಲು ಇಲ್ಲಿ ಪ್ರಯತ್ನಿಸಿದೆ.

ಮೇಕದೆ ಎಂಬ ಶಬ್ದ ಮೇಕು ಧಾತುವಿನ ಒಂದು ನಿಷೇಧರೂಪ; ಈ ಧಾತುವನ್ನು ಕೇಶಿರಾಜನು ತನ್ನ ಧಾತುಪಾಠದಲ್ಲಿ ಹೇಳಿಲ್ಲ; ಕಿಟ್ಟೆಲ್ ಮುಂತಾದವರ ನಿಘಂಟುಗಳಲ್ಲಿ ಇದು ಕಾಣುವುದಿಲ್ಲ. ಬೇರೆ ಕವಿಗಳು ಇದನ್ನು ಎಲ್ಲಿಯಾದರೂ ಬಳಸಿದ್ದಾರೆಯೇ ಎಂದು ನೋಡಿದರೆ ನನಗೆ ಇತರ ಪ್ರಯೋಗಗಳು ದೊರೆಯಲಿಲ್ಲ. ಆದ್ದರಿಂದ ಇದೊಂದು ಅಪೂರ್ವ ಶಬ್ದವೆಂದು ಹೇಳಬಹುದು. ಇದರ ಸ್ವತಂತ್ರ ಪ್ರಯೋಗಗಳು ಬೇರೆ ಸಿಕ್ಕಿಲ್ಲವಾದರೂ ಸಮಾಸದ ಪೂರ್ವಪದವಾಗಿ ಇದು ಈ ಕೆಳಗಿನ ಪ್ರಯೋಗಗಳಲ್ಲಿ ದೊರೆಯುತ್ತದೆ :

(೧) ದುರ್ಗಸಿಂಹನ ಪ್ರಯೋಗ (ಕ್ರಿ.ಶ ೧೦೩೧) :

" ಅರಸುಗಳ್ಗೆ ವಿರಸಮಾದವಸರದೊಳ್ ಚಾಗಿಯಂ ಲುಬ್ಧನೆಂಬರ್; ಭೋಗಿಯಪ್ಪನಂ ಪೂಜಿಗನೆಂಬರ್; ಸೌಭಾಗ್ಯಮುಳ್ಳವನಂ ಪಾಣ್ಬನೆಂಬರ್; ತ್ಯಾಗಿಯಂ ಅರ್ಥದೂಷಕನೆಂಬರ್; ಅರ್ಥದೂಷಕನಂ ತ್ಯಾಗಿಯೆಂಬರ್; ಏಗೆಯ್ದುಂ ಪೆಱವೆಣ್ಗಾಟಿಸುವನಂ ಶುಚಿಯೆಂಬರ್; ಶುಚಿಯಂ ಅಶುಚಿಯೆಂಬರ್; ಧೂರ್ತನಂ ಛಾಂದಸನೆಂಬರ್; **ಮೇಕುದೋಱಿ** ಓರೊರ್ವರ ಗುಣಕ್ಕೆ ಮಚ್ಚರಿಸಿ ತೋಱುತ್ತಿರ್ಪ್ಪರೀಕಾಲದರಸುಗಳ್" (ಪಂಚತಂತ್ರ, ಪು. ೫೧).

(೨) ನೇಮಿಚಂದ್ರನ ಪ್ರಯೋಗ (ಕ್ರಿ. ಶ. ಸು. ೧೧೭೦):

ಗಾಳಿಸು ಗೆಲ್ವನಂ ಹರಹು ಹೂಜಿಗನಂ ಸುಲಿ ಸುತ್ತುಗಾಱನಂ
ತಾಳಿಸು ತೇವನಂ ಕುಡದೆ ಕಾಡುವನಂ ರಸಬೋನವೆತ್ತು ಮಾ |
ಕಾಳಿಗೆ ಡಾಳನಂ ನೆಗಪು ಟಕ್ಕಿಪನಂ ತುಱು **ಮೇಕುದೋರ್ಪನಂ**
ಮಾಳಬೆಗಿಕ್ಕು ಪೂಟ್ ಪುಸಿವನಂ ಪೊಸೆದಿಕ್ಕುಗೆ ಪಚ್ಚಗಾಱನಂ || (೨-೧೦೭)

ಇದು ಕವಿಯ ಮಾತಿನಂತೆ ಒಂದು "ದರಿದ್ರ ವಿಟವೇಶ್ಯಾಲಾಪ." ಈ ಪದ್ಯದಲ್ಲಿ ಕಾಣುವ ಮೇಕುದೋರ್ಪನಂ ಎಂಬುದಕ್ಕೆ ಖಚಿತವಾಗಿ ಇದೇ ಅರ್ಥವೆಂದು ಹೇಳುವುದಕ್ಕಾಗದಿದ್ದರೂ ಸಾಧಾರಣವಾಗಿ ಅರ್ಥಗೊತ್ತಾಗಿರುವ ಡಾಳನಂ, ಟಕ್ಕಿಪನಂ, ಪುಸಿವನಂ ಮುಂತಾದ ಶಬ್ದಗಳ ಸಾಹಚರ್ಯದಿಂದ ಇದರ ಅರ್ಥವನ್ನು ಒಂದು ಬಗೆಯಾಗಿ ಊಹಿಸುವುದಕ್ಕೆ ಅವಕಾಶವಿರುವಂತೆ ತೋರುತ್ತದೆ. ಅದರಲ್ಲಿ ವಂಚನೆ, ಮೋಸ, ಕಪಟ—ಇವಕ್ಕೆ ತಕ್ಕಮಟ್ಟಿನ ಎಡೆ ಇರುವಂತೆ ಕಾಣುತ್ತದೆ. ದುರ್ಗಸಿಂಹನ ಪ್ರಯೋಗದಲ್ಲಿಯೂ ಹೀಗೆಯೇ ಇರಬಹುದಾದ್ದು ಸಂಭವ. ಆದರೆ ಶಾಂತಿನಾಥನ ಪ್ರಯೋಗದಲ್ಲಿ ವಂಚನೆಯ ಲೇಪವುಳ್ಳ ಅರ್ಥಸಂಗತವಾಗಿದೆಯೆಂದು ಹೇಳಲಾಗದು. ಶಾಂತಿನಾಥನ ಪ್ರಯೋಗದಲ್ಲಿ ಮೇಕು ಕ್ರಿಯಾರ್ಥಕ ಧಾತುವಾಗಿದ್ದರೆ ಉಳಿದ ಎರಡರಲ್ಲಿ ಅದು ನಾಮವಾಚಿಯಾಗಿರುವುದನ್ನು ಗಮನಿಸಬಹುದು.

ಇತರ ದ್ರಾವಿಡ ಭಾಷಾಕೋಶಗಳಲ್ಲಿ ಈ ಶಬ್ದವೇನಾದರೂ ದೊರೆಯುತ್ತದೋ ? ತಮಿಳು, ಮಲಯಾಳ, ತುಳುಕೋಶಗಳಲ್ಲಿ ಮೇಕು ಶಬ್ದರೂಪ ಸಿಕ್ಕುವುದಿಲ್ಲ. ತೆಲುಗಿನಲ್ಲಾದರೆ ಮೇCಗು ಎಂಬ ಶಬ್ದ ದೊರೆಯುತ್ತದೆ; ಇದರ ಇತರ ರೂಪಗಳಾದ (Allomorphs) ಮ್ರೇCಗು, ಮ್ರೇವು ಎಂಬುವು ಕೂಡ ಸಿಕ್ಕುತ್ತವೆ. ಇದಕ್ಕೆ ಕೊಟ್ಟಿರುವ ಅರ್ಥ (to smear) ಎಂದರೆ ಬಳಿ, ಲೇಪಿಸು ಎಂದು. ಈ ಅರ್ಥ ಮೇಲೆ ಕೊಟ್ಟಿರುವ ಶಾಂತಿನಾಥನ ಪ್ರಯೋಗದಲ್ಲಿ ಚೆನ್ನಾಗಿ ಹೊಂದಿಕೊಳ್ಳುತ್ತದೆ; ಮೇಕದೆ ಎಂದರೆ ಬಳಿದುಕೊಳ್ಳದೆ ಎಂಬರ್ಥವನ್ನು ಹೇಳಬಹುದು. ಮೈಗೆ ಸುಗಂಧಾದಿ ಲೇಪಗಳನ್ನು ಬಳಿದುಕೊಳ್ಳುವುದು ರೂಢಿ.[1] ಶ್ರೀಮಂತರಲ್ಲಿ ಇದು

---

1 "ಅಭಿಲಷಿತಾರ್ಥ ಚಿಂತಾಮಣಿ": ವಿಲೇಪನೋಪಭೋಗ ಎಂಬ ಪರಿಚ್ಛೇದವನ್ನು ನೋಡಬಹುದು.

ವಿಶೇಷವಾಗಿ ಬಳಕೆಯಲ್ಲಿದ್ದಿತಾದರೂ ಸಾಮಾನ್ಯರೂ ತಮ್ಮ ತಮ್ಮ ಅಭಿರುಚಿ ಉಪಪತ್ತಿಗಳಿಗೆ ತಕ್ಕ ಹಾಗೆ ವಿಲೇಪನಭೋಗವನ್ನು ಪಡೆಯುತ್ತಿದ್ದರು.

ಈಗ ತೆಲುಗಿನಲ್ಲಿ ದೊರೆಯುವ ಮ್ರೇCಗು, ಮೇCಗು, ಮ್ರೇವು ಎಂಬ ಹಲವು ರೂಪಗಳ ಆಧಾರದ ಮೇಲೆ ಅವುಗಳ ಮೂಲವನ್ನು ಕಂಡುಹಿಡಿಯಲು ಪ್ರಯತ್ನಿಸಬಹುದು. ತೆಲುಗು ಭಾಷೆಯಲ್ಲಿ ಮಾತ್ರವಿದ್ದ ಒಂದು ವಿಶಿಷ್ಟಧ್ವನಿನಿಯಮವನ್ನು ಈ ಹಿಂದೆಯೇ ನಿರೂಪಿಸಿದೆ[2]: "ಅನೇಕಾಕ್ಷರಯುಕ್ತವಾದ ಮೂಲ ದ್ರಾವಿಡ ಶಬ್ದದ ಮೊದಲ ಎರಡು ಸ್ವರಗಳ ನಡುವೆ ರ, ಱ, ಲ, ಳ, ೞ—ಎಂಬ ಸ್ವನಗಳು ಬಂದಾಗ ಮೂಲಶಬ್ದದ ಅಂತ್ಯ ಉ ಸ್ವರ ಲೋಪವಾಗಿ ಎರಡನೆಯ ವ್ಯಂಜನ ಮೊದಲ ವ್ಯಂಜನದೊಡನೆ ಸೇರಿಕೊಂಡು ಕ್ರಮವಾಗಿ ರೇಫವಾಗಿ ಪರಿಣಮಿಸಿ ಅನಂತರ ಪೂರ್ಣವಾಗಿ ಲೋಪವಾಗುತ್ತದೆ."—ಎಂಬುದು ಆ ನಿಯಮ. ಇದರಂತೆ ಮ್ರೇCಗು ಎಂಬುದರ ಪೂರ್ವರೂಪಗಳು *ಮ್ಱೇಗು, *ಮೆೞುಕು (ಗು) ಎಂದಿದ್ದಿರಬೇಕೆಂದು ಊಹಿಸಬಹುದು. ಇವು ತೆಲುಗಿನಲ್ಲಿ ಈಗ ಇಲ್ಲವಾದರೂ ಪೂರ್ವದ ತೆಲುಗಿನಲ್ಲಿ ಇವು ಇದ್ದಿರಬಹುದಾದ್ದು ಸಂಭವನೀಯ. ವಾಸ್ತವವಾಗಿ ಮೆೞುಕು ಎಂಬ ಧಾತು ತಮಿಳು ಮಲಯಾಳಗಳಲ್ಲಿ ದೊರೆಯುತ್ತದೆ. ತಮಿಳಿನಲ್ಲಿ ಇದರ ಅರ್ಥಗಳು: (೧) ಸೆಗಣಿ ನೀರಿನಿಂದ ನೆಲವನ್ನು **ಸಾರಿಸು**, (೨) ಮೈ ಮುಂತಾದುವುಗಳಿಗೆ ಗಂಧವನ್ನು **ಬಳಿ**, ಪೂಸು, (೩) ಮರದಲ್ಲಿರುವ ದೋಷವನ್ನು • ಮರೆಮಾಡುವುದಕ್ಕಾಗಿ ಪಾಲಿಷ್ ಮುಂತಾದುವುಗಳನ್ನು **ಬಳಿ**. ಇದು ನಾಮವಾಚಕವಾದಾಗ ಇದರ ಅರ್ಥಗಳು: (೧) ಸೆಗಣಿ, (೨) ಮೆರುಗು, (೩) ಜೇನುಮೇಣ (೪) ಗೋಂದು, (೫) ಲೇಹ್ಯವೂ ಅಲ್ಲದ ಮಾತ್ರೆಯೂ ಅಲ್ಲದ ಪಿಚಪಿಚ ಎಂದಿರುವ ವಸ್ತು. ಮಲಯಾಳದಲ್ಲಿ ಇದರ ಅರ್ಥಗಳು: (೧) ಸೆಗಣಿ ನೀರಿನಿಂದ ಸಾರಿಸು, (೨) ಬಳಿ, ಲೇಪಿಸು, (೩) ಇಂಪಾದ ಮಾತುಗಳಲ್ಲಿ ಮನಸ್ಸಿನಲ್ಲಿರುವುದನ್ನು ಮರೆಮಾಡು ಎಂದೂ, ನಾಮಪದವಾದಾಗ ಮೇಣ ಎಂದೂ ಆಗುತ್ತದೆ. ಈ ಶಬ್ದಕ್ಕೆ ಜ್ಞಾತಿಶಬ್ದಗಳು ಇತರ ದ್ರಾವಿಡ ಭಾಷೆಗಳಲ್ಲಿ ದೊರೆಯುತ್ತವೆ. ಕುಈ ಭಾಷೆಯಲ್ಲಿ ಮ್ರಾಣ್ಡ (=ಮರಳು ಗಾಜು ಮಾಡು, ಗಾರೆ ಮೆತ್ತು); ಬ್ರಾಹು ಈ ಭಾಷೆಯಲ್ಲಿ ಮಿರ್ (=ಮರಳು ಗಾಜು ಮಾಡು); ಮಲ್ತೋವಿನಲ್ಲಿ ಮಾರ್ನ್ದರ್ (=ಮೈಗೆ ಬಳಿ); ತೊದವ ಭಾಷೆಯಲ್ಲಿ ಮೊಸ್ಕ್ (Mösk)=ಸೆಗಣಿಯಿಂದ ಸಾರಿಸು; ಗೊಂಡಿ ಭಾಷೆಯಲ್ಲಿ ಮಱ್ಹಿತ್ತಾನಾ (=ದನಗಳಿಗೆ ಬಣ್ಣ ಹಾಕು, ಬಳಿ.)[3]

ಮೇಲೆ ಕೊಟ್ಟಿರುವ ಜ್ಞಾತಿಶಬ್ದಗಳಲ್ಲಿ ತಮಿಳು ಮಲಯಾಳಗಳಲ್ಲಿ ಕಾಣುವ

2. "ಗುಯ್ಯಲ್–ಇದರ ಅರ್ಥ ಮತ್ತು ನಿಷ್ಪತ್ತಿ" ಎಂಬ ನನ್ನ ಲೇಖನವನ್ನು ನೋಡಿ: (ಪ್ರ.ಕ. ೪೪, ಸಂ. ೪, ಪು. ೪೦).

3. *Dravidian Etymological Dictionary, 4169.*

ಮೆಟುಕು, ಮೆಟುಕುಕ ಎಂಬ ರೂಪ ಅತ್ಯಂತ ಪ್ರಾಚೀನವಾದದ್ದು. ಇದಕ್ಕೆ ಸಮಾನವಾದ ಶಬ್ದ ಕನ್ನಡದಲ್ಲಿ ಇದ್ದಿತೇ ಇಲ್ಲವೇ ಎಂಬುದನ್ನು ನೋಡಬೇಕು. ನಯಸೇನನ (ಕ್ರಿ.ಶ. ೧೧೧೨) 'ಧರ್ಮಾಮೃತ'ದಲ್ಲಿರುವ ಈ ಕೆಳಗಿನ ಪದ್ಯ (೧-೧೧೩) ಗಮನಾರ್ಹ:

ಮಲಮಂ ಧರಿಯಿಸಿ ನಾಣಂ
ತೊಲಗಿಸಿ ನಿರ್ಗ್ರಂಥಮಿರ್ದು ಸೊಂಬಿಂ ಪಲ್ಲಂ
ಸುಲಿಯದೆ ಮಿಾಯದೆ ಮಿಳ್ಕದೆ
ಕುಲದಿಂ ಕೆಟ್ಟವರನಣ್ಣ ನೀಂ ಮನ್ನಿಪುದೇ ॥

ಇಲ್ಲಿ 'ಮಿಳ್ಕದೆ' ಎಂಬುದಕ್ಕೆ ಎರಡು ಪ್ರತಿಗಳಲ್ಲಿ "ನೊಕ್ಕಡೆ" ಎಂಬ ಪಾಠಾಂತರ ವಿದೆ. ಇದು ಲಿಪಿಕಾರ ಸ್ಖಾಲಿತ್ಯವಿರಬಹುದು, ಅದಕ್ಕೆ ಏನೂ ಸಮಂಜಸವಾದ ಅರ್ಥವಿಲ್ಲದಿರುವುದರಿಂದ; ಇದನ್ನು ಉಪೇಕ್ಷಿಸಬಹುದು. ಇನ್ನು ಈ ಶಬ್ದದ ಆದ್ಯಕ್ಷರ ಮಿ- ಎಂಬುದು ಮೆ- ಆಗಿದ್ದುದು ಸಾಧ್ಯ, ಪ್ರಾಚೀನ ಹಸ್ತಲಿಖಿತಗಳಲ್ಲಿ ಇತ್ವ ಎತ್ವ ಚಿಹ್ನೆಗಳಿಗೆ ವ್ಯತ್ಯಾಸ ತುಂಬ ಸೂಕ್ಷ್ಮವಾಗಿರುವುದರಿಂದ. ಇದನ್ನು ಸ್ವೀಕರಿಸಿದರೆ 'ಮೆಳ್ಕದೆ' ಎಂಬ ರೂಪ ದೊರೆಯುತ್ತದೆ; ಇಲ್ಲಿರುವ -ಳ್ಕ- ತಮಿಳು ಮಲಯಾಳ ರೂಪಗಳಲ್ಲಿ-ಟ್ಕು-ಇರುವುದರಿಂದ -ಟ್ಕ- ಆಗಿರಬೇಕು. ಆದ್ದರಿಂದ ಈ ಶಬ್ದದ ಸರಿಯಾದ ರೂಪವನ್ನು 'ಮೆಟ್ಕದೆ' ಎಂದು ಕಂಡುಹಿಡಿಯಬಹುದು. ಈ ಪದ್ಯವು ಅರ್ಥದಲ್ಲಿ ಮೇಲೆ ಉದ್ಧರಿಸಿರುವ ಶಾಂತಿನಾಥನ ಪದ್ಯಕ್ಕೆ ಸದೃಶ ವಾಗಿರುವುದಷ್ಟೇ ಅಲ್ಲದೆ ಸಮಾನವಾದ ಶಬ್ದ ಪ್ರಯೋಗವನ್ನು ಒಳಕೊಂಡಿದೆ; 'ಪಲ್ಲಂ ಸುಲಿಯದೆ ಮಿಾಯದೆ ಮೆಟ್ಕದೆ' ಎಂಬುದಕ್ಕೆ 'ಮಿಾಯದೆ ಮೇಕದೆ ದಂತಪಂಕ್ತಿಯಂ ಸುಲಿಯದೆ' ಎಂಬುದು ಸಮಾನವಾಗಿದೆ. ಆದ್ದರಿಂದ ಮೆಟ್ಕದೆ, ಮೇಕದೆ ಎಂಬಿವು ಒಂದೇ ಶಬ್ದದ ಬೇರೆ ರೂಪಗಳು, ಸಮಾನಾರ್ಥಕವಾದುವು ಎಂದು ಅನುಮಾನಿಸಬಹುದು.

ಅಟ್ಕು ಎಂಬ ಧಾತುವಿನ ಭೂತನ್ಯೂನ ರೂಪದೊಡನೆ ಸೇರಿಕೊಂಡ ಒಂದು ಮೆಳ್ಕು (ಟ್ಕು) ಧಾತುವನ್ನು ಪಂಪನು ಹಲವುಕಡೆ ತನ್ನ ಭಾರತದಲ್ಲಿ ಪ್ರಯೋಗಿ ಸಿದ್ದಾನೆ:

(೧) ತನ್ನ ಬಲಮೆಲ್ಲಮಳ್ಕಿ ಮೆಳ್ಕಿದಂತಾದುದಂ ಕೇಳ್ದು (೫-೧೦೦ ವ).

(೨) ಅಂತು ಪತ್ತೆಂಟು ನೆತ್ತರ ಕಡಲ್ ಕಡಲನಟ್ಟಿಯುಂ ವರೂಥಯೂಥರಿಗ ಳಳ್ಕಿಮೆಳ್ಕಿದಂತಾದಾಗಳ್ (೧೦-೯೧ ವ).

ಇವುಗಳಲ್ಲಿ ಎರಡನೆಯ ಪ್ರಯೋಗದಲ್ಲಿ 'ಅಟ್ಗಿಮಟ್ಗಿ' ಎಂಬ ಪಾಠಾಂತರವಿದೆ. ಅದೇ 'ಪಂಪಭಾರತ'ದಲ್ಲಿ

(೩) ನೆಗಟ್ತೆಯ ದೈತ್ಯರೆಲ್ಲಮೆನ್ನ ಚಕ್ರಘಾತದೊಳಟ್ಗಿ ಮಟ್ಗಿದಂತಾದರ್ (೬-೨೪ ವ)

(೪) ಅಂತುಭಯಬಲಧನುರ್ಧರರ ಬಲಂಗಳುಮಟ್ಗಿ ಮಟ್ಗಿದಾಗಳ್ (೧೦–೭೫ ವ).

(೫) ಮದ್ರರಾಜಾದಿ ಮಹೀಭುಜರ್ ಧುರದೊಳೆನ್ನಯ ದೂಸಱಿನಟ್ಗಿ ಮಟ್ಗಿ ದಂತಾದರ್ (೧೩–೪೯).

ಎಂಬ ಪ್ರಯೋಗಗಳು ದೊರೆಯುತ್ತವೆ. ೫ನೆಯದರಲ್ಲಿ 'ಅಳ್ಕಿಮೆಳ್ಕಿ' ಎಂದು ಎರಡು ಪ್ರತಿಗಳಲ್ಲೂ 'ಅಳ್ಕಿಮಳ್ಕಿ' ಎಂದು ಒಂದು ಪ್ರತಿಯಲ್ಲೂ ಪಾಠಾಂತರಗಳು ದೊರೆಯುತ್ತವೆ. ಕೇಶಿರಾಜನು ತನ್ನ ಧಾತುಪಾಠದಲ್ಲಿ ಅಟ್ಕು, ಅಟ್ಗು ಎಂಬೆರಡು ಧಾತುಗಳನ್ನು ಕಾಣಿಸಿದ್ದಾನೆ. ಒಂದನೆಯದರ ಅರ್ಥ ಜೀರ್ಣೇ ಎಂದೂ ಎರಡನೆಯದರ ಅರ್ಥ ಲಯೇ, ಕ್ಷೀಣತ್ವೇ ಎಂದೂ ಅವನೇ ಹೇಳಿದ್ದಾನೆ. ಎರಡಕ್ಕೂ ಅರ್ಥ ಸಮಾನತೆ ಇರುವುದರಿಂದ ಅವೆರಡೂ ಒಂದೇ ಧಾತುವಿನ ಭಿನ್ನ ರೂಪಗಳೆಂದು (Allomorphs) ಹೇಳಬಹುದು. ಎರಡಕ್ಕೂ ಕವಿ ಪ್ರಯೋಗಗಳು ದೊರೆಯುತ್ತವೆ. ಉದಾಹರಣೆಗೆ: ಸಮುದ್ರವು 'ರಘುಕುಲದಹನೋಗ್ರೇಷುವಿಂ ಕಾಯ್ದು ತಿಣ್ಣಂ ಕುದಿಗೊಂಡಟ್ಕಿತ್ತು';[4] 'ಅರಗಿನ ಮನೆಯೊಳ್ ಪಾಂಡವರುರಿದಟ್ಗಿದರ್'.[5] ಇವುಗಳಲ್ಲಿ 'ಅಟ್ಕಿತ್ತು' ಎಂಬುದಕ್ಕೆ ರಾ. ನರಸಿಂಹಾಚಾರ್ಯರು 'ನಿಶ್ಶೇಷವಾಗು' ಎಂಬರ್ಥವನ್ನು ಕೊಟ್ಟಿದ್ದಾರೆ.

ಇನ್ನು ಅಟ್ಕಿ ಅಟ್ಗಿಗಳೊಡನೆ ಮೇಲಿನ ಪ್ರಯೋಗಗಳಲ್ಲಿ ಸೇರಿಕೊಂಡು ಬಂದಿರುವ **ಮೆಳ್ಕಿ, ಮಳ್ಕಿ, ಮಟ್ಗಿ** ಎಂಬ ಶಬ್ದ ರೂಪಗಳನ್ನು ನೋಡಬಹುದು. ಇವಕ್ಕೆ ಮೂಲವಾದ ಮೆಳ್ಕು, ಮಳ್ಕು, ಮಟ್ಗು ಧಾತುಗಳಲ್ಲಿ ಯಾವುದನ್ನೂ ಕೇಶಿರಾಜನು ನಿರ್ದೇಶಮಾಡಿಲ್ಲ. ಕಿಟ್ಟೆಲ್ ತಮ್ಮ ನಿಘಂಟಿನಲ್ಲಿ ಮಟ್ಗು, ಮಟ್ಗಿಸು ಎಂಬಿವನ್ನು ಕವಿ ಪ್ರಯೋಗಗಳೊಡನೆ ನಿರೂಪಿಸಿ ಹಾಳಾಗು, ಮರೆಯಾಗು ಇತ್ಯಾದಿ ಅರ್ಥಗಳನ್ನು ಹೇಳಿದ್ದಾರೆ; ಇನ್ನೂ ಅನೇಕ ಪ್ರಯೋಗಗಳು ದೊರೆಯುತ್ತವೆ.[6] ರಾ. ನರಸಿಂಹಾಚಾರ್ಯರು 'ಮಟ್ಗಿಸು' ಎಂಬುದಕ್ಕೆ 'ಶಾಂತಮಾಡು' ಎಂದು ಅರ್ಥೈಸಿದ್ದಾರೆ. ಈ ಅರ್ಥಗಳೆಲ್ಲ ಗೌಣಾರ್ಥಗಳು. ಮೆಟುಕು ಮುಂತಾದ ಜ್ಞಾತಿಶಬ್ದಗಳನ್ನು ನೋಡಿದರೆ ಸಾರಿಸು, ಬಳಿ ಎಂಬುದು ಮೂಲಾರ್ಥವೆಂದು ವ್ಯಕ್ತವಾಗುತ್ತದೆ. ಇದರಿಂದ ಮರೆಯಾಗು, ಹಾಳಾಗು, ಶಾಂತವಾಗು ಎಂಬಿತ್ಯಾದಿ ಅರ್ಥ ಛಾಯೆಗಳು ಬೆಳೆದು ಬಂದಿರಬೇಕು. ಕನ್ನಡದ ನುಡಿಗಟ್ಟಿನಲ್ಲಿ 'ಮನೆಸಾರಿಸಿ ಬಿಟ್ಟ' ಎಂದರೆ ಮನೆಯನ್ನು ಹಾಳುಮಾಡಿದ ಎಂದೂ 'ತಿಪ್ಪೆಸಾರಿಸಿದರು' ಎಂದರೆ ತಪ್ಪನ್ನು ಮುಚ್ಚಿಟ್ಟರು ಎಂದೂ ಇರುವುದನ್ನು ಗಮನಿಸಬಹುದು. ತಮಿಳಿನ ಮೆಟುಕು ಎಂಬುದಕ್ಕೆ ಕನ್ನಡದ ರೂಪ ಮೆಟ್ಕು ಎಂದಾಗಬಹುದು, ಕಟುತ್ತೈ > ಕಟ್ತೆ, ಕತ್ತೆ; ಕರುಂಬು > ಕರ್ಬು ಇತ್ಯಾದಿ ರೂಪಾಂತರಗಳಲ್ಲಿ ಕಾಣುವಂತೆ.

---

4. ಶಾಸನಪದ್ಯ ಮಂಜರಿ, ೭. 5. ಪಂಪಭಾರತ, ೩–೭. 6. ಶಾಸನ ಪದ್ಯಮಂಜರಿ, ೬೮೨; ಪಂಪಭಾರತ, ೨-೮೧ ವ.

ಮೆಟ್ಕು ಎಂಬುದಕ್ಕೆ ಮಟ್ಕು ಎಂಬುದು ಮತ್ತೊಂದು ರೂಪ, ಮೆಚ್ಚು ಎಂಬುದಕ್ಕೆ ಮಚ್ಚು ಇದ್ದ ಹಾಗೆ. ಆದ್ದರಿಂದ ಮೆಟ್ಕು, ಮಟ್ಕು, ಮಟ್ಗು—ಇವು ಒಂದೇ ಧಾತುವಿನ ಭಿನ್ನರೂಪಗಳು (Allomorphs). ಮೇಲಿನ ಪಂಪ ಪ್ರಯೋಗಗಳಲ್ಲಿ ಎಲ್ಲೆಡೆಯಲ್ಲೂ ಅಟ್ಕಿ ಮೆಟ್ಕಿ ಎಂಬ ಟಕಾರಯುಕ್ತ ರೂಪವೇ ಇರಬೇಕು.

ಮರುಳಾಗು, ಭ್ರಾಂತಿಗೊಳ್ಳು, ಮೋಸಹೋಗು ಎಂಬ ಅರ್ಥವನ್ನುಳ್ಳ[7] ಮೆಟ್ಪಡು ಎಂಬ ಶಬ್ದ ಹಲವೆಡೆ ದೊರೆಯುತ್ತದೆ.[8] ಪಂಪಭಾರತದ ನಿಘಂಟಿನಲ್ಲಿ ಮೆಳ್ಪಡು ಎಂದು ಳುಳಯುಕ್ತವಾಗಿ ಕೊಟ್ಟಿದೆ; ಇದು ಮೆಟ್ಪಡು ಎಂದು ಟಕಾರ ಯುಕ್ತವಾಗಿರಬೇಕು.[9] ಇದು ಎರಡು ಧಾತುಗಳು ಸೇರಿ ಆಗಿರುವ ಸಂಯುಕ್ತ ಧಾತು. ಎರಡನೆಯದು ಪಡು ಎಂದು ಸ್ಪಷ್ಟವಾಗಿಯೇ ಇದೆ. ಮೊದಲನೆಯದು ಮೆಟ್ ಎಂದಿರಬೇಕು. ಇದು ಮೆಟ್ಕು ಎಂಬುದಕ್ಕಿಂತ ಹಿಂದಿನ ರೂಪ. ಅರ್ಥ ಮರುಳಾಗು, ಮೋಸಹೋಗು ಎಂಬುದಕ್ಕೆ ಸಂಬಂಧಿಸಿದ್ದು. ಮೆಟ್ ಎಂಬ ಧಾತುವೂ ಕನ್ನಡದಲ್ಲಿದ್ದಿತೆಂದು ಇದರಿಂದ ಖಚಿತವಾಗುತ್ತದೆ.

ಈಗ ಮೇಕು ಶಬ್ದ ಹೇಗೆ ರೂಪುಗೊಂಡಿರಬಹುದೆಂಬುದನ್ನು ಪರಿಶೀಲಿಸ ಬಹುದು. ಇದರಲ್ಲಿ ಎರಡು ಸಾಧ್ಯತೆಗಳಿವೆ. ಒಂದನೆಯದು ಮೆಟ್ಕು>*ಮೆಕ್ಕ್ಕು>*ಮೆಕ್ಕು >ಮೇಕು ಎಂಬುದು. ಇದರಲ್ಲಿ ಮಧ್ಯದ ಎರಡು ರೂಪ ಗಳಿಗೆ ಪ್ರಯೋಗಾಧಾರ ಲಭಿಸಿಲ್ಲ. ಮೆಟ್ಕು ಎಂಬ ರೂಪವನ್ನು ಪಂಪನು ಉಪಯೋಗಿಸುತ್ತಿದ್ದನು. ದುರ್ಗಸಿಂಹನಲ್ಲಿ ಮೇಕು ದೊರೆಯುವುದರಿಂದ ಅವನ ಕಾಲಕ್ಕಾಗಲೇ (ಕ್ರಿ. ಶ. ೧೦೩೧) ಆ ರೂಪ ಬೆಳದುಬಂದು ಸಿದ್ಧವಾಗಿರಬೇಕು. ಕನ್ನಡದ ಧ್ವನಿನಿಯಮದ ಪ್ರಕಾರ ಈ ಬೆಳವಣಿಗೆ ನಡೆಯಿತೆಂಬುದನ್ನು ಹೇಳುವು ದಕ್ಕೆ ಮಧ್ಯಗತ ರೂಪಗಳಿಗೆ ಪ್ರಯೋಗಾಧಾರ ದೊರೆತ ಹೊರತು ಸಾಧ್ಯವಾಗುವು ದಿಲ್ಲ. ಪಂಪನ ಅನಂತರ ಸ್ವಲ್ಪಕಾಲದಲ್ಲೇ ಮೆಟ್ಕು ಎಂಬ ಧಾತುವೇ ಕನ್ನಡದಿಂದ ನಷ್ಟವಾಗಿರಬಹುದಾದ ಸಂಭವವಿದೆ. ಇಲ್ಲದಿದ್ದರೆ ಕೇಶಿರಾಜನ ಕಣ್ಣುಗಳಿಂದ ತಪ್ಪಿಸಿ ಕೊಳ್ಳುವುದು ಅದಕ್ಕೆ ಕಷ್ಟವಾಗುತ್ತಿತ್ತು. ಎರಡನೆಯ ಸಾಧ್ಯತೆ ಇದು ಕನ್ನಡಕ್ಕೆ ತೆಲುಗಿನಿಂದ ಎರವಲಾಗಿ ಬಂದಿರಬಹುದಾದ್ದು. ತೆಲುಗಿನ ಧ್ವನಿನಿಯಮದ ಪ್ರಕಾರ ಸಿದ್ಧವಾಗಿದ್ದ*ಮ್ರೇCಕು, ಮ್ರೇCಗು ಎಂಬ ರೂಪಗಳನ್ನು ಕನ್ನಡ ಪರಿಗ್ರಹಿಸುವಾಗ ಸ್ವಕೀಯ ಧ್ವನಿನಿಯಮಕ್ಕನುಸಾರವಾಗಿ ಆದ್ಯಕ್ಷರದ ರೇಫವನ್ನು ಲೋಪಿಸಿಕೊಂಡಿರ ಬೇಕು; ಮಧ್ಯಗತ ಅರ್ಧಾನುಸ್ವಾರವೂ ನಷ್ಟವಾಗಿರಬೇಕು. ಹೀಗೆ ಮೇಕು, ಮೇಗು ಎಂಬ ರೂಪಗಳು ಕನ್ನಡಕ್ಕೆ ಸಿದ್ಧಿಸುತ್ತವೆ, ಹತ್ತನೆಯ ಶತಮಾನದಷ್ಟು

---

[7] ಶಬ್ದಮಣಿದರ್ಪಣ, ಪ್ರಯೋಗಸಾರ " ಮೆಟ್ಪಿಡೆಂದು ಮರುಳ್ತನಂ."

[8] ಪಂಪಭಾರತ ೩–೪ವ, ೬–೭೧ವ, ೧೩–೪೯; ಆದಿಪುರಾಣ ೫–೮೮; ಶಾಂತಿಪುರಾಣ ೮–೪೦; ಪಂಚತಂತ್ರ ೪೧೮; ಜೀವಸಂಬೋಧನೆ ೭–೧ವ. ಇತ್ಯಾದಿ.

[9] ಪಂಪಭಾರತ ೯–೫೮ ಪದ್ಯವನ್ನು ನೋಡಿ.

ಹಿಂದಿನ ಕಾಲದಲ್ಲಿ. ಮೇಗು ಎಂಬ ಶಬ್ದ ಪಂಪಾದಿ ಕವಿಗಳಿಂದ ಮೇಲೆ, ಉಪರಿ ಎಂಬರ್ಥದಲ್ಲಿ ಸಾಧಾರಣವಾಗಿ ಪ್ರಯುಕ್ತವಾಗಿದ್ದರೂ ಬೇರೊಂದು ಅರ್ಥಕ್ಕೆ ಎಡೆಯಿರಬಹುದೇನೋ ಎಂಬ ಸಂದೇಹಕ್ಕೆ ಅವಕಾಶಕೊಡುವ ಒಂದು ಪ್ರಯೋಗ, ಪಂಪನದು, ಈ ಕೆಳಗಿನ ಪದ್ಯದಲ್ಲಿದೆ.[10]

> ನುಡಿಯಲ್ವೇಡೆನ್ನೊಳಿಂತಪ್ಪಳಿಪಿನ ನುಡಿಯಂ ನಿನ್ನ ಮಾತಿಂಗೆ ಚಿಃ ಮೆ
> [ಟ್ಟಿ] ಡುವಂತಪ್ಪಾಕೆಯಲ್ಲೆಂ ಬಿಡು ಗಡ ಬಿಡದಂದೆನ್ನ ಗಂಧರ್ವರಿಂದಂ।
> ಮಡಿವಯ್ ನೀನೆಂದೊಡಂತಪ್ಪೊಡೆ ಬಿಡೆನೆನಗಂ ಮೇಗುವೇಳ್ದಿಪ್ಪೆಯಿಲ್ಲಾ
> ರ್ಪೊಡೆ ನಿನ್ನಂ ಕಾವ ಗಂಧರ್ವರೆ ಬಿಡಿಸುಗೆ ಪೋಗೆಂದು ಪೊಯ್ದಂ ದುರಾತ್ಮಂ॥

ಈ ಪದ್ಯದಲ್ಲಿ ದ್ರೌಪದೀ ಕೀಚಕರ ಸಂವಾದ ಚಿತ್ರಿತವಾಗಿದೆ. ಕೀಚಕನು ಲಲ್ಲೆಯ ಮಾತುಗಳನ್ನಾಡಿ ಸೈರಂಧ್ರಿಯನ್ನು ಹಿಡಿದುಕೊಂಡಾಗ ಅವಳು ಹೇಳುತ್ತಾಳೆ: 'ಇಂಥ ಪ್ರೀತಿಯ ಮಾತುಗಳನ್ನು ನನ್ನೊಡನೆ ಆಡಬೇಡ, ಆ ಮಾತಿಗೆ ನಾನು ಮರುಳಾಗುವವಳಲ್ಲ, ಬಿಡು ನನ್ನನ್ನು; ಬಿಡದಿದ್ದರೆ ನನ್ನ ಗಂಧರ್ವರಿಂದ ಸಾಯುತ್ತೀಯೆ.' ಇದಕ್ಕೆ ಕೀಚಕನು 'ಹಾಗಾಗುವುದಾದರೆ ನಾನು ನಿನ್ನನ್ನು ಬಿಡೆನು, ನನಗೂ ಮೇಗುಹೇಳುತ್ತಿರುವೆಯಲ್ಲ, ನಿನ್ನನ್ನು ರಕ್ಷಿಸುವ ಗಂಧರ್ವರೇ ಬಂದು ನಿನ್ನನ್ನು ಬಿಡಿಸಲಿ, ಸಾಧ್ಯವಾದರೆ' ಎಂದು, ಹೇಳುತ್ತ ಹೋಗು ಎಂದು ಅವಳನ್ನು ಹೊಡೆದನು. ಇಲ್ಲಿ ಬರುವ ಮೇಗುವೇಳ್ ಎಂಬುದಕ್ಕೆ ನನಗಿಂತಲೂ ಮೇಲಾದವನು ಇರುವನೆಂದು ಹೇಳು, ನನ್ನನ್ನೂ ಮೀರಿ ಮಾತನಾಡು ಎಂಬರ್ಥ ಸಹಜವಾಗಿಯೇ ಇರುವಂತೆ ತೋರುತ್ತದೆ. ಆದರೆ ನನಗೂ ನೀನು ಮೋಸದ ಮಾತನ್ನು ಆಡುವೆಯಾ, ನನ್ನನ್ನು ಮರುಳುಮಾಡುವುದಕ್ಕೆ ಎಂಬರ್ಥವೂ ಅಷ್ಟೇ ಸಹಜವಾದುದೆಂದು ಅನ್ನಿಸುತ್ತದೆ. ಇದನ್ನು ಗ್ರಹಿಸಿದರೆ ಪದ್ಯದ ಅರ್ಥಸ್ವಾರಸ್ಯ ಮಿಗಿಲಾಗುತ್ತದೆ. ಅಲ್ಲದೆ ಬೆರಗಿನ, ಮೆರುಗಿನ, ಥಳುಕಿನ ಮಾತು ಎಂಬರ್ಥದಲ್ಲಿ ಮೇಗು ಶಬ್ದದ ಅಸ್ತಿತ್ವವೂ ಸಿದ್ಧಿಸುತ್ತದೆ. ಪ್ರಕೃತ ಮೇಕು ಶಬ್ದದ ನಿಷ್ಪತ್ತಿಯ ವಿಷಯದಲ್ಲಿ ಮೇಲಿನ ಎರಡು ಸಾಧ್ಯತೆಗಳಲ್ಲಿ ಎರಡನೆಯದು ಹೆಚ್ಚು ವಿಶ್ವಸನೀಯವೆಂದು ತೋರದಿರಲಾರದು.

ಮೆಟ್ಟು ಧಾತುವಿಗೆ ಅರ್ಥದ ದೃಷ್ಟಿಯಿಂದಲೂ ವಿಕಾಸವಾಗಿರುವುದನ್ನು ನೋಡಬಹುದು. ಶಾಂತಿನಾಥನ ಮತ್ತು ನಯಸೇನನ ಪ್ರಯೋಗಗಳಲ್ಲಿ ಮೇಕು, ಮೆಟ್ಟುಗಳಿಗೆ ಅದರ ಮೂಲಾರ್ಥವಾದ ಬಳಿ, ಲೇಪಿಸು, ಸಾರಿಸು ಎಂದಿರುವುದು ವಿಶದವಾಗಿದೆ; ಪಂಪನ ಪ್ರಯೋಗಗಳಲ್ಲಿ ಅದಕ್ಕೆ ಹೊಸ ಛಾಯೆಯುಂಟಾಗಿ ಬಳಿದಂತಾಗು, ಸಾರಿಸಿದಂತಾಗು ಎಂದರೆ ನಾಶವಾಗು ಎಂಬರ್ಥ ಬಂದಿದೆ; ದುರ್ಗಸಿಂಹ ನೇಮಿಚಂದ್ರರ ಪ್ರಯೋಗಗಳಲ್ಲಿ ಒಳಗೊಳಗೇ ಕೈಕೊಡುವುದು

---

10 ಪಂಪಭಾರತ ೮-೭೦.

ಎಂದರೆ ಮೇಲೆ ಸವಿಮಾತುಗಳನ್ನಾಡುತ್ತ ಒಳಗೆ ವಂಚಿಸುವುದು, ಮೋಸ ಎಂಬರ್ಥ ವುಂಟಾಗಿದೆ. ಇದೇ ಅರ್ಥ ಮಲಯಾಳದಲ್ಲೂ ಇರುವುದನ್ನು ನೋಡಬಹುದು.[11] ಬಳಿ ಎಂಬರ್ಥವುಳ್ಳ ಪೂಸು ಎಂಬ ಧಾತುವಿನ ಭಾವನಾಮದ ರೂಪವೊಂದಾಗಿರುವ ಹೂಸಕ ಎಂಬುದನ್ನು ಕುಮಾರವ್ಯಾಸ ಈ ಅರ್ಥದಲ್ಲಿ ಬಳಸಿರುವುದನ್ನು ಇಲ್ಲಿ ನೆನೆಯಬಹುದು (ಕರ್ಣಪರ್ವ, ೨೩-೩೧) :

ವಾಸಿಗಾದುದೆ ಜಾತಿಸಂಕರ
ಬೇಸಱಾಯಿತೆ ಧೃತಿಗೆ ಕಲಿತನ
ಕೀಸು ಮೊಲೆಗಳು ಮೂಡಿದುವಲಾ ಪಾರ್ಥಸಮರದಲಿ |
ಹೂಸಕದ ಛಲವೀಯಹಂಕೃತಿ
ಮಾಸಲಳಿದುದೆ ಶಿವಶಿವಾ ನಿ
ರ್ದೋಷದಲಿ ಬಹುದೋಷವಿದು ವಿಪರೀತವಾಯ್ತೆಂದ ||

ಇಲ್ಲಿ ಕಾಣುವ ಹೂಸಕದ ಛಲ ಎಂದರೆ ನಿಜವಾದ ಛಲವಲ್ಲ. ಮೇಲು ಮೇಲಿನ ಛಲ, ಛಲ ಲೇಪಮಾತ್ರ, ಸುಳ್ಳು ಛಲ ಎಂದು ಅರ್ಥವಾಗುತ್ತದೆ. ಹೀಗೆಯೇ ಲೇಪನಾರ್ಥದ ಮೇಕು ಧಾತುವನ್ನು ದುರ್ಗಸಿಂಹ ನೇಮಿಚಂದ್ರರು ಪ್ರಯೋಗಿ ಸಿದ್ದಾರೆ; ಮೇಕುದೋಱು ಎಂದರೆ ಸುಳ್ಳು ಹೇಳು, ವಂಚನೆ ಮಾಡು ಎಂದೂ ಮೇಕುದೋರ್ಪನಂ ಎಂದರೆ ಗಿಲೀಟುಮಾಡಿ ವಂಚಿಸುವವನು, ಮೋಸಗಾರ ಎಂದೂ ಅರ್ಥ ಹೇಳಬಹುದಾಗಿದೆ.

ಮೇಲಿನ ವಿವೇಚನೆಯಿಂದ ತೋರಿಬರುವ ಅಂಶಗಳನ್ನು ಕೆಳಗೆ ಕಾಣಿಸಿದೆ:

(೧) ಕನ್ನಡದಲ್ಲಿ *ಮೆಟ್, ಮೆಟ್ಟು ಎಂಬ ಧಾತು ನಯಸೇನನ ಕಾಲದ ವರೆಗೂ ಕ್ವಚಿತ್ತಾಗಿ ಗ್ರಾಂಥಿಕ ಪ್ರಯೋಗದಲ್ಲಿತ್ತು.

(೨) ಪಂಪ ದುರ್ಗಸಿಂಹರ ನಡುವಣ ಕಾಲದಲ್ಲಿ ಎಂದರೆ ಕ್ರಿ. ಶ. ೯೪೧-೧೦೩೧ರ ಅಂತರದಲ್ಲಿ ಮೇಕು ಧಾತು ತೆಲುಗಿನಿಂದ ಕನ್ನಡಕ್ಕೆ ಎರವಲಾಗಿ ಬಂದಿರ ಬಹುದು, ಗುಯ್ಯಲ್ ಶಬ್ದದಂತೆ. ಇದು ಕನ್ನಡ ತೆಲುಗಿನಿಂದ ಮಾಡಿರುವ ಅತ್ಯಂತ ಪ್ರಾಚೀನ ಸ್ವೀಕರಣಗಳಲ್ಲಿ ಒಂದು.

(೩) ಮೆಟ್ಟು ಹಳಗನ್ನಡದಿಂದ ನಷ್ಟವಾದ ಹಾಗೆ ಮೇಕು ನಡುಗನ್ನಡದ ಕಾಲಕ್ಕೆ ನಷ್ಟವಾಗಿರಬಹುದು.

(೪) ಮೆಟುಕು ಮುಂತಾದ ಜ್ಞಾತಿಶಬ್ದಗಳ ಪಟ್ಟಿಯಲ್ಲಿ[12] ಕನ್ನಡದ ಮಟ್ಟು ಮೇಕುಗಳನ್ನು ಸೇರಿಸಬೇಕು.

—ಡಿ. ಎಲ್. ನರಸಿಂಹಾಚಾರ್

---

[11] *Malayalam-English Dictionary* (Gundert): "to cover one's design with sweet words".

[12] *Dravidian Etymological Dictionary*, 4169.

ಕಾವ್ಯಾವಲೋಕನ

ರಸೋಲ್ಲಾಸ : ಲೇಖಕರು : ಡಾ|| ಕೆ. ಕೃಷ್ಣಮೂರ್ತಿ, ಎಂ.ಎ., ಬಿ.ಟಿ., ಪಿಎಚ್.ಡಿ. ಪ್ರಕಾಶಕರು : ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ, ಮೈಸೂರು ೨; ಡೆಮ್ಮಿ ೧|೮; ಪುಟ XV + ೬೪ ; ಬೆಲೆ : ಸಾದಾಪ್ರತಿ ರೂ. ೧.೫೦; ಉತ್ತಮ ಪ್ರತಿ ರೂ. ೨.೫೦.

"ಇವರ ಲೇಖನಗಳು ತುಂಬ ಪ್ರೌಢವಾಗಿದ್ದು ಅಲಂಕಾರಶಾಸ್ತ್ರದ ಪ್ರಸಿದ್ಧ ಗ್ರಂಥಗಳ ಸಾಮಾನ್ಯ ಜ್ಞಾನವನ್ನಾದರೂ ಅಪೇಕ್ಷಿಸುತ್ತವೆ"—ಎಂದಿದ್ದಾರೆ ಪ್ರೊ|| ಎ. ಆರ್. ಕೃಷ್ಣಶಾಸ್ತ್ರಿಗಳು, ಡಾ|| ಕೃಷ್ಣಮೂರ್ತಿಯವರು ಬರೆದ "ಕನ್ನಡ ಧ್ವನ್ಯಾಲೋಕ"ದ ಮುನ್ನುಡಿಯಲ್ಲಿ. ಆ ಮಾತು ಈ ಗ್ರಂಥಕರ್ತರ ಯಾವ ಕೃತಿಗೂ ಅನ್ವಯಿಸುವಂಥದು. ಡಾ|| ಕೆ. ಕೃಷ್ಣಮೂರ್ತಿಯವರ "ರಸೋಲ್ಲಾಸ"ದ ಬಗೆಗೆ ಬರೆಯಲು ದುಡುಕುವ ನನ್ನ ಕುರಿತು ಶ್ರೀ ಕೃಷ್ಣಶಾಸ್ತ್ರಿಗಳ ಈ ಎಚ್ಚರಿಕೆ ತುಂಬ ಸೂಕ್ತವೂ ಸಕಾಲಿಕವೂ ಆಗಿದೆ. ಅಂಥ ಯಾವದೇ ವಿಶೇಷಜ್ಞತೆಗೆ ಹಕ್ಕು ಹೇಳಲು ಎದೆ ಸಾಲದ ನಾನು ಈ ಸಮಾಲೋಚನೆಗಾಗಿ ಲೆಕ್ಕಣಿಕೆ ಎತ್ತಿಕೊಳ್ಳುವದೂ ಒಂದು ದುಃಸಾಹಸವೆನಿಸಬಹುದು. "ಪ್ರಾಂಶುಲಭ್ಯೇ ಫಲೇ ಮೋಹಾತ್ ಉದ್ಬಾಹುರಿವ ವಾಮನಃ"—ಕಾಲಿದಾಸನೇ ತನ್ನ ಬಗೆಗೆ ಹೇಳಿಕೊಂಡಿಲ್ಲವೇ ? ಹಾಗೆ ಹೇಳಿಯೂ ಆತ ಆ ಚಾಪಲ್ಯಕ್ಕೆ ಪ್ರಚೋದಿತನಾಗಿಲ್ಲವೇ ? ನನ್ನದೂ ಅದೇ ರೀತಿಯ ಚಾಪಲ್ಯ. ಪ್ರಾಂಶುಲಭ್ಯವಾದಾಗ್ಯೂ ಒಬ್ಬ ಹಾದಿಹೋಕ ವಾಮನನು ಕೈಚಾಚಲು ಮೋಹವುಂಟುಮಾಡಿದ ಆ ಫಲದ ಸೊಗಸೇ ಸೊಗಸು ! ಕೈಚಾಚಿ ಎಟುಕದೇ ಹಾರಿ ಹಾರಿ ಹಾಸ್ಯಾಸ್ಪದನಾಗುವಾಗ ಈ ಚೋದ್ಯವೇನೆಂದು ಹತ್ತಿರ ಹಾಯ್ದು ಬೇರೆ ಪ್ರೌಢರು—ಕೈ ನಿಲುಕಬಲ್ಲ ಬಲ್ಲವರು—ಆ ಫಲದ ಕಡೆಗೆ ಕಣ್ಣೆತ್ತು ವಂತೆ ಅದನ್ನು ಪಡೆದು ಮೆಚ್ಚಿದವರಿಗೆಲ್ಲ ಹಂಚುವಂತೆ ಮಾಡಲು ನಿಂತರೆ ಸರಿ, ಈ ವಾಮನ ತ್ರಿವಿಕ್ರಮನಾದಂತೆ ! ಕೊನೆಗೂ ವಿಕ್ರಮವೆಂದರೇನು ? ಯಶಸ್ವಿಯಾದ ಅಕ್ರಮವೇ ತಾನೇ ?

"ರಸೋಲ್ಲಾಸ" ಒಂದು ಗ್ರಂಥವಲ್ಲ. ಮೈಸೂರು ವಿಶ್ವವಿದ್ಯಾನಿಲಯದ ವಿಶೇಷೋಪನ್ಯಾಸ ಮಾಲೆಯಲ್ಲಿ ಪೋಣಿಸಿದ ಮೂರು ಉಪನ್ಯಾಸ ಪುಷ್ಪಗಳ ಒಂದು ಗುಚ್ಛ. ತನ್ನ ವಿದ್ಯಾಮಾತೆಗೆ ನೈವೇದ್ಯವಾದುದನ್ನೇ ಗೀರ್ವಾಣ ಭಾರತಿಯ ನಿರ್ಮಾಲ್ಯ ರೂಪದಲ್ಲಿ ಸಾಹಿತ್ಯೋಪಾಸಕರಿಗೆಲ್ಲ ಡಾ|| ಕೃಷ್ಣಮೂರ್ತಿಗಳು ಈಗ ನೀಡಿದ್ದಾರೆ. ಈ ಪುಷ್ಪಗಳ ಸೌರಭ ಒಂದು ರೀತಿ ಕನ್ನಡ ಕಾವ್ಯವಿಮರ್ಶೆಗೆ ಅಥವಾ ರಸಚರ್ಚೆಗೆ ನವೀನ. ಈ ವಿಷಯದ ವಿನ್ಯಾಸವೂ ಅಷ್ಟೇ ಪ್ರವೀಣ. ಕನ್ನಡ ಸಾರಸ್ವತಕ್ಕೆ "ಧ್ವನ್ಯಾಲೋಕ" "ಕಾವ್ಯಪ್ರಕಾಶ"ಗಳಂಥ ಉತ್ಕೃಷ್ಟ ಮೂಲಾನು ವಾದಗಳನ್ನೂ "ಆನಂದವರ್ಧನನ ಕಾವ್ಯಮೀಮಾಂಸೆ"ಯಂಥ. ಉಜ್ವಲ ಪ್ರಬಂಧಗಳನ್ನೂ ಕೊಟ್ಟ ಡಾಕ್ಟರ್ ಮಹಾಶಯರು "ಸಂಸ್ಕೃತಕಾವ್ಯ"ದಂಥ

ಅಕ್ಲಿಷ್ಟವೂ ಸುಕ್ಲಿಷ್ಟವೂ ಆದ ಸರ್ವಸಂಗ್ರಾಹ್ಯವಾದ, ಈಗಾಗಲೇ ರಾಜಪುರಸ್ಕಾರವನ್ನು ಸಾರ್ಥಕವಾಗಿಯೇ ಸಂಪಾದಿಸಿದ ಪರಿಚಯ ಗ್ರಂಥವನ್ನು ರಸಿಕರಿಗೆ ದಯಪಾಲಿಸಿದರು. ಅಲ್ಲದೆ "ಯಜ್ಞಫಲ"ದಂಥ ಭಾಸಕವಿಯ ಅಪೂರ್ವ ಕೃತಿರತ್ನವನ್ನು ಮೂಲದ ಕಾಂತಿ ಕಿಂಚಿತ್ತೂ ಕೆಡದಂತೆ ಕನ್ನಡದ ಕನಕ ಕುಂದಣದಲ್ಲಿ ಕಟ್ಟಿ ತಾಯ್ನುಡಿಯ ತಮ್ಮಡಿಗೆ ಒದಗಿಸಿದರು. 'ಮಹಾಭಾರತ' 'ಉತ್ತರ ರಾಮಚರಿತ' (ಭವಭೂತಿ)ದಂಥ ರಸಗಟ್ಟಿಗಳ ಕಾವ್ಯ ಪ್ರೌಢಿಮೆಯನ್ನು ಸುಲಲಿತ ಉಪನ್ಯಾಸಗಳಲ್ಲಿ ಪ್ರಚಾರಗೊಳಿಸಿದರು. ಸಂಸ್ಕೃತದ ಅಧ್ಯಯನ ಅಧ್ಯಾಪನಗಳೇ ಶ್ವಾಸೋಚ್ಛ್ವಾಸವಾಗಿರುವ, ಸಾಹಿತ್ಯದ ಅಭ್ಯಾಸ, ಅನುವಾದ, ಆಸ್ವಾದ ಸಂಶೋಧನೆ ಹಾಗೂ ಸಮಾಲೋಚನೆಗಳ ಕೃತಿಯಲ್ಲಿ ಪಟ್ಟಾಗಿ ಹಳಗಿದ ಡಾ|| ಕೃಷ್ಣಮೂರ್ತಿಗಳ ಕೈವರೆಗೆ ಈ ಉಪನ್ಯಾಸಗಳ ರೂಪದಲ್ಲಿ ಒಂದು ಸೂಕ್ಷ್ಮವೂ ಸುಕುಮಾರವೂ ಆದ ಸಮಸ್ಯೆ ಸ್ವಾರಸ್ಯವಾಗಿ ಇಲ್ಲಿ ಲಾಸ್ಯವಾಡಿದೆ. ಆ ಸಮಸ್ಯೆ ಯಾವದು ? ಅದರ ಸ್ವಾರಸ್ಯವೇನು ? ಅಲ್ಲಿ ಲೇಖಕರು ತೋರಿದ ಕೈವಾಡದ ಕೌಶಲ್ಯ ಎಂತಹದು ?

ಉಪನ್ಯಾಸಕರು ಇತ್ಯರ್ಥ ಮಾಡಲು ಹೊರಟ ವಿಷಯದ ಗೊತ್ತುಗುರಿ ಅವರದೇ ಮಾತುಗಳಲ್ಲಿ ಇಲ್ಲಿ ಇಡಲಾಗಿದೆ: "'ಅಲಂಕಾರ' ಮತ್ತು 'ರಸ' ತತ್ವಗಳ ಸಮನ್ವಯವನ್ನು ಸೂಚಿಸುವದು ಈ ಉಪನ್ಯಾಸಗಳ ಗುರಿ." ಈ ಗುರಿಗೆ ನಿಲುಕುವ ವಿಚಾರ ಸರಣಿಯ ಹಿನ್ನೆಲೆಯಾದ ಪೂರ್ವಪಕ್ಷ ಇಂತಿದೆ :

"ಕಾವ್ಯಲಕ್ಷಣದಲ್ಲಿ ಅಲಂಕಾರಕ್ಕೆ ಸ್ಥಾನವಿಲ್ಲದಿದ್ದರೂ ಆಗುತ್ತದೆ. ಅಲಂಕಾರ ಸ್ಪರ್ಶವಿಲ್ಲದೆಯೇ ಉತ್ತಮ ಕಾವ್ಯವಿರಬಹುದು. ಅಲಂಕಾರ ವಿವೇಚನೆ ವಿಮರ್ಶಕನಿಗೆ ಅನಗತ್ಯ. ನಾಟ್ಯದಲ್ಲಿ ರಸಕ್ಕೆ ಯಾವ ಸ್ಥಾನವೋ ನಾಟ್ಯೇತರ ಕಾವ್ಯದಲ್ಲೂ ಅದೇ ಮಹತ್ವದ ಸ್ಥಾನವುಂಟು."—ಈ ವಾದವನ್ನು ಲೇಖಕನು ಪುನರ್ವಿಮರ್ಶೆಗೆ ಗುರಿಮಾಡಿದ್ದಾನೆ ಮತ್ತು ಅಭಿನಂದನೆಯ ಅಂಶವೆಂದರೆ, ಈ ವಿಮರ್ಶೆಯಲ್ಲಿ ಲೇಖಕನ ಪ್ರತಿಪಾದನೆಯ ಶಕ್ತಿಯೂ ಶೈಲಿಯೂ ಸಾರ್ಥಕವಾದಂತೆಯೇ ಕೃತಾರ್ಥವೂ ಆಗಿವೆ. ತಾರ್ಕಿಕನ ತೀಕ್ಷ್ಣತೆ, ತಾಂತ್ರಿಕನ ಸೂಕ್ಷ್ಮತೆ, ತಾತ್ವಿಕನ ತಾಟಸ್ಥ್ಯ ಮತ್ತು ತಜ್ಞನ ತಾತ್ಪರ್ಯ—ಇವೆಲ್ಲ ಗುಣಗಳ ಮಾರ್ಮಿಕವಾದ ಸಂಯೋಗ ಇಲ್ಲಿಯ ವಾದ ವಿನ್ಯಾಸದ ಶಕ್ತಿಯಾಗಿದೆ. ಅದೇ ರೀತಿ, ಸಂದಿಗ್ಧತೆ, ವಿಷದಿಗ್ಧತೆ ದುರ್ವಿದಗ್ಧತೆಗಳಿಗೆ ಎಡೆಗೊಡದೆ, ಅಭಿನಿವೇಶವಿಲ್ಲದ ಅಭಿಪ್ರಾಯ ಮಂಡನೆ, ಆವೇಶವಿಲ್ಲದ ಅನ್ಯಮತ ಖಂಡನೆ, ಆಗ್ರಹವಿಡದ ಪ್ರತಿಪಾದನೆ, ಪಾರಿಭಾಷಿಕ ಪ್ರೌಢಿಮೆಯೊಂದಿಗೂ ಸಾಧಿಸಿದ ವಾಕ್ಯ–ವ್ಯಾಖ್ಯೆಗಳ ಸ್ಫಟಿಕ ಸ್ಫುಟತೆ ಸಂಸ್ಕೃತ ಭೂಯಿಷ್ಠವಾಗಿಯೂ ವ್ಯರ್ಥವೆನಿಸದ ಅರ್ಥಗೌರವದ ಜ್ಞಾನ ಗಾಂಭೀರ್ಯವಾದ ಪ್ರಸನ್ನತೆ ಇಲ್ಲಿಯ ಗದ್ಯದ ಶೈಲಿಯಾಗಿದೆ.

ಸ್ಫಟಿಕ ಸ್ಫುಟತೆಗೆ ಉದಾಹರಣೆಯಾದ ಕೆಳಗಿನ ಪರಿಚ್ಛೇದ ಪ್ರತಿಪಾದ್ಯ ಪ್ರಮೇಯದ ಒಂದು ಪಾಂಗು ಬೆಳಗುತ್ತದೆ :

" ಅಲಂಕಾರವೆಂದರೇನು ? ಕಾವ್ಯವೆಂದರೇನು ? ಕಾವ್ಯದಲ್ಲಿ ಅಲಂಕಾರ ಅನಗತ್ಯವೆಂದಿರುವ ಲಾಕ್ಷಣಿಕರಾರು ? ಎಂದು ಕೇಳಿಕೊಂಡರೆ–' ಅವಿಭಾಜ್ಯಗಳಾದ ಶಬ್ದಾರ್ಥಗಳಲ್ಲಿ ಮೂಡುವ ಚಮತ್ಕಾರ ಅಥವಾ ಸೌಂದರ್ಯಾಂಶವೇ ಅಲಂಕಾರ', ' ಅಭಿನಯಪ್ರಧಾನವಾದ ನಾಟ್ಯಕ್ಕಿಂತ ವಿಲಕ್ಷಣವಾಗಿ ವರ್ಣನಾಪ್ರಧಾನವಾಗಿರುವ ಎಂದರೆ ಅಲಂಕಾರ ವಿಶಿಷ್ಟವಾದ ಮತ್ತು ಕಥಾದಿ ವಿವಿಧ ಸಾಹಿತ್ಯ ಪ್ರಕಾರಗಳನ್ನು ಒಳಗೊಳ್ಳುವ ಶಬ್ದಾರ್ಥಗಳೇ ಕಾವ್ಯ.' ಎಂಬ ಉತ್ತರಗಳು ಮೊದಲು ಎರಡು ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳೆಂದು ನನಗೆ ತೋರುತ್ತವೆ. ಇದನ್ನೊಪ್ಪಿ ಮೂರನೆಯ ಪ್ರಶ್ನೆಗೆ ಬಂದರೆ–' ಆನಂದವರ್ಧನ ಭಟ್ಟತೌತ ಭಟ್ಟನಾಯಕ ಅಭಿನವಗುಪ್ತ ಇವರೆಲ್ಲರೂ ಈ ಅಭಿಪ್ರಾಯಕ್ಕೆ ಸಮರ್ಥಕರೆಂದು ಆಪಾತತಃ ತೋರಬಹುದು.... "

ಉಪನ್ಯಾಸಕರು ನಿರ್ಮಿಸಿದ ವಾದಭೂಮಿ ಈ ರೀತಿ–" ಕಾವ್ಯತತ್ವದ ದೃಷ್ಟಿಯಿಂದ ಸಹೃದಯರ ' ರಸ 'ದ ವಿವೇಚನೆಗೆ ಪ್ರಾಶಸ್ತ್ಯ ಸಲ್ಲಬೇಕೋ, ಇಲ್ಲವೇ ಕಾವ್ಯತಂತ್ರದ ಉನ್ಮೀಲನಕ್ಕೆ ಪ್ರಾಮುಖ್ಯ ದೊರೆಯಬೇಕೋ ?.... ಅಲಂಕಾರದ ಸೌಂದರ್ಯಗ್ರಹಣೆಗಿಂತ ರಸದ ಪರಾಮರ್ಶೆ ಅಗತ್ಯವೆಂದು ನಂಬಿ ವಿಮರ್ಶಕರನೇಕರು ಮೆಚ್ಚಿರುವ ನಾವೂ ಮೆಚ್ಚುವ ಕೆಲವು ಪದ್ಯಗಳನ್ನು ಓದಿದರೆ, ಅಲ್ಲಿ ರಸದ ಅಸ್ತಿತ್ವಕ್ಕಿಂತ ಬೇರೊಂದು ಚಮತ್ಕಾರವೇ ಎದ್ದು ತೋರುವದು.... ನಾಟಕಗತವಾದ ಭಾವ ವಿಶೇಷಗಳು ಹೃದಯಸಂವಾದದ ಮೂಲಕ ರಸಿಕನಲ್ಲಿ ಉದ್ಬುದ್ಧವಾಗಿ ಆಸ್ವಾದ್ಯವಾಗುವದು ಸತ್ಯವೆನ್ನೋಣ. ಆದರೆ ನಾಟಕದಲ್ಲಿ ಬೇರೆ ಬೇರೆ ಭಾವಗಳಿಗೆ ಆಲಂಬನಗಳಾಗಿ ಅನೇಕ ಪಾತ್ರಗಳಿರುವಾಗ, ಕವಿವಿವಕ್ಷೆ ಅಥವಾ ಕವಿಯ ಸಹಾನುಭೂತಿಗೆ ಅನುಗುಣವಾಗಿ ಯಾವುದೋ ಒಂದು ಪಾತ್ರದಲ್ಲಿ ಮಾತ್ರ ತನ್ಮಯೀಭವನ ವುಂಟಾಗುವದೆಂದು ಒಪ್ಪಬೇಕಲ್ಲವೇ ? ಆಮೇಲೆ ಆ ಪಾತ್ರದ ಕಣ್ಣುಗಳಿಂದ ಉಳಿದ ಪಾತ್ರಗಳನ್ನು ನಾವು ಅನುಸಂಧಾನ ಮಾಡುತ್ತೇವಲ್ಲವೇ ?.... ಇಲ್ಲಿ ರಸವನ್ನು ಉಪಪಾದಿಸುವಾಗ ರಸವು ಸಹೃದಯನ ಅನುಭೂತಿ ಎನ್ನುವ ಬದಲು ಕವಿವರ್ಣಿತ ಪಾತ್ರನಿಷ್ಠವಾದ ಚಿತ್ತವೃತ್ತಿಯೆಂದು ತಾತ್ಪರ್ಯ ಹೇಳಬೇಕಾಗುತ್ತದೆ. ಇದನ್ನು ತೋರಿಸುವದಷ್ಟೇ ನನ್ನ ಗುರಿ.... ಅಲಂಕಾರಗಳಿಗೂ ರಸಕ್ಕೂ ಅತ್ಯಂತ ಭೇದವನ್ನೆ ಆರೋಪಿಸುವ ಪದ್ಧತಿ ವಿದ್ವಜ್ಜನರಲ್ಲಿ ಪ್ರಚಲಿತವಾಗಿದೆ. ಆದರೆ ವಸ್ತುತಃ ಅವೆರಡೂ ಕವಿವ್ಯಾಪಾರದ ಅಥವಾ ಕವಿಪ್ರತಿಭೆಯ ಅವಿಭಾಜ್ಯ ಅಂಶಗಳೆಂದು ತಿಳಿಯುವುದು ಹೆಚ್ಚು ಯುಕ್ತಿಯುಕ್ತವೆಂದು ನನಗೆ ತೋರುತ್ತದೆ........ ಅಲಂಕಾರವೇ ದೇಹ ; ರಸವೇ ಆತ್ಮ. ಉತ್ತಮವಾದ ಕಾವ್ಯದಲ್ಲಿ ಸ್ವಲ್ಪವೂ ರಸಸ್ಪರ್ಶವಿಲ್ಲದ ಅಲಂಕಾರದ ಉದಾಹರಣೆ ಹೇಗೆ ದುರ್ಲಭವೋ ಅಷ್ಟೇ ದುರ್ಲಭ–ಸ್ವಲ್ಪವೂ ಅಲಂಕಾರ ಸ್ಪರ್ಶವಿಲ್ಲದ ರಸದ ಉದಾಹರಣೆ ಕೂಡ.... ಕಾವ್ಯದ ರಸಾನುಭವಕ್ಕೆ ವ್ಯಂಗ್ಯಾರ್ಥದಷ್ಟೇ ವಾಚ್ಯಾರ್ಥವೂ ಸಾಧಕ. ಕವಿಯು ಸೃಷ್ಟಿಕಾಲದಲ್ಲಿ ವಾಚ್ಯ ವೈಚಿತ್ರ್ಯದ

ಮೂಲಕವೇ ವ್ಯಂಗ್ಯಾರ್ಥವನ್ನು ಸಾಧಿಸುತ್ತಾನೆ; ಏಕಪ್ರಯತ್ನದಿಂದ. ಸಾರಾಂಶ ವಿಷ್ಟೇ:—ಕಾವ್ಯವಿಮರ್ಶೆಯ ಕಾಲದಲ್ಲಿ 'ರಸ' ಎಂಬುದಕ್ಕೆ ನಿಯತವಾದ ಅರ್ಥ ಅಗತ್ಯ–ಅದು ಈಗ ಇದ್ದಂತಿಲ್ಲ."

ಇಲ್ಲಿಂದ ಮುಂದೆ ಉಪನ್ಯಾಸಕರು 'ರಸ' ಶಬ್ದದ ಸೂಕ್ಷ್ಮ ಇತಿಹಾಸದ ಕಡೆಗೆ ಹೊರಳುತ್ತಾರೆ. ಆ ಮೊದಲು ಒಂದು ಮಾತು ಅವರು ಖಚಿತವಾಗಿ ಆಡಿದ್ದಾರೆ. ಅದೆಂದರೆ, ಗೂಢಾರ್ಥದ 'ರಸ'ವೆಂಬುದನ್ನು ನಾಟ್ಯ ನೇಪಥ್ಯ ನಿರ್ಮಿತ ವೆಂಬುದು ಬಿಟ್ಟು "ಯಾವದನ್ನಿಂದು ನಾವು ಸೌಂದರ್ಯಾನುಭೂತಿ ಎನ್ನು ತ್ತೇವೆಯೋ, Aesthetics ಎಂಬ ಶಾಸ್ತ್ರಕ್ಕೆ ಸ್ವತಂತ್ರ ವಿಷಯವೆನ್ನುತ್ತೇವೆಯೋ ಅದನ್ನೇ 'ರಸೋಲ್ಲಾಸ'ವೆಂದು ನಾನು ಕರೆದುಕೊಂಡಿದ್ದೇನೆ. ಇಲ್ಲಿ ಡಾ|| ಕೃಷ್ಣಮೂರ್ತಿಯವರು ತಮ್ಮ ಪ್ರತಿಜ್ಞೆ ಜ್ಞಾಪಿಸಿಕೊಳ್ಳುತ್ತಾರೆ. "ಕೇವಲ ಕಾವ್ಯಕಲೆಗೆ ಮಾತ್ರ" (ಕೇವಲವೆಂದಾಗ ಮತ್ತೆ ಈ "ಮಾತ್ರ"ವೇಕೋ!) ಸಂಬಂಧಿಸಿದ ವಿಷಯಗಳನ್ನು ಅವರು ಹೆಚ್ಚು ಪ್ರಸ್ತಾಪಿಸುವವರಿದ್ದಾರೆ. ಅವರ ದೃಷ್ಟಿ ವಿಚಾರಪ್ರಧಾನವಾದುದು.

ಉಪನ್ಯಾಸಕರ ವ್ಯಾಸಂಗ ವಿಚಿಕಿತ್ಸೆಗಳ ಉತ್ತಮ ಉದಾಹರಣೆಯೆಂದರೆ ಅವರು ೮ರಿಂದ ೨೯ ಪುಟಗಳತನಕ ಮಾಡಿದ ಷಡ್ದರ್ಶನಗಳ ಪರೀಕ್ಷೆ. ವೇದ–ಉಪ ನಿಷತ್ತು–ಸಾಂಖ್ಯ–ತರ್ಕ–ನ್ಯಾಯ–ಮೀಮಾಂಸೆ ಮುಂತಾದವುಗಳನ್ನೆಲ್ಲ, ರಸ ವಿಮರ್ಶೆಯ ದೃಷ್ಟಿಯಿಂದ ಶೋಧಿಸಿ ನೋಡಿ "ಕಾವ್ಯರಸದ ವಿಮರ್ಶೆಗೂ ಈ ದರ್ಶನ ಶಾಸ್ತ್ರಗಳ ವಿಚಾರಕ್ಕೂ ಯಾವ ಬಾದರಾಯಣ ಸಂಬಂಧವೂ ಇಲ್ಲ" ವೆಂಬುದನ್ನು ಯಾವ ಆಕ್ಷೇಪಕ್ಕೂ ಎಡೆ ಇಡದಂತೆ ಸಂಕ್ಷೇಪವಾಗಿ ಸಾರಿದ್ದಾರೆ. "ಕಾವ್ಯಾನಂದವನ್ನು ಬ್ರಹ್ಮಾನಂದಕ್ಕೆ ಸರಿದೂಗುವವರ ದೃಷ್ಟಿ ದೋಷಕ್ಕೆ ಡಾಕ್ಟರರು ಪ್ರಖರ ಅಂಜನ ಹಚ್ಚಿದ್ದಾರೆ. ಈ ವಿಷಯಕ್ಕೆ ಈ ವಿಸ್ತಾರದ ಪ್ರತಿಪಾದನೆ ತುಸು ಅಪ್ರಸ್ತುತವೆನಿಸಿದರೂ ಇದು ಉಪನ್ಯಾಸಕರ ಉದ್ಯಮಶೀಲತೆಗೂ ವಿನಯಾವ ಗುಂಠಿತವಾಗಿಯೂ ವ್ಯಕ್ತವಾಗುವ ಉದ್ದಾಮ ಆತ್ಮವಿಶ್ವಾಸಕ್ಕೂ ಒಂದು ಅನನ್ಯ ನಿದರ್ಶನವಾಗಿದೆ. ಡಾ|| ಕೃಷ್ಣಮೂರ್ತಿಯವರು ಇಲ್ಲಿ ಒಂದು ಹೆಜ್ಜೆ ಮುಂದೆಯೇ ನುಗ್ಗಿ ಒಂದು ಕಟುವಾದ ಸತ್ಯವನ್ನು ದಿಟವಾಗಿ ಹೇಳಿದ್ದಾರೆ. "ನಿಷ್ಪಕ್ಷಪಾತ ದೃಷ್ಟಿಯಿಂದ ದರ್ಶನಗಳನ್ನು ಅಭ್ಯಾಸಮಾಡಿದರೆ, ಎಲ್ಲರೂ ಕಾವ್ಯದ ಅನು ಭೂತಿಗೆ ವಿಷಯ ಸುಖಕ್ಕಿಂತ ಹೆಚ್ಚಿನ ಸ್ಥಾನವಿಲ್ಲವೆಂಬ ಮಾತನ್ನೆ ಆಡಿದ್ದಾರೆಂದು ತಿಳಿಯುತ್ತದೆ. ಸೌಂದರ್ಯ ಒಂದು ಸ್ವತಂತ್ರ Value ಅಥವಾ ಪುರುಷಾರ್ಥವೆಂಬ ಕಲ್ಪನೆಯೇ ಭಾರತೀಯ ದಾರ್ಶನಿಕರಲ್ಲಿಲ್ಲವೆಂಬುದು ಸ್ಪಷ್ಟವಾಗುತ್ತದೆ." ಡಾ|| ಕೃಷ್ಣಮೂರ್ತಿಯವರ ಈ ವಿಧಾನ ಭಾರತೀಯ ದರ್ಶನ ಶಾಸ್ತ್ರಿಗಳಿಗೆ ಬಲವಾದ ಆಹ್ವಾನವಾಗಬಹುದೇ? (ಇಲ್ಲಿ Value ಎಂಬ ಪದಕ್ಕೆ ನಮ್ಮಲ್ಲಿಯ 'ಪುರುಷಾರ್ಥ' ಪದವನ್ನು ಸಮಾನಾರ್ಥಕವಾಗಿ ಪ್ರಯೋಗಿಸಿ ಲೇಖಕರು ತಮ್ಮ ಸಮರ್ಪಕ

ಸಮ್ಯಕ್ ಪ್ರಯೋಗ ಪರಿಣತ ಮತಿಯನ್ನು ತೋರಿಸಿದ್ದು ಶ್ಲಾಘನೀಯವಾಗಿದೆ.) ಇಷ್ಟೇ ನಿಷ್ಠುರವಾದ ಅವರ ಆತ್ಮನಿಷ್ಠೆಯ ಇನ್ನೊಂದು ವಿಧಾನವನ್ನು ನೋಡಿ: "ಗಹನವೂ ಅನಿರ್ವಚನೀಯವೂ ಅಮೂರ್ತವೂ ಆದ ಕಲ್ಪನಾ ರಾಜ್ಯದ ಚರ್ಚೆ ಕಾವ್ಯಮೀಮಾಂಸೆಯಲ್ಲಿ ಅಪ್ರಸಕ್ತ." ಇದಕ್ಕೂ ಮುಂದೆ ಹಾಯ್ದು ಇವರು ಇನ್ನು ಅನ್ನುವದೇನೆಂದರೆ, "ಇಂಥದೊಂದು (Metaphysical) ತತ್ವವನ್ನೊಪ್ಪಿದರೆ ವಿಚಾರ ಬೆಳೆಯುವದೇ ಅಸಂಭವವಾಗಿ ಬಿಡುತ್ತದೆ. ವಸ್ತುತಃ ಕಾವ್ಯತತ್ವವು ಪರಾತ್ಪರ ತತ್ವದ ವಿಜ್ಞಾನವಾಗಬೇಕಾದ ಅಗತ್ಯವಿಲ್ಲ. ಅನೇಕ ರಸಿಕರ ಅನುಭವ ಸಿದ್ಧವಾದ ಅಂಶಗಳಿಗೆ ಉಪಪತ್ತಿ ಹೇಳಿದರೆ ಸಾಕು."

ಈ ಮತವನ್ನು ಈ ಮಾತಿನಲ್ಲಿ ಇಷ್ಟು ಬಿಗುವಿನಿಂದ ಹೇಳುವ ಅಪ್ರಿಯವಾದರೂ ಪಥ್ಯವೂ ತಥ್ಯವೂ ಆದ ಕೆಲಸಮಾಡಿದ ಧೀರರು ಡಾ|| ಕೃಷ್ಣಮೂರ್ತಿಗಳೇ ಮೊದಲು! ಆದರೆ ಧೈರ್ಯಕ್ಕೆ ಒಂದೆರಡು ಛಿದ್ರಗಳು ಬಿದ್ದಿವೆ. ಹೀಗೆ ಬ್ರಹ್ಮಾನಂದದ ಪರಿಭಾಷೆಯ ಪ್ರಪಂಚದಿಂದ ಕಾವ್ಯಾನಂದವನ್ನು ಬೇರ್ಪಡಿಸುವ ಖಂಡಿತವಾದದಲ್ಲಿಯೂ ಡಾ|| ಕೃಷ್ಣಮೂರ್ತಿಗಳ ಕಟಾಕ್ಷ ಪ್ರೊ|| ಹಿರಿಯಣ್ಣನವರ ಹಾಗೂ ಪ್ರೊ|| ತೀ. ನಂ. ಶ್ರೀಕಂಠಯ್ಯನವರ ಮೇಲೆ ಇದ್ದಂತೆ ಕಾಣುತ್ತದೆ. ಹೀಗೆ ಕಟಾಕ್ಷವಾಗಿ (Obliquely) ತಮ್ಮ ಗುರುಗಳ ಮೇಲೆ ಶರಸಂಧಾನ ಮಾಡುವ ಬದಲು ಆ ಪಂಡಿತವರ್ಯರ ಅಭಿಪ್ರಾಯಗಳನ್ನು ನೇರವಾಗಿ ಉದ್ಧರಿಸಿ ಅವುಗಳ "ಉದ್ಧಾರ" ಮಾಡಿದರೆ ಅದು ಹೆಚ್ಚು ಸಾಧುವೂ ಹಿತವೂ ಆಗುತಿತ್ತು. "Willing to wound but afraid to strike" ಎಂಬಂತೆ ಆಭಾಸ ಉಂಟುಮಾಡುವ ಈ ದಾಕ್ಷಿಣ್ಯ ಅನ್ಯಥಾ ಪ್ರಗಲ್ಭವೆನಿಸುವ ಡಾಕ್ಟರ್ ಸಾಹೇಬರ ಪ್ರತಿಪಾದನೆಯಲ್ಲಿ ಒಂದು ದೌರ್ಬಲ್ಯವಾಗಿ ತೋರುವದು.

ಇಲ್ಲಿ ಒಂದು ಮಾತು ವಿಶದಮಾಡಿದರೆ ಅಪ್ರಾಸಂಗಿಕವಲ್ಲ. ಬ್ರಹ್ಮಾನಂದದ ಹೊಂದಿಕೆ ಹೋಲಿಕೆ ಕಾವ್ಯಾನಂದಕ್ಕೆ ಕೊಡುವ ಕಾವ್ಯಮೀಮಾಂಸಕರು ಕೇವಲ "ಸಮಸ್ಯೆಯನ್ನೆಲ್ಲ ಎದುರಿಸದೆ ವಾಗ್ಜಾಲದಿಂದ ಇತರರಿಗೆ ಭ್ರಾಂತಿಯನ್ನುಂಟುಮಾಡಿ ತಾವೂ ಪಲಾಯನ ಮಾಡುತ್ತಿರುವರೆಂದು" ತಿಳಿಯಬೇಕಾಗಿಲ್ಲ. ಇದೂ ಒಂದು ಪ್ರತಿವಾದದ ಅತಿವಾದ. ಇಂಥವರ ಸದುದ್ದೇಶವನ್ನು ಯಾರೂ ಶಂಕಿಸಬೇಕಾಗಿಲ್ಲ. ಏಕೆಂದರೆ ತತ್ವತಃ ರಸಾನುಭವ ಬ್ರಹ್ಮಾನುಭವಗಳಲ್ಲಿ ಕೆಲವೊಂದು ಸಾಧರ್ಮ್ಯವಿದ್ದೇ ಇದೆ. ಅವೆರಡರಲ್ಲಿ ಸಾಯುಜ್ಯವಿಲ್ಲದಿದ್ದರೂ ಕೆಲಮಟ್ಟಿಗೆ ಸಾಮೀಪ್ಯ ಇಲ್ಲದಿಲ್ಲ. ಏಕೆಂದರೆ ಎರಡೂ ಅತ್ಯಂತ ಆತ್ಮನಿಷ್ಠ ಏಕಾಂತಿಕ ಅನುಭವಗಳು. ಬ್ರಹ್ಮಾನಂದವೂ ಕಾವ್ಯಾನಂದವೂ ಪ್ರತ್ಯಕ್ಷವಲ್ಲದ ಪರೋಕ್ಷವೂ ಅಲ್ಲದ ಅಪರೋಕ್ಷಾನುಭವವೆಂಬುದನ್ನು ಕವಿಗಳಂತೆ ವಿಮರ್ಶಕರೂ, ಸಹೃದಯರಂತೆ ಪಂಡಿತರೂ ಒಪ್ಪಬಹುದು. ಕಾವ್ಯವೇ ಏನು? ಎಲ್ಲ ಕಲಾನುಭೂತಿಯೂ ಹಾಗೆಯೇ. ಯಃ ಪಶ್ಯತಿ ಸಃ ಪಶ್ಯತಿ. ಅದನ್ನು ಬಲ್ಲವನೇ ಬಲ್ಲ. ಅದಕ್ಕೆ

ಯಾರಾದರೂ "ಸಮಾನಧರ್ಮಿ"ಗಳೇ ಬೇಕು. ಅಭಿನವಗುಪ್ತನು ಕೊಟ್ಟ ಸಹೃದಯನ ವ್ಯಾಖ್ಯೆಯಲ್ಲಿಯೇ ಇದು ಅಭಿಪ್ರೇತ. "ಯೇಷಾಂ **ಕಾವ್ಯಾನುಶೀಲನಾಭ್ಯಾಸವಶಾತ್** ವಿಶದೀಭೂತೇ ಮನೋಮುಕುರೇ ವರ್ಣನೀಯ ತನ್ಮಯೀಭವನ ಯೋಗ್ಯತಾ ತೇ ಹೃದಯಸಂವಾದ ಭಾಜಃ" ಎನ್ನುವಾಗ ಈ ತನ್ಮಯೀಭವನವೂ ಅದರ ಯೋಗ್ಯತೆಯೂ ಕಾವ್ಯಾನುಶೀಲನಾಭ್ಯಾಸಯೋಗಕ್ಕೆ ಸಾಪೇಕ್ಷವಾದ ಅನುಭವವೆಂಬುದು ಸ್ಪಷ್ಟ. ಇದೂ ಒಂದು ರೀತಿಯ ಸಾಧನ ಚತುಷ್ಟಯ ಸಂಪನ್ನತೆಯ ಅಧಿಕಾರವೇ ಸರಿ. ಆಗಲೂ ಕವಿಯ ಅನುಭವ ಆನಂದ ಎರಡೂ ಯಥಾರ್ಥವಾಗಿ ತಾದ್ರೂಪ್ಯದಿಂದ ರಸಿಕನಿಗೆ ವೇದ್ಯವಾಗುವವೆಂದು ಹೇಳುವಂತಿಲ್ಲ. ಹೀಗೆ ಮಾತ್ರೆಯಲ್ಲಿ ಅಲ್ಲದಿದ್ದರೂ ಗುಣದಲ್ಲಿ ಉಭಯಾನುಭವಗಳಿಗೂ ವಿಶೇಷ ವ್ಯತ್ಯಾಸವಿಲ್ಲ. ಆದರೆ ಇದ್ದ ವ್ಯತ್ಯಾಸ ವಿಶಿಷ್ಟವೇ ಆಗಿದೆ, ತೀವ್ರವಾಗಿದೆ. ಯೋಗಸೂತ್ರ(೧-೧-೧೭) ದಲ್ಲಿ ಹೇಳಿದಂತೆ "ಸಂಪ್ರಜ್ಞಾತ" ಸಮಾಧಿಗೆ ವಿತರ್ಕ-ವಿಚಾರ-**ಆನಂದ**-ಅಸ್ಮಿತಾ ಈ ನಾಲ್ಕು ಮೆಟ್ಟಲುಗಳು. ಅಂದರೆ 'ಅಸಂಪ್ರಜ್ಞಾತ' ಸಮಾಧಿಯ ಸಿದ್ಧಿಗೆ ಹಾಯುವಾಗ ಆನಂದಾನುಭವದ ಸಂಪ್ರಜ್ಞಾತ ಅವಸ್ಥೆಯೊಂದು ಹತ್ತುವದು. ಸಾಹಿತ್ಯಾನುಭವ-ಸಹೃದಯನಾದ ತನ್ಮಯೀಭವನ-ಈ 'ಸಂಪ್ರಜ್ಞಾತ' ಸಮಾಧಿಗೆ ಸರಿಸಮ. ಬ್ರಹ್ಮಾನುಭವ ನಿರ್ವಿಕಲ್ಪ. ಕಾವ್ಯ ಕಲಾನುಭವದ ರಸಕಲ್ಪ ಸವಿಕಲ್ಪ. ಇಲ್ಲಿ ಜ್ಞಾತಾ ಜ್ಞೇಯಗಳು ಜ್ಞಾನದಲ್ಲಿ ಒಂದಾಗುವದಿಲ್ಲ. ಹಾಗೆ ಆದರೆ ಅದು ಉನ್ಮಾದವಾದೀತು, ಪ್ರಮಾದವಾದೀತು. ಹೀಗೆ ಆಸ್ವಾದ ದೃಷ್ಟಿಯಿಂದ ರಸದ ಅನುಭವವೂ ಅನುಭಾವದಂತೆಯೇ (—ಅಷ್ಟೇ ಅಲ್ಲ!) ಸ್ವಸಂವೇದ್ಯವಿದ್ದರೆ, ಅತ್ತ ನವನಿರ್ಮಿತಿಯ ಸೌಂದರ್ಯಸೃಷ್ಟಿಯ ನಿಟ್ಟಿನಿಂದ 'ಪ್ರತಿಭೆ'ಯೆಂಬುವುದು ಒಂದು ಅಲೌಕಿಕ-ಶಕ್ತಿ ವಿಲಾಸ. ("ಅಲೋಕ ಸಾಮಾನ್ಯಮಭಿವ್ಯನಕ್ತಿ.") ಅದು "ಅನನ್ಯ ಪರತಂತ್ರ". ಈ ಪ್ರಾತಿಭಾಸಿಕ ಸತ್ತೆ ವ್ಯಾವಹಾರಿಕದಿಂದ ಭಿನ್ನವಿದ್ದಷ್ಟು ದೂರವಿದ್ದಷ್ಟು ಅನಿರ್ವಚನೀಯವೆಂದು ಪರಿಗಣಿಸಲ್ಪಡುತ್ತಿದ್ದರೆ ಅಷ್ಟೇನು ಅಕ್ಷಮ್ಯವಾಗಲಾರದು. ಶಬ್ದಾರ್ಥಗಳಲ್ಲಿ, ಪ್ರಸ್ತುತಾಪ್ರಸ್ತುತಗಳಲ್ಲಿ, ದೂರದರ್ಶಿಯಾಗಿ ಪಾರದರ್ಶಿಯಾಗಿ ಅಪಾರದರ್ಶಿಯಾಗಿ ಸರ್ವಸ್ಪರ್ಶಿಯಾಗಿ ಸಂಚರಿಸುವ ವ್ಯವಹರಿಸುವ ನಿರಂಕುಶಗತಿಯ 'ಪ್ರತಿಭೆ'ಯನ್ನು ದೈವಿಕ ಪರಿಭಾಷೆಯಲ್ಲಿ ವರ್ಣಿಸುವ ಮೋಹ ಕೇವಲ "ಪಲಾಯನ ಪ್ರವೃತ್ತಿ"ಯೆನ್ನುವದು ಅನ್ಯಾಯವಾದೀತು.

"ಕವಿಗಳು ಕ್ರಾಂತದರ್ಶನರು", "ನಾನೃಷಿಃ ಕುರುತೇ ಕಾವ್ಯಂ" ಎಂಬೆಲ್ಲ ಅರ್ಥವಚನಗಳೂ ಪ್ರತಿಭೆಯ ಅಲೌಕಿಕತ್ವಕ್ಕೇ ಪ್ರಶಸ್ತಿಯಾಗಿವೆ. "ರಸ" ಮತ್ತು "ರಸೋಲ್ಲಾಸ"ದ ಸೂಕ್ಷ್ಮಪ್ರಭೇದವನ್ನು ನಾವು ಇಂದು ಒಪ್ಪಿಕೊಳ್ಳಬೇಕಾದರೂ, ಸಂಸ್ಕೃತಸಾಹಿತ್ಯದ ಸಮೀಕ್ಷಕರಿಗೆ 'ಕವಿ'ಯಿಂದ ಹೊರತಾದ 'ನಾಟಕಕಾರ'ನ ಗುರುತೇ ಇದ್ದಿಲ್ಲ. ಶ್ರಾವ್ಯವಿರಲಿ ದೃಶ್ಯವಿರಲಿ ಎಲ್ಲವೂ ಕಾವ್ಯವೇ. ಅದರ ಕರ್ತೃಗಳೆಲ್ಲ ಕವಿಗಳೇ. ಅದೇ ರೀತಿ ಗದ್ಯ-ಪದ್ಯವೆಂಬ **ಭೇದವೂ**

ಕಾವ್ಯಕ್ಕೆ ಇದ್ದಿಲ್ಲ. ಕಾದಂಬರೀ ಕಥೆಯ ಬಾಣಭಟ್ಟನೂ ಕವಿಯೇ. ಅಂದರೆ ರಸಾತ್ಮಕತೆ ಆಸ್ವಾದ್ಯಮಾನತೆ ಇದ್ದುದೆಲ್ಲ ಕಾವ್ಯವೆಂದಾಗ ಆ ರಸಾಸ್ವಾದದ ತಾರತಮ್ಯ ಭೇದ-ಭೇದಗಳನ್ನು ಪ್ರಾಚೀನರು ಮನ್ನಿಸಿದಂತಿಲ್ಲ. ಅದೇ ರೀತಿ 'ಕವಿ'ಯನ್ನೂ ಅದಕ್ಕೆ ಪೂರ್ವಿಕರು ಹೆಚ್ಚು ವ್ಯಾಪಕವಾಗಿ ಪ್ರಯೋಗಿಸುತ್ತಿದ್ದರು. ಸಂಜೀವಿನೀ ವಿದ್ಯೆ ಬಲ್ಲ ಶುಕ್ರಾಚಾರ್ಯನೂ 'ಕವಿ.' ಮಾತನ್ನು ಮಂತ್ರವಾಗಿ ಮಾರ್ಪಡಿಸುವ ಮೇಧಾವಿಶೇಷದ ಮಹಿಮೆ ಇಲ್ಲಿದೆ. ಶಬ್ದಕ್ಕೆ ಜೀವಕಳೆ ಕೊಡುವವನಿಗೂ ಆಯುರ್ವೇದ ವಿಶಾರದನಿಗೂ ಕೂಡಿಯೇ ಕವಿಯೆಂದು ಕರೆದುದರಲ್ಲಿಯೂ ಆ ಅಲೌಕಿಕತೆಯ ಆಳವಾದ ಔಚಿತ್ಯವಿದೆ.

ಕೊನೆಗೂ ಎಲ್ಲ ಅನು-ಭವ ಆಂತರಿಕವೇ, ಆಧ್ಯಾತ್ಮಿಕವೇ. ಬಹಿರಂಗವಾಗಿ ಒದಗುವುದೆಲ್ಲ 'ಭವ'. ಅದರಿಂದ ನಾವು ನಮ್ಮೊಳಗೆ ಮಾಡಿಕೊಳ್ಳುವ ಪ್ರತಿಕ್ರಿಯೆಯೇ ಅನುಭವ. ಬರ್ಟ್ರಾಂಡ್ ರಸೆಲ್‌ರು ಹೇಳುವಂತೆ "Our ignorance of the intrensic character of every thing non-mental is not usually realiased because people think that what they see is physical whereas in fact it is mental". ಈ ಪಾರಮಾರ್ಥಿಕ ಪಾತಳಿಯಿಂದ ಈಚೆಗೆ ಇಳಿದು ಬಂದರೂ 'ಆನಂದ' ಅಥವಾ 'ಹ್ಲಾದೇಕಮಯತೆ' ಎಂಬುದೊಂದೇ ಲಕ್ಷಣ ರಸಾನುಭವವನ್ನು ಲೌಕಿಕಾನುಭವದಿಂದ ಮೇಲಕ್ಕೆತ್ತಿ ಬೇರೊಂದು ಲೋಕದಲ್ಲಿ ಇಡಬಲ್ಲದು. ಪ್ರತ್ಯಕ್ಷ ಲೌಕಿಕಜೀವನದಲ್ಲಿ ಸುಖದುಃಖಗಳಾಗಿ ತೋರುವ ಸಂಗತಿಗಳು ಆನಂದರೂಪವಾಗಿ ತೋರಿದಲ್ಲಿಯೇ ರಸನಿಷ್ಪತ್ತಿ. ಆಮಟ್ಟಿಗೆ ಆ ಮಟ್ಟದಲ್ಲಿ ಅದು ಲೋಕವಿಲಕ್ಷಣ. ಆದ್ದರಿಂದ ರಸಾಸ್ವಾದವನ್ನೂ ಕಾವ್ಯಾನಂದವನ್ನೂ ಬ್ರಹ್ಮಾನಂದ ಸಹೋದರವೆಂದು ವರ್ಣಿಸುವ ಮೋಹ ಸಹೃದಯ ವಿಮರ್ಶಕರಿಗೆ ಆದರೆ ಆಶ್ಚರ್ಯವಲ್ಲ.

ಆದರೆ ಇಷ್ಟೊಂದು ನಿಜ. ಡಾ|| ಕೃಷ್ಣಮೂರ್ತಿಗಳು ಹೊರಟಿದ್ದು ಸಾಮಾನ್ಯ ಸಹೃದಯನ ದೃಷ್ಟಿಯಿಂದಲ್ಲ. ವಿಮರ್ಶೆ ಆರಂಭವಾಗುವುದೇ ಸಹೃದಯನ ಹೃದಯ ತುಂಬಿ ತಣಿದನಂತರ. "ಕೇವಲ ರಸಾಸ್ವಾದದಲ್ಲಿಯೇ ಆಸಕ್ತಿಯುಳ್ಳವನಿಗೆ ಈ ಚರ್ಚೆಯೇ ಅಪ್ರಸಕ್ತ. ಆ ತನ್ಮಯಾವಸ್ಥೆ ತೀರಿದ ಬಳಿಕ ಅದರ ಕಾರಣಾನ್ವೇಷಣವನ್ನು ಕೂಲಂಕಷವಾಗಿ ಮಾಡಿದ್ದಲ್ಲದೆ ಬುದ್ಧಿಗೆ ಸಮಾಧಾನವಿರುವುದಿಲ್ಲ." ಈ ಅನ್ವೇಷಣೆ ಸಹೃದಯತೆಯಿಂದ ಪ್ರೇರಿತವಾಗಿದ್ದರೂ ಬೌದ್ಧಿಕ ಪ್ರಯತ್ನದಿಂದಲೇ ಪರಿಣಾಮಗೊಳ್ಳಬೇಕು. ಆನಂದದಿಂದ ಹುಟ್ಟಿದ್ದು ಆಲೋಚನೆಯಿಂದ ಮುಗಿಯಬೇಕು. ಅಲ್ಲಿ ಮತ್ತೆ ಗೂಢಗುಂಜನಕ್ಕೆ ಅಗಮ್ಯರಮ್ಯ ರಹಸ್ಯವಾದಕ್ಕೆ ಅನುವು ಇರಬಾರದು—ಇಡಬಾರದು. ಈ ಕುರಿತು ಡಾ|| ಕೃಷ್ಣಮೂರ್ತಿಗಳು ನೀಡಿದ ನಿರ್ಣಯ ನಿರ್ದಾಕ್ಷಿಣ್ಯವಿದ್ದಷ್ಟೇ ನಿರ್ದುಷ್ಟವಾಗಿದೆ. ಅಭಿನಂದನೀಯವಿದೆ !

ಉಪನ್ಯಾಸಕರ ಮುಂದಿನ ವ್ಯಕ್ತವ್ಯಾಂಶ ಔಚಿತ್ಯವಿವೇಕ. "ರಸತತ್ವದ

ವಿವೇಚನೆಯ ಪ್ರಥಮ ಪೀಠಿಕೆಯಾಗಿ ಔಚಿತ್ಯದೋಷದ ಕೂಲಂಕಷ ವಿಮರ್ಶೆ ನಡೆಯಬೇಕು." ಏಕೆಂದರೆ "ಕಾವ್ಯದ ಅರ್ಥ ಮತ್ತು ಕಾವ್ಯದ ರೀತಿ ಇವೆರಡೂ ಮಹತ್ತಾಗಿದ್ದಾಗಲೇ ಉತ್ತಮ ಕಾವ್ಯ" ಎನ್ನುತ್ತಾರೆ ಅವರು. ಕವಿಗಳು ತಮ್ಮ ಕೃತಿ–ಕರ್ತೃತ್ವಗಳನ್ನು ದಾರ್ಶನಿಕ ಮಾಹಾತ್ಮ್ಯಕ್ಕೆ ಏರಿಸಿಕೊಂಡದ್ದೇಕೆಂಬುದೂ ಡಾ|| ಕೃಷ್ಣಮೂರ್ತಿಗಳಿಗೆ ಗೊತ್ತು. "ಕವಿಗಿಂತ ತಾನು ಹೆಚ್ಚೆಂದು ವಿಮರ್ಶಕನು ತಿಳಿಯುವ ಪ್ರವೃತ್ತಿಯಂತೆಯೇ ವಿಮರ್ಶಕನಿಗಿಂತ ತಾನು ಹೆಚ್ಚೆಂದು ಕವಿ ತಿಳಿಯುವ ಪ್ರವೃತ್ತಿಯೂ ಇದೆ. ಈಗ ಈ ಪ್ರವೃತ್ತಿ ಪ್ರಬಲತಮವಾಗಿದೆ." ನಿಜವಾಗಿಯೂ ಆ ಪ್ರವೃತ್ತಿಗೆ ಈ ಪ್ರವೃತ್ತಿ ಒಂದು ತೀವ್ರವಾದ ಪ್ರತಿಕ್ರಿಯೆ. ಆದರೆ ನಮ್ಮ ಆಧುನಿಕ ಕನ್ನಡ ಸಾಹಿತ್ಯಪ್ರಪಂಚದಲ್ಲಿ ಕ್ರಿಯೆಗಿಂತಲೂ ಪ್ರತಿಕ್ರಿಯೆಯೇ ಬಲವಾಗಿದೆ ! "ಕಾವ್ಯ ಪ್ರಕೃತಿ ; ವಿಮರ್ಶೆ ಸಂಸ್ಕೃತಿ" ಎಂಬ ಕವಿವರ್ಯ ಬೇಂದ್ರೆಯವರ ಸೂತ್ರಕ್ಕೂ ಇಲ್ಲಿ ಉಪನ್ಯಾಸಕರು ವಾರ್ತಿಕ ಬರೆದಂತೆ ಆಗಿದೆ.

ಈ ಔಚಿತ್ಯವಿಚಾರದಿಂದ ಮುಂದೆ ಲೇಖಕರು ರಮಣೀಯತೆ ಇದ್ದಲ್ಲೆಲ್ಲ 'ರಸ'ವಿದೆಯೆಂದು ತೀರ್ಮಾನಿಸುವುದು ತಪ್ಪೆಂದು ಹೇಳುತ್ತಾರೆ. ಪ್ರಾಚೀನ ಪ್ರಕ್ರಿಯೆಯಲ್ಲಿ ಈ ದೋಷವಿದ್ದಿಲ್ಲ. ನಾಟ್ಯರಸಗಳು ಕಾವ್ಯಕ್ಕೂ ವಿಸ್ತರಿಸಿದಂದಿನಿಂದ ಅದು ಸೇರಲು ಅನುವಾಯಿತು. ನಾಟಕ, ಕವಿತೆ ಎಲ್ಲವನ್ನೂ ಕಾವ್ಯವೆನ್ನುವ ಹವ್ಯಾಸದಲ್ಲಿ ಅವೆಲ್ಲದರ ಆಸ್ವಾದ 'ರಸ'ವೇ ಎಂದುಕೊಂಡದ್ದು ಅನಿವಾರ್ಯ. ಮಹಿಮಭಟ್ಟನ ಈ ಮಾತು ಕೇಳಿ.

"ಅನುಭಾವ ವಿಭಾವಾನಾಂ ವರ್ಣನಾ ಕಾವ್ಯಮುಚ್ಯತೇ |
ತೇಷಾಮೇವ ಪ್ರಯೋಗಸ್ತು ನಾಟ್ಯಂ ಗೀತಾದಿ ರಂಜಿತಂ ||

ವ್ಯಕ್ತಿವಿವೇಕ ಇನ್ನೂ ಮುಂದುಡುಕಿದೆ: "ಸಾಮಾನ್ಯೇನ ಉಭಯಮೇವ ಚ ತತ್ ಶಾಸ್ತ್ರವದ್ ವಿಧಿ ನಿಷೇಧ ವಿಷಯವ್ಯುತ್ಪತ್ತಿ ಫಲಂ | ಕೇವಲಂ ವ್ಯುತ್ಪಾದ್ಯ ಜನ ಜಾಡ್ಯಾಜಾಡ್ಯ ತಾರತಮ್ಯಾನಪೇಕ್ಷಯಾ ಕಾವ್ಯ ನಾಟ್ಯಶಾಸ್ತ್ರರೂಪಮೇವಂ ಉಪಾಯಮಾತ್ರಭೇದಃ ನ ಫಲಭೇದಃ |" ಎಲ್ಲವನ್ನೂ ಮೂಲಗಾಮಿಯಾಗಿ ಸಮನ್ವಯೀಕರಿಸುವ ಒಂದು ದಾರ್ಶನಿಕ ಪ್ರವೃತ್ತಿ ಲಾಕ್ಷಣಿಕರಲ್ಲಿಯೂ ಪ್ರಬಲ ವಾದುದರ ಪರಿಪಾಕವಿದು! ಇದಕ್ಕೂ ಮುಂದಾಗಿ "ಪ್ರಯೋಗತ್ವಮನಾಪನ್ನೆ ಕಾವ್ಯೇ ನಾಸ್ವಾದಸಂಭವಃ"–ಎಂದೂ ನಿರ್ದಾಯವಾಗಿ ಹೇಳಿದ್ದೂ ಉಂಟು. ಪ್ರಯೋಗತ್ವ ವಿಲ್ಲದೆ ಕಾವ್ಯಕ್ಕೆ ಆಸ್ವಾದ್ಯತ್ವವೇ ಅಸಂಭವವೆಂದು ನಿರ್ಧರಿಸಿಬಿಟ್ಟರೆ ನಾಟ್ಯ ಪ್ರಪಂಚದ ರಸತತ್ವವನ್ನು ಹಿಗ್ಗಾ ಮುಗ್ಗಾ ಜಗ್ಗಿ ಕಾವ್ಯಪ್ರಪಂಚಕ್ಕೆ ಅನ್ವಯಿಸುವ ಕಷ್ಟ ಅಷ್ಟೇ ಕಡಿಮೆ ಆದಂತೆ !

ಈ ರೀತಿ ಆರಂಭವಾದ 'ರಸ'ದ ಸರ್ವಸಂಗ್ರಾಹಕವಾದ ಅಷ್ಟೇ ಭ್ರಾಮಕ ವಾದ ಅನ್ವಯವನ್ನು ಡಾ|| ಕೃಷ್ಣಮೂರ್ತಿಯವರು ಖಂಡಿತವಾಗಿ ಖಂಡಿಸಿ

ಮಹದುಪಕಾರ ಮಾಡಿದ್ದಾರೆ. ಇಲ್ಲಿ ರಸ ಮೀಮಾಂಸೆಯ ಮೂಲವೆತ್ತಿಕೊಂಡು ಅವರು 'ನಾಟ್ಯ', 'ಭಾವ', 'ರಸ' ಇವುಗಳ ನಿರ್ವಚನೆ ಮಾರ್ಮಿಕವಾಗಿ ಮಾಡಿದ್ದಾರೆ. ಭರತಶಾಸ್ತ್ರದ ರಸನಿರ್ಣಯವೇನೆಂದು ಋಜುವಾಗಿ ನಿರೂಪಿಸಿದ್ದಾರೆ. "…. ಅನೇಕವಾದುದರಲ್ಲಿ ಐಕ್ಯತರುವದು—ಇದೇ ನಾಟ್ಯದ ಮರ್ಮ. ಈ ಐಕ್ಯತತ್ವದ ಪ್ರಭಾವಕ್ಕೆ ಭರತನು ಕೊಟ್ಟಿರುವ ನಾಮಧೇಯವೇ ರಸ. ಅಥವಾ ಆಸ್ವಾದ್ಯತ್ವ. ರಸವೇ ನಾಟಕದ ಗುರಿ." ರಸದ ಸಂಪೂರ್ಣ ಆವಿಷ್ಕಾರ ನಾಟಕದಿಂದಲೇ. ಆದರೆ ಇಲ್ಲಿ ನಾಟಕವೆಂದರೆ ಅದರ ಪ್ರಯೋಗವೂ ಬಂತು. ಕವಿಯೊಂದಿಗೆ ನಟನ ಪ್ರತಿಭೆಯೂ ಕೂಡಿ ಕೆಲಸಮಾಡಿತು. ಇದಕ್ಕೇ ಮಾತೃಗುಪ್ತನು "ನೇಪಥ್ಯ ರಸ"ವೆಂಬ ಪದವನ್ನು ಕಲ್ಪಿಸಿದ್ದು. ನಾಟಕವನ್ನೋದಿದ ಮಾತ್ರಕ್ಕೆ—ಸಹೃದಯನ ಹೃದಯರಂಗದಲ್ಲಿ ಅಭಿನಯಿಸಲ್ಪಟ್ಟಮಾತ್ರಕ್ಕೆ—ರಸ ನಿರ್ಮಿತಿ ಆಗಬಹುದು. "ಪರಿಮಿತ ವಿಭಾವಾದ್ಯುನ್ಮೀಲನೇಪಿ ಪರಿಸ್ಫುಟ ಏವ ಸಾಕ್ಷಾತ್ಕಾರ ಕಲ್ಪಃ ಕಾವ್ಯಾರ್ಥಃ ಸ್ಫುರತಿ। ಅತ ಏವ ತೇಷಾಂ (ಸಹೃದಯಾನಾಂ) ಕಾವ್ಯಮೇವ ಪ್ರತೀತ್ಯುತ್ಪತ್ತಿಕೃದ್ ಅನಪೇಕ್ಷಿತ ನಾಟ್ಯಮಪಿ"—ಎಂದಿದಾನೆ ಅಭಿನವಗುಪ್ತ. ಆದರೂ ಮಾತೃಗುಪ್ತನಿಂದಲೇ ಈ ರಸಸಿದ್ಧಾಂತಕ್ಕೆ ಪೂರಣ. (ನೇಪಥ್ಯ ರಸ ನಾಟ್ಯಜನ್ಯ ರಸಕ್ಕೆ ಅವಶ್ಯಪೂರಕ).

ಹೀಗೆ ರಸನಿರ್ಣಯವನ್ನು ಸಾರಿ ಡಾ॥ ಕೃಷ್ಣಮೂರ್ತಿಯವರು ಕಾವ್ಯಕಲೆಯ ಗುರಿಯನ್ನು ಎತ್ತಿ ಚರ್ಚಿಸಿದ್ದಾರೆ. ಇದೇ ಅವರ ವಾದದ ಮುಖ್ಯಬಿಂದು : ಕಾವ್ಯಕ್ಕೆ (ನಾಟಕೇತರ) ರಸಸಿದ್ಧಾಂತ ಅನ್ವಯಿಸುವದು ಕ್ಷೇಮವಲ್ಲ. ಕಾವ್ಯದಿಂದ ದೊರೆಯುವ ಆಹ್ಲಾದ–ಆಸ್ವಾದ ಶಬ್ದಾರ್ಥ ಚಮತ್ಕೃತಿಯದು.–ಅದೇ ಅಲಂಕಾರದ್ದು. ಆದ್ದರಿಂದ ಉತ್ತಮ ಕಾವ್ಯಕ್ಕೆ ಅಲಂಕಾರ ಅನವಶ್ಯವೆಂಬ ಮತ ತಪ್ಪು. ಡಾ॥ ಕೃಷ್ಣಮೂರ್ತಿಗಳು ಈ ವಾದವನ್ನು ಹೀಗೆ ಸಂಗ್ರಹಿಸಿದ್ದಾರೆ: ಕಾವ್ಯಕಲೆಯ ಗುರಿ ರಸವಲ್ಲ. 'ಪ್ರೀತಿ' ಎಂದು ಪ್ರಾಚೀನರು ಕರೆದರು. ಅದಕ್ಕೆ ಪ್ರಯೋಜನವಾದುದು ಶಬ್ದಾರ್ಥಗಳ ಪ್ರಯೋಗ ನಿಯಮಗಳು. ಇವನ್ನೇ ಪ್ರಾಚೀನರು ಅಲಂಕಾರವೆಂದರು. ನಾಟ್ಯಕ್ಕಿಂತ ಕಾವ್ಯದ ವಿಷಯ–ವಿಸ್ತಾರ ದೊಡ್ಡದು. ಈ ಸಂದರ್ಭದಲ್ಲಿ ಲೇಖಕರು ಪ್ರತಿಭೆಯ ವ್ಯಾಖ್ಯೆಮಾಡಿದ್ದಾರೆ. "ಅಪೂರ್ವ ವಸ್ತು ನಿರ್ಮಾಣ ಕೌಶಲವೇ ಪ್ರತಿಭೆ. ಲೋಕದಲ್ಲಿಲ್ಲದ ಚಮತ್ಕಾರ ಶಬ್ದಾರ್ಥಗಳಲ್ಲಿ ತುಂಬಬಲ್ಲವನು ಮಾತ್ರ ಕವಿ." ಇಲ್ಲಿಯೇ ಡಾ॥ ಕೃಷ್ಣಮೂರ್ತಿಯವರು ತಮ್ಮ ಮುಖ್ಯ ಸೂತ್ರವನ್ನು ಹೇಳಿದ್ದಾರೆ. "ವಿಶಾಲಾರ್ಥದಲ್ಲಿ ಅಲಂಕಾರವೇ ಕಾವ್ಯದ ಆತ್ಮ." ಇಲ್ಲಿ ಆತ್ಮವೆಂದರೆ ಜೀವಾಳವೆಂದಲ್ಲ ಅದರ ವೈಶಿಷ್ಟ್ಯ. ಇದನ್ನೆ ಕುಂತಕನ ಮಾತಿನಲ್ಲಿ ಹೀಗೆ ಉದಾಹರಿಸಬಹುದು.

"ಶಬ್ದಾರ್ಥೌ ಕಾವ್ಯಂ, ವಾಚಕೋ ವಾಚ್ಯಂ ಚೇತಿ ದ್ವೌ ಸಂಮಿಲಿತೌ ಕಾವ್ಯಂ। …. ತೇಷಾಂ ಚಿನ್ಮಾತ್ರಂ ಕವಿ ಕೌಶಲ ಕಲ್ಪಿತ ಕಮನೀಯಾತಿಶಯಃ ಶಬ್ದ

ಏವ ಕೇವಲಂ ಕಾವ್ಯಮಿತಿ। ತೇಷಾಂ ಚಿತ್ ವಾಚ್ಯಮೇವ ರಚನಾ ವೈಚಿತ್ರ್ಯ ಚಮತ್ಕಾರಕಾರಿ ಕಾವ್ಯಮಿತಿ।-ಏತದ್ ಪಕ್ಷದ್ವಯಂ ಅಪಿ ನಿರಸ್ತಂ ಭವತಿ। ತಸ್ಮಾದ್ ದ್ವಯೋರಪಿ ಪ್ರತೀತಿಲಮಿವ ತೈಲಂ ತದ್ವದಾಹ್ಲಾದಕಾರಿತ್ವಂ ವರ್ತತೆ ನ ಪುನ—ರೇತಸ್ಮಿನ್ ।"


ಬ್ರಹ್ಮಾನಂದಕ್ಕೆ ವ್ಯತಿರಿಕ್ತವಾದ ಕಾವ್ಯಾನಂದದ ಮರ್ಮದ ಮೀಮಾಂಸೆಗೆ ಹೊರಟ ಡಾ|| ಕೃಷ್ಣಮೂರ್ತಿಗಳು ಅದನ್ನು ವಿಷಯಾನಂದದಿಂದಲೂ ಪ್ರತ್ಯೇಕಿಸುವ ಧನ್ಯ ಪ್ರಯತ್ನ ಮಾಡಿದ್ದಾರೆ. ಶೃಂಗಾರಾದಿ ರಸನಿರೂಪಣೆಯೇ ಕಾವ್ಯದ ಆತ್ಮವೆಂಬ ಭಾವನೆ ಕಾವ್ಯಮೀಮಾಂಸೆಯ ತಿಳಿನೀರನ್ನು ಕದಡಿಬಿಟ್ಟಿತೆಂಬ ವಿವರಣೆ ವಿಸ್ತಾರವಾಗಿ ಅವರು ಮಾಡಿದ್ದಾರೆ. ತದನುಷಂಗವಾಗಿ "ವೃತ್ತಿ"ಗಳ ವರ್ಣನೆ ಬಂದಿದೆ. "ಸಾತ್ವತೀ ವೃತ್ತಿ"ಯೇ ಪಾಶ್ಚಾತ್ಯ ಲಾಕ್ಷಣಿಕರ 'Sublimity' ಎಂಬ ಕಾವ್ಯಗುಣಕ್ಕೆ ಸಂವಾದಿಯೆಂದು ಲೇಖಕರ ಅಂಬೋಣ. ಆದರೆ ತತ್ವಜ್ಞ ವಿಲ್ ಡ್ಯೂರಾಂಟರು ಅನ್ನುವಂತೆ Sublimity ಅಥವಾ ಉದಾತ್ತತೆ (ಕವಿ ಗೋಕಾಕರು ಕರೆಯುವ "ಮಹೋನ್ನತಿ") beauty ಇಲ್ಲವೇ ಸೌಂದರ್ಯಕ್ಕೆ ಸಂವಾದಿಯಾದ ಸಮಾಂತರವಾದ (Counterpart) ಸ್ವಾರಸ್ಯಗುಣ. Beauty ಹೆಣ್ಣು, Sublimity ಗಂಡು. ಅದು ಲಾಸ್ಯ; ಇದು ತಾಂಡವ. ಅದು ದಿವ್ಯ; ಇದು ಭವ್ಯ. Sublimity ಯಲ್ಲಿ ಲಾಲಿತ್ಯಕ್ಕೆ ಸೌಕುಮಾರ್ಯಕ್ಕೆ ಅವಕಾಶವಿಲ್ಲ. ಅದರ ಅಪೇಕ್ಷೆಯೂ ಇಲ್ಲ. ಅದು ಭವ್ಯ ಭೌಮ ಬೃಹತ್. ಸಾಹಿತ್ಯಗುಣದಲ್ಲಿ ಅದು ಮಾಧುರ್ಯಕ್ಕೆ ಪ್ರತಿಯಾದ ಓಜಸ್ಸೆಂದೇ ಒಪ್ಪಬಹುದು. ಇರಲಿ.

ಕಾವ್ಯದ ಆಸ್ವಾದತೆ ರೂಢಾರ್ಥದಲ್ಲಿ 'ರಸ' ವಾಚಕವಲ್ಲವೆನ್ನುವುದನ್ನು ಇನ್ನಿಷ್ಟು ಮನದಟ್ಟುಮಾಡಲು ಲೇಖಕರು ಅನ್ನುತ್ತಾರೆ. "ರೀತಿ ಇಲ್ಲದೆ ಕಾವ್ಯದಲ್ಲಿ ರಸವಿಲ್ಲ. ರೀತಿ ಇಲ್ಲದಿದ್ದರೂ ನಾಟ್ಯದಲ್ಲಿ ರಸವಿರಬಹುದು." ಇಂಥ ಕಾವ್ಯರಸದ ಸ್ಪಷ್ಟ ಕಲ್ಪನೆ ಇಲ್ಲದೆ ಒಂದೆಡೆ ನಾಟ್ಯಶಾಸ್ತ್ರ, ಇನ್ನೊಂದೆಡೆ ಕಾಮಶಾಸ್ತ್ರಗಳ ಉಭಯಪಾಶಕ್ಕೆ ಗುರಿಯಾಗಿ ಕಾವ್ಯ ಕಾವ್ಯತ್ವವನ್ನೇ ಕಳೆದುಕೊಂಡಿತು. ರಾಜಸ್ತುತಿಗೂ ಇಳಿದು ಕೃತ್ರಿಮವಾಯಿತು. ಒಂದೆಡೆ 'ರಸಿಕ' ಎಂಬ ಪದಕ್ಕೆ ಸ್ತ್ರೀಲೋಲನೆಂಬ ಅಪಪ್ರಥೆ ಅಂಟಿಕೊಂಡಿತು. ಇನ್ನೊಂದೆಡೆ ಪದ್ಯರಚನಾಬಂಧದ ಕಸರತ್ತಿನಲ್ಲಿ ಬೌದ್ಧಿಕ ವಿನೋದ ವ್ಯಾಯಾಮ ಅಲಂಕಾರ ಶಾಸ್ತ್ರದ ವಿಕೃತ ಪರಿಣಾಮವಾಯಿತು.

ಕಾವ್ಯಾನಂದಜನಕವಾದ ಉಕ್ತಿ ಚಮತ್ಕೃತಿ ಮೂಲತಃ ಅಲಂಕಾರಜನ್ಯವೆಂಬ ತತ್ವ ಲೇಖಕರದೇ ಒಂದು ಮೌಲಿಕ ಸಿದ್ಧಾಂತವಲ್ಲ. ಆದರೆ ಅನೇಕ ಸಲ ದೇವರಂತೆ ಸತ್ಯವೂ ಯುಗಪರತ್ರಾನುಸಾರವಾಗಿ ಹೊಸ ಹೊಸ ಅವತಾರ ಧರಿಸಬೇಕಾಗುತ್ತದೆ. ಒಂದು ಕವನದ ರಮಣೀಯಾರ್ಥ ಪ್ರತಿಪತ್ತಿ ಯಾತರಿಂದ? ಅಲ್ಲಿಯ ಸೌಂದರ್ಯತತ್ವ ಭಾಮಹ 'ಅಲಂಕಾರ'ವೆಂದೂ, ವಾಮನ 'ರೀತಿ'

ಯೆಂದೂ ಕುಂತಕ 'ವಕ್ರೋಕ್ತಿ'ಯೆಂದೂ, ಅವಂತಿಸುಂದರಿ 'ವಿದಗ್ಧಭಣಿತ ಭಂಗಿಮೆ'ಯೆಂದೂ ಆನಂದವರ್ಧನ 'ರಸಾದಿ' ಎಂದೂ "ಏಕಂ ಸತ್, ವಿಪ್ರಾಃ ಬಹುಧಾ ವದಂತಿ" ಎಂಬಂತೆ ವ್ಯಾಖ್ಯಾನಿಸಿದರು. ಈ ಕುರಿತು ಸಮುದ್ರಬಂಧದ ಈ ಅವತರಣಿಕೆ ಸಾರಗ್ರಾಹಿ ಆಗಿದೆ:—"ಇಹ ವಿಶಿಷ್ಟೌ ಶಬ್ದಾರ್ಥೌ ಕಾವ್ಯಂ। ತಯೋಶ್ಚ ವೈಶಿಷ್ಟ್ಯಂ ಧರ್ಮಮುಖೇನ, ವ್ಯಾಪಾರಮುಖೇನ, ವ್ಯಂಗ್ಯಮುಖೇನ, ವಾ ಇತಿ ತ್ರಯಃ ಪಕ್ಷಾಃ। ಆದ್ಯೇ ಅಪಿ ಅಲಂಕಾರತಃ ಗುಣತಃ ವಾ ದ್ವೈವಿಧ್ಯಂ। ದ್ವಿತೀಯೇಪಿ ಭಣಿತ ವೈಚಿತ್ರ್ಯೇನ ಭೋಗಕೃತ್ವೇನ ವೇತಿ ದ್ವೈವಿಧ್ಯಂ। ಇತಿ ಪಂಚಸು ಪಕ್ಷಸು ಆದ್ಯ ಉದ್ಭಟಾದಿಭಿಃ ದ್ವಿತೀಯಃ ವಾಮನೇನ, ತೃತೀಯಃ ವಕ್ರೋಕ್ತಿಜೀವಿತಕಾರೇಣ (?) ಚತುರ್ಥಃ ಭಟ್ಟನಾಯಕೇನ ಪಂಚಮಃ ಆನಂದವರ್ಧನೇನ।"

ಅದೇ ರೀತಿ ಭೋಜನು ಸಾಹಿತ್ಯವೆಂದರೇನು ಎಂದು ಪ್ರಸ್ತಾಪಿಸುತ್ತ ಅದರ ೧೨ ಲಕ್ಷಣಗಳನ್ನೂ "ಸಂಬಂಧ"ಗಳನ್ನೂ—ಹೇಳಿ ಅವುಗಳಲ್ಲಿ ೮ ಸಾಮಾನ್ಯ ಮತ್ತು ೪ ಕಾವ್ಯಕ್ಕೆ ಅನ್ವಯಿಸುವಂಥವೆಂದು ಅರುಹಿದ್ದಾನೆ. "ಕಿಂ ಸಾಹಿತ್ಯಂ? ಯಃ ಶಬ್ದಾರ್ಥಯೋಃ ಸಂಬಂಧಃ ಸ ಚ ದ್ವಾದಶಧಾ—ಅಭಿಧಾ, ವಿವಕ್ಷಾ, ತಾತ್ಪರ್ಯಂ, ಪ್ರವಿಭಾಗಃ, ವ್ಯಪೇಕ್ಷಾ, ಸಾಮರ್ಥ್ಯಂ, ಅನ್ವಯಃ, ಏಕಾರ್ಥೀಭಾವಃ, ದೋಷಹಾನಂ, ಗುಣಾದಾನಂ, ಅಲಂಕಾರಯೋಗಃ, ರಸಾವಿಯೋಗಃ ಚ ಇತಿ."



ಅಂದಮೇಲೆ ಅಲಂಕಾರಯೋಗವು ಕಾವ್ಯದ ಒಂದು ಅವಿಭಾಜ್ಯ ಅಂಗ ವೆಂಬುದು ಪೂರ್ವಸೂರಿ ಸಮ್ಮತವೆ. ಅಂದಾಗ ಡಾ॥ ಕೃಷ್ಣಮೂರ್ತಿಯವರು ಹೊಸತಾಗಿ ಮಾಡಿದ್ದೇನು? ಅದೇ ಪ್ರತಿಪಾದನೆಯ ಪ್ರತಿಷ್ಠಾಪನೆ. ಅಷ್ಟೇ ತಾನೆ? ಅಲ್ಲ. ಹಳೆಯ ಹೊನ್ನನ್ನು ಹೊಸ ನಾಣ್ಯವಾಗಿ ಮುದ್ರಿಸಿಟ್ಟರು. ಅಷ್ಟೇ ಅಲ್ಲ. ಅದಕ್ಕೆ ಹೊಸ ವಿನಿಮಯದ ಬೆಲೆಯನ್ನು ಕಟ್ಟಿದರು. ಉಪನ್ಯಾಸಕರು ಆ ಸಿದ್ಧಾಂತಕ್ಕೆ

ಹೊಸ ಆಘಾತವನ್ನು (Accent) ಹೊಸ ಒತ್ತನ್ನು (Emphasis) ಕೊಟ್ಟರು. ಅದೆಲ್ಲಿ? ಅನೇಕ ಗುಣ, ಲಕ್ಷಣ, ಸಮುಚ್ಚಯದಲ್ಲಿ ಅಲಂಕಾರದ ಸ್ಥಾನವನ್ನು ಡಾ|| ಮಹಾಶಯರು ನಿರ್ದಿಷ್ಟಗೊಳಿಸಿದರು. ಅಲಂಕಾರವೇ -- ಕಾವ್ಯತ್ವದ ಬುಡಕಟ್ಟು. ಮಿಕ್ಕುದೆಲ್ಲ ಅದರ ಮೇಲೆ ನಿಂತ ಮಂದಿರ. ' ವಾಕ್ಯ ' " ವಕ್ರ " ವಾದಾಗಲೇ ' ಕಾವ್ಯ 'ವಾಗುವುದೆಂದರೆ ಅದು ಅಕ್ಷರಶಃ ನಿಜ! ಈ ಸತ್ಯವನ್ನು— ಸಾಹಿತ್ಯಸತ್ಯದ ಈ ಮುಖವನ್ನು ಡಾ|| ಕೃಷ್ಣಮೂರ್ತಿಗಳು ಯಾವ ಸಂದೇಹ ಸಂಮೋಹಗಳಿಗೆ ಇಂಬುಕೊಡದೆ ಮಂಡಿಸಿದ್ದಾರೆ. ಈ ಮಂಡನೆ ಕನ್ನಡ ಕಾವ್ಯ ವಿಮರ್ಶೆಗೆ ಒಂದು ಮಂಡನ.

ಆನಂದವರ್ಧನನನ್ನೇ ಕನ್ನಡದಲ್ಲಿ ಅವತರಿಸುವಂತೆ ಮಾಡಿದ ಪಂಡಿತರ ಈ ಉಪನ್ಯಾಸಗಳಲ್ಲಿ ಆನಂದವರ್ಧನನನ್ನು ಕುರಿತು ಲೇಖಕರ ಪುನರ್ವಿಚಾರಗಳು ಬಂದಿವೆ. ಪ್ರಾಚೀನ ಆಲಂಕಾರಿಕರ ರಸಕಲ್ಪನೆಯಿಂದ ಆನಂದವರ್ಧನನ ' ರಸ ' ಕಲ್ಪನೆ ಬೇರೆಯೆಂಬುದನ್ನು ಲೇಖಕರು ಎಚ್ಚರಿಸಿದ್ದಾರೆ. ಅದು ಒಂದೆಂಬ ಕಲ್ಪನೆ ಯಿಂದಲೇ ವಿಮರ್ಶೆ ಕಲುಷಿತವಾಗುವದೆಂದೂ ಎಚ್ಚರಿಕೆ ಇತ್ತಿದ್ದಾರೆ. "ವಾಚ್ಯಾರ್ಥ ದಿಂದಾಚೆ ನಮ್ಮ ಮನಸ್ಸಿನಲ್ಲಿ ಉಂಟಾಗುವ ವ್ಯಂಗ್ಯ ಪರಂಪರೆಯೆಲ್ಲವೂ ಅಭಿಪ್ರೇತ ವಾಗುವಲ್ಲಿ " ರಸದ ಆದಿ. ಶಬ್ದಾರ್ಥಗಳಿಂದ ರಸದ ಅಭಿವ್ಯಕ್ತಿ. ಅದೇ ಕಾವ್ಯದ ಮರ್ಮ. " ವಾಗರ್ಥ ಪ್ರತಿಪತ್ತಿ "ಗೆ " ವಾಗರ್ಥ ಸಂವೃತ್ತಿ "ಯೇ ಮೂಲ. ರಸವಿದ್ದಲ್ಲಿ ಧ್ವನಿ ಇದ್ದರೆ, ಧ್ವನಿ ಇದ್ದಲ್ಲಿ ಸಮುಚಿತವಾದ ಅಲಂಕಾರ ಮೂಡಿಯೇ ಇರಬೇಕು. ವೈಜ್ಞಾನಿಕರು ನಾದ-ನಿನಾದಗಳ ಕುರಿತು ಒಂದು ನಿಯಮ ಹೇಳು ತ್ತಾರೆ. ಒಂದು ವಿಶಿಷ್ಟ ಅವಕಾಶ, ಗಾತ್ರ ದೊರೆತ ಹೊರತು ನಾದಕ್ಕೆ ನಿನಾದ ಹೊರಡುವದಿಲ್ಲ. ಯೋಗ್ಯ Resonance Column ಹುಡುಕಿಕೊಂಡಾಗ ಯಾವ ಸ್ಪಂದನದಿಂದಲೂ ಧ್ವನಿತರಂಗಗಳನ್ನು ಹಿಗ್ಗಿಸಿ ಹಬ್ಬಿಸಬಹುದು. ಅಂಥ ' ನಿನಾದ ಸ್ತಂಭ ' ಹುಡುಕುವದೇ ವಾದ್ಯರಚನೆಯ ಮರ್ಮದ ಕೆಲಸ. ಕಾವ್ಯಧ್ವನಿಗೂ ಹಾಗೆಯೇ. ಒಂದು ಪದಪ್ರಯೋಗದಿಂದ " ಧ್ವನಿ " ಹೊರಡಬೇಕಾದರೆ, ಅದು ವಿಶಿಷ್ಟ ಸಂದರ್ಭವನ್ನು–ಶಬ್ದಸಂಸ್ಥಾನವನ್ನು–ಹೊಂದಬೇಕು–ಸರಿಯಾದ ಕೋನಕ್ಕೆ ಕುಂದಣದಲ್ಲಿ ಕೂಡ್ರಿಸಿದ ವಜ್ರದಿಂದ ಕಾಂತಿ ಚಿಮ್ಮುವಂತೆ. ಅಂದಾಗ ಅಂಥ ಶಬ್ದಪುಂಜ ಒಂದು ಅಲಂಕಾರವೇ ಸರಿ. " ಅಲಂಕಾರ "ವೆಂಧರೆ " ಆಭರಣ "ವಲ್ಲ. ಕವಿಯ ಲಹರಿಯಂತೆ ಅದು ಆಹಾರ್ಯವಾಗಿ ಕಟ್ಟುವ ಕಳಚುವ ಒಡವೆಯಲ್ಲ. " ಅಲಂ " ಶಬ್ದಕ್ಕೆ ಎರಡು ಅರ್ಥ–ಎರಡು ಬಗೆಯ ಪ್ರಯೋಗದಲ್ಲಿ ಒಂದು " ಪರ್ಯಾಪ್ತ " ಇನ್ನೊಂದು " ಸಮರ್ಥ ". ಅರ್ಥವು ದೀಪ್ತ ಹೊಂದುವದಕ್ಕೆ ವಾಚ್ಯದಿಂದ ಎಲ್ಲ ಸೂಚ್ಯದ ವ್ಯಂಜನೆಯಾಗಲಿಕ್ಕೆ ಪರ್ಯಾಪ್ತವೆನಿಸುವಂಥ, ಆ ಮೂಲಕ ಆ ಶಬ್ದಪ್ರಯೋಗ ಸಂಪೂರ್ಣ ಸಮರ್ಥ ವೆನಿಸುವಂಥ–Best words in best order–ಅದೇ ' ಅಲಂಕಾರ'. ರಸ–ಧ್ವನಿಗೆ

ತಕ್ಕುದಾದ ನಾದಾವಕಾಶ. Poetry is speech par excellence. Sahitya is relation (of word and sense) par excellence.

"ವಾಚ್ಯಾರ್ಥವಿಲ್ಲದೆ ವ್ಯಂಗ್ಯಾರ್ಥವಿಲ್ಲದ ಕಾರಣ ಅಲಂಕಾರಾದಿಗಳ ಪ್ರತೀತಿಯಿಲ್ಲದೆಯೇ ರಸಧ್ವನಿ ಸಾಧ್ಯವೆನ್ನುವಂತಿಲ್ಲ." "ಸೌಂದರ್ಯಾತಿಶಯ ಧ್ವನಿಗೆ ಅಲಂಕಾರವೆನ್ನಬೇಕು; ಈ ಅಲಂಕಾರವಿರದೆ ಆ ಧ್ವನಿಯೂ ಇರುವುದಿಲ್ಲ" ವೆಂದೇ ಲೇಖಕರ ತೀರ್ಮಾನ. ಈ ಅರ್ಥದಲ್ಲಿ—ಇಂದೊಂದೇ ಯಥಾರ್ಥ. ಅಲಂಕಾರ ವಿಲ್ಲದೆ ರಸೋಲ್ಲಾಸವಿಲ್ಲ. ಇನ್ನು ಈ ಅಲಂಕಾರಗಳ ಪುನರ್ವಿಮರ್ಶೆ ಅಗತ್ಯ (ಈ ಬಗೆಗೆ ಡಾ|| ಕೃಷ್ಣಮೂರ್ತಿಗಳು ಏನೂ ಹೇಳಿಲ್ಲ!). ಇಂದು ಹಲವೆಡೆ ರಸನಿಷ್ಪತ್ತಿ ಆದಲ್ಲಿ ಪ್ರಸಿದ್ಧ ಅಲಂಕಾರವಿಲ್ಲವೆಂದು ಕಂಡುಬಂದರೆ ಅದಕ್ಕೆ ಕಾರಣ ಅಲ್ಲಿ ಅಡಕವಾದ ಅಲಂಕಾರಿಕತೆ ನಮ್ಮಲ್ಲಿ ಪ್ರಸಿದ್ಧವಿದ್ದ ಮಾದರಿಯದಲ್ಲವೆಂಬುದೇ ಸರಿ. ಮುಗಿಲ ಮರೆಗೆ ಚಂದ್ರ ಮೂಡಿರಬೇಕು. ಆದರೆ ಸುತ್ತಲೂ ಮಂದವಾದ ಬೆಳಕು ಬಿದ್ದಿರಬೇಕು—ಈ ರೀತಿ ಆಗುವದೂ ಉಂಟು, ಧ್ವನಿಯೇ ವಿಜೃಂಭಿಸಿ ಅಲಂಕಾರ ಅಸ್ಫುಟವೆನಿಸಿದಾಗೆಲ್ಲ!

ಈ ಚಮತ್ಕೃತಿಯ ನಿಲುಮೆಯಿಂದ ಲೇಖಕರು ಉಪಮೆ, ದೀಪಕ, ರೂಪಕ ಮುಂತಾದ ಅಲಂಕಾರಗಳನ್ನು ವಿಚಾರಪ್ರಚೋದಕವಾಗಿ ಚರ್ಚಿಸಿದ್ದಾರೆ. "ಅಲಂಕಾರವೆಂದರೆ ವಾಚ್ಯಾರ್ಥ ಪ್ರಕಾರವೆಂದಿದ್ದಾನೆ, ಆನಂದವರ್ಧನನು. ಅದೇ ಕಡೆಯ ಮಾತೆಂದು ಅಲ್ಲಿಗೇ ನಿಲ್ಲಬಾರದು"—ಎಂದು ಲೇಖಕರ ದಿಟ್ಟವಾದ ಅಂಬೋಣ.

ಹೀಗಿದೆ ಅವರ "ರಸೋಲ್ಲಾಸ"ದ ನಿರೂಪಣೆ. ನಿಜವಾಗಿ ಈ ಪ್ರತಿಪತ್ತಿ ಇಲ್ಲಿಗೇ ಮುಗಿದಂತೆ. ತಮ್ಮ ಗಾಢವೂ ವ್ಯಾಪಕವೂ ಆದ ಜಡವಲ್ಲದ ಜಿಡುಕಾಗದ ಪಾಂಡಿತ್ಯದಿಂದ ಕಾವ್ಯಾನಂದದ ರಹಸ್ಯ ಮುದ್ರೆಯನ್ನೊಡೆದು ಡಾ|| ಕೃಷ್ಣಮೂರ್ತಿ ಗಳು ತಮ್ಮ ಸಿದ್ಧಾಂತವನ್ನು ಪ್ರಾಮಾಣಿಕವಾಗಿ ಅಷ್ಟೇ ಪ್ರಮಾಣಿತವಾಗಿ, ನಿರೂ ಪಿಸಿದ್ದಾರೆ. ಅನಂತರ ಅವರು ವಿಷಯ ಸಮಾಪ್ತಿಯ ಮೊದಲು ಪ್ರತಿಭೆ, ಛಂದಸ್ಸು, ಅರವಿಂದರ ಕಾವ್ಯತತ್ವ (Future Poetry) ಮುಂತಾದ ಬೇರೆ ಬೇರೆ ವಿಷಯಾಂತರ ಗಳಲ್ಲಿ ಹೊಕ್ಕು ಹೊರಬಿದ್ದಿದ್ದಾರೆ. ಒಂದು ವಿಚಾರ ಸ್ಪಷ್ಟ. ಡಾ|| ಕೃಷ್ಣಮೂರ್ತಿಗಳು ನವ್ಯಕಾವ್ಯವನ್ನು ಆಭಾಸವೆಂದು ಕಾಣುವವರು. ರಸವತ್ಕವಿತೆಗೂ ಪ್ರಸಾದಗುಣ ಬೇಕೆನ್ನುವವರು, ಛಂದಸ್ಸಿನ ಪಕ್ಷಪಾತಿಗಳು. ಕವಿತೆ ರಸವತ್ತಾಗಿದ್ದರೆ ಅದಕ್ಕೆ ಇನ್ನೇನು ಬೇಕು? ಅಲಂಕಾರದಂತೆ ಧ್ವನಿಯಂತೆ ಛಂದಸ್ಸೂ ಕಾವ್ಯದ ಇನ್ನೊಂದು ಆತ್ಮವೇ? ಇಂದಿನ ಮನಃಶಾಸ್ತ್ರ ಸೌಂದರ್ಯಶಾಸ್ತ್ರಗಳಿಂದ ಎಷ್ಟೋ ಪ್ರಯೋಜನ ಗಳನ್ನು ಪಡೆಯಬೇಕೆನ್ನುವ ಗುಣಗ್ರಾಹಿ ಲೇಖಕರು ನವ್ಯಕಾವ್ಯದ ಪ್ರಯೋಗ ಪ್ರಕಾರಗಳ ಕುರಿತು ವಿಮುಖವೇಕೆ? "ವಾಚ್ಯಾರ್ಥವಿಲ್ಲದೆ ವ್ಯಂಗ್ಯಾರ್ಥವಿಲ್ಲ" ವೆಂದು ಬಲ್ಲ ಈ ಕಾವ್ಯತತ್ವವೇತ್ತರಿಗೆ ವಾಚ್ಯಾರ್ಥವನ್ನು ನಿರಾಕರಿಸಿ ವ್ಯಂಗ್ಯಾ ರ್ಥಕ್ಕೆ ಸಿಲುಕುವ "ನವ್ಯ-ಧ್ವನಿ" ಗಮ್ಯವಾಗದೋ, ರಮ್ಯವೆನಿಸದೋ?

ನಿತ್ಯ ಬಳಕೆಯ ಮಾತಿಗೂ ಅಪಾರ ವ್ಯಂಜಕತ್ವ ಬರಬಲ್ಲದೆಂದು ಉದಾಹರಿಸುತ್ತ ಷೇಕ್ಸ್‌ಪಿಯರನ 'ಮ್ಯಾಕಬೇತ'ದಿಂದ ಆಯ್ದು ಒಂದು ವಾಕ್ಯದ ಜತೆಗೆ ಡಾ॥ ಕೆ. ವಿ. ಪುಟ್ಟಪ್ಪನವರು ಪಂಪನ ಕರ್ಣನ ಕುರಿತು ಬರೆದ ಒಂದು ವಾಕ್ಯವನ್ನೆತ್ತಿ ಮಾಡಿದ ಭಾಷ್ಯವನ್ನೂ ಲೇಖಕರು ಇಟ್ಟಿದ್ದಾರೆ. ಅಲ್ಲಿಯ "ವ್ಯಂಗ್ಯ ವೈಭವ"ಕ್ಕಿಂತ ಡಾ॥ ಕೃಷ್ಣಮೂರ್ತಿಯವರು ಡಾ॥ ಪುಟ್ಟಪ್ಪನವರನ್ನೇ ಹೆಚ್ಚು ಮೆಚ್ಚಿದಂತೆ ಅನಿಸುತ್ತದೆ. ಹಾಗೆಯೇ ಗುರು ಅರವಿಂದ ಉದ್ಗ್ರಂಥದ ಹಾಗೂ ಔಪನಿಷದಿಕ ಕಾವ್ಯರಹಸ್ಯ ಪರಿಜ್ಞಾನದ ಉಲ್ಲೇಖ ಸುಮ್ಮನೆ ಎಳೆದು ತಂದಂತೆ ಇದೆ. ಏಕೆಂದರೆ ಶ್ರೀ ಅರವಿಂದರ ಘನವಾದ ಕಾವ್ಯತತ್ವವನ್ನೂ 'ಸಾವಿತ್ರಿ' ಮಹಾಕಾವ್ಯವನ್ನೂ ಹೊಗಳಿದ ದನಿಯಲ್ಲಿಯೇ "ಔಪನಿಷದಿಕ ಆನಂದವೇ ನಮ್ಮ ದಿನ ಬಳಕೆಯ ಕಾವ್ಯಗಳ ರಸವೆಂದು ತಿಳಿಯುವದು ಭ್ರಾಂತಿ ಆಗುವದು"–ಎಂದು ಹೇಳಲೂ ಅವರು ತ್ವರೆಮಾಡಿದ್ದಾರೆ. ವ್ಯವಹಾರದಲ್ಲಿ ಅವಕಾಶವಿಲ್ಲದ ಈ ಅತಿಮಾನಸ ದರ್ಶನವನ್ನು ಹೀಗೆ ಅತ್ಯಾದರದಿಂದ ಎತ್ತಿಕೊಂಡದ್ದೇಕೆ? ಅಷ್ಟೇ ಆತುರದಿಂದ ಬದಿಗೊತ್ತಿದ್ದೇಕೆ? ಇದೆಲ್ಲ "ಅಪ್ರಸ್ತುತ ಪ್ರಶಂಸೆ" ಒಂದು ವ್ಯಾಜಸ್ತುತಿ (Damning with faint praise?)ಯೋ ಎಂದು ಅವರವರ ಅಭಿಮಾನಿಗಳಿಗೆ ಅನಿಸಬಹುದೇ?

ಪುಸ್ತಕದ ಕೊನೆಗೆ ೧೮ ಸೂತ್ರಗಳಲ್ಲಿ ತಮ್ಮ ಅಭಿಪ್ರಾಯದ ಸಾರವನ್ನು ಗ್ರಥಿಸಿಕೊಟ್ಟ ಡಾ॥ ಕೃಷ್ಣಮೂರ್ತಿಗಳು ಅಭ್ಯಾಸಿಗಳಿಗೆ ತುಂಬ ಉಪಕಾರ ಮಾಡಿದ್ದಾರೆ. ಇದೇ ಎಚ್ಚರಿಕೆ ಅವರು ಪುಸ್ತಕದ ಯೋಗ್ಯ ಪ್ರಕರಣಗಳನ್ನು ಕಲ್ಪಿಸಿ ಕೊಡುವದರಲ್ಲಿಯೂ ಏಕೆ ವಹಿಸಲಿಲ್ಲವೋ! ಮೂರು ದಿನ ನಡೆದ ಉಪನ್ಯಾಸವನ್ನು ಅವರು ಒಂದೇ ಅಖಂಡಪ್ರವಾಹಿಯಾದ ಪ್ರಬಂಧವಾಗಿ ಎರಕ ಹೊಯ್ದಿದ್ದಾರೆ. ಅದನ್ನು ವಿಷಯಾನುಸಾರ ಪರಿಚ್ಛೇದಗಳನ್ನು ಮಾಡಿಕೊಟ್ಟಿದ್ದರೆ ವಾಚಕರ ತಾಳ್ಮೆಯ ಪರೀಕ್ಷೆ ತಪ್ಪುತ್ತಿತ್ತು. ಕೊನೆಗೂ ಮೂರು ಅಧ್ಯಾಯಗಳಂತೂ ಆಗಲೇ ಬೇಕಿತ್ತು. ಉಪನ್ಯಾಸಕರು ಉಪಸಂಹಾರಕ್ಕೆ ಉಪಯೋಗಿಸಿದ ನಮುನದ ಪದ್ಯ ಅತ್ಯಂತ ಸಮರ್ಪಕವಾಗಿದೆ. ಮಾದರಿಗಾಗಿ ಆಯ್ದುಕೊಂಡ ಕನ್ನಡ ಸಂಸ್ಕೃತ ಕಾವ್ಯದ ಅಂಶಗಳೂ ತುಂಬ ಸಮರ್ಪಕವಾಗಿವೆ.

ಈ ಸಮರ್ಪಕತೆ ಡಾ॥ ಕೃಷ್ಣಮೂರ್ತಿಗಳ ಗದ್ಯ ಶೈಲಿಯ ಒಂದು ಭೂಷಣ. ಚೊಕ್ಕಟವೂ ಚೌರಸವೂ ಆದ ಗದ್ಯ ಅವರದು. ವಾಚಕನ ಬುದ್ಧಿಯೊಡನೆ ಅದು ಚಿನ್ನಾಟವಾಡುವದಿಲ್ಲ. ಬಣ್ಣ ತುಂಬುವ ಬಣ್ಣನೆಯ ಹವ್ಯಾಸ ಅವರಿಗಿಲ್ಲ. ತನ್ನ ದನಿಗೇ ತಾನು ಮರುಳಾದ ಮಾತುಗಾರ ಈ ಲೇಖಕನಲ್ಲ. ಮನಗಂಡದ್ದು ಮನಗಾಣಿಸಲು ಬರೆಯುವರೇ ಹೊರತು ಮನನೋಯಿಸಿ ಮನೆಗಾಣಿಸಲು ಹೊರಟ ಬರೆಕೊಡುವ ಬರಹಗಾರ ಇವರಲ್ಲ. ಯುಕ್ತಿಯುಕ್ತವಿದ್ದೂ ತರ್ಕಕರ್ಕಶವಲ್ಲ ಇವರ ವಾದಸರಣಿ. ಮೂಲವಿಲ್ಲದ ಮಾತಿಲ್ಲ. ತಾವು ಮೊದಲು ಬಳಸಿದ ದೃಷ್ಟಾಂತಗಳ ಮೂಲದ ಶ್ಲೋಕಗಳನ್ನು ಮತ್ತೆ ಉದಾಹರಿಸದೇ ಮುಂದೆ ಹೋಗುವುದಿಲ್ಲ.

ಲೇಖಕರು ವಿಚಾರಪರ ವ್ಯಾಸಂಗಪ್ರಿಯಶೀಲಕ್ಕೆ ತಕ್ಕ ಶೈಲಿ. ಸಾಹಿತ್ಯ ಶಾಸ್ತ್ರೀಯ ಪರಿಭಾಷೆಯಲ್ಲಿ ಅದ್ದಿ ತೆಗೆದ ಲೆಕ್ಕಣಿಕೆ ವಿದ್ವಜ್ಜನ ಪರಿಶ್ರಮವನ್ನು ಅರಿಯಬಲ್ಲ ಗುರು ಬುಧ ಮಂಡಳಿಯ ಅರಿಕೆಗಾಗಿಯೇ ಬುದ್ಧಿಗೆ ಗೌರವ ಕೊಟ್ಟು, ಗೌರವ ಬುದ್ಧಿ ಇಟ್ಟು ಬಗೆದ ಈ ಒಕ್ಕಣಿಕೆ ಇವೆರಡು ದಡಗಳ ನಡುವೆ ಧಾರಾಳವಾಗಿ ಹರಿಬಿಟ್ಟ ವಿಚಾರಧಾರೆಯ ವಾಗ್ಧೋರಣೆಗೆ ಓಘವೂ ಇದೆ ಓಜವೂ ಇದೆ. ಕಾವ್ಯವಿಮರ್ಶೆಯ ವಾಙ್ಮಯವೇ ವಿರಳವಾದ ಹೊಸಗನ್ನಡ ಸಾಹಿತ್ಯಕ್ಕೆ ಡಾ॥ ಕೃಷ್ಣಮೂರ್ತಿಯವರ ಈ ಕೃತಿ ಒಂದು ಮಿಗಿಲಾದ ಕಾಣಿಕೆ. ಅಲ್ಪಜ್ಞರಿಗೆ ಇದು ಹೊಸ ಸೃಷ್ಟಿ. ಪ್ರಾಜ್ಞರಿಗೆ ಹೊಸ ದೃಷ್ಟಿ.

—ಗೌರೀಶ ಕಾಯ್ಕಿಣಿ

ರಾಜಕಾರಣ

೧

ಮಹಾಜನ,
ಹೊಟ್ಟೆಬಾಕತನ.
ಕೊಕ್ಕೆಹುಳುವಿನ ರೋಗ,
ಪುಷ್ಟಿಗೌಷಧ ಬೇರೆ!
ಕತ್ತಲಾದರೆ ಸಾಕು, ರೂಪ ಗುಣ ಬಣ್ಣ ಎಲ್ಲ ಸೊನ್ನೆ.
ಎಲ್ಲ ಕಿಟಕಿಯ ಒಳಗು ಒಂದೆ ಬಣ್ಣದ ಬೆಳಕು,
ಕಿಟಕಿಗಳ ಚೌಕಟ್ಟು ಮಾತ್ರ ತರತರ.

೨

" ನನ್ನ ಕೋಣೆಯ ಕಿಟಕಿ ತುಂಬ ಚಂದ,
ಇಣಿಕಿದಾಗೆಲ್ಲ ಕಾಣುವಳು ನನ್ನ ರಾಧ.
ಏನು ಚಂದಾ! ನಾನೆ ಭಾಗ್ಯವಂತ!!
ನನ್ನ ಕೋಣೆಯ ಕಿಟಕಿ ಒಂದರಿಂದಲೆ ಮಾತ್ರ
ಇಂಥ ಸವಿನೋಟ ".

೩

ಬೆಪ್ಪುತಕ್ಕಡಿ ಎಲ್ಲ--ಏರು ಪೇರು,
ಅಳತೆ ತೂಕಕ್ಕಲ್ಲ—ಎಲ್ಲ ಸೇರು,
ರಾಜಕಾರಣವೆಲ್ಲ ಬರಿಸೊಲ್ಲು—ಗುಲ್ಲು.

ಕಡಲ ತೆರೆಮೊರೆತ, ನೊರೆ ಏರು,
ಭೋರ್ಗರೆವ ಕಡಲೊಡಲು,
ಮುತ್ತುರತ್ನಗಳೆಲ್ಲ ಕಪ್ಪೆಚಿಪ್ಪಿನ ಒಳಗೆ ಮಂಗಮಾಯ.
ದುಷ್ಯಂತನುಂಗುರವ ನುಂಗಿದ ಮೀನು,
ಗಜೇಂದ್ರಮೋಕ್ಷದ ಮೊಸಳೆ
ಏಳು ನಾಲಗೆಯ ಕಾಳಸರ್ಪ ಹೊತ್ತ ಕಡಲು
ರಾಜಕಾರಣದುಸಿರು, ರಣಬಿಸಿಲು—ಬೆವರು.
ಮಳೆಯ ಕಾಣದ ಮರಳು—ಮೋಹದುರುಳು
ಕೊಕ್ಕೆಹುಳುವಿನ ರೋಗ, ಪುಷ್ಟಿಗೌಷಧ! ಮರುಳು.
ರೋಗಕ್ಕೆ ಹಾಕುಬಾಂಬು, ಯೋಗಕ್ಕೆ ತಲೆತುಂಬು.

—ಕೋಣಂದೂರು ಲಿಂಗಪ್ಪ

ಸಂಪಾದಕೀಯ

ದಿವಂಗತ ಶ್ರೀ ದೇವುಡು ನರಸಿಂಹಶಾಸ್ತ್ರಿಗಳವರ "ಮಹಾಕ್ಷತ್ರಿಯ" ಎಂಬ ಕೃತಿಗೆ ಸನ್ಮಾನ

ದಿವಂಗತ ಶ್ರೀ ದೇವುಡು ನರಸಿಂಹಶಾಸ್ತ್ರಿಗಳವರನ್ನು ಕುರಿತು ಹಿಂದಿನ ಸಂಚಿಕೆಯ ಸಂಪಾದಕೀಯದಲ್ಲಿ ಪ್ರಶಂಸೆಯ ಮಾತುಗಳನ್ನು ಆಡುತ್ತ "ಇಂಥ ವಿದ್ವನ್ಮಣಿಗೆ ನಮ್ಮ ನಾಡಿನಲ್ಲಿ ಎಂಥ ಸನ್ಮಾನವು ಲಭಿಸಬೇಕಿತ್ತೋ ಅದು ದೊರೆಯದೆ ಹೋದುದು ಅತ್ಯಂತ ವಿಷಾದಕರವಾದುದೇ ಸರಿ" ಎಂದು ನೊಂದು ನುಡಿದುದು ಸರಿಯಷ್ಟೆ. ಆದರೆ, ಈಗ ಕೇಂದ್ರ ಸರ್ಕಾರದ ಸಾಹಿತ್ಯ ಅಕಾಡೆಮಿಯವರು ಅವರ "ಮಹಾಕ್ಷತ್ರಿಯ" ಎಂಬ ಕೃತಿಗೆ ಈ ಸಾಲಿನ ಪಾರಿತೋಷಕವನ್ನು ನೀಡಿದ್ದಾರೆಂಬ ಸುದ್ದಿಯನ್ನು ಕೇಳಿ ಒಂದು ಕಡೆ ಸಮಾಧಾನವೆನ್ನಿಸಿದರೆ, ಮತ್ತೊಂದೆಡೆ ಇಮ್ಮಡಿಯಾದ ದುಃಖವಾಗುತ್ತದೆ. ಪ್ರತಿಭಾವಂತನಾದ ಲೇಖಕನೊಬ್ಬನು ಕಣ್ಮರೆಯಾದರೂ, ಆತನ ಕೃತಿಯ ಕೀರ್ತಿ ಮಾಸದೆ, ಅದು ವಿದ್ವಜ್ಜನರ ಮನ್ನಣೆಗೆ ಪಾತ್ರವಾಯಿತೆಂದು ಕೇಳಿ ಹೆಮ್ಮೆಯಾಗುತ್ತದೆ. ಆದರೆ, ಅನೇಕ ವರ್ಷಗಳಿಂದ ಜೀವನದ ನಾನಾ ಕಷ್ಟ ಕಾರ್ಪಣ್ಯಗಳನ್ನು ಎದುರಿಸಿ, ಕನ್ನಡಕ್ಕಾಗಿ ಕಲಿತನದಿಂದ ಶ್ರಮಿಸಿದ ಶ್ರೀ ದೇವುಡು ಅವರು ಬದುಕಿದ್ದು, ಈ ಅಭೂತಪೂರ್ವವಾದ ಪ್ರಶಸ್ತಿಯನ್ನು ತಾವಾಗಿ ಸ್ವೀಕರಿಸುವ ಭಾಗ್ಯ ಅವರ ಪಾಲಿಗೆ ಒದಗಿಬರಲಿಲ್ಲವಲ್ಲಾ ಎಂದು ವ್ಯಥೆಯಾಗುತ್ತದೆ. ಅವರ ಅವಿಶ್ರಾಂತವಾದ ಬದುಕಿನ ಹೊಯ್ದಾಟದ ಕಥೆಯಲ್ಲಿ ಇದೂ ಒಂದು ಸುಖದುಃಖ ಮಿಶ್ರಿತವಾದ ಪ್ರಕರಣವೆನ್ನಬಹುದು. ಅವರಿಗೆ ಸಲ್ಲಬೇಕಾದ ಸನ್ಮಾನವನ್ನು ಅವರ ಶ್ರೀಮತಿಯವರು ಸ್ವೀಕರಿಸಿದರೆಂದು ತಿಳಿದುಬರುತ್ತದೆ. ಪತಿವಿಯೋಗದಿಂದ ತೊಳಲುತ್ತಿರುವ ಅವರಿಗೆ, ಈ ಪಾರಿತೋಷಕ ಸ್ವೀಕಾರದಿಂದ ಅಲ್ಪಸ್ವಲ್ಪವಾದರೂ ಸ್ಥೈರ್ಯ, ಸಮಾಧಾನಗಳು ಲಭಿಸಿದರೆ, ಶ್ರೀ ದೇವುಡು ಅವರ ಆತ್ಮಕ್ಕೆ ಶಾಂತಿಯುಂಟಾದೀತೆಂದು ಭಾವಿಸುತ್ತೇವೆ.

ಶ್ರೀ ದೇವುಡು ನರಸಿಂಹಶಾಸ್ತ್ರಿಗಳವರ ಪ್ರತಿಭೆ ಬಹುಮುಖವಾದದ್ದೆಂದು ಈ ಹಿಂದೆಯೇ ಹೇಳಿರುತ್ತೇವೆ. ಅವರ ಕೃತಿಸಮುದಾಯದಲ್ಲಿ "ಅಂತರಂಗ", "ಮಯೂರ" ಮತ್ತು "ಮಹಾಬ್ರಾಹ್ಮಣ" ಕಾದಂಬರಿಗಳು ವಿಶಿಷ್ಟವೆನ್ನಿಸಿವೆ. ಇದೇ ಪಂಕ್ತಿಯಲ್ಲಿ ಅವರ "ಮಹಾಕ್ಷತ್ರಿಯ" ಎಂಬ ರಚನೆಯೂ ಈಗ ವಿರಾಜಿಸುತ್ತಿರುವುದು ಪ್ರಶಂಸನೀಯವೇ ಸರಿ. ಸಾಮಾಜಿಕ, ಐತಿಹಾಸಿಕ ಮತ್ತು ಪೌರಾಣಿಕ ವಸ್ತುಗಳನ್ನು ಸರಿಸಮನಾಗಿ ನಿರ್ವಹಿಸಬಲ್ಲ ನೈಪುಣ್ಯ ಶ್ರೀ ದೇವುಡು ಅವರ ಲೇಖನಿಗೆ ಅಸದೃಶವಾಗಿತ್ತು. ಅವರ ಈ ಆದರ್ಶ ಇಂದಿನ ಸಾಹಿತಿಗಳಿಗೆ ಸರ್ವದಾ ಮಾರ್ಗದರ್ಶಕವಾಗಿರಲಿ. ಕಣ್ಮರೆಯಾದ ಕನ್ನಡ ವಿದ್ವನ್ಮಣಿಯ ಈ ವಿಜಯಕ್ಕೆ

ಮೌನಪೂರ್ವಕವಾಗಿ ನಮ್ಮ ಅಭಿನಂದನೆಯನ್ನು ಸಲ್ಲಿಸಿ, ಅವರ ಕೃತಿಗಳು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅನಂತಕಾಲವೂ ಮಾಸದಂತೆ ಉಳಿಯಲಿ ಎಂಬುದಾಗಿ ಮತ್ತೊಮ್ಮೆ ಹಾರೈಸುತ್ತೇವೆ.

ಸ್ವಾಮಿ ವಿವೇಕಾನಂದ ಸಂಚಿಕೆ

ಭರತಖಂಡದ ಆಧ್ಯಾತ್ಮಿಕ ಸಂದೇಶವನ್ನು ವಿಶ್ವದ ಆದ್ಯಂತವೂ ತಮ್ಮ ಸಿಂಹವಾಣಿಯ ಮೂಲಕ ಸಾರಿಹೇಳಿದ ಶ್ರೀ ಸ್ವಾಮಿ ವಿವೇಕಾನಂದರ ಶತಮಾನೋತ್ಸವವನ್ನು ಈಗ ಏಕಪ್ರಕಾರವಾಗಿ ನಡೆಸುತ್ತಿರುವದು ಸರಿಯಷ್ಟೆ. ಈ ಸಂಪುಟದ "ಪ್ರಬುದ್ಧ ಕರ್ಣಾಟಕ"ದ ಒಂದು ಸಂಚಿಕೆಯನ್ನು ಈ ವಿಭೂತಿಪುರುಷರ ಸವಿನೆನಪಿಗಾಗಿಯೇ ಮೀಸಲಿಡಬೇಕೆಂದು, ಸಂಪಾದಕ ಮಂಡಲಿಯವರು ತೀರ್ಮಾನಿಸಿರುತ್ತಾರೆ. ಇದರಲ್ಲಿ ವಿವೇಕಾನಂದರ ಜೀವನ ಮತ್ತು ಅವರ ಕೃತಿಗಳನ್ನು ಕುರಿತ ವಿದ್ವತ್ಪೂರ್ಣವಾದ ಲೇಖನಗಳನ್ನು ಸಂಗ್ರಹಿಸಿಕೊಡಬೇಕೆಂದು ಸಂಕಲ್ಪಿಸಿದೆ. ವಿದ್ವಾಂಸರು "ಪ್ರಬುದ್ಧ ಕರ್ಣಾಟಕ"ದ ಮೇಲೆ ಅಭಿಮಾನವಿಟ್ಟು ಈ ವಿಷಯವಾಗಿ ಲೇಖನಗಳನ್ನೂ, ಕವಿತೆಗಳನ್ನೂ ಬರೆದುಕೊಟ್ಟು ನಮ್ಮೊಂದಿಗೆ ಸಹಕರಿಸಬೇಕಾಗಿ ಕೋರುತ್ತೇವೆ. ಅನುವಾದಗಳನ್ನು ಕಳುಹಿಸಬಯಸುವವರು ಅದಕ್ಕೆ ಸಂಬಂಧಿಸಿದ ಮೂಲಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನೂ ತಮ್ಮ ಬರೆಹದೊಂದಿಗೆ ತಪ್ಪದೆ ಕೊಟ್ಟುಕಳುಹಿಸಬೇಕಾಗಿ ವಿನಂತಿ.

W O 1824—MUPM—1000+25—27-5-63

ಮೈಸೂರು ಮಹಾರಾಜರವರ ಕಾಲೇಜಿನ
ಕರ್ಣಾಟಕ ಸಂಘದ ಪ್ರಕಟಣೆಗಳು

೧. **ನಾಗಾನಂದ ನಾಟಕ**—ಅನಂತನಾರಾಯಣ ಶಾಸ್ತ್ರಿ ; ಬೆಲೆ : ರೂ. ೧-೦-೦.

೨. **ಕರ್ಣಾಟಕ ಮೃಚ್ಛಕಟಿಕ ಪ್ರಕರಣಂ**—ಆಸ್ಥಾನಕವಿ ನಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ ; ರೂ. ೧-೧೨-೦.

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಕೆಲವು ಪ್ರಕಟಣೆಗಳು

೧. **ಲಿಯೊನಾರ್ಡ್ಡಾ**—ಎಸ್. ಜಿ. ಶಾಸ್ತ್ರೀ .... ರೂ. ೧-೫೦
(ಬ್ಯೋರನ್‌ಸನ್ ಬರೆದ ನಾಲ್ಕಂಕದ ನಾಟಕ)

೨. **ಸಂಸಕವಿ**—ಹಲವು ಲೇಖಕರು .... ರೂ. ೩-೭೫
('ವಿಗಡವಿಕ್ರಮರಾಯ' ಬರೆದ ಕವಿಯ ಕಾವ್ಯಜೀವನ)

೩. **ಧರ್ಮಪದ ಪ್ರವೇಶಿಕಾ**—ಜಿ. ಪಿ. ರಾಜರತ್ನಂ .... ರೂ. ೧-೦೦
(ಬುದ್ಧವಚನ, ಬಸವವಚನಗಳ ಹೋಲಿಕೆಗಳು)

೪. **ನಮ್ಮ ಬೇಂದ್ರೆಯವರು**—ವಿದ್ಯಾರ್ಥಿಗಳಿಂದ .... ರೂ. ೧-೨೫
(ಬೇಂದ್ರೆಯವರ ಕವನಗಳ ವಿಮರ್ಶೆ)

೫. **ಹೂವಿನ ಪೂಜೆ**—ವಿದ್ಯಾರ್ಥಿಗಳಿಂದ .... ರೂ. ೧-೨೫
(ಬುದ್ಧನಿಗೆ ಅರ್ಪಿಸಿದ ಬರಹಗಳು)

೬. **ಶ್ರೀ ರಾಮಚಂದ್ರಪ್ರಭು**—(ಜ್ಞಾಪಕರೂಪ) .... ರೂ. ೧-೫೦
(ಡಿ.ವಿ.ಜಿ. ಅವರ 'ಶ್ರೀರಾಮಪರೀಕ್ಷಣ'ದ ಸುಲಭರೂಪ)

೭. **ಬಿದನೂರಿನ ರಾಣಿ ವೀರಮ್ಮಾಜಿ**—(ಜ್ಞಾಪಕರೂಪ) .... ರೂ. ೧-೨೫

೮. **ಹೆಜ್ಜೆಪಾಡು** (ಕವನಗಳು)—ವಿ. ಸೀ. .... ರೂ. ೧-೭೫

೯. **ದೀಪಗಳು** (ಕವನಗಳು)—ವಿ. ಸೀ. .... ರೂ. ೧-೨೫

೧೦. **ಅಭಿಜ್ಞಾನ ಶಾಕುಂತಲ ನಾಟಕ**—ವಿ. ಸೀ. .... ರೂ. ೨-೫೦
(ವಿಮರ್ಶಾತ್ಮಕ ಪರಿಚಯ)

೧೧. **ಗಿಳಿವಿಂಡು** (ಕವನಗಳು)—ಎಂ. ಗೋವಿಂದ ಪೈ .... ರೂ. ೨-೫೦

ಅಚ್ಚಿನಲ್ಲಿ

೧೨. **ಸೊಹ್ರಾಬ್-ರುಸ್ತುಂ** (ನಾಟಕ)—ವಿ. ಸೀ.

೧೩. **ಪಂಚಕಲಶ ಗೋಪುರ** (ಚಿತ್ರಗಳು)—ಬಿ. ಜಿ. ಎಲ್. ಸ್ವಾಮಿ

ಸಂಪಾದಕರು : ಎಸ್. ನಾರಾಯಣಶೆಟ್ಟಿ, ಎಂ.ಎ. ; ಜಿ. ವರದರಾಜರಾವ್, ಎಂ.ಎ., ಪಿಎಚ್.ಡಿ.

ಪ್ರಕಾಶಕರು : ಪಿ. ಮಲ್ಲಿಕಾರ್ಜುನಪ್ಪ, ಎಂ.ಎಸ್‌ಸಿ.
ಡೈರೆಕ್ಟರ್, 'ಪ್ರಸಾರಾಂಗ', ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.